UNIVERSAL
LIBRARY
OU_202073
UNIVERSAL
LIBRARY

MADRAS GOVERNMENT ORIENTAL SERIES

PUBLISHED UNDER THE AUTHORITY OF
THE GOVERNMENT OF MADRAS.

General Editor
T. CHANDRASEKHARAN, M.A., L.T.,
Curator, Government Oriental Manuscripts Library,
Madras.

No. 148

ಜೀವಸಂಬೋಧನಂ

JIVASAMBODHANAM

Critically edited with Introduction

BY

Pandit. H. SEHA IYENGAR,

(Retired Kannada Lecturer, University of Madras.)

GOVERNMENT ORIENTAL MANUSCRIPTS LIBRARY, MADRAS.

1955

Price Rs. 5—12—0.

PRINTED AT
THE SREEVATHSA PRESS
ROYAPETTAH, MADRAS.

INTRODUCTION

The Government of Madras took up for consideration the question of publication of the various manuscripts in different languages on subjects like Philosophy, Medicine, Science, etc, early in May 1948. Important Manuscript Libraries in the Madras Presidency were requested to send a list of unpublished manuscripts with them for favour of being considered by the Government for publication. The Honorary Secretary of the Tanjore Maharaja Serfoji's Sarasvathi Mahal Library, Tanjore, alone complied with this request. This list as well as a similar list of unpublished manuscripts in the Government Oriental Manuscripts Library, Madras were carefully examined and a tentative selection of Manuscripts suitable for publication was made. The Government in their Memorandum No. 34913/48-I0. Education, dated 4—4—1949. constituted an Expert Committee with the Curator of the Government Oriental Manuscripts Library, Madras, as the Secretary, for the final selection of Manuscripts suitable for printing and for estimating the cost of publication.

The following are the members of the Committee :—

1. Sri T. M. Narayanaswami Pillai, M.A , B.L.
2. ,, R. P. Sethu Pillai, B.A., B.L.
3. C. M. Ramachandra Chettair, B.A., B.L.
4. R. Krishnamoorthy, (Kalki).
5. Dr. N. Venkataramanayya, M.A., PH. D.
6. Sri M. Ramanuja Rao Naidu, M.A.
7. ,, V. Prabhakara Sastri.
8. N. Venkata Rao, M.A.
9. H. Sesha Ayyangar.
10. Masti Venkatesha Ayyangar.
11. M. Mariappa Bhat, M.A., L.T.
12. Dr. C. Achyuta Menon, B.A , PH. D.
13. ,, C. Kunhan Raja, M.A., D. PHIL.
14. ,, A. Sankaran M.A., PH. D., L.T.
15. Sri Polakam Rama Sastri.
16. ,, S. K. Ramanatha Sastri.

17. Dr. M. Abdul Haq, M.A., D. Phil., (Oxon.)
18. Afzul-ul Ulama Hakim Khader Ahamed.
19. Sri P. D. Joshi.
20. S. Gopalan, B.A., B.L.
21. T. Chandrasekharan, M.A., L.T.

With the exception of Sri Masti Venkatesa Ayyangar, and Dr. C. Kunhan Raja, the above members continued to be members of the Expert committee for 1950-51 also to which the following gentlemen were added in Govt. Memo. 7297-E/ 50-3, Education, dated 19th May '50 and Govt. Memo. No. 15857-E/ 50-4, Education, dated 7th Sept. '50.

1. Dr. A. Chidambaranatha Chettiar, M.A., PH. D.
2. Sri S. Govindarajulu, B.A., B.L., LL.B., BAR-AT-law.
3. Capt. G. Srinivasamoorthy, B.A., B.L., M.B., & C.M.
4. Dr. Muhammed Hussian Nainar, M.A., PH. D.
5. Sri T. V. Subba Rao,, B.A., B.L.
6. Principal, College of Indian Medicine, Madras.

The members of the Committee formed into Sub-Committees for the various languages, Sanskrit, Tamil, Telugu, Kannada, Malayalam, Mahrathi and Islamic Languages. They met during the month of May, 1949, at Madras and at Tanjore to examine the manuscripts and make a selection. The recommendations of the Committee were accepted by the Government and they decided to call these publication as the " MADRAS GOVERNMENT ORIENTAL SERIES," and appointed the Curator, Government Oriental Manuscripts Library, Madras, as the General Editor of the publications under this series.

The following manuscripts were taken up for publication during 1949-50.

"A" From The Government Oriental Manuscripts Library, Madras.

TAMIL

1. Kappal Sattiram
2. Anubhava Vaiddiya Murai
3. Attanakolahalam
4. Upadesa Kandam
5. Colan Purva Pattayam
6. Sivajnana Dipam

TELUGU

1. Ausadha Yogamulu.
2. Vaidya Nighantuvu.
3. Dhanurvidya Vilasamu.
4. Yoga Darsana Visayamu.
5. Khadga Laksana Siromani.

SANSKRIT

1. Visanarayaniyam (Tantrasarasangraha)
2. Bhargava Nadika.
3. Hariharacaturangam.
4. Brahmasutravrtti—Mitakshara.
5. Nyayasiddhanta Tattvamrtam.

MALAYALAM

1. Garbha Cikitsa.
2. (*a*) Vastulakshanam.
   (*b*) Silpavishayam.
3. Mahasaram.
4. Kanakkusaram.
5. Kriyakramam.
6. Kanakkusaram (Balaprabodham).

KANNADA

1. Lokopakaram.
2. Rattamatam.

3. Asvasastram.
4. Vividha Vaidya Visoayagalu.
5. Sangitaratnakara.
6. Supasastra.

ISLAMIC LANGUAGES

1. Jamil-Al-Ashya.
2. Tibb-E-Faridi.
3. Tahqiq-Al-Buhran.
4. Safinat-Al-Najat.

"B" FROM THE TANJORE MAHARAJA SERFOJI'S SARASWATHY MAHAL LIBRARY, TANJORE.

TAMIL

1. Sarabhendra Vaiddiya Murai (Diabetes).
2. Do. (Eyes).
3. Do. (Anaemia).
4. Do. (Svasakasam).
5. Agastiar 2000.
6. Konkanarsarakku Vaippu.
7. Tiruccirrambalakkovaiyar with Padavurai.
8. Talasamudram.
9. Bharatanatyam.
10. (*a*) Pandikeli Vilasa Natakam.
    (*b*) Pururava Cakravarti Natakam.
    (*c*) Madana Sundara Vilasa Natakam.
11. Percy Macqueen's Collection of Folklore in t Madras University Library.
12. Ramaiyan Ammanai.

TELUGU

1. Kamandakanitisaramu.
2. Taladasapranapradipika.

3. Raghunatha Nayakabhyudayamu.
4. Rajagopala Vilasamu.
5. Ramayanamu by Katta Varadaraju.

MAHRATHI

1. Natyasastra Sangraha.
2. (*a*) Book of Knowledge.
   (*b*) Folk Songs.
   (*c*) Dora Darun Veni Paddhati.
   (*d*) Asvasa Catula Dumani.
3. (*a*) Pratapasimhendra Vijaya Prabandha.
   (*b*) Sarabhendra Tirthavali.
   (*c*) Lavani.
4. Devendra Kuravanji.
5. Bhakta Vilasa.
6. Sloka Baddha Ramayana.

SANSKRIT

1. Asvasastra with Tricolour illustrations.
2. Rajamrganka.
3. Anandakandam.
4. Ayurvedamahodadhi.
5. Gita Govinda Abhinaya.
6. (*a*) Cholachampu.
   (*b*) Sahendra Vilasa.
7. Dharmakutam—Sundara Kanda.
8. Jatakasara.
9. Visnutattvanirnaya Vyakhya.
10. Sangita Darpana.
11. Bijapallava.

During 1950 only the Sub-committee for TAMIL, TELUGU and KANNADA met in the mouth of July 1950 at Madras.

The following books were taken up for publication in the various languages during 1950-51 :—

TAMIL

1. Datcanayanar Vaiddiya Attavanai.
2. Vaiddiyak Kalanciyam.
3. Anubhava Vaiddiya Murai, Vol. 3.

TELUGU

1. Saivacarsangrahamu.
2. Anubhava Vaidyamu.
3. Abhinayadarpanamu.

SANSKRIT

1. Arogyacintamani.
2. Tattvasara with Ratnasarini.
3. Sutrarthamrta Lahari.
4. (*a*) Ratnadipika.
   (*b*) Ratnasastra.

MALAYALAM

1. Asvacikitsa.
2. Phalasarasamuccaya.

KANNADA

Vaidya Sara Sangraha Vol. I.

During 1951-52, only the Sub-committees for TAMIL, TELUGU and MALAYALAM met in the month of April 1951. The following books were taken up for publication in the various languages :—

TAMIL

1. Saptarishinadi, Vol. I, Mesa Lagna.
2. Karnatakarajakkal Savistara Carittiram.
3. Bharata Siddantam.
4. Pillaippinivakatam Vol. I.
5. Anubhava Vaiddiyam, Vol. 4.
6. Mattuvakatam.

TELUGU

1. Brahmavidya Sudharnavamu.
2. Ragatalacintamani.
3. Vaidyacintamani.
4. Kumararamuni Katha.
5. Katamraju Katha.

SANSKRIT

1. Devakeralam—Candrakala Nadi.
2. Patanjala Yogasutra Bhasya Vivarana by SrSankraai - carya.

MALAYALAM

1. Kilivandusamvadam.
2. Advaita Vedantam.
3. Barhaspatyasutra with Malayalam commentary.
4. Karanapaddhati.

KANNADA

1. Sadgururahasyam.

ARABIC

1. Shawakil-Ul-Hur.

In Government Memorandum No. 13947-E/52-2, Education, dated 7th August 1952, a few changes were made in the personnel of the Expert Committee.

The names of the following members were deleted:—

1. Sri V. Prabhakara Sastri.
2. Dr. C. Achyuta Menon.
3. Dr. M. Abdul Haq.

The following gentlemen were included as members of the Expert Committee:—

1. Sri M. Somasekhara Sarma.
2. Dr. V. Raghavan, M.A., PH.D.
4. Dr. R. Nagaraja Sarma, M.A., PH.D.
4. Dr. S. Krishnan Nayar, M.A., PH.D.
5. Prof. S. A. Bukhari, M.A.

The Sub-Committee for all the languages met during September 1952 for selecting manuscripts for publication.

The following manuscripts were taken up for publication during 1952—53 :—

TAMIL

1. Saptarishinadi, Vol. II—Virushabha Lagna.
2. Temple Inscriptions of South India, Vol. I.

TELUGU

1. Sariramu.

KANNADA

1. Vaidyasara Sangraha, Vol. II.

MALAYALAM

1. Vidyamadhaviyam.
2. Sarvasadharana Cikitsa.
3. Vishacikitsa and Vishappattusaram.

SANSKRIT

1. Nyayaratnam with the commentary Dyutimalika
2. Cikitsatilakam
3. Nrittaratnavali

The Government in their G. O. Ms. No. 1820 Education dated 4—8—1952 sanctioned a grant of rupees 9,000 to the Dr. V. Swaminatha Iyer's Library, Adyar, towards the publication of the following Tamil Manuscripts as part of the "Madras Government Oriental Series."

1. Tiruvacaka Vyakhyanam.
2. Mahabharata Cudamani.

The following books were taken up for publication during 1953-54 :—

TAMIL

1. Saptarishinadi, Vol. III, Mithuna Lagna.
2. Temple Inscriptions of South India, Vol. II.

TELUGU

1. Bharatasarasangraha.

KANNADA

1. Manmathavijaya.

MALAYALAM

1. Jnanapiyusham.

SANSKRIT

1. Daivajnabharana.

PRESIAN

1. Baharisthan Sukhan.

Out of the seven books taken up for publication, five books excepting one in Telugu and one in Persian were printed during the year.

The following books were taken up for publication during 1954-55:—

TAMIL

1. Pillaippinivakatam (on Infantile disease). Vol. II.
2. Saptarishinadi, Vol. IV, Kataka Lagna.
3. Perur Kovai.
4. Siddhantavilakkam.

5. Samudrikalakshanam.
6. Anandaranga Kovai.

KANNADA

1. Abhidhanaratnamala.
2. Vyavaharaganita.

MALAYALAM

1. Vetalapancavimsati.
2. Yudhisthiravijayam.

SANSKRIT

1. Abhoga.
2. Aumapatam.
3. Mahabhaskariyam.

PERSIAN

1. Nuskha-e-Shajahani.

On account of the formation of the Andhra State, the printing of the Telugu manuscripts could be undertaken only in consultation with that State. Since the concurrence of that State has not been received so far, no work in Telugu was taken up for publication although three works, namely, Bobbili-Yuddhakatha, Haider Caritramu and Aryabhtiya Siddhanta Vyakhya were selected for publication during 1954-55.

It is hoped that the publication of most of the important manuscripts will be completed within the next few years.

Some of the manuscripts taken up for publication are represented by single copies in the Library and consequently the mistakes that are found in them could not be corrected by comparing them with other copies. The editors have, however, tried their best to suggest correct readings. The wrong readings are given in round brackets and correct readings have been suggested in square brackets. When different readings are


found, they have been given in the foot-notes except in the case of a few books in which the correct readings have been given in the foot-note or incorporated in the text itself.

The Government of Madras have to be thanked for financing the entire scheme of publication although there is a drive for economy in all the departments. My thanks are due to the members of the expert Committee who spared no pains in selecting the manuscripts for publication. I have also to thank the various editors, who are experts in their own field, for readily consenting to edit the manuscripts and see them through the Press. The various Presses that have co operated in printing the manuscripts in the best manner possible also deserve my thanks for the patience exhibited by them in carrying out the corrections made in the proofs,

This edition of Jivasambodhanam is based on the slightly injured palmleaf Manuscript, $7\frac{3}{16} \times 1\frac{1}{16}$ inches in size, bearing D. No. 345 of this library. The work is written in Campu style in 12 Adhikaras as addressed to the soul, expounding the doctrines of Jainism. The author is Bandhuvarma, Vaisya by religion, who should have lived in 12th century A. D.

Govt. Oriental Manuscripts Library,
Madras.
7—12—1955

T. CHANDRASEKHARAN,
General Editor,
Madras Govt. Oriental Series.



ಖ ಪ್ರತಿಯು ಕೊನೆಯ ತಾಳಪತ್ರದ ಪ್ರತಿಚ್ಛಾಯೆ—

[ಅತ್ಯಂತ ಪ್ರಾಚೀನತಮವಾದ ಗ್ರಂಥ — ಇದಕ್ಕಿಂತ ಹಳೆಯಕಾಲದ ಪ್ರತಿಗಳು ಇದುವರೆಗೆ
ಯಾವ ಪುಸ್ತಕಾಲಯಗಳಲ್ಲೂ ಕಂಡುಬಂದಿಲ್ಲ]

ಮುನ್ನುಡಿ

[೧] ಮುದ್ರಣ ವಿಚಾರ

"ಜೀವಸಂಬೋಧನೆ" ಎಂಬೀ ಗ್ರಂಥವು ಎಂಟು ಹಸ್ತಲಿಖಿತಪ್ರತಿಗಳ ಆಧಾರದಿಂದ ಮುದ್ರಿತವಾಗಿದೆ. 1917ರಲ್ಲಿ ಮೈಸೂರಿನಲ್ಲಿ ಈ ಗ್ರಂಥದ ಆದಿಯ ಆರು ಅಧಿಕಾರಗಳು ಮಾತ್ರ ಮುದ್ರಿತವಾಗಿದ್ದುವು. ಅದು ಎರಡು ಹಸ್ತಲಿಖಿತ (ತಾಳ ಪತ್ರಾತ್ಮಕ) ಪ್ರತಿಗಳ ಆಧಾರದಿಂದ ಮುದ್ರಿತವಾಗಿ ತುಂಬಾ ಅಶುದ್ಧಪಾಠಗಳಿಂದ ತುಂಬಿದೆ. [1]ಹೀಗೆ ಮುದ್ರಿತವಾದಬಳಿಕ ಮತ್ತೊಂದು ಪ್ರತಿಯ ಪಾಠಗಳನ್ನೂ, ಮುದ್ರಣಸ್ಖಾಲಿತ್ಯಗಳನ್ನೂ ಆರಿಸಿ ತೆಗೆದುಕೊಟ್ಟಿರುವ 16 ಪುಟಗಳ ತುಂಬಾ ದೀರ್ಘವಾದ ಶುದ್ಧಿಪತ್ರವೊಂದೂ ಅದರ ಆದಿಯಲ್ಲಿ ಕಂಡುಬರುವುದು. ಇಷ್ಟರಿಂದಲೂ ಗ್ರಂಥವು ಬೇರೆ ಶುದ್ಧವಾಗಲಿಲ್ಲ. ಈ ಗ್ರಂಥವು ಜೈನಮತದ ಸಾರವನ್ನು ಕಾವ್ಯರೂಪದಲ್ಲಿ ಪ್ರತಿಪಾದಿಸುವುದು. ಇದರ ಹಳಗನ್ನಡ ಭಾಷೆಯೂ ತುಂಬಾ ಪ್ರೌಢವಾಗಿದೆ. ಆದುದರಿಂದ ಜೈನಮತದವರು ತಮ್ಮ್ರ ಮತವಿಷಯವನ್ನು ತಿಳಿದುಕೊಳ್ಳುವ ಉದ್ದೇಶದಿಂದಲೂ ಇತರಮತೀಯರು ಹಳಗನ್ನಡ ಭಾಷಾವ್ಯುತ್ಪತ್ತಿಯನ್ನು ಪಡೆಯ ಉದ್ದೇಶದಿಂದಲೂ ಆವಶ್ಯಕವಾಗಿ ಇದನ್ನು ಪರಿಸಲೇಬೇಕಾಗಿದೆ. ಆದುದರಿಂದ ಈ ಗ್ರಂಥವನ್ನು ಸಂಪೂರ್ಣವಾಗಿ ಮುದ್ರಿಸಲೇಬೇಕೆಂಬ ಉದ್ದೇಶದಿಂದ ಹಲವು ಹಸ್ತಲಿಖಿತ ಪ್ರತಿಗಳನ್ನು ಸಂಪಾದಿಸಿ ಸಾಕಾದಷ್ಟು ಶುದ್ಧವಾತಗಳನ್ನು ಆರಿಸಿ ಮುದ್ರಿಸಿ ಹಸ್ತಲಿಖಿತ ಪ್ರತಿಗಳ ಭಿನ್ನಭಿನ್ನತೆಯ ಅನಗಾಹನಕಕ್ಕಾಗಿ ಅವುಗಳ ಕೆಲವು ಪಾಠಗಳನ್ನು ರೇಖೆಯ ಕೆಳಗಡೆ ಸಣ್ಣಕ್ಷರದಲ್ಲಿ ಕೊಟ್ಟಿದೆ. ಇಷ್ಟು ಪ್ರತಿಗಳಲ್ಲೂ ಬೊರಕದ ಇನ್ನೂ ಅಲ್ಪಸ್ವಲ್ಪ ಅಶುದ್ಧ ಪಾಠಗಳು ಇದರಲ್ಲಿ ಕಾಣಿಸದೇ ಇಲ್ಲ. ಆದರೂ ಬಹುಮಟ್ಟಿಗೆ ಶುದ್ಧವಾಗಿರುವುದರಿಂದ ವಿಷಯ ಪರಿಸ್ಫೂರ್ತಿಗೆ ಆಷ್ಟೇನೂ ತೊಡಕಿಲ್ಲ. ಈ ಮುದ್ರಣಕ್ಕೆ ಉಪಯೋಗಿಸಿಕೊಂಡ ಹಸ್ತಲಿಖಿತ ಪ್ರತಿಗಳಿಗೆ ಕ,ಖ ಮೊದಲಾದ ಅಕ್ಷರಗಳ ಸಂಜ್ಞೆಯನ್ನು ಕೊಟ್ಟಿದೆ—

---

(1) ಇದರ ಮುದ್ರಣದಲ್ಲಿ ಸಂಪಾದಕರಾಗಿದ್ದ ಪಡಿಗೇನಳ್ಳಿ ಆರ್. ಶ್ರೀನಿವಾಸರಾವ್ ಎಂಬವರು ಪಂಡಿತ ತರಗತಿಯಲ್ಲಿ ವ್ಯಾಸಂಗಮಾಡುತ್ತಿದ್ದಾಗ ನನ್ನ ಸಹಾಧ್ಯಾಯರಾಗಿದ್ದರು. ಅವರು ಇದರ ಮುದ್ರಣವನ್ನು ಕೈಕೊಂಡಾಗ ನನಗೂ ಈ ಗ್ರಂಥವನ್ನು ನೋಡುವ ಸಂಯೋಗವು ಹೊರಕಿತು; ಆದುದರಿಂದಲೇ ಆಗ ಅವರು ಅಶುದ್ಧ ಪಾಠಗಳಿಂದ ಗ್ರಂಥವನ್ನು ಅರ್ಥಮಾಡಿಕೊಳ್ಳಲು ಪಡುತ್ತಿರುವ ಕ್ಲೇಶವನ್ನು ಕೋಡಿ ಈ ಗ್ರಂಥವನ್ನು ಸಂಪೂರ್ಣವಾಗಿ ಆದಷ್ಟು ಶುದ್ಧವಾಗಿ ಮುದ್ರಿಸಬೇಕೆಂಬ ಉದ್ದೇಶವು ನನ್ನ ಮನಸ್ಸಿನಲ್ಲಿ ಅಂಕುರಿಸಿತು. ಬಳಿಕ ನಾನು ಮದ್ರಾಸ್ ಯೂನಿವರ್ಸಿಟಿ ರಿಸರ್ಚ್ ಡಿಪಾರ್ಟಮೆಂಟಿನಲ್ಲಿ ಕೆಲಸವಾಗುತ್ತಿದ್ದಾಗ ಹಲವು ಹಸ್ತಲಿಖಿತ ಪ್ರತಿಗಳನ್ನು ಸಂಗ್ರಹಿಸಿ ಮುದ್ರಣದ ಪ್ರತಿಯನ್ನು ಸಿದ್ಧಪಡಿಸಿಕೊಂಡಿದ್ದೆನು. ಮತ್ತು ನನಗೆ ಆ ಡಿಪಾರ್ಟಮೆಂಟಿನಿಂದ ರಿಟೈರಾದಾಗ ನಾನೇ ಆ ಗ್ರಂಥವನ್ನು ಸ್ವಂತವಾಗಿ ಪ್ರಕಾಶನಮಾಡಬೇಕೆಂಬ ಉದ್ದೇಶದಿಂದ ವಿಶ್ವವಿದ್ಯಾಲಯದ ಅಪ್ಪಣೆಯನ್ನು ಪಡೆದು ಮುದ್ರಿಸಬೇಕೆಂದಿದ್ದೆನು. ಅಷ್ಟರಲ್ಲಿ ಮದ್ರಾಸ್ ಸರ್ಕಾರದ ಓರಿಯಂಟಲ್ ಲೈಬ್ರರಿಯವರು ಇದನ್ನು ಮುದ್ರಿಸಲು ಪ್ರಯತ್ನಿಸಿ ನನಗೇ ಅದರ ಸಂಪಾದಕತ್ವವನ್ನು ಕೊಟ್ಟುದರಿಂದ ಈ ಪ್ರಕೃತಮುದ್ರಣವು ನನ್ನ ಪರಿಶ್ರಮವನ್ನು ಸಫಲವನ್ನಾಗಿ ಮಾಡಿತು. ಕನ್ನಡದಲ್ಲಿ ಈ ಗ್ರಂಥದ ಆರು ಅಧಿಕಾರ ಮಾತ್ರ ಮುದ್ರಿತವಾಗಿ ನಿಂತುಹೋಗಿತ್ತು. ಕನ್ನಡದಲ್ಲಿ ಮಾತ್ರವಲ್ಲದೆ ತಮಿಳಿನಲ್ಲಿಯೂ ಹೀಗೆಯೇ ಈಗ್ರಂಥದ ಮೊದಲು ಆರುಅಧಿಕಾರ ಮಾತ್ರ ಮುದ್ರಿತವಾಗಿತ್ತು. ಮತ್ತೆ ಮದ್ರಾಸ್ ಯೂನಿವರ್ಸಿಟಿ ತಮಿಳ್ ಡಿಪಾರ್ಟಮೆಂಟಿನವರು ಇದರ ಮುದ್ರಣವನ್ನಾರಂಭಿಸಿದರು. ೧೦ ಫಾರಂಗಳು ಮುದ್ರಿತವಾಗುವಷ್ಟರಲ್ಲೇ ಆದರ ಸಂಪಾದಕರಿಗೆ ರಿಟೈರಾಮದರಿಂದ ಅದು ಅಷ್ಟಕ್ಕೇ ನಿಂತುಹೋಯಿತು. ಅದು ಮುಂದೇನಾಯಿತೆಂಬ ಸುದ್ದಿಯೇ ಇಲ್ಲ. ಪ್ರಕೃತದಲ್ಲಿ ಈ ಗ್ರಂಥವು ಕನ್ನಡದಲ್ಲಿ ಪೂರ್ಣವಾಗಿ ಮುದ್ರಿತವಾಮದು ಕನ್ನಡಿಗರ ಭಾಗ್ಯೋದಯವೆಂದೇ ಹೇಳಬೇಕು.

[ಕ] ಪ್ರತಿ— ಇದು ಕಾಗದದ ಪ್ರತಿ. ಇದು ಮೈಸೂರ್ ಗವರ್ನಮೆಂಟ್ ಓರಿಯೆಂಟ್ ಲೈಬ್ರರಿ ಟ್ರಾವೆಲಿಂಗ್ ಪಂಡಿತರಾಗಿದ್ದ ಶ್ರೀ ಶಾಂತರಾಜ ಶಾಸ್ತ್ರಿಗಳು ಬರೆಸಿ ಕಳುಹಿಸಿಕೊಟ್ಟುದು. ಇದು ಆದೇ ಲೈಬ್ರರಿಯ ನಂ. 304 ನೆಯ ಪ್ರತಿಯ ಪ್ರತಿಕೆ(ಪ್ರತಿಚ್ಛಾಯೆ)ಯಾದುದರಿಂದ ಆದರ ಪಾಠವೂ ಇದರಿಂದಲೇ ಚರಿತಾರ್ಥವಾಗಿರುವುದು. ಇದರಲ್ಲಿ ಹಲವು ಪಾಠಭೇದಗಳಿವೆ. ಕೆಲವು ವಾಕ್ಯಗಳೂ, ಪದ್ಯಗಳೂ ಬಿಟ್ಟುಹೋಗಿವೆ. ಕೆಲವು ಮಾರ್ಪಟ್ಟವೆ ಕೆಲವು ಹೆಚ್ಚಾಗಿವೆ. ಹೀಗೆ ವಾಕ್ಯಗಳಲ್ಲಲ್ಲದೆ ಶಬ್ದಗಳಲ್ಲಿಯೂ ಹೆಚ್ಚು ಮಾರ್ಪಾಡಿದೆ, ಇದರಲ್ಲಿ ಪ್ರತಿಯೊಂದು ಅಧಿಕಾರಗಳ ಆದಿಯಲ್ಲಿ ಜಿನಸ್ತುತಿರೂಪವಾದ ಸಂಸ್ಕೃತಪದ್ಯವೂ, ಬಳಿಕ ಅಧಿಕಾರಾರ್ಥವನ್ನು ಸಂಗ್ರಹವಾಗಿ ಸೂಚಿಸುವ ಎರಡು ಪದ್ಯಗಳೂ, ಇವುಗಳಲ್ಲಿ ಮೊದಲನೆಯದಕ್ಕೆ ಪ್ರತಿ ಪದಾರ್ಥವೂ, ಎರಡನೆಯದಕ್ಕೆ ತಾತ್ಪರ್ಯಾನುವಾದವೂ ಇದೆ, ಇವನ್ನು ಸೂತ್ರವೆಂದೂ ವ್ಯವಹರಿಸಿದೆ ಹೀಗೆಯೇ ಅಧಿಕಾರಗಳ ಆದಿಯಲ್ಲೂ ಕೊನೆಯಲ್ಲೂ ಜಿನಸ್ತುತಿರೂಪವಾದ ಸಂಸ್ಕೃತಪದ್ಯಗಳಿವೆ. ಹೀಗೆ ಹನ್ನೆರಡು ಅಧಿಕಾರಗಳಿಂದ ಇಪ್ಪತ್ತು ನಾಲ್ಕು ಮಂದಿ ಜಿನರಸ್ತೋತ್ರವನ್ನು ಸಂಪೂರ್ಣವಾಗಿ ಹೇಳಿದಂತಾಗುವುದು. ಇದರಲ್ಲಿ ಅಕ್ಷರಸ್ಖಾಲಿತ್ಯಗಳೂ ಗ್ರಂಥಪಾಠವೂ ಇದೆ—ಇದರಲ್ಲಿ ಸಗರಚಕ್ರವರ್ತಿ ಕಥೆಯಲ್ಲಿ ಪಾಠಾಂತರವುಂಟು, ನಾಗಕುಮಾರನ ಕಥೆಯು ಗ್ರಂಥದ ಅಂಗವಾಗಿಯೇ ಇದರಲ್ಲಿ ಸೇರಿಸಲ್ಪಟ್ಟದೆ ಈ ಧರ್ಮಾನುಪ್ರೇಕ್ಷೆಯು ಹನ್ನೊಂದನೆಯದಾಗಿದೆ—ಈ ಪ್ರತಿಯಲ್ಲಿ 561 ಪುಟಗಳಿವೆ. ಕೊನೆಯಲ್ಲಿ ಬೋಧಾಭಿಧಾನಂ ದ್ವಾದಶಾಶ್ವಾಸಂ ಎಂದು ಮುಗಿದಿದೆ—

[ಖ] ಪ್ರತಿ— ಇದು ಮೈಸೂರುಸೀಮೆಯ ಹಾಸನ ಡಿಸ್ಟ್ರಿಕ್ಟ್‌ಗೆ ಸೇರಿದ ಪ್ರಸಿದ್ಧವಾದ ಶ್ರವಣಬೆಳಗುಳದ ಜೈನಮಠದ ಪುಸ್ತಕಭಂಡಾರ (ಲೈಬ್ರರಿ) ದಿಂದ ಬರಮಾಡಿಕೊಂಡ ಪ್ರತಿ. ತಾಳ ಪತ್ರಾತ್ಮಕವಾದುದು. ಇದರ ಓಲೆಗಳು ತುಂಬಾ ಉದ್ದವಾಗಿಯೂ ಅಗಲವಾಗಿಯೂ ಇನೆ ಅಕ್ಷರಗಳು ಮುದ್ದುಮುದ್ದಾಗಿ ತುಂಬಾ ಸ್ಥೂಲಗಳಾಗಿ ಆಕಾರದಿಂದಲೇ ಆ ಗ್ರಂಥದ ಪ್ರಾಚೀನತ ಮತ್ತ್ವವನ್ನು ಸೂಚಿಸುತ್ತಿರುವುವು. ಪಜ್ಜಿಕ್ಕೆಗಳು ತುಂಬಾ ನೀರವಾಗಿವೆ. ಇದರಲ್ಲಿ 88 ಓಲೆಗಳಿವೆ 88ನೆಯ ಓಲೆಯ ಮುಂಭಾಗದಲ್ಲಿ ಗ್ರಂಥವು ಮುಗಿದಿದೆ — ಹಿಂಭಾಗದಲ್ಲಿ ಬರವಣಿಗೆಯಿಲ್ಲ. "ಬೋಧಾಭಿಧಾನಂದ್ವಾದಶಾಶ್ವಾಸಂ ಎಂದು ಗ್ರಂಥವಿಭಾಗಕ್ಕೆ ಆಶ್ವಾಸ ಎಂಬ ಹೆಸರಿದೆ (ಜೈನ ಕವಿಗಳು ಚಂಪೂರೂಪವಾದ ಕಾವ್ಯಗಳ ವಿಭಾಗಕ್ಕೆ ಆಶ್ವಾಸವೆಂದು ಕರೆಸ ಪದ್ಧತಿಯನ್ನನುಸರಿಸಿ ಇದೂ ಚಂಪೂ ಗ್ರಂಥವಾದುದರಿಂದ ಇದರ ವಿಭಾಗಕ್ಕೂ ಈ ಹೆಸರನ್ನೇ ಪ್ರಯೋಗಿಸಿರಬಹುದೆಂತೆ ಕಂಡು ಬರುವುದು, ಇತರ ಪ್ರತಿಗಳಲ್ಲೆಲ್ಲಾ ಅಧಿಕಾರ ಎಂಬ ವ್ಯವಹಾರವೇ ಇದೆ)—ಇವಾದ ಬಳಿಕ

ಇದನೊ ಲ್ದೋದುವರ್ ಕೇಳ್ವರ್ |
ಮುದದಿಂದಂ ನೆನೆವ ಬಾಚಿಪರೆ ವ..... ||
ಚ್ಚಿದಮಳನಿಜಾತ್ಮ ಸುಖದೊಳ್ |
ಪುದಿದೊಪ್ಪುವ ಮುಕ್ತಿ ಲಕ್ಷ್ಮಿ ಗಧಿಪರೆನಿಪ್ಪರ್
ಆದೆದೇವರ ಶಿಷ್ಯಜಿನಸೇನಣ್ಣಗಳು—
ತಪ್ಪಂ ಬರೆದಂಕಡುಜಡ |
ನಪ್ಪಂ ಬರೆದನಿದನೆಂದು ಬಯ್ಯಲ್ ಬೇಡಂ ||
ತಪ್ಪಕ್ಕು ಶುದ್ಧಮಕ್ಕುಂ [1]ನಾ |
ಅಪ್ಪೊಡೆ ನಾಂ ಪ್ರತಿ ಸಮಾನಮಾಗಿಯೆ ಬರೆದೆಂ

(1) ನಾನಾದಡೆ

ಸ್ವಸ್ತಿ ಶ್ರೀ ಶುಭಶಕವರ್ಷ 1370 (ಕ್ರಿ. ಶ. 1448) ನೆಯ ವಿಭವಸಂವತ್ಸರದ ವೈಸಕ ಸು 10 ಆದಿತ್ಯವಾರದಲು ಜಿನಂಣಗಳು ಹೆಗ್ಗಪ್ಪಗಳಿಗೆ ಬರೆದ ಜೀವಸಂಬೋಧನೆಯ ಪುಸ್ತಕಕ್ಕೆ ಮಂಗಳಮಹಾಶ್ರಿಶ್ರಿ ಎಂದಿದೆ. ಈ ಗ್ರಂಥವನ್ನು ಬರೆದು ಇಲ್ಲಿಗೆ 506 ವರ್ಷಗಳಾಗುವುವು. ಇಷ್ಟು ಪ್ರಾಚೀನತಮವಾದ ಓಲೆಯ ಪ್ರತಿಯು ಮೈಸೂರು ಮತ್ತು ಮದ್ರಾಸ್ ಓರಿಯೆಂಟಲ್ ಲೈಬ್ರರಿಗಳಲ್ಲಿಲ್ಲವೆಂದು ಹೇಳಬಹುದು – ಈಗಲೂ ಇದರ ಓಲೆಗಳು ಅಚ್ಚಳಿಯದೆ ದೃಢವಾಗಿದೆ — ಇದರಲ್ಲಿ ಅಶುದ್ಧಪಾಠಗಳು ಕಡಿಮೆಯಾಗಿ ಪ್ರಾಚೀನತಮಪಾಠಗಳಿದ್ದುದರಿಂದ ಅದರ ಪಾಠವನ್ನೇ ಈ ಮುದ್ರಣದಲ್ಲಿ ಹೆಚ್ಚಾಗಿ ಉಪಯೋಗಿಸಿಕೊಂಡಿದೆ–ಐ.ಬಿಗಳೂ ಇರುವುವು. ಇದರ ಸ್ವರೂಪ ಪರಿಜ್ಞಾನಕ್ಕಾಗಿ ಇದರ ಕೊನೆಯೋಲೆಯ ಭಾಗದ ಪ್ರತಿಕೃತಿಯನ್ನು ಇಲ್ಲಿ ಕೊಟ್ಟಿದೆ.

[ಗ] ಪ್ರತಿ— ಇದು ಮಂಗಳೂರು ಪ್ರಾಂತದ ಮೂಡಬಿದರೆಯಲ್ಲಿರುವ ಮಹಾವೀರ ಜೈನ ಪುಸ್ತಕ ಭಾಂಡಾಗಾರದ ಸೆಕ್ರೆಟರಿಗಳವರಾದ ಶ್ರೀ ಲೋಕನಾಥಶಾಸ್ತ್ರಿಗಳು ಕಳುಹಿಸಿಕೊಟ್ಟ ಪ್ರತಿ. ತಾಳಪತ್ರಾತ್ಮಕವಾದುದು 114 ಓಲೆಗಳಿವೆ 114ನೆಯ ಮುಂದುಗಡೆ ಗ್ರಂಥವು ಮುಗಿದಿದೆ. ಕೊನೆಯಲ್ಲಿ ಶ್ರೀ ಚಂದ್ರನಾಥಾಯನಮಃ, ಶ್ರೀ ಪಾರ್ಶ್ವನಾಥಾಯನಮಃ ಶ್ರೀ ವಿಜಯ ಕೀರ್ತಿ ಮುನಯೇ ನಮಃ ಮಮಶುಭಮಸ್ತು ಮುಂಗಲಮಹಾಶ್ರಿಶ್ರಿ – ಎಂದಿದೆ—

[ಘ] ಪ್ರತಿ— ಇದು ಕಾಗದದ ಪ್ರತಿ–ಮೈಸೂರು ರಾಜಕೀಯ ಪುಸ್ತಕ ಭಾಂಡಾಗಾರ (ಲೈಬ್ರರಿ)ದಲ್ಲಿ ನಂ.181ನೆ ಪುಸ್ತಕವಾಗಿ ಸಂಗ್ರಹಿಸಲ್ಪಟ್ಟಿರುವುದು, ಕ ಪ್ರತಿಯಂತೆಯೇ ಇದರಲ್ಲಿ ಅಧಿಕಾರಗಳ ಆದಿಯ ಸಂಸ್ಕೃತ ಪದ್ಯಗಳಿವೆ-ಆದರೆ ಟೀಕೆಯಿಲ್ಲ-ಅಕ್ಷರ ಸ್ಫಾಲಿತ್ಯಗಳು ವಿಶೇಷವಾಗಿದ್ದರೂ ಅಲ್ಲಲ್ಲಿ ವಿರಳವಾಗಿ ಶುದ್ಧಪಾಠಗಳೂ ಇವೆ, ಅಲ್ಲದೆ ನಿದರ್ಶನ ಕಥೆಗಳಿಲ್ಲ.ಇವನ್ನು ಲೇಖಕನೇ ಬಿಟ್ಟಿರಬಹುದು. ಏಕೆಂದರೆ ಉಳಿದೆಲ್ಲಾ ಪ್ರತಿಗಳಲ್ಲೂ ತಮಿಳುಗ್ರಂಥದಲ್ಲೂ ಈ ಕಥೆಗಳಿರುವುದರಿಂದ ಈ ಪ್ರತಿಯನ್ನು ಕಾಪಿಮಾಡಿದವನು ಇವರಲ್ಲಿ ಅದನ್ನು ಬಿಟ್ಟಿರಬಹುದು— (53×2=) 106 ಪುಟಗಳಿವೆ— ಆದ್ಯಂತಗಳಲ್ಲಿ ಶ್ರೀನಿವಾಸಪರಬ್ರಹ್ಮಣೆನಮಃ, ಶ್ರೀ ಲಕ್ಷ್ಮಣಭರತ ಹನುಮತ್ಸಮೇತರಾಮಚಂದ್ರಾಯನಮಃ, ಶ್ರೀ ಸತ್ಯಭಾಮಾ ರುಕ್ಮಿಣೀಸಮೇತ ಗೋಪಾಲಕೃಷ್ಣ ಮೂರ್ತಯೇನಮಃ, ಶ್ರೀ ಜನಾರ್ದನಾಯನಮಃ ಸಂಪೂರ್ಣಂ— ಎಂದಿರುವುದರಿಂದ ಇದನ್ನು ಬರೆದವನು ವೈಷ್ಣವನಾಗಿರಬೇಕು— (ಜೈನನಲ್ಲ)ಇದರಿಂದ ಹಿಂದಣಿಂದಲೂ ಸ್ವತಾಂತರದವರಲ್ಲಿ ಭಾಷಾಭಿಮಾನವು ವಿಶೇಷವಾಗಿತ್ತೆಂದು ತೋರುವುದು—

[ಚ] ಪ್ರತಿ— ಇದು ಮದ್ರಾಸ್ ಸರ್ಕಾರದ ರಾಜಕೀಯ ಪುಸ್ತಕ ಭಾಂಡಾಗಾರದಲ್ಲಿರುವ (ನಂ. 19–14–7) [ಡಿ. ನಂ. ೨೬೨] ತಾಳಪ್ರತಿಯು. ಇದರಲ್ಲಿಯೂ ಕ ಪ್ರತಿಯಂತೆಯೇ ಅಧಿಕಾರಗಳ ಆದ್ಯಂತದಲ್ಲಿ ಸಂಸ್ಕೃತ ಪದ್ಯ ಟೀಕೆಗಳಿವೆ. ಓಲೆಗಳೆಲ್ಲವೂ ತುಂಬಾ ಶಿಥಿಲವಾಗಿ ನುಸಿಹುಳುಗಳ ಬಾಯಿಗೆ ತುತ್ತಾಗಿ ಓಲೆಗಳ ಭಾಗಗಳೂ ತ್ರುಟಿತವಾಗಿವೆ – ಇದರ ಪಾಠಗಳನ್ನು ಅಲ್ಲಲ್ಲಿ ಮುದ್ರಣದಲ್ಲಿ ತೆಗೆದುಕೊಂಡಿದೆ—

[ಛ] ಪ್ರತಿ— ಇದು ಮೈಸೂರಿನಲ್ಲಿರುವ ಶ್ರೀ ಎಸ್. ಬೊಮ್ಮರಸಪಂಡಿತರು ಕಳುಹಿಸಿಕೊಟ್ಟ ಓಲೆಯ ಪ್ರತಿ. ಇದು ಉತ್ತಮ ಸ್ಥಿತಿಯಲ್ಲಿದೆ ಅಲ್ಲಲ್ಲಿ ಮೇಲಾದ ಪಾಠಗಳುಂಟು— ಸ್ವಸ್ತಿ ಶಕವರ್ಷಂಗಳು 1774ನೆಯ ಪರಿಧಾವಿಸಂವತ್ಸರದ ಅಧಿಕಭಾದ್ರಪದಶುದ್ಧ 15ಲು ಮಲ್ಲೆಯೂರದೇವ ಚಂದ್ರಯ್ಯನವರ ಮಗ ಪುಟ್ಟಯ್ಯನು ಬರೆದ ಜೀವಸಂಬೋಧನಾ ಗ್ರಂಥಾವತಾರದೊಳ್ ದ್ವಾದಶಾಧಿಕಾರಂ ಸಂಪೂರ್ಣಂ ಮಂಗಳಮಹಾಶ್ರಿಶ್ರಿ—ಎಂದು ಕೊನೆಯಲ್ಲಿದೆ.

[ಜ] ಪ್ರತಿ— ಇದು ಉತ್ತರಭಾರತದ ಆರಾ ಎಂಬ ನಗರದಲ್ಲಿ ಸ್ಥಾಪಿತವಾಗಿರುವ ಜೈನಭಾಂಡಾಗಾರದ ಓಲೆಯ ಪ್ರತಿ – ಇದರಲ್ಲಿ 163 ಓಲೆಗಳಿವೆ. 163 ನೆಯ ಓಲೆಯ ಮುಂಭಾಗದಲ್ಲಿ ಗ್ರಂಥವು ಮುಗಿದಿದೆ ಹಿಂದುಗಡೆ ನಾಲ್ಕು ಪಙ್ಕ್ತಿ ಇವೆ— ಕೊನೆಯಲ್ಲಿ

ಅಪಿ ಸ್ಮರಸಿ ಮಾಂ ನಾಥ ನ ಕದಾಚಿತ್ ಸ್ಮರಾವ್ಯಹಂ |
ಸ್ಮರಣಂ ಚೇತಸೋಧರ್ಮಃ ತಚ್ಚೇತೋ೭ಪಹೃತಂ ತ್ವಯಾ ||
ದ್ವಾದಶಾಖ್ಯಾ ಅನುಪ್ರೇಕ್ಷಾ ಲೀ(ಲಿ)ಖಿತಂ ಮೋಕ್ಷಕಾರಣಂ |
ದ್ವಿಜದೇವರಸಾಖ್ಯೇನ ಪೂರ್ಣತಾಂ ಬಹುಭಕ್ತಿತಃ ||

ಶಾಲಿವಾಹನಶಕಾಬ್ದ ೧೬೬೮ನೆಯ ಕ್ಷಯಸಂವತ್ಸರ ಅಯನ ದಕ್ಷಿಣದ ಭಾದ್ರಪದಮಾಸದ ಪಕ್ಷ ಪೂರ್ವಪಕ್ಷ ತಿಥಿತೃತೀಯಾವಾಸರೆ ಶುಕ್ರದಲ್ಲಿ ಯಿದ್ವಾದಶಾನುಪ್ರೇಕ್ಷಾಗ್ರಂಥಂ ಪೂರಿತ ಲೇಖನದಿಂದೀಪ್ರತಿಯಾಯ್ತು — "ಲೇಖ್ಯಾರಕ್ಷಣ ಭಾವ್ಯಸ್ಯಯಿಾಕ್ಷಕಂ ಶೋಂಧಕಂ ಪುನ ||
ಶ್ಚರಣಂ ಕಥಕಾಸ್ಸರ್ವೇ ಜನಾನಾಂ ಮಂಗಲಂ (ತು) ಭವೇತ್?|| " ಶ್ರೀಶ್ರೀಶ್ರೀ ಧರ್ಮಾರಾಜಾಯನಮಃ, ವರ್ಧತಾಂ ಜಿನಶಾಸನಂ—

श्रीचन्द्रनाथायनमः. श्रीमद्भट्टाकलङ्कमुनये नमः श्री श्री श्री ಎಂಬ ಬರೆಹವಿದೆ—

[ಝ] ಪ್ರತಿ— ಇದು ಮೈಸೂರ್ ಟ್ರೈಲಿಂಗ್ ಕಾಲೇಜ್ ಉಭಯಭಾಷಾಪಂಡಿತರಾಗಿದ್ದ ಹೆಚ್. ಶ್ರೀನಿವಾಸಾಚಾರ್ಯರು ಕಳುಹಿಸಿಕೊಟ್ಟ ಪ್ರತಿ. ಇದರಲ್ಲಿ ಕೊನೆಯ ಆರು(6)ಅಧಿಕಾರಗಳು ಮಾತ್ರ ಇವೆ. ಎಲ್ಲಾ ಪ್ರತಿಗಳಿಗಿಂತಲೂ ಇದು ತುಂಬಾ ಪ್ರಾಚೀನತಮವಾದುದು—ಪ್ರಾಚೀನತಮವಾದ"ಒ" ಪ್ರತಿಗಿಂತಲೂ 24ವರುಷ ಹಿಂದಿನದು. ನಮಗೆ ತಿಳಿದಮಟ್ಟಿಗೆ ಇದಕ್ಕಿಂತ ಹಳೆಯಪ್ರತಿ ದೊರಕುವುದು ದುರ್ಲಭ – ಇದರ ಕೊನೆಯ ಓಲೆಯ ಪ್ರತಿಕೃತಿಯನ್ನು ತೆಗೆಯಲು ಬ್ಲಾಕ್ ಮೇಕರಿಗೆ ಕೊಟ್ಟಾಗ ಆತನು ಕಳೆದುಬಿಟ್ಟೆನೆಂದು ಹೇಳಿಬಿಟ್ಟನು. ಈ[illegible] ಗಳನ್ನು ತಿಳಿಸುವ ವಿಷಯವನ್ನು ಮಾತ್ರ ಇಲ್ಲಿ ಕೊಟ್ಟಿದೆ. ಇದರ ಓಲೆಗಳೂ, ತುಂಬಾ ಅಗಲವಾಗಿ ಉದ್ದವಾಗಿವೆ. ಅಕ್ಷರಗಳೂ ತಮ್ಮ ಪ್ರಾಚೀನತಮತ್ವವನ್ನು ಚೆನ್ನಾಗಿ ಸೂಚಿಸುತ್ತಿವೆ. ಶ್ರವಣ ಬೆಳ್ಗೊಳದ ಪ್ರತಿಯಂತೆಯೇ ಧರ್ಮವು ಹನ್ನೊಂದನೆಯ ಅಧಿಕಾರವಾಗಿಯೂ ಬೋಧಿಯು ಹನ್ನೆರಡನೆಯವಾಗಿಯೂ ಇವೆ— ಇದರಲ್ಲಿರುವ ಓಲೆಗಳು ೭೮. ಎಲ್ಲಾ ಪ್ರತಿಗಳಂತೆ ಈ ಗ್ರಂಥವೂ ಕೊನೆಯ ಓಲೆಯ (೭೮ನೆಯ) ಮುಂದುಗಡೆಯಲ್ಲೆಯೇ ಮುಗಿದಿದೆ—

ಇದು ಜಿನಶಾಸನ.....ಗ್ರಂಥಾವತಾರದೊಳ್ ಧರ್ಮಾಧಿಕಾರ ನೋಕಾದಶಾಶ್ವಾಸಂ |೧೧||
ಯಾದೃಶಂ ಪುಸ್ತಕಂ ದೃಷ್ಟಂ ತಾದೃಶಂ ಲಿಖಿತಂ ಮಯಾ ||
ಯದಿ ಶುದ್ಧಮಶು(ಬ)ದ್ಧಂ ವಾ ಮಮ ದೋಷೋನ ವಿದ್ಯತೇ||

ಶಕವರುಷ ೧೩೪೬ (ಕ್ರಿ.ಶ ೧೪೨೪) ನೆಯ ಕ್ರೋಧನ ಸಂವತ್ಸರದ ಆಸ್ಯೆ (ಶ್ರಯು) ಜ ಬಹುಳ ಏಕಾದಶಿಯು ಬುಧವಾರದಂದು ಶ್ರೀ ಜಿನಪೂಜಾಪ ಬಂಧ ಚಕ್ರವರ್ತಿ ವೀಪನಾರಾಯಣ ಖಂಡಳೆಯ ಸುರತ್ತಾಣ ಕೊಡೆ ರಾಯಚೂರ್ ಯಿಎಂದ್ರ....ತಿನಾಥನತನೂಭವಪ್ರಬಂಧಚಕ್ರವರ್ತಿ ಬೊಮ್ಮಣ್ಣಂಗಳಮಗ ಆದಿಯಣ್ಣನು ದೇವರಾಯ ಪಟ್ಟಣದ ಚತುರ್ವಿಂಶತಿತೀರ್ಥಂಕರ ಸ್ವಾಮಿಗಳವರ ಜೈತ್ಯಾಲಯದಲ್ಲಿ ಪ್ರತಿಸಮಾನವಾಗಿ ಬರೆದುದು. ಶ್ರೀ ಪಂಚಪರಮೇಷ್ಠಿಗಳ ಶ್ರೀ ಪಾದಪದ್ಮರಾಧಕರುಮಪ್ಪ ಲಕ್ಕಿಸೆಟ್ಟಿಯರ ಮಗಗು.....ಬರೆಸಿದ ಜೀವಸಂಬೋಧನೆಯು ಪುಸ್ತಕಮಹಾಮಂಗಳ ಶ್ರೀಶ್ರೀಶ್ರೀ—

[ಟಿ] ಪ್ರತಿ— ಇದು ಮೈಸೂರಲ್ಲಿ 1917 ರಲ್ಲಿ 6 ಅಧಿಕಾರ ಮಾತ್ರ ಮುದ್ರಿತವಾದ ಪ್ರತಿ– ಡೆಮ್ಮಿ ಸೈಜಿನಲ್ಲಿ 100 ಪುಟಗಳಿವೆ— ಈ ನೂರು ಪುಟಗಳಿಗೆ 16 ಪುಟಗಳು ತಿದ್ದು ಪಡಿಗಳ ಪುಟಗಳಿವೆ ಆದರೂ ಎಷ್ಟೋ ಅಶುದ್ಧ ಪಾಠಗಳಿವೆ— ಪು. 8ರಲ್ಲಿ (ಗ.೨೬) "ಕುರುಡಂ ಪಾವುಗೆ ಮೆಟ್ಟಿದಂತೆ" ಎಂಬ ಪಾಠವಿದೆ— ಇದಕ್ಕೆ ಕುರುಡನು ಎಕ್ಕಡವ (ಪಾವುಗೆಯ) ನ್ನು ಮೆಟ್ಟಿದಂತೆ ಎಂದು ಅರ್ಥವಾಗುವುದು. ಈ ಉಪಮಾನದಲ್ಲಿ ಯಾವ ವಿಶೇಷವೂ ತೋರುವುದಿಲ್ಲ. ಪ್ರಕರಣದಲ್ಲಿ ಈ ವಾಕ್ಯಕ್ಕೆ "ಓ ಜೀವನೇ ನೀನು ಸಂಸಾರವೆಂಬ ದೊಡ್ಡ ಡವಿಯಲ್ಲಿ ದ-ಃಖಾಗ್ನಿಯ (ಕಾಳ್ಗಿರ್ಚಿನ) ಬಾಧೆಗೆ ಸಿಕ್ಕಿ ನಮೆಯುತ್ತಾ (ಎತ್ತಾನುಂ ಒರ್ಮೆ) ಯಾವಾಗಲಾದರೂ ಒಂದು ಸಾರಿ ಕುರುಡನು ಎಕ್ಕಡವನ್ನು ಮೆಟ್ಟಿದಂತೆ - ದೊರೆಕೊಂಡ ಸ್ವಲ್ಪ ಸುಖಕ್ಕೆ ಮರುಳಾಗಿ–ಎಂದು ಹೇಳಿರುವ ವಿಷಯವನ್ನು ಕುರುಡನು ಎಕ್ಕಡವನ್ನು ಮೆಟ್ಟಿದಂತೆ ಎಂಬ ಉಪಮಾನವು ಸಮರ್ಥಿಸ ಲಾರದು-- ಸಂಸ್ಕೃತದಲ್ಲಿ [1] "ಅಂಧಲಾವುಕನ್ಯಾಯ" ಎಂಬ ಲೌಕಿಕ ನ್ಯಾಯವಿದೆ. ಅದಕ್ಕೆ – ಒಬ್ಬ ಕುರುಡನು ಒಂದು ಕೊಳದಲ್ಲಿ ಸಿ(ರು ಕುಡಿಯಲು ಮೆಟ್ಟಿಲಮೇಲೆ ಇಳಿಯುವಾಗ ಒಂದುಸಾರಿ ಆಕಸ್ಮಿಕವಾಗಿ ಆ ಮೆಟ್ಟಿಲಮೇಲೆ ಮಲಗಿರುವ ಲಾವುಗೆ[ಲಾವುಕ–ತ್ಸ]ಎಂಬ ಪಕ್ಷಿಯ ಮೇಲೆ ತಡವರಿಸಿ ಕಾಲಿಟ್ಟು ಅದನ್ನು ಕೊಂದಂತೆ–ಎಂಬ ಈ ನ್ಯಾಯದ ಸುರಸವಾದ ಅರ್ಥವು ಪ್ರಕೃತ ವಿಷಯವನ್ನು ಚೆನ್ನಾಗಿ ಸಮರ್ಥಿಸುವುದು. ಉದ್ದೇಶವಿಲ್ಲದೆ ಆಕಸ್ಮಿಕವಾಗಿ ಸಂಭವಿಸುವ ವಿಷಯಗಳಿಗೆ ಈ ನ್ಯಾಯವನ್ನು ದಾಹರಿಸುವರು – ಕವಿಯು ಕೂಡ ಅಂಧಲಾವುಕನ್ಯಾಯ — ವೆಂಬುದನ್ನು ಕನ್ನಡ ಭಾಷೆಗೆ ಪರಿವರ್ತಿಸಿ "ಕುರುಡಂ ಲಾವುಗೆ ಮೆಟ್ಟಿದಂತೆ" ಎಂದು ಉಪಮಾನ ರೂಪದಲ್ಲಿ ಪರಿವರ್ತಿಸಿರುವನು– [ಹೀಗೆಯೇ ಮತ್ತೊಂದು ಕಡೆ "ಭೌತಿಕನೋದಕನ್ಯಾತಿಕರಂ" ಎಂಬ ಸಂಸ್ಕೃತ ಭಾಷೆಯ ನ್ಯಾಯವನ್ನು "ಜೋದಂ ನೋದಗೆಗೊಂಡುದು" ಎಂಬ ನಗೆಯಂ ನೀಂ ಮಾಡದಿರ್— [ಸಿರ್ಜ–171-14] ಎಂದು ಕನ್ನಡ ಭಾಷೆಗೆ ಪರಿವರ್ತಿಸಿ ಪ್ರಯೋಗಿಸಿರು ವನು–] ಈ ವಾಕ್ಯದಲ್ಲಿ 'ಲಾ' ಎಂಬ ಅಕ್ಷರವನ್ನು 'ವಾ' ಎಂದು [illegible] ಪ್ರಯೋಗಿಸಿದ್ದರಿಂದ ಎಷ್ಟು ಅನರ್ಥವಾಗಿದೆ ಎಂಬುದನ್ನು ಪಂಡಿತರೇ ವಿಮರ್ಶಿಸಬೇಕು—

ಇದೇ ಮುದ್ರಣದಲ್ಲಿ ಇನ್ನೊಂದು ಕಡೆ [ಏಕತ್ವ–ಪು. 51–ಸ. 26] ಗದ್ಯದಲ್ಲಿ "ನಿಘರ್ಷಣ ಚ್ಛೇದನ ತಾಪನಾದಿಕ್ರಿಯೆ ಗೆಲ್ಲಂ ಬಂದೊಡೆಯಿಂನೊಳ್ಳಿತ್ತೆಂದರಂತೆ" ಎಂಬ ವಾಕ್ಯದಲ್ಲಿ— ತಾಪನಾದಿ ಕ್ರಿಯೆಗಲ್ಲಂ ಬಂದೊಡೆ ಪೊಣ ಒಳ್ಳಿತ್ತು – ಎಂಬ ಪಾಠವಿರಬೇಕು. ಯಿನ್ನೊಳ್ಳಿತ್ತು ಎಂಬ ಪಾಠಕ್ಕೆ ಅರ್ಥವೇ ಇಲ್ಲ. ಮತ್ತು ಕ್ರಿಯೆ ಗೆಲ್ಲಂ ಬಂದೊಡೆ ಎಂದಿರುವುದರಿಂದ ಕಲಸವು ಗೆಲಸನ್ನು ಬಂದರೆ ಎಂಬ ಅನಂಬದ್ಧಾರ್ಥವಾಗುವುದು. ಹೀಗೆ ಎಷ್ಟೋ ಅಶುದ್ಧಪಾಠಗಳಿಂದ ಅನರ್ಥವೇ ಸಂಭವಿಸಿದೆ—

---

(1) ಅಗ್ಗಳಮಹಾಕವಿಯು ತನ್ನಿಂದ ರಚಿತವಾದ ಚಂದ್ರಪ್ರಭ ಪುರಾಣದಲ್ಲಿ ಈ ನ್ಯಾಯವನ್ನು ಪ್ರಯೋಗಿ ಸಿರುವನಲ್ಲದೆ ಇದೇ ಅರ್ಥಕೊಡುವ ಮತ್ತೆರಡು ನ್ಯಾಯಗಳನ್ನೂ ಸೇರಿಸಿರುವನು.

ಜೀಯಿನೆ ಬಲ್ಲವರ್ ನೆಜ್ಜಿಯೆ ಸತ್ಕೃತಿನೇಜಿದೆ ಪೇಟ್ಪುಂ "ಘುಣಾಕ್ಷರ ।
ನ್ಯಾಯ"ದೆ ಶಬ್ದಮೊಂದೆರಡು ಮತ್ತೆ ವಿಚಾರಿಸಿ ನೋಡೆ "ಕಾಕತಾ ॥
ಳೀಯ"ದೆ ವಾಚ್ಯಮೊಂದೆರಡು ಕೂಡೆ ನಿಘರ್ಷಿಪೊ"ದಂಧಲಾವುಕ ।
ನ್ಯಾಯ"ದೆ ಭಾವಮೊಂದೆರಡು ಲೇಸೆನೆ ಪೇಟ್ಪುಜದಿರ್ಪುದೊಪ್ಪಮೇ ॥ ೪೮ ॥

(೧ನೆಯ ಆಶ್ವಾಸ – ಪದ್ಯ ೪೮)

[೨] ಕವಿಕಾವ್ಯ ವಿಚಾರ

(i) ಕವಿಯ ವಿಚಾರ :—

ಈ "ಜೀವಸಂಬೋಧನೆ" ಎಂಬ ಗ್ರಂಥವನ್ನು ಬರೆದವನು **ಬಂಧುವರ್ಮ**ನೆಂಬುವನು. ಇದು ಈ ಗ್ರಂಥದ ಪೀಠಿಕಾಪ್ರಕರಣದ [ಪದ್ಯ ೬] "ಸರಸ್ವತಿ ಬಂದು **ಬಂಧುವರ್ಮನ** ಮುಖ ಪದ್ಮದೊಳ್ ನೆಲೆಸಿ ನಿಂದು" ಎಂಬ ಭಾಗದಿಂದಲೂ ಉಪಸಂಹಾರದಲ್ಲಿರುವ "ನುತವೈಶ್ಯೋತ್ತಮ" ಎಂಬ ಪದ್ಯಭಾಗದಿಂದಲೂ, ಆಶ್ವಾಸಾಂತ್ಯ ಗದ್ಯಗಳ – "ಜಿನಶಾಸನಪ್ರಭಾಸನಶೀಲೋದಿತ ವಿದಿತ **ಬಂಧುವರ್ಮ** ನಿರ್ಮಿತಮಪ್ಪ" ಎಂಬ ಭಾಗದಿಂದಲೂ ಸ್ಪಷ್ಟವಾಗಿ ತಿಳಿದುಬರುವುದು. ಇವನು ಈ ಗ್ರಂಥವನ್ನಲ್ಲದೆ 22ನೆಯ ತೀರ್ಥಕರನೇಮಿನಾಥನ ಚರಿತವಾದ [1]"ಹರಿವಂಶ"ವೆಂಬ ಮತ್ತೊಂದು ಚಂಪೂಮಹಾಕಾವ್ಯವನ್ನೂ ಬರೆದಿರುವನು. ಆದರಿಂದಲೂ ಇವನ ವಿಷಯದಲ್ಲಿ ಹೆಚ್ಚು ಅಂಶಗಳು ತಿಳಿದುಬರುವುದಿಲ್ಲ. ಇವನು ಬರೆದಿರುವ ಮತಸಂಬಂಧವಾದ ಗ್ರಂಥಗಳಿಂದಲೇ ಈತನು ಜೈನಮತದವನೆಂದು ತಿಳಿದುಬರುವುದು, ಮತ್ತು ಜೀವಸಂಬೋಧನೆಯ ಉಪಸಂಹಾರ ಪದ್ಯದಲ್ಲಿರುವ "ನುತವೈಶ್ಯೋತ್ತಮ" ಎಂಬ ಭಾಗದಿಂದ ಈತನು ವೈಶ್ಯವರ್ಣದವನೆಂದೂ ತಿಳಿದು ಬರುವುದು [ಕೆಲವು ಪ್ರತಿಗಳಲ್ಲಿ ನಂಶ್ಯೋತ್ತಮ ಎಂಬ ಪಾಠವಿದೆ] ಇವನ ಕಾಲವು ನಿರ್ದಿಷ್ಟವಾಗಿ ಯಾವುದರಿಂದಲೂ ತಿಳಿಯಬರದೆ ಊಹಿಸಲೇಬೇಕಾಗಿರುವುದು. ಕ್ರಿ.ಶ. 1600 ಲ್ಲಿದ್ದ ಸಾಳ್ವನು ಈ ಗ್ರಂಥದ ಒಂದು ಪದ್ಯವನ್ನು [ಅಡಗಿನ ತೋಲ–] ಉದಾಹರಿಸಿರುವುದರಿಂದ ಅವನಿಗಿಂತಲೂ ಈತನು ಹಿಂದಣವನೆಂದು ಹೇಳಬೇಕಾಗಿರುವುದು ಮತ್ತು ಶಾಂತೀಶ್ವರ ಪುರಾಣವನ್ನು ಬರೆದ *ಕಮಲಭವಕವಿಯು, [1235 ರಲ್ಲಿದ್ದನ] ಈ ಬಂಧುವರ್ಮನನ್ನು ತನ್ನ ಕಾವ್ಯದ ಪೀಠಿಕಾ ಪ್ರಕರಣದಲ್ಲಿ ಸ್ತುತಿಸಿರುವುದರಿಂದ ಅವನಿಗಿಂತ ಈತನು ಹಿಂದಣವನೆಂಬುದು ನಿರ್ವಿವಾದ ವಿಷಯ ವಾಗಿದೆ. ಎಷ್ಟುಕಾಲ ಹಿಂದಣವನೆಂದು ತಿಳಿಸುವ ಪೂರ್ವ ಕಾಲಾವಧಿಯು ತಿಳಿದುಬರುವುದಿಲ್ಲ. ಏಕೆಂದರೆ ಇವನು ತನ್ನ ಹಿಂದಣ ಕವಿಗಳೊಬ್ಬರನ್ನೂ ತನ್ನ ಗ್ರಂಥಗಳಲ್ಲಿ ಸ್ಮರಿಸಿಲ್ಲ. ಹಾಗೆಯೇ ತನ್ನ ಗುರುಪರಂಪರೆಯನ್ನೂ ಸ್ಮರಿಸಿಲ್ಲ. ಆದುದರಿಂದ ಕಮಲಭವನಿಗಿಂತಲೂ [2]ಒಂದೆರಡು ತಲೆಮಾರಿನಷ್ಟು ಹಿಂದಣವನಿರಬಹುದೆಂದು ಭಾವಿಸಿ — ಈತನು ಸು : 1200 [ಕ್ರಿ. ಶ.] ರಲ್ಲಿದ್ದಿರಬಹುದೆಂದು ಹೇಳಬಹುದು. ಕವಿಚರಿತ್ರಕಾರರೂ ಈ ಕಾಲವನ್ನೇ ಊಹಿಸಿರುವರು.

---

(1) ವೈದಿಕಮತದಲ್ಲಿ ಪ್ರಾಚೀನ ಕಾಲದಲ್ಲಿ ಕ್ಷತ್ರಿಯವರ್ಣದಲ್ಲಿ ಸೂರ್ಯವಂಶ–ಚಂದ್ರವಂಶ ಎಂಬ ಎರಡು ರಾಜವಂಶಗಳಿದ್ದುವೆಂದು ಪುರಾಣಗಳಲ್ಲಿ ಹೇಳಿದೆ. ಆದರೆ ಜೈನಮತಪುರಾಣಗಳಲ್ಲಿ–ಪುರು, ನಾಥ, ಉಗ್ರ, ಹರಿ, ಕುರು, ಎಂದು ಐದು ವಂಶಗಳಿದ್ದುವೆಂದು ಹೇಳಿದೆ–24 ಮಂದಿ ತೀರ್ಥಂಕರರೆಲ್ಲರೂ ಈ ಐದುವಂಶಗಳಲ್ಲಿ ಹುಟ್ಟಿದವರು– 22ನೆಯ ತೀರ್ಥಂಕರನೇಮಿನಾಥನು, ಹರಿವಂಶಕ್ಕೆ ಸೇರಿದವನಾದುದರಿಂದ ಅವನ ಚರಿತ್ರಕ್ಕೆ "ಹರಿವಂಶ" ಎಂಬ ಹೆಸರೂ ರೂಢಿಯಲ್ಲಿ ಬಂದಿರುವುದು. ನೇಮಿನಾಥಪುರಾಣ ಎಂಬುದಕ್ಕಿಂತಲೂ ಈ "ಹರಿವಂಶ" ಎಂಬ ಹೆಸರೇ ಹೆಚ್ಚು ಬಳಕೆಯಲ್ಲಿ ಬಂದಿದೆ. (2) ಒಂದು ತಲೆಮಾರಿಗೆ ಸರಾಸರಿ 25 ವರ್ಷವೆಂದು ಹೇಳುವ ನಾಡಿಕೆಯಿದೆ. ಸಾಮಾನ್ಯವಾಗಿ ಕವಿಗಳು ತಮಗಿಂತಲೂ ಒಂದೆರಡು ತಲೆಮಾರಿನಷ್ಟು ಹಿಂದಣವರನ್ನು ಸ್ತುತಿಸುವರೇ ಹೊರತು ಸಮಕಾಲಿಕರನ್ನು ಸ್ತುತಿಸುವುದಿಲ್ಲ.

* ಜಿನಸಮಯಪ್ರಕಾಶಕೃತಸತ್ಕವಿಪಂಜನ ಪೆಂಪುವೆತ್ತ ಪೊ ।
ನ್ನನ ಕವಿನಾಗಚಂದ್ರನ ನೆಗಟ್ಪ್ಯಂ ರನ್ನನ ಸಂದ ಬಂಧುವ ॥
ರ್ಮನ ಬುಧ ನೇಮಿಚಂದ್ರನ ಜಗನ್ನುತ ಜನ್ನನ ರಾಜಿಪಗ್ಗಳ ।
ಯ್ಯನ ಕೃತಿಸೌಂದರೀಸುಭಗ ಮಾವಗಮಿರ್ಕೆ ನುದೀಯ ಕಾವ್ಯದೊಳ್ ॥

(ಶಾಂತೀಶ್ವರ ಪುರಾಣ)

ಹೀಗೆ ಈತನನ್ನು ಕಮಲಭವನು ಮಾತ್ರವಲ್ಲದೆ ಅವನಿಗಿಂತ ಈಚಿನವರಾದ [1]ಪುಣ್ಯಾಸ್ರವ ಚಂಪುವನ್ನು ಬರೆದ [1331] ನಾಗರಾಜನೂ, [2]ನೇಮಿ ಜಿನೇಶಸಂಗತಿಯಲ್ಲಿ—ಮಂಗರಸನೂ, ಸ್ತುತಿಸಿರುವರು. ಅಲ್ಲದೆ ಇವನ ಈ ಗ್ರಂಥದ "ಅಡಗಿಸ ತೋಲ" ಎಂಬ ಪದ್ಯವನ್ನು ಸಾಳ್ವನು "ತನ್ನ ರಸರತ್ನಾಕರ" ವೆಂಬ ಲಕ್ಷಣ ಗ್ರಂಥದಲ್ಲಿ ಉದಾಹರಣವಾಗಿ ತೆಗೆದುಕೊಂಡಿರುವುದರಿಂದ—ಈತನ ಕಾವ್ಯವನ್ನು ಲಾಕ್ಷಣಿಕರು ತುಂಬಾ ಪ್ರಮಾಣ ಗ್ರಂಥವನ್ನಾಗಿ ಅಂಗೀಕರಿಸಿರುವುದರಿಂದ ಈತನು ಪಂಪಾದಿ ಕವಿಗಳಂತೆಯೇ ಮಹಾಕವಿಗಳ ಗೋಷ್ಠಿಯಲ್ಲಿ ಸೇರಿದವನೆಂಬುದಕ್ಕೆ ಸ್ವಲ್ಪವೂ ಸಂದೇಹವಿಲ್ಲ—

ಇವನ ಗ್ರಂಥ—

ಗ್ರಂಥಸ್ವರೂಪ:—ಜೀವಸಂಬೋಧನವೆಂಬ [3]ಈ ಚಂಪೂ [ಗದ್ಯಪದ್ಯಾತ್ಮಕವಾದುದು] ಗ್ರಂಥದಲ್ಲಿ 558 ಪದ್ಯಗಳೂ ಅಷ್ಟೇ ಗದ್ಯ (ವಚನ) ಗಳೂ ಇವೆ. ಆದರೆ ಇದುವರೆಗೆ ನಮಗೆ ತಿಳಿದು ಬಂದಿರುವ ಪ್ರಸಿದ್ಧ ಕನ್ನಡ ಚಂಪೂಗ್ರಂಥಗಳಿಗಿಂತ ಇದರಲ್ಲಿ ವೈಶಿಷ್ಟ್ಯವೊಂದುಂಟು. ಪಂಪ ಪೊನ್ನ ಮೊದಲಾದ ಪ್ರಾಚೀನ ಕನ್ನಡ ಕವಿಗಳ ಚಂಪೂ ಗ್ರಂಥಗಳಲ್ಲಿ ಪದ್ಯಗಳೇ ಹೆಚ್ಚಾಗಿ ಗದ್ಯಗಳು ಬಹಳ ಕಮ್ಮಿಯಾಗಿವೆ. ಇದರಲ್ಲಿಯಾದರೋ ಒಂದು ಪದ್ಯ ಒಂದು ಗದ್ಯ ಹೀಗೆ ಗದ್ಯಪದ್ಯಗಳು ಸಮನಾಗಿವೆ; ಇದರಲ್ಲಿರುವ ಗದ್ಯಗಳು ಪದ್ಯಗಳ ವಿವರಣ [4][ವ್ಯಾಖ್ಯಾನ] ವೆಂದು ಕವಿಯ ಅಭಿಪ್ರಾಯವಿರುವುದರಿಂದ ಪ್ರತಿಯೊಂದು ಪದ್ಯಕ್ಕೂ ಒಂದೊಂದು ಗದ್ಯವಿರುವಂತೆ ತೋರುವುದು[5]—ಈ ಗದ್ಯಗಳಲ್ಲಿ ಕೆಲವು ಮೇಲಣ ಪದ್ಯಗಳ ಸಂಗ್ರಹರೂಪ ತಾತ್ಪರ್ಯವಾಗಿರುವುವು. ಮತ್ತೆ ಕೆಲವು ಬೇರೆ ಬೇರೆ ದೃಷ್ಟಾಂತಗಳಿಂದ ಪದ್ಯದ ಅರ್ಥವನ್ನೇ ವಿವರಿಸುವುವು. ಮತ್ತೆ ಕೆಲವು ಪದ್ಯಗಳಲ್ಲಿ ಹೇಳಿರುವ ವಿಷಯಗಳಿಗಿಂತ ಹೆಚ್ಚಿನ ವಿಷಯಗಳಿರುವುವು. ಆದುದರಿಂದ ಒಟ್ಟಿನಲ್ಲಿ ಗದ್ಯಗಳೆಲ್ಲವೂ ಪದ್ಯಗಳ ಸಂಪೂರ್ಣ ವ್ಯಾಖ್ಯಾನವಲ್ಲವೆಂದು ಹೇಳಬಹುದಾದರೂ ಕೆಲವು ವಚನಾತ್ಮಕ ವ್ಯಾಖ್ಯಾನಗಳೆಂಬುದರಲ್ಲಿ ಸಂದೇಹವೇ ಇಲ್ಲ—

ತಮಿಳು ಭಾಷೆಯಲ್ಲೂ ಜೀವಸಂಬೋಧನೆ ಎಂಬ ಹೆಸರಿನಿಂದ ಇದೇ ವಿಷಯವನ್ನೊಳಗೊಂಡಿರುವ ಪ್ರಸಿದ್ಧವಾಗಿರುವ ಕಾವ್ಯವೊಂದಿರುವುದು. ಅದರಲ್ಲಿಯೂ ಗದ್ಯಪದ್ಯಗಳು ಸಮಾನವಾಗಿರುವುದಲ್ಲದೆ ಗದ್ಯವು ಪದ್ಯದ ವ್ಯಾಖ್ಯಾನವೆಂಬ ಪ್ರತೀತಿಯೂ ಉಂಟು. ಇವೆರಡಕ್ಕೂ ಈ ಬಗೆಯ ಸಾಮ್ಯವೊಂದಲ್ಲದೆ ಉಳಿದ ಎಲ್ಲಾ ಬಗೆಯಲ್ಲೂ ವಿಶೇಷ ಸಾಮ್ಯವುಂಟು;[6] ಇದರಿಂದ ತಮಿಳಿನ ವಾಕ್ಯವನ್ನು ಆದರ್ಶ [ಆಧಾರ] ವಾಗಿ ಇಟ್ಟುಕೊಂಡು ಈ ಕನ್ನಡಕಾವ್ಯವು ರಚಿತ

---

(1) ಕವಿಗಳೊಳ್ ಬಂಧುವರ್ಮಂ। ಕವಿಯಾತನ ಮುಂದೆ ಕವಿಗಳೆಂಬುವರೆಲ್ಲಂ॥ ಭವಿಗೆಟ್ಟಿರ್ದರ್ತೊಳಗುವ। ರವಿಯುಂ ಬಳಸಿರ್ಪ ಬಹಳ ಭಗಣಂಗಳವೋಲ್(ಪುಣ್ಯಾಸ್ರವ ಚಂಪು) (2) ಬಂಧುರಭರತಯಾಪವನಂಶವನು ಕೃತಿಬಂಧದೊಳಗೆ ಸೇರಿಸಿದ ॥ ಬಂಧುವರ್ಮನನುನೆನೆದು ನೇಮಿಚರಿತಪ್ರಬಂಧವನಾನುಸಿರುವೆನು (ನೇಮಿಜಿನೇಶಸಂಗತಿ) (3) ಈ ಬಗೆಯ ಚಂಪೂಗ್ರಂಥಗಳನ್ನು ನೃಪತುಂಗನು – ಗದ್ಯಕಾವ್ಯಗಳೆಂದೇ ಹಿರಿಯರು ವ್ಯವಹರಿಸುವರು ಎಂದು ಹೇಳಿರುವನು. (ಪ. 6–28) (4) ಅಧಿಕಾರಸೂತ್ರದಂತಾಗಿರ್ದೀವೃತ್ತದರ್ಥಮಂ ವ್ಯಾಖ್ಯಾನವಿಶೇಷದಿಂದಲ್ಲದಜ್ಞಾಯಲಾಗದದೆಂತೆನೆ (192–20) ಈ ವೃತ್ತದರ್ಥಮೆಂತೆಂದೊಡೆ :—(216–8. ವ) (5) ಈ ಕವಿಯು ರಚಿಸಿರುವ "ಹರಿವಂಶ" ವೆಂಬ ಚಂಪೂಗ್ರಂಥದಲ್ಲೂ ಹೀಗೆಯೇ ಒಂದು ಪದ್ಯ ಒಂದು ಗದ್ಯ ಹೀಗೆ ಸಮಸಮನಾಗಿ ಗದ್ಯಪದ್ಯಗಳಿವೆ. (6) ಪರಿಶಿಷ್ಟ 4ರಲ್ಲಿ ಕೊಟ್ಟಿರುವ ತಮಿಳು ಕಾವ್ಯದ ಒಂದು ಭಾಗದಿಂದ ಇದು ಸ್ಪಷ್ಟವಾಗುವುದು.

ವಾಯಿತೊ! ಅಥವಾಕನ್ನಡ ಕಾವ್ಯದ ಆಧಾರ[ಆದರ್ಶ]ದಿಂದ ತಮಿಳಿನ ಕಾವ್ಯರಚಿತವಾಯಿತೋ ಎಂಬ ಸಂದೇಹಕ್ಕೆ ಆಸ್ಪದವಿರುವಷ್ಟು ಎರಡಕ್ಕೂ ಸಾಮ್ಯವಿದೆ. ಆದರೆ ಒಂದೆರಡು ಆಧಾರಗಳಿಂದ ತಮಿಳನ್ನು ಆಧಾರವಾಗಿಟ್ಟುಕೊಂಡೇ ಈ ಗ್ರಂಥವು ರಚಿತವಾಗಿರಬೇಕೆಂದು ತೋರುವುದು—ಈ ಗ್ರಂಥದ "ಬೋಧಿ ದುರ್ಲಭ"ಎಂಬ ಅನುಪ್ರೇಕ್ಷೆಯಲ್ಲಿ "ಜೀವಾತ್ಮನಿಗೆ ಅವನ ಪುಣ್ಯವಿಶೇಷದಿಂದ ಆಕಸ್ಮಿಕವಾಗಿ ದೊರಕಿದ ಬೋಧಿರತ್ನವನ್ನು ಕಳೆದುಕೊಳ್ಳುವುದು ಉಚಿತವಲ್ಲ" ಎಂದು ಹೇಳುವ ಪ್ರಕರಣದಲ್ಲಿ ''ಆಕಸ್ಮಿಕ ಘಟನೆ'' ಎಂಬುದಕ್ಕೆ ಕೊಟ್ಟಿರುವ[1] ''ಪಶ್ಚಿಮ ಸಮುದ್ರದಲ್ಲಿಸೆದನೊಗದ ರಂಧ್ರದಲ್ಲಿ ಪೂರ್ವಸಮುದ್ರದಲ್ಲಿಸೆಯಲ್ಪಟ್ಟಗೂಟವು ಬಂದು ಸೇರಿಕೊಂಡಂತೆ''ಎಂಬ ಉದಾಹರಣ ವಿಷಯವು ತಮಿಳರಲ್ಲಿ ಮಾತ್ರ ಬಳಕೆಯಲ್ಲಿರುವುದು, ಕನ್ನಡಿಗರಲ್ಲಿಲ್ಲ. (ಕಲಂ-ಗೂಟ) ಎಂಬ ಶಬ್ದವೂ ಕನ್ನಡದಲ್ಲಿಲ್ಲ. ಸುಖವ್ಯದಹಾಸುಗೆಯನ್ನು ಹೇಳುವಾಗ [2]ಪಂಚಶಯನ-[ಐನುಬಗೆಯ ಹಾಸುಗೆ] ಎಂದರೆ ಅಂದ, ಶೈತ್ಯ, ಮಾರ್ದವ, ಪರಿಮಳ, ಶುಭ್ರತೆ ಈ ಐದು ಗುಣವುಳ್ಳ-ಅಥವಾ ಅಂಡಜ ಪಿಂಡಜ [92-9] ಮೊದಲಾದ ಐದುಬಗೆಯ ಪದಾರ್ಥಗಳಿಂದಮಾಡಿದ ಹಾಸುಗೆ ಎಂಬ ವ್ಯವಹಾರವು ತಮಿಳರಲ್ಲಿ ಮಾತ್ರವಿದೆ. ಅಲ್ಲದೆ ಕಥೆಗಳಲ್ಲಿ ಬರುವ ಒಂದೆರಡು ಹೆಸರುಗಳೂ ತಮಿಳು ದೇಶವನ್ನೇ ಹೇಳುವುದು. ಈ ಕಾರಣಗಳಿಂದ ತಮಿಳಿನ ಆಧಾರದಿಂದಲೇ ಇದು ರಚಿತವಾಗಿರಬಹುದೆಂಬ ಶಂಕೆಯು ಬರುವುದು. ಹೀಗೆಯೇ ಈ ಗ್ರಂಥದಲ್ಲಿ ಹೇಳಿರುವ ಕನ್ನಡಿಗರಲ್ಲಿ ಮಾತ್ರವೇ ರೂಢಿಯಿದ್ದು ತಮಿಳರಲ್ಲಿ ಬಳಕೆಯಲ್ಲಿಲ್ಲದ ಒಂದೆರಡು[3]ವಿಷಯಗಳು ತಮಿಳು ಕಾವ್ಯದಲ್ಲಿಯೂ ಇರುವುದರಿಂದ ಈ ಶಂಕೆಯು ನಿವೃತ್ತಿಯಾಗುವಂತೆಯೇ ಇಲ್ಲ. ಆದರೆ ದ್ರಾವಿಡಭಾಷಾ ಸಾಹಿತ್ಯಶಾಸ್ತ್ರಗ್ರಂಥಗಳಲ್ಲಿ ಸಾಮಾನ್ಯವಾಗಿ ಸಂಸ್ಕೃತ ಪ್ರಾಕೃತ ಗ್ರಂಥಗಳೇ

---

(1) [i] ವಳೈಪಯಿಲ್ ಕೀಟ್ರುಕಡಲ್ ನಿನ್ರಿಡ ಮೇಲ್‌ಕಡಲ್ ವಾನುಗಂ
ಶಂಖುಗಳ ಗುಂಪುಳ್ಳ ಪಶ್ಚಿಮಸಮುದ್ರದಲ್ಲಿ ನಿಂತು ಇಡಲ್ಪಟ್ಟ ಪಶ್ಚಿಮ ಸಮುದ್ರದ ಬಲವಾದ
ತೊಳೈವುಱ್ ನೇರ್‌ಕಟ್ಟು ಕೋತ್ತೆನ ಸೊಗದ
ರಂಧ್ರಮಾರ್ಗವಾಗಿ ಋಜುವಾದಗೂಟವು ಪೋಣಿಸಿಕೊಂಡಿತು- ಎಂಬಂತೆ
(ತಿರುಕ್ಕೋವ್ಯೆಯಾರ್)

[ii] ಪರವೈ ವೆಣ್ಡೈರೈ ವಡಕಡಲ್ ಪಡುನುಗಟ್ ಟೊಳೈಯುಟ್
ವಿಶಾಲವಾದ ಬಿಳಿಯತೆರೆಗಳುಳ್ಳ ಉತ್ತರಸಮುದ್ರದಲ್ಲಿ ಬಿದ್ದನೊಗದ ರಂಧ್ರದಲ್ಲಿ
ಟರೈಶೆಯ್ ತೆಕಡಲಿಟ್ಟ ದೋರ್‌ನೇರ್‌ಕಟ್ಟು ಶಿವಣಿ
ಅಟೆಗಳೇರುವ ದಕ್ಷಿಣಸಮುದ್ರಲ್ಲಿಟ್ಟ ಒಂದು ನೇರವಾದ ಗೂಟವು ಸೇರಿಕೊಂಡು
ಅರಸ ಅತ್ತೊಳೈ ಯಕವಯಿರ್ ಶೆರಿನ್ತೆನ ಅರಿದಾಲ್
ರಾಜನೇ ಆರಂಧ್ರದ ಒಳಗತೆಯಲ್ಲಿ ಸೇರಿತು ಎಂಬಂತೆ ಅಸಾಧ್ಯವಾದ

(ಜೀವಕಚಿಂತಾಮಣಿ -ಪಾಟ್ಸ್- 2748)

(ಇನ್ನೂ ಹಲವು ತಮಿಳಿನ ಗ್ರಂಥಗಳಲ್ಲಿ ಈ ವಿಷಯವು ಹೆಚ್ಚು ಬಳಕೆಯಲ್ಲಿದೆ)

(2) ಮೆತ್ತೆನ್ನ ಪಂಚಶಯನತ್ತಿರ್ಮೇಲೇಱಿ (ತಿರುಪ್ಪಾವೈ)

(3) ಮುಂಡಕೌಶಿಕನ ಕಥೆಯಲ್ಲಿ ಹೇಳಿರುವ ಬಾರಿ (ಸರದಿ-ತಮಿಳಿನಲ್ಲಿ ಮುಱೈ) ಎಂಬ ಶಬ್ದವೂ, ಅದರಿಂದ ಹುಟ್ಟಿದ ಬಾರಿಕ ಎಂಬ ಶಬ್ದವೂ (ಬಾರಿಯೆಂಬ ನಿಯೋಗದವನು) ತಮಿಳರಲ್ಲಿಲ್ಲ. ಮತ್ತು ಅದೇ ಕಥೆಯಲ್ಲಿ ಹೇಳಿರುವ "ಹುಲಿಗಂಜಿ ಹುತ್ತೇಱಲು ಅದರಲ್ಲಿ ಕೆಡೆದಿದ್ದ ಪಾವು ಕಡಿದು ಮರಣಿಸಿದನು" ಎಂಬ ನಾಣ್ಣುಡಿಯೂ ತಮಿಳರಲ್ಲಿಲ್ಲ, ಆದರೆ ತಮಿಳು ಜೀವಸಂಬೋಧನ ಗ್ರಂಥದಲ್ಲಿ ಇವೆರಡೂ ಇವೆ. ಆದುದರಿಂದ ತಮಿಳಿನ ಕವಿಯೂ ಕನ್ನಡಿಗರ ವ್ಯವಹಾರವನ್ನು ಅರಿತಿರಬೇಕೆಂದು ಹೇಳಿದಂತಾಗುವುದು.

ಆಧಾರವಾಗಿರುವುದರಿಂದ ಇವೆರಡಕ್ಕೂ ಮೂಲಭೂತವಾದ ಸಂಸ್ಕೃತದ ಅಥವಾ ಪ್ರಾಕೃತದ ಜೀವಸಂಬೋಧನೆ ಎಂಬ ಗ್ರಂಥವೊಂದಿದ್ದಿರಬಹುದೆಂಬ ಶಂಕೆಗೂ ಅವಕಾಶವುಂಟು.

ಇದರಲ್ಲಿ ಪ್ರತಿಪಾದ್ಯವಾಗಿರುವ ಜೈನಮತದ ದ್ವಾದಶಾನುಪ್ರೇಕ್ಷೆಗಳನ್ನು ಜೀವನನ್ನು ಕುರಿತು ಹೇಳಿದಂತೆ ಹೇಳಿರುವುದರಿಂದ ಇದರ "ಜೀವಸಂಬೋಧನೆ" ಎಂಬ ಹೆಸರು ಅನ್ವರ್ಥವಾಗಿದೆ, ಕವಿ ಈ ಅನುಪ್ರೇಕ್ಷೆಗಳಲ್ಲಿ ಪ್ರತಿಯೊಂದರ ಸ್ವರೂಪವನ್ನೂ ಮೊದಲುವಿವರಿಸಿ ಅದಕ್ಕೆ ನಿದರ್ಶನ [ಉದಾಹರಣ] ಕಥೆಗಳೊಂದನ್ನೂ ಕೊಟ್ಟಿರುವನು [ಒಂದು ಅಧಿಕಾರದಲ್ಲಿ ಮಾತ್ರ ಮಾನಕಷಾಯಾದಿ ನಾಲ್ಕನ್ನು ಹೇಳುವಾಗ ನಾಲ್ಕು ಉದಾಹರಣಕಥೆಗಳನ್ನು ಕೊಟ್ಟಿರುವನು]. ಗ್ರಂಥಶರೀರವು ಮುಖ್ಯವಾಗಿ ಕನ್ನಡಭಾಷೆಯಲ್ಲಿ ಪ್ರಸಿದ್ಧವಾಗಿರುವ 'ಉತ್ಪಲಮಾಲೆ' ಮೊದಲಾದ ಆರುವೃತ್ತಗಳಲ್ಲಿ ಸ್ರಗ್ಧರೆ, ಮಹಾಸ್ರಗ್ಧರೆ ಈವೃತ್ತಗಳನ್ನು ಬಿಟ್ಟು ಉಳಿದ ನಾಲ್ಕುವೃತ್ತಗಳು ಮತ್ತು ಕಂದಗಳು ಇವುಗಳಿಂದ ತುಂಬಿದೆ. ಒಂದೆರಡು ಕಡೆ ತರಳ, ಮಾಲಿನಿ ಎಂಬ ವಿಶೇಷವೃತ್ತಗಳಿರುವುವಲ್ಲದೆ ಕನ್ನಡ ಛಂದಸ್ಸಿನಲ್ಲೇಇದುವ ಅಕ್ಕರವೃತ್ತ [ಪಿರಿಯಕ್ಕರ ವೃತ್ತ] ವೊಂದೂ, ಪ್ರತಿಯೊಂದು ಅಧಿಕಾರದ ಕೊನೆಯಲ್ಲಿ ಒಂದೊಂದು ರಗಳೆಗಳಂತೆ 12 ರಗಳೆಗಳೂ ಒಂದುಅಧಿಕಾರದಲ್ಲಿ 14 ತ್ರಿಪದಿಗಳೂ ಕಂಡುಬರುವುವು. [1]ಮೊತ್ತದಲ್ಲಿ ಈ ಕಾವ್ಯವು ಶಾಸ್ತ್ರಗ್ರಂಥವಾದರೂ ಪಂಪಾದಿ ಕವಿಗಳ ಮಹಾಕಾವ್ಯಗಳ ದರ್ಜೆಗೆ ಸೇರಿದುದೆಂಬುದರಲ್ಲಿ ಸ್ವಲ್ಪವೂ ಸಂದೇಹವಿಲ್ಲವೆಂದು ಹೇಳಬಹುದು.

ಇದರಲ್ಲಿ ಹೇಳಿರುವ ಪದ್ಯವೊಂದನ್ನು [ಅಡಗಿನತೋಲ] ಕನ್ನಡ ರಸರತ್ನಾಕರ ಎಂಬ ಲಕ್ಷಣ ಗ್ರಂಥವನ್ನು ರಚಿಸಿರುವ ಸಾಳ್ವನು ಲಕ್ಷ್ಯವಾಗಿ ತೆಗೆದುಕೊಂಡಿರುವನು – ಅಲ್ಲದೆ ೧೬ನೇ ಶತಮಾನದ ಭಟ್ಟಾಕಳಂಕನು "ಉದ್ಯೂ ಪಸ್ಯ" ಎಂಬ ವ್ಯಾಕರಣ ಸೂತ್ರದ ವ್ಯಾಖ್ಯಾನದಲ್ಲಿ– 'ತಥಾಪಿ ದಂಡಬಿರುದಯೋರಪಿ ದೃಶ್ಯತೆ', ಈ ಉಕಾರ ರೂಪವು ದಂಡ ಮತ್ತು ಬಿರುದ ಎಂಬ ಸಂಸ್ಕೃತ ಶಬ್ದಗಳಿಗೂ ಉಂಟೆಂದು ಹೇಳಿ ಪಾರ್ಶ್ವನಾಥಪುರಾಣದ "ದಂಡು ಭೂತಿ ಸೊರೆ ರುದ್ರಾಕ್ಷಂ" ಎಂಬುದನ್ನು ಉದಾಹರಿಸಿರುವನು. ಈ ಕವಿಯೂ ಕೂಡ ಒಂದೆಡೆಯಲ್ಲಿ "ದಂಡ" ಶಬ್ದದ "ದಂಡು" ಎಂಬ ರೂಪವನ್ನು ಪ್ರಯೋಗಿಸಿರುವರು (208-53) ಹೀಗೆ ಇವನ ಗ್ರಂಥವು ಲಕ್ಷಣಕಾರರಿಂದಲೂ ಪ್ರಮಾಣೀಭೂತವೆಂದು ಸ್ವೀಕೃತವಾಗಿರುವುದು ಇವನ ಕಾವ್ಯಕ್ಕೆ ಮತ್ತಷ್ಟು ಪ್ರಾಶಸ್ತ್ಯವನ್ನು ಕೊಟ್ಟಿರುವುದು. ಅಲ್ಲದೆ ಇವನು ಇನ್ನೂ ಹಲವು ಹೊಸಹೊಸ ಶಬ್ದರೂಪಗಳನ್ನೂ ಪ್ರಯೋಗಿಸಿರುವನು. ಅವುಗಳಲ್ಲಿ – ನೇಳೆವಡಿಚ, ಕಱುಕುಚಿಗ, ಪುರವಿಂಗಂ ಇತ್ಯಾದಿಗಳನ್ನು ವಾಚಕರು ಗಮನಿಸತಕ್ಕುದು–

ಗ್ರಂಥಪ್ರತಿಪಾದ್ಯವಿಷಯ

" ಜೀವಸಂಬೋಧನ" ಎಂಬೀ ಗ್ರಂಥವು ೧೨ ಭಾಗಗಳಾಗಿವಿಭಾಗಿಸಲ್ಪಟ್ಟಿದೆ. ಈ ವಿಭಾಗಗಳಿಗೆ ಹಸ್ತಲಿಖಿತ ಪ್ರತಿಗಳಲ್ಲಿ ಆಶ್ವಾಸ, ಅಧಿಕಾರ, ಅವತಾರ, ಎಂಬ ಬೇರೆಬೇರೆ ಹೆಸರುಗಳು ಕಂಡುಬರುವುವು. ಆಶ್ವಾಸವೆಂಬ ಹೆಸರು ಚಂಪೂಕಾವ್ಯಗಳ ವಿಭಾಗಕ್ಕೆ ತುಂಬಾರೂಢವಾದ ಶಬ್ದವಾಗಿದೆ. ಅಧಿಕಾರ, ಅಥವಾ ಅಧಿಕರಣ ಎಂಬುದು ಶಾಸ್ತ್ರಗ್ರಂಥಗಳಲ್ಲಿ ರೂಢವಾಗಿವೆ. ಅವತಾರವೆಂಬುದು ಅಪೂರ್ವ ಶಬ್ದವು. ಇದನ್ನು ಜನ್ನಮಹಾಕವಿಯು ತನ್ನಿಂದ ರಚಿತವಾದ ಯಶೋಧರ

(1) ಪಂಪಾದಿ ಮಹಾಕವಿಗಳ ಕನ್ನಡ ಮಹಾಕಾವ್ಯಗಳಲ್ಲಿ ಅಪೂರ್ವವಾಗಿ ಒಂದೆರಡು ಅಕ್ಕರ ವೃತ್ತಗಳೂ ರಗಳೆಗಳೂ, ತ್ರಿಪದಿಗಳೂ ಕಂಡುಬರುವುವು—ಆದ್ದರಿಂದ ಈ ಕಾವ್ಯವೂ ಪ್ರಾಚೀನವಾಮದೆಂದು ಹೇಳಬಹುದು.

ಚರಿತವೆಂಬ ಪದ್ಯಕಾವ್ಯವಿಭಾಗಕ್ಕೆ ಪ್ರಥಮಾವತಾರ ದ್ವಿತೀಯಾವತಾರ ಎಂದು ಅವತಾರ ಎಂಬ ಶಬ್ದವನ್ನು ಪ್ರಯೋಗಿಸಿರುವನು. ಈ ಪ್ರಕೃತ ಗ್ರಂಥದಲ್ಲಿ ಜೀವಾತ್ಮತತ್ತ್ವವಿಚಾರವನ್ನು ಬೋಧಿಸುವ ಶಾಸ್ತ್ರವಿಚಾರವು ಕಾವ್ಯರೂಪದಲ್ಲಿ ನಿರೂಪಿಸಲ್ಪಟ್ಟಿರುವುದರಿಂದ ಕವಿಯೋ ಅಥವಾ ಲೇಖಕರೋ ಹೀಗೆ ಭಿನ್ನ ಭಿನ್ನ ಪಾಠಗಳನ್ನು ಕಲ್ಪಿಸಿರಬಹುದು. ಕೆಲವುಪ್ರತಿಗಳಲ್ಲಿ ಜೀವಸಂಬೋಧನಾವತಾರದೊಳ್ ಎಂದೂ ಆಶ್ವಾಸಗಳ ಕೊನೆಯಲ್ಲಿರುವುದರಿಂದ ಆಶ್ವಾಸ ಅಧಿಕಾರ ಎಂಬೆರಡರಲ್ಲಿ ಶಾಸ್ತ್ರ ಗ್ರಂಥಗಳಿಗೆ ಸಂಬಂಧಪಟ್ಟ ಅಧಿಕಾರ ಎಂಬ ಶಬ್ದವನ್ನೇ ಪರಿಗ್ರಹಿಸಿ ಜೀವಸಂಬೋಧನಾ ಗ್ರಂಥಾವತಾರದೊಳ್ ಎಂಬ ಸಂಗ್ರಹರೂಪವನ್ನೇ ಇಲ್ಲಿ ಉಪಯೋಗಿಸಿದೆ. ಕಾವ್ಯಸ್ವರೂಪಕ್ಕೆ ಅನುಗುಣವಾಗಿ ಆಶ್ವಾಸವೆಂದೂ, ವಿಷಯಸ್ವರೂಪಕ್ಕೆ ಅನುಗುಣವಾಗಿ ಅಧಿಕಾರವೆಂದೂ ಹೇಳುವುದರಲ್ಲಿ ಯಾವ ಅನೌಚಿತ್ಯವೂ ಕಂಡುಬರುವುದಿಲ್ಲ—

ಜಿನಮತದಲ್ಲಿ ಮೋಕ್ಷಕ್ಕೆ ಹೋಗತಕ್ಕವನು ಮೋಕ್ಷಕ್ಕೆ ವಿರುದ್ಧವಾಗಿರುವ ಸಂಸಾರಚಕ್ರದಲ್ಲಿ ತೊಳಲಿಸುವ ಕರ್ಮಗಳ ನಿರ್ಮೂಲನಕ್ಕೆ ಅತ್ಯವಶ್ಯಕವಾಗಿ ಭಾವಿಸಬೇಕಾಗಿರುವ ಅಧ್ರುವ ಮೊದಲಾದ ಜೀವ ದೇಹ ಲೋಕಗಳ ಸ್ವಭಾವಗುಣದೋಷಾದಿಗಳನ್ನು ತಿಳಿಸುವ ೧೨ಅನುಪ್ರೇಕ್ಷೆಗಳ ವಿಚಾರವು ಇದರಲ್ಲಿ ಮುಖ್ಯವಾಗಿ ಪ್ರತಿಪಾದಿತವಾಗಿದ್ದರೂ ಸಂಗ್ರಹವಾಗಿ ಜಿನಮತತ್ತ್ವವೂ, ಜಿನಾಗಮ ಸಾರವೂ ಆನುಷಂಗಿಕವಾಗಿ ಅಲ್ಲಲ್ಲಿ ಪ್ರತಿಪಾದಿತವಾಗಿರುವುವು. ಈ ಗ್ರಂಥವಿಷಯವನ್ನು ಮನನಮಾಡಲು ಜೈನಮತಮತ್ತು ಪ್ರಸಿದ್ಧವಾದ ಭಾರತದೇಶದ ವೈದಿಕಾವೈದಿಕ ಮತಗಳು ಇವುಗಳ ಸ್ವರೂಪವನ್ನು ಸಂಗ್ರಹವಾಗಿ ತಿಳಿದುಕೊಳ್ಳುವುದು ಅತ್ಯಾವಶ್ಯಕವಾಗಿರುವುದರಿಂದ ಮುಂದೆ ಸಂಗ್ರವಾಗಿ ಈ ಮತವಿಷಯಗಳನ್ನು ನಿರೂಪಿಸಿ ಬಳಿಕ ಈ ಗ್ರಂಥದಲ್ಲಿ ಹೇಳಿರುವ ಅನುಪ್ರೇಕ್ಷೆಗಳ ವಿಷಯವನ್ನು ಸಂಗ್ರಹವಾಗಿ ವಿವರಿಸಿದೆ–

ಚೇತನಾಚೇತನಗಳೆಂದು ವಿಭಾಗಿಸಲ್ಪಟ್ಟು ಸ್ಥಾವರಜಂಗಮಾತ್ಮಕವಾಗಿರುವ ವಸ್ತುಗಳಿಂದ ತುಂಬಿರುವ ಈ ಪ್ರಪಂಚದಲ್ಲಿ ನಮಗೆ ಪ್ರತ್ಯಕ್ಷವಾಗಿ ಈ ಭೂಮಿ, ಭೂಮಿಯಲ್ಲಿರುವ ನದಿ, ಮರಬೆಟ್ಟ, ಸಮುದ್ರ, ಹಲವುಬಗೆಯ ಪ್ರಾಣಿಗಳು ಇವುಗಳು ಕಂಡುಬರುವುವು. ಹೀಗೆಯೇ ನಮ್ಮ ಮೇಲುಗಡೆಯಲ್ಲಿ ಗ್ರಹನಕ್ಷತ್ರತಾರಾದಿ ಜ್ಯೋತಿಶ್ಚಕ್ರದಿಂದ ತುಂಬಿದ ಆಕಾಶವು ಕಂಡುಬರುವುದು; ಇವೆಲ್ಲವೂ ನಿತ್ಯಗಳೇ, ನಶ್ವರಗಳೇ? ಇವು ಸ್ವತಂತ್ರವಾಗಿರುವುವೇ? ಯಾರೊಬ್ಬರ ಅಧೀನದಲ್ಲಿರುವುವೇ? ಇವುಗಳಲ್ಲಿ ನಡೆಯುವ ಕಾರ್ಯಕ್ರಮಗಳೆಲ್ಲವೂ ಹೇಗೆ ನಡೆಯುವುವು? ಎಂಬ ವಿಷಯದಲ್ಲಿ ಪ್ರಾಚೀನಕಾಲದಿಂದಲೂ, ಹಲವು ಮಹಾತ್ಮರುಗಳಿಗೆ ವಾದವಿವಾದಗಳು ನಡೆಯುತ್ತಲೇ ಇರುವುವು. ಜಡವಾದ ಪಂಚಭೂತಗಳಿಂದ ತುಂಬಿದ ಈ ಭೂಮ್ಯಾಕಾಶಗಳು ಮತ್ತು ಭೂಮಿಯಲ್ಲಿರುವ ಪ್ರಾಣಿಗಳ ದೇಹ ಮತ್ತು ಜೀವಗಳು, ಇವುಗಳ ಕಾರ್ಯಕಲಾಪಗಳು ನಡೆಯುವ ಕ್ರಮ ಇವುಗಳ ವಿಚಾರದಲ್ಲಿ ಪ್ರಾಚೀನಜ್ಞಾನಿಗಳು ಸಿದ್ಧಾಂತಮಾಡಿರುವ ವಿಷಯಗಳೇ ಮತಗಳೆನಿಸಿಕೊಂಡಿರುವುವು.

ಬಹು ಕಾಲದಿಂದಲೂ ಭರತಖಂಡದಲ್ಲಿ ಆಸ್ತಿಕ ಮತ – ನಾಸ್ತಿಕ ಮತಗಳೆಂಬ ಎರಡು ಮತಗಳು ವ್ಯವಹಾರದಲ್ಲಿರುವುವು. ಆರ್ಯರೆಂಬ ಒಂದು ಜನಾಂಗದಲ್ಲಿ ಬಹುಪವಿತ್ರವೆಂದು ಪರಿಗಣಿತವಾಗಿರುವ ವೇದಗಳು (ನಾಲ್ಕು) ಉಪನಿಷತ್ತುಗಳು ಇವುಗಳ ವಿವರಣರೂಪವಾದ ಧರ್ಮಶಾಸ್ತ್ರ ಪುರಾಣೇತಿಹಾಸಗಳು ಇವನ್ನು ನಂಬಿಕೊಂಡು ಅವುಗಳಲ್ಲಿಹೇಳಿರುವಂತೆ ತತ್ವಗಳನ್ನೂ, (ಪರಮಾತ್ಮ–ಜೀವಾತ್ಮ–ಪ್ರಕೃತಿ) ಜೀವಾತ್ಮನಿಗೆ ಪುಣ್ಯಪಾಪಕರ್ಮಗಳ ಸಂಬಂಧವನ್ನೂ ಇವುಗಳ

ಫಲನನ್ನು ಅನುಭವಿಸುವ ಸ್ವರ್ಗ ನರಕಗಳನ್ನೂ ಒಪ್ಪಿಕೊಳ್ಳುವ ಮತಗಳಿಗೆ ಆಸ್ತಿಕ ಮತಗಳೆಂದೂ ವೇದಾದಿಗಳನ್ನು ನಂಬದೆ ತತ್ವಗಳ ವಿಷಯದಲ್ಲಿ ಪ್ರಸಿದ್ಧ ಪುರುಷರು ಹೇಳಿರುವ ಮಾತುಗಳನ್ನೇ ಆಗಮುಗಳೆಂದು ನಂಬಿರುವ ಮತಗಳಿಗೆ ಅವೈದಿಕಮತಗಳೆಂದೂ ವ್ಯವಹಾರವು.

ಆಸ್ತಿಕಮತದಲ್ಲಿಯೂ ಅದ್ವೈತ, ದ್ವೈತ ವಿಶಿಷ್ಟಾದ್ವೈತವೆಂದು ಮುಖ್ಯವಾಗಿ ಮೂರುಪಂಗಡಗಳುಂಟು. ಇವುಗಳೊಳಗೆ ಅದ್ವೈತಮತದಲ್ಲಿ ಪರಮಾತ್ಮ (ಬ್ರಹ್ಮ) ಜೀವಾತ್ಮ, ಪ್ರಕೃತಿ ಈ ಮೂರುತತ್ತ್ವಗಳಲ್ಲಿ ವಿಜ್ಞಾನಾನಂದಪ್ರಕಾಶರೂಪವಾದ ಮತ್ತು ನಿತ್ಯವಾದಪರಬ್ರಹ್ಮವೊಂದೇಸತ್ಯವೆಂದೂ ಜೀವಾತ್ಮ ಜಗತ್ತುಗಳು ಅಸತ್ಯಗಳೆಂದೂ, ಪರಬ್ರಹ್ಮನು ಅನಾದಿಯಾಗಿ ತನ್ನಲ್ಲಿ ಸೇರಿಕೊಂಡಿರುವ ಮಾಯೆಯಿಂ(ಅಜ್ಞಾನದಿಂ)ದ ಜೀವಾತ್ಮ ಜಗತ್ತುಗಳಾಗಿ ತಾನೇಭ್ರಾಂತಿಪಡುತ್ತಿರುವನೆಂದೂ, "ತತ್ತ್ವಮಸಿ"ಮೊದಲಾದಉಪನಿಷದ್ವಾಕ್ಯಾರ್ಥಜ್ಞಾನದಿಂದ ಈಭ್ರಾಂತಿಜ್ಞಾನವು ಹೋಗಿ ಪರಬ್ರಹ್ಮನಿಗೆ ತನ್ನ ನಿಜಸ್ವರೂಪವು ಉಳಿಯುವುದೇ ಮೋಕ್ಷವೆಂದೂ ಉಪನಿಷದ್ವಾಕ್ಯಗಳನ್ನೇ ಈ ವಿಷಯದಲ್ಲಿ ಅನ್ವಯಿಸುವರು. ದ್ವೈತಿಗಳು ಪರಮಾತ್ಮ, ಜೀವಾತ್ಮ ಎಂದು ಜ್ಞಾನಾನಂದ ಪ್ರಕಾಶಸ್ವರೂಪಗಳಾದ ತತ್ತ್ವಗಳು ಎರಡುಂಟು. ಪರಮಾತ್ಮನುಒಬ್ಬನೇ. ಜೀವಾತ್ಮಗಳು ಅನಂತ. ಜೀವಾತ್ಮಗಳಿಗೆ ಅನಾದಿಯಾದ ಕರ್ಮ್ಮಸಂಬಂಧವುಂಟು. ಇದರಿಂದ ದುಃಖಾತ್ಮಕವಾದ ಸಂಸಾರದಲ್ಲಿ ತೊಳಲುವನು. ಇವನು ವೇದಾದಿಶಾಸ್ತ್ರಾರ್ಥಗಳಮೂಲಕ ತನ್ನ ಮತ್ತು ಪರಬ್ರಹ್ಮನಸ್ವರೂಪಗಳನ್ನು ತಿಳಿದುಕೊಂಡು ಸರ್ವನಿಯಾಮಕನಾಗಿರುವ ಪರಬ್ರಹ್ಮ (ಹರಿ) ವನ್ನು ಪರಭಕ್ತಿಯಿಂದ ಭಜಿಸಿದರೆ ಆ ಪರಮಾತ್ಮನು ಜೀವಾತ್ಮನ ಕರ್ಮಗಳನ್ನು ನಿರ್ಮೂಲಮಾಡಿ ದೇಹ ಪರಿಗ್ರಹಸಂಬಂಧವನ್ನೂ ಬಿಡಿಸಿ ಶಾಶ್ವತವಾಗಿರುವ ತನ್ನ ಲೋಕವಾದ ವೈಕುಂಠಕ್ಕೆ ಒಯ್ದು ಅಲ್ಲಿ ತನ್ನಂತೆಯೇ ನಿತ್ಯಾನಂದದಲ್ಲಿರಿಸುವನು. ಇದೇ ಮೋಕ್ಷವೆನ್ನುವರು. ವಿಶಿಷ್ಟಾದ್ವೈತಿಗಳೂ ಈ ದ್ವೈತದ ತಾತ್ಪರ್ಯವನ್ನೇ ಅನುಸರಿಸಿದ್ದರೂ, ಆನಂದದಲ್ಲಿ ಜೀವಾತ್ಮ ಪರಮಾತ್ಮರುಗಳಿಗೆ ಸಾಮ್ಯವನ್ನೂ, ಲಕ್ಷ್ಮಿಗೆ ಪುರುಷಕಾರತ್ವವನ್ನೂ ಮುಖ್ಯವಾಗಿ ಹೇಳುವರು. ಹೀಗೆ ಈ ಮೂರು ಮತಗಳೂ ವೇದಾದಿಗಳನ್ನು ಸ್ವೀಕರಿಸಿಯೇ ತತ್ತ್ವತ್ರಯಗಳಲ್ಲಿ ಭಿನ್ನಭಿನ್ನಾಭಿಪ್ರಾಯವುಳ್ಳವಾಗಿವೆ. ಈ ಮತಗಳಲ್ಲಿ ಸರ್ವೇಶ್ವರನಾದ ಪರಮಾತ್ಮನು ಜೀವಾತ್ಮರ ಕರ್ಮಾನುಗುಣವಾಗಿ ಅವರಿಗೆ ಸಂಸಾರಮೋಕ್ಷಗಳನ್ನು ಕೊಡುವನು ಮತ್ತು ಈಪ್ರಪಂಚದ ಸೃಷ್ಟಿಸ್ಥಿತಿಲಯಗಳನ್ನೂ ನಡೆಸುವನು ಎಂಬುದು ಸಾರ.

ಅವೈದಿಕಮತಗಳಲ್ಲಿ ಜೈನ, ಬೌದ್ಧ ಎಂಬ ಎರಡು ಮುಖ್ಯ ಮತಗಳಿವೆ. ಬೌದ್ಧಮತದಲ್ಲೂ ಯೋಗಾಚಾರ ಮಾಧ್ಯಮಿಕ ಸೌತ್ರಾಂತಿಕ ಸರ್ವಶೂನ್ಯವಾದಿಗಳೆಂಬ ನಾಲ್ಕು ಪಂಗಡಗಳಿವೆ. ಇದರಲ್ಲಿ ಕೊನೆಯವರಾದ ಸರ್ವಶೂನ್ಯವಾದಿಗಳು (ಚಾರ್ವಾಕರು) ನಮಗೆ ಕಾಣುತ್ತಿರುವ ಈ ಪ್ರಪಂಚವೂ ಪ್ರಾಣಿಗಳೂ ಹಾಗೆ ತೋರುತ್ತವೆಯೇಹೊರತು ನಿಜವಾಗಿ ನಿತ್ಯವಾಗಿರತಕ್ಕವುಗಳಲ್ಲ. ಇವೆಲ್ಲಾ ಸುಳ್ಳು. ಆದುದರಿಂದ ಸರ್ವಶೂನ್ಯವೆಂಬುದೇನಮ್ಮ ತತ್ತ್ವವು ಎಂದು ವಾದಿಸುವರು. ಆದರೆ ಯಾವುದು ಯಾರಿಗೆ ಹೇಗೆತೋರುತ್ತದೆ ಎಂದು ಸ್ವಲ್ಪವೂವಿಚಾರಮಾಡುತ್ತಿಲ್ಲ. ಹೀಗೆಯೇಯೋಗಾಚಾರ ಮತದವರು ಭೂತಚತುಷ್ಟಯ(ಪೃಥ್ವಿ, ಅಪ್ಪು, ತೇಜಸ್ಸು, ವಾಯು)ವು ಸತ್ಯ. ಏನೂಇಲ್ಲದ ಆಕಾಶವು ತತ್ವವಲ್ಲ. ಅಚೇತನಗಳಾಗಿರುವ ಈಭೂತಗಳ ಸಂಯೋಗದಿಂದ ಒಂದು ಚೇತನಶಕ್ತಿಯು ಹುಟ್ಟಿ ಈ ಪ್ರಾಣಿಜಾಲಗಳಾಗಿವೆ. ಆದುದರಿಂದ ಈನಾಲ್ಕುಭೂತಗಳು ಇವುಗಳಸಂಯೋಗಹೊರತು ಬೇರೆ ಆತ್ಮವೆಂಬುತತ್ತ್ವವಿಲ್ಲ, ಎಂದು ವಾದಿಸುವರು. ಇವರು ಈ ಪ್ರಪಂಚವನ್ನೂ ಪ್ರಾಣಿಗಳನ್ನೂ ಒಪ್ಪಿಕೊಂಡು ಪ್ರಾಣಿಗಳಲ್ಲಿ ಪಾಂಚಭೌತಿಕಸಂಯೋಗದಿಂದಾದ ದೇಹದಲ್ಲಿ ಬೇರೆಯಾದ ಜೀವಾತ್ಮ

ನನ್ನು ಒಪ್ಪಿಕೊಳ್ಳುವುದಿಲ್ಲ. ಮಾಧ್ಯಮಿಕ, ಸೌತ್ರಾಂತಿಕರಿಬ್ಬರೂ ಸ್ವಲ್ಪ ಹೆಚ್ಚುಕಡಿಮೆ ಒಂದೇ ಅಭಿಪ್ರಾಯವುಳ್ಳವರು. ಇವರುವಿಜ್ಞಾನವೆಂಬ ಪದಾರ್ಥವೆಂಬುದೊಂದೇತತ್ತ್ವವು, ಅದೂ ಕ್ಷಣಿಕ. ಪಂಚಭೂತಾತ್ಮಕವಾದ ಈ ಪ್ರಪಂಚವು ಸುಳ್ಳು ಇಲ್ಲ, ಎಂದು ವಾದಿಸುವರು. ಈ ಪ್ರಪಂಚವು ಆ ವಿಜ್ಞಾನದಲ್ಲಿ ಪ್ರತಿಫಲಿಸುವುದೇ ಹೊರತು ನಿಜವಾಗಿ ಇಲ್ಲ, ಎಂಬುದು ಈ ಮತದ ಸಾರವು. ಜೈನಮತೀಯರು ಪ್ರಪಂಚ, ಮತ್ತು ಈ ಪ್ರಪಂಚದಲ್ಲಿ ವ್ಯವಹರಿಸುವ ಜಡಾತ್ಮಕವಾದ ಪಂಚ ಭೌತಿಕದೇಹಗಳುಳ್ಳ ಜೀವಾತ್ಮ ಎರಡೂ ಸತ್ಯ–ಜೀವಾತ್ಮನು ಅನಾದಿಯಾದ ಕರ್ಮಬಂಧಕ್ಕೆ ಸಿಕ್ಕಿ ಸಂಸಾರದಲ್ಲಿ ಬಿದ್ದು ತೊಳಲುವನು. ಇವನು ಸದ್ಗುರುಗಳ ಮೂಲಕ ತನ್ನ ಸ್ವರೂಪವನ್ನು ತಿಳಿದು ಕೊಂಡು ಕರ್ಮಬಂಧವನ್ನು ತಪ್ಪಿಸಿಕೊಳ್ಳುವುದೇ ಮೋಕ್ಷವೆನ್ನುವರು–ಇವರು ಜೀವಾತ್ಮ ಪ್ರಪಂಚ ಗಳನ್ನೂ ಮತ್ತು ಪಾಪ ಪುಣ್ಯ ಸ್ವರ್ಗ ನರಕಗಳನ್ನೂ ಪ್ರಪಂಚದ ನಿತ್ಯತ್ವವನ್ನೂ ಒಪ್ಪುವರು. ಪ್ರಪಂಚದ ಸೃಷ್ಟಿಸ್ಥಿತಿ ಲಯಗಳನ್ನೂ, ಅವುಗಳಿಗೆ ಕಾರಣಭೂತನಾದ ಪರಮಾತ್ಮನನ್ನೂ, ವೇದದಲ್ಲಿ ಹೇಳಿರುವ ಪ್ರಾಣಿ ಹಿಂಸಾರೂಪವಾದ ಯಜ್ಞಾದಿಗಳನ್ನೂ ಒಪ್ಪುವುದಿಲ್ಲ.

ಒಟ್ಟನಲ್ಲಿ ಅವೈದಿಕಮತಗಳಲ್ಲಿ ಚಾರ್ವಾಕನು ಸರ್ವಶೂನ್ಯ ಎಂದರೆ ತತ್ತ್ವವೊಂದನ್ನೂ ಒಪ್ಪುವುದಿಲ್ಲ. ಬೌದ್ಧರಲ್ಲಿ ಕೆಲವರು ಕೇವಲ ಭೂತಗಳನ್ನುಮಾತ್ರ ಒಪ್ಪಿಕೊಂಡು ಜೀವಾತ್ಮನನ್ನು ಒಪ್ಪುವುದಿಲ್ಲ. ಮತ್ತೆ ಕೆಲವುಕ್ಷಣಿಕನಾದ ವಿಜ್ಞಾನವ(ರೂಪವಾದ ಜೀವಾತ್ಮನ)ನ್ನು ಒಪ್ಪಿಕೊಂಡು ಪ್ರಪಂಚವನ್ನು ನಿರಾಕರಿಸುವನು. ಜೈನರು ಜೀವಾತ್ಮ, ಪ್ರಪಂಚವೆರಡನ್ನೂ ಒಪ್ಪಿಕೊಂಡು ಇವಕ್ಕೆ ನಿಯಾಮಕನಾದ ಸರ್ವೇಶ್ವರನನ್ನು ಒಪ್ಪುವುದಿಲ್ಲ. ಇವೆರಡು ಮತಗಳೂ ಜೀವದಯೆ, ಅಹಿಂಸೆಎಂಬುದನ್ನು ಬಹು ಮುಖ್ಯವಾಗಿ ಅವಲಂಬಿಸಿಕೊಂಡು ವೇದದಲ್ಲಿ ಪಶುಹಿಂಸಾರೂಪವಾದ ಯಜ್ಞವನ್ನು ಹೇಳಿರುವುದರಿಂದ ವೈದಿಕಮತವನ್ನು ನಿರಾಕರಿಸಿದೆ. ವೈದಿಕಮತಗಳಲ್ಲಿ ಆದ್ವೈತಿಗಳೂ ಕೂಡ ಸರ್ವೇಶ್ವರನನ್ನು ವಿಜ್ಞಾನಾನಂದ ರೂಪನಾದ ಪರಬ್ರಹ್ಮನನ್ನು ಒಪ್ಪಿಕೊಂಡು ಜೀವಾತ್ಮ ನನ್ನೂ,ಪ್ರಪಂಚವನ್ನೂ ಮಿಥ್ಯೆಎಂದುನಿರಾಕರಿಸಿರುವರು. ದ್ವೈತವಿಶಿಷ್ಟಾದ್ವೈತಗಳು ಪರಮಾತ್ಮ, ಜೀವಾತ್ಮ–ಪ್ರಕೃತಿ ಎಂಬ ಮೂರು ತತ್ತ್ವಗಳನ್ನೂ–ಪ್ರಕೃತಿಯ ವಿಕಾರರೂಪವಾದ ಪ್ರಪಂಚದ ಸೃಷ್ಟಿಸ್ಥಿತಿಲಯಗಳನ್ನೂ, ಇವುಗಳಿಗೆ ಕರ್ತೃ ಪರಮಾತ್ಮನನ್ನೂ ಒಪ್ಪಿಕೊಂಡು ಪರಮಾತ್ಮನನ್ನು ಭಕ್ತಿಯಿಂದ ಒಲಿಸಿಕೊಂಡು ಅವನಿಂದ ದೇಹಪ್ರಾಪ್ತಿಹೇತುವಾದ ತಮ್ಮ ಕರ್ಮಗಳನ್ನು ಕಳೆದುಕೊಂಡು ಮೋಕ್ಷವನ್ನು ಜೀವಾತ್ಮರು ಪಡೆಯಬೇಕೆಂದು ಅಭಿಪ್ರಾಯವುಳ್ಳವು.

ಈ ಪ್ರಪಂಚದಲ್ಲಿ ಜನ್ಮಿಸಿದ ಪ್ರತಿಯೊಂದು ಪ್ರಾಣಿಗೂ ಸುಖವು ಬೇಕು, ದುಃಖವು ಬೇಡ ಎಂದು ಸುಖಸುಖಸಾಧನಗಳಸಂಪಾದನೆಗಳಲ್ಲಿ ಪ್ರವೃತ್ತಿಯೂ, ದುಃಖದುಃಖಸಾಧನಗಳಲ್ಲಿನಿವೃತ್ತಿ ಯೂ ಹುಟ್ಟುವುದು ಸಹಜಸಿದ್ಧವಾಗಿದೆ. ಈ ಸುಖಪ್ರಾಪ್ತಿ ದುಃಖನಿವೃತ್ತಿಗಳಿಗಾಗಿ ಮಾಡುವ ಕರ್ಮಗಳೇ ಪುಣ್ಯಪಾಪಗಳೆಂದೂ ವ್ಯವಹರಿಸಲ್ಪಡುವುವು. ಪ್ರಾಣಿಗಳು ವಾಸಮಾಡುವಲೋಕಗಳು ಇಹಲೋಕ[ಐಹಿಕ]ಪರಲೋಕಗಳು, [ಬೇರೆಲೋಕಗಳು] ಎಂದು ಎರಡು ಬಗೆಯಾಗಿರುವುದರಿಂದ ಈ ಸುಖದುಃಖಗಳು ಐಹಿಕವೆಂದೂ, ಪಾರಲೌಕಿಕ [ಆಮುಷ್ಮಿಕ] ಎಂದೂ ಎರಡು ಬಗೆಯಾಗಿವೆ. ಪ್ರಾಣಿಗಳು,ಈ ಭೂಲೋಕದಲ್ಲಿ ಹುಟ್ಟಿ ಪುಣ್ಯಪಾಪರೂಪವಾದ ಕರ್ಮ್ಮಗಳನ್ನು ಮಾಡಿ ಅವುಗಳಿಗೆ ಫಲಭೂತವಾದ ಸುಖದುಃಖಗಳನ್ನು ಇಲ್ಲಿಯೇ ಅನುಭವಿಸುವುದಲ್ಲದೆ, ಹೆಚ್ಚಾದ ಪುಣ್ಯದಫಲ ವನ್ನು ಮೇಲುಗಡೆಯಿರುವ ಸ್ವರ್ಗಲೋಕದಲ್ಲಿ ಅನುಭವಿಸಿ, ಮತ್ತೆ ಭೂಮಿಯಲ್ಲಿ ಹುಟ್ಟುವನು. ಹಾಗೆಯೇ ಹೆಚ್ಚಾದ ಪಾಪಕರ್ಮದಫಲವನ್ನು ನರಕದಲ್ಲಿ ಅನುಭವಿಸಿ ಮತ್ತೆ ಭೂಮಿಯಲ್ಲಿ ಹುಟ್ಟುವನು. ಹೀಗೆ ತನ್ನ ಕರ್ಮಾನುಗುಣವಾದ ಸುಖದುಃಖಗಳನ್ನನುಭವಿಸಲು ಸ್ವರ್ಗ, ಮರ್ತ್ಯ, ನರಕ

[ಪಾತಾಳ]ಲೋಕಗಳಲ್ಲಿ ದೇವ, ಮನುಷ್ಯ ತಿರ್ಯಂಚ, ನಾರಕಎಂಬ ನಾಲ್ಕುಬಗೆಯ ದೇಹಗಳನ್ನು ಧರಿಸಿ ತಿರುಗುವುದನ್ನೇ [ಚತುರ್ಗತಿ ಸಂಚಾರವೆಂದೂ] ಸಂಸಾರವು ಎಂಬುದು ಜೈನಮತೀಯರ ಅಭಿಪ್ರಾಯವು. ಹೀಗೆ ಚತುರ್ಗತಿಗಳಿಗೆ ಆಧಾರವಾದ ಮೂರುಲೋಕಗಳಿರುವ ಆಕಾಶವನ್ನು ಲೋಕಾಕಾಶವೆಂದೂ, ಅದಕ್ಕೆ ಮೇಲಿನ ಆಕಾಶವನ್ನು ಅಲೌಕಿಕಕಾಶವೆಂದೂ ಜೈನರ ಸಂಪ್ರದಾಯವು. ಜೀವನು ತನ್ನ ಈ ಚತುರ್ಗತಿಗೆ ಕಾರಣವಾದ ಕರ್ಮವನ್ನು ಆಪ್ತನಾದಜಿನನು ಹೇಳಿರುವ ಆಗಮವನ್ನು ಚೆನ್ನಾಗಿ ಗುರುಮುಖವಾಗಿ ಕಲಿತು ವೈರಾಗ್ಯ ತಪಸ್ಸುಗಳನ್ನವಲಂಬಿಸಿ ನಿರ್ಮೂಲ ಮಾಡಿ ಸಹಜವಾಗಿರುವ ತನ್ನ ಜ್ಞಾನಾನಂದಪ್ರಕಾಶರೂಪವನ್ನು ಪಡೆದು ತನ್ನ ಸಹಜವಾದ ಊರ್ಧ್ವಗತಿಯಿಂದ ಲೋಕಾಕಾಶವನ್ನು ದಾಟಿ ಅಲೌಕಿಕಾಕಾಶದಲ್ಲಿರುವ ಸಿದ್ಧಶಿಲೆಯಲ್ಲಿ ಆನಂದವನ್ನನುಭವಿಸುವುದೇ [1]ಮೋಕ್ಷವೆಂದು ಜೈನ[2]ಸಿದ್ಧಾಂತಸಾರವು—

ಸಹಾಜಾನಂದ ಸ್ವರೂಪನೂ ಸಹಜೋರ್ಧ್ವಗಮನನೂ ಆದ [2]ಜೀವನನ್ನು ಅನಾದಿಯಾದ ಕರ್ಮ್ಮಗಳು ಸೇರಿಕೊಂಡು ಈ ಲೋಕಾಕಾಶಕ್ಕೆ ಎಳೆದು ಚತುರ್ಗತಿಗಳಲ್ಲಿ ತಿರುಗಿಸುವುವು. ಇದೇ ಸಂಸಾರವು. ಹೀಗೆ ಜೀವನು ತನ್ನ ಗತಿಗಳಲ್ಲಿ ಪಡೆದ ತನ್ನ (ಮುಖ್ಯವಾಗಿ ಮನುಷ್ಯನು) ದೇಹೇಂದ್ರಿಯ ಸುಖಗಳಿಗಾಗಿ ಹೆಂಡತಿ, ಮಕ್ಕಳು, ಹಣ, ಮನೆಮಠ, ಕ್ಷೇತ್ರ ಮುಂತಾದ ಪರಿಗ್ರಹಗಳನ್ನು ಕಟ್ಟಿಕೊಳ್ಳುವನು. ಅವುಗಳ ವಿಷಯದಲ್ಲಿ ರಾಗದ್ವೇಷಗಳಿಗೆ ವಶನಾಗಿ ಮತ್ತೆ ಕರ್ಮವನ್ನು ಮಾಡುವನು. ಮತ್ತೆ ಅದಕ್ಕನುಗುಣವಾಗಿ ಗತಿಗಳಲ್ಲಿ ಸಂಚರಿಸುವನು. ಆದುದರಿಂದ ಜೀವನು ಕರ್ಮಕ್ಕೆ ಕಾರಣವಾದ ಪರಿಗ್ರಹ ಮತ್ತು ದೇಹಗಳಲ್ಲಿ ವೈರಾಗ್ಯವನ್ನು ಪಡೆದು ಮುಂದೆ ಕರ್ಮಗಳನ್ನು ಆಚರಿಸದೆ ಹಿಂದೆ ಸೇರಿಕೊಂಡಿರುವ ಕರ್ಮಗಳನ್ನು ಕಾಯಕ್ಲೇಶ ಮತ್ತು ಜೀವಾತ್ಮ ದೇಹತತ್ತ್ವ ಪರಿಭಾವನೆ ಈ ರೂಪವಾದ ತಪಸ್ಸಿನಿಂದ ನಿರ್ಮೂಲಮಾಡಿ ತನಗೆ ಸಹಜವಾದ ಗತಿಯಿಂದ ಮೋಕ್ಷಸ್ಥಾನವನ್ನು ಪಡೆಯಬೇಕು ಹೀಗೆ ಇದುವರೆಗೆ ಮೋಕ್ಷವನ್ನು ಪಡೆದಿರುವ ಸಿದ್ಧರು ಹಲವರಿರುವರು. ಅಂಥವರಲ್ಲಿ 24 ಮಂದಿ ಮುಖ್ಯರಾದವರು. ಇವರಿಗೆಅರ್ಹಂತರೆಂದೂ, ಜಿನರು ಎಂದೂ ರೂಢಿಯು. ಜಿನನಮುಖದಿಂದ ಹೊರಟುಬಂದುದೇ ಆಗಮವು, ಆ ಆಗಮವನ್ನು ಉಪಾಧ್ಯಾಯಾಚಾರ್ಯರ ಮೂಲಕ ಜೀವನು ತಿಳಿದು ಅದರಂತೆ ನಡೆದು ಮೋಕ್ಷವನ್ನು ಪಡೆಯಬೇಕೆಂಬುದೇ ಜೈನಮತದ ಗುರಿಯು—

ಹೀಗೆ ಮೋಕ್ಷಸಾಧನವಾದ ವೈರಾಗ್ಯತಪಸ್ಸುಗಳನ್ನು ಜೀವನು ಅವಲಂಬಿಸಿಬೇಕಾದರೆ, ಮೊದಲು ಜಿನಾಗಮನದತ್ತ ಮನಸ್ಸು ತಿರುಗಬೇಕು. ಅದರಲ್ಲಿನಂಬಿಕೆಯು[ಸಮ್ಯಕ್ತ್ವ]ಹುಟ್ಟಬೇಕು, ಬಳಿಕ ಅದರಲ್ಲಿ ಹೇಳಿರುವಂತೆ ದೇಹಜೀವಾತ್ಮ, ಸ್ವರೂಪ ಜ್ಞಾನವೂ, ಕರ್ಮಗಳು ಜೀವನಿಗೆ ಬಂದು ಸೇರುವ ಮಾರ್ಗಗಳೂ ಅವುಗಳನ್ನು ಬರದಂತೆ ತಡೆಯುವ ಉಪಾಯವೂ ಈಗ ತನ್ನನ್ನು ಆಶ್ರಯಿಸಿಕೊಂಡಿರುವ ಕರ್ಮಗಳನ್ನು ನಿರ್ಮೂಲಮಾಡುವ ದಾರಿಯೂ, ಚತುರ್ಗತಿಗಳ ಸ್ವರೂಪವೂ ತಿಳಿಯಬೇಕು. ಇವೆಲ್ಲವನ್ನೂ ಜಿನಮುಖೋದ್ಗತವಾದ ಆಗಮರೂಪವಾದವಾಣಿಯು ತಿಳಿಸುತ್ತದೆ. ಈ ಆಗಮಶಾಸ್ತ್ರವು ಅತಿ ಗಹನವಾದ ವಿಷಯಗಳನ್ನು ಳ್ಳಾದಾಗಿ ಶಬ್ದಜಾಲ ನ್ಯಾಯಜಾಲ

---

(1) ಸೋರೆಬುರುಡೆಯು ನೀರಿನನಲ್ಲಿ ಯಾವಾಗಲೂ ತೇಲುವ (ಊರ್ಧ್ವಗತಿ) ಸ್ವಭಾವವುಳ್ಳದು. ಅದಕ್ಕೆ ಬಲವಾದ ಮಣ್ಣನ್ನು ಮೆತ್ತಿದರೆ ಭಾರವಾಗಿ ನೀರಲ್ಲಿ ಮುಳುಗುವುದು – ಆ ಮಣ್ಣು ತೊಳೆದುಹೋದರೆ ಮತ್ತೆ ತಾನೇ ಮೇಲಕ್ಕೆ ಬರುವುದು (ಎಂಬ ಉದಾಹರಣೆಯಿಂದ ಇದನ್ನು ಸಮರ್ಥಿಸುವರು). (2) ದೇಹಪರಿಮಾಣನು ಆತ್ಮನು ಎಂದು ಜೈನರೂ, ಅಣುಪರಿಮಾಣನು ಎಂದು ವೈದಿಕಮತೀಯರೂ ಹೇಳುವರು.

ಜಟಿಲವಾಗಿ ಸಾಮಾನ್ಯಜನರಿಗೆ ದುರವಗಾಹವಾಗಿರುವುದರಿಂದ ಈ ಬಂಧಿತವರ್ಮ ಕವಿಯು ಆಶಾಸ್ತ್ರಾರ್ಥವನ್ನೇ ಪಂಡಿತಪಾಮರರಿಲ್ಲರಿಗೂ ಸುಲಭಸಾಧ್ಯವಾಗುವಂತೆ ಸಂಗ್ರಹವಾಗಿದ್ದಾದಶಾನು ಪ್ರೇಕ್ಷಾವಿವರಣಾತ್ಮಕವಾದ ಈ ಕಾವ್ಯರೂಪದಲ್ಲಿ ಸುಲಭಶೈಲಿಯಲ್ಲಿ ರಚಿಸಿ ಲೋಕಕ್ಕೆ ತುಂಬಾ ಉಪಕಾರ ಮಾಡಿರುವನು. ಈ ಕವಿಯು ಪ್ರತಿಯೊಂದು ಅನುಪ್ರೇಕ್ಷೆಯ ಸ್ವರೂಪವನ್ನೂ ಹಲವು ಉಪಮಾನಗಳು, ಲೌಕಿಕಾಲೌಕಿಕ ನ್ಯಾಯಗಳು, ನಾಣ್ಣುಡಿಗಳು ಇವುಗಳ ಮೂಲಕ ಚೆನ್ನಾಗಿ ವಿವರಿಸಿ ಬಳಿಕ ಆಯಾ ಅನುಪ್ರೇಕ್ಷೆಗಳ ಭಾವನೆಯಿಂದ ಒಳ್ಳೆಯ ಫಲವನ್ನೂ, ಭಾವಿಸದಿದ್ದುದ ರಿಂದ ಕೆಟ್ಟಫಲವನ್ನೂ ಅನುಭವಿಸಿದವರ ಕಥೆಯನ್ನು ಉದಾಹರಣವಾಗಿ ಹೇಳಿರುವನು. ಇವನು ಹೇಳಿರುವ ಉಪಮಾನಗಳು ಸರ್ವಸಾಮಾನ್ಯವಾಗಿ ಎಲ್ಲರಿಗೂ ತಿಳಿಯುವಷ್ಟು ಸುಲಭಗಳಾಗಿವೆ. ಕವಿಯ ವಿಷಯಸಮರ್ಥನ ರೂಪವಾದ ಪ್ರತಿಭಾವಿಶೇಷವು ತುಂಬಾ ಮೆಚ್ಚುತಕ್ಕುದಾಗಿದೆ. ವಿಷಯವಿವರಣಶೈಲಿಯು ಸ್ವಲ್ಪವಾದರೂ ಬೇಸರನ್ನೂ ಕ್ಲೇಶವನ್ನೂ ಹುಟ್ಟಿಸುವುದಿಲ್ಲ, ಪ್ರತಿಪಾದ್ಯ ವಿಷಯವು ತುಂಬಾಗಹನವಾಗಿ ಪ್ರೌಢವಾಗಿದ್ದರೂ ಕವಿಯ ಬಂಧಶೈಲಿಗಳು ಸುಲಭಗ್ರಾಹ್ಯವಾಗು ವಂತೆ ಶ್ಲಿಷ್ಟಗಳಾಗಿವೆ. ಇದರಲ್ಲಿ ಮುಖ್ಯಪ್ರತಿಪಾದ್ಯರಸವು ಶಾಂತರಸವಾದರೂ, ಅದಕ್ಕೆವಿರುದ್ಧವಾ ಗಿರದೆ ಪೋಷಕಗಳೇ ಆಗಿರುವ ಇತರ ಶೃಂಗಾರವೀರಾದಿರಸಗಳೂ ಅಂಗವಾಗಿ ಅಲ್ಲಲ್ಲಿ ಜೋಡಿಸಲ್ಪ ಟ್ಟಿವೆ. ರಸಪೋಷಕವೂ ವಿಷಯಸ್ಫಾರಕವೂ ಆದ ಶಬ್ದಾರ್ಥಲಂಕಾರಗಳೂ ಇಲ್ಲದೇ ಇಲ್ಲ. ಇದ ಮುಖ್ಯವಾಗಿ ಜೈನಮತಪ್ರತಿಪಾದಕ ಗ್ರಂಥವಾದರೂ, ಇದರಲ್ಲಿ ಹೇಳಿರುವ ನ್ಯಾಯನೀತಿಗಳೆಲ್ಲವು ಸರ್ವಮತಗ್ರಾಹ್ಯಗಳಾಗಿವೆ. ಇದು ಹಲವು ಮುಖ್ಯ ಹಡಗನ್ನಡಶಬ್ದಗಳನ್ನೊಳಕೊಂಡು ಹಳಗ ನ್ನಡ ಶೈಲಿಯಲ್ಲಿ ರಚಿಸಲ್ಪಟ್ಟಿರುವುದರಿಂದ ಹಳಗನ್ನಡವನ್ನಭ್ಯಾಸಮಾಡಲಪೇಕ್ಷಿಸುವ ಸರ್ವಮತಿ ಯರಿಗೂ ಇದರ ಪಠನದಿಂದ ತುಂಬಾ ಪ್ರಯೋಜನವುಂಟೆಂದು ಮತ್ತೆ ಹೇಳಬೇಕಾಗಿಲ್ಲ. ಇದ ಪಠನದಿಂದ ಜೈನಮತ ತತ್ತ್ವವು ತಿಳಿದುಬರುವುದರ ಜತೆಗೆ ಹಳಗನ್ನಡ ಭಾಷಾಜ್ಞಾನವೂ, ನೀ ವೈರಾಗ್ಯಗಳೂ ಪಾಠಕರಲ್ಲಿ ಬೇರೂರುವುದರಿಂದ ಇದು ಸರ್ವಮತೀಯರ ಆದರಕ್ಕೂ ಪಾತ್ರವೆ ಬುದರಲ್ಲಿ ಸ್ವಲ್ಪವೂ ಸಂಶಯವಿಲ್ಲ

ಈ ಗ್ರಂಥದಲ್ಲಿ ಮೊದಲನೆಯ ಅಧಿಕಾರದಲ್ಲಿ ಜೈನಮತರೀತಿಯಿಂದ ಕರ್ಮನಿರ್ಮೂಲ ದಿಂದ ಮೋಕ್ಷಾರ್ಥಿಯಾದ ಜೀವನಿಗೆ ವಿರುದ್ಧವಾಗಿರುವ ಬಾಹ್ಯಾಭ್ಯಂತರ ಪರಿಗ್ರಹಗಳ ವಿರಕ್ತಿ ಹುಟ್ಟಬೇಕಾದರೆ, ಆ ಪರಿಗ್ರಹಗಳಲ್ಲಿ ತುಂಬಾ ದೋಷಗಳಿರುವುದೆಂದೂ, ಅವುಗಳಿಂ ಜೀವನಿಗೆ ಯಾವ ಉಪಕಾರವೂ ಇಲ್ಲವೆಂದೂ, ಅದಕ್ಕೆ ಪ್ರತಿಯಾಗಿ ತುಂಬಾ ಕೇಡುಂಟಾಗು ದೆಂದೂ, ದೇಹಕ್ಕಿಂತಲೂ ಜೀವಾತ್ಮನು ಬೇರೆಯೆಂದೂ, ಜೀವಾತ್ಮನಲ್ಲಿ ಯಾವ ದೋಷವೂ ಇ ವೆಂದೂ ತಿಳಿಯಬೇಕು. ಈ ವಿಷಯಗಳನ್ನು ಅಧ್ರುವ, ಅಶರಣ, ಏಕತ್ವ ಅನ್ಯತ್ವ ಅಶುಚಿ ಎಂಬ ಅನುಪ್ರೇಕ್ಷೆಗಳು ತಿಳಿಸುವುವು. ಮತ್ತು ಲೋಕವೆಂಬ ಅನುಪ್ರೇಕ್ಷೆಯು ಜೀವನಿಗೆ ಕರ್ಮ ನುಗುಣವಾಗಿದೊರಕುವ ಚತುರ್ಗತಿಗಳಿಗೆ ಆಶ್ರಯವಾಗಿರುವ ಮೂರುಲೋಕಗಳ ಸ್ವರೂಪವನ ಅವುಗಳಲ್ಲಿ ಜೀವನು ಸುಖದುಃಖಗಳನ್ನು ಅನುಭವಿಸುವ ಪ್ರಕಾರಗಳನ್ನೂ ತಿಳಿಸುವುದು. ಜೀ ತ್ಮನಿಗೆ ಪುಣ್ಯಪಾಪರೂಪ ಕರ್ಮಗಳು ಯಾವ ರೀತಿಯಲ್ಲಿ ಬಂದು ಸೇರುವುವೆಂಬ ಪ್ರಕಾರಗಳ (ಆಗಮದ್ವಾರವನ್ನು) ಆಸ್ರವ ಎಂಬ ಅನುಪ್ರೇಕ್ಷೆಯು ತಿಳಿಸುವುದು, ಹೀಗೆ ಜೀವನಿಗೆ ಹೆ ಹೊಸದಾಗಿ ಪುಣ್ಯಪಾಪ ರೂಪಕರ್ಮಗಳು ಪ್ರತಿನಿತ್ಯವೂ ಬಂದು ಸೇರುವುದನ್ನು ಹೇಗೆ ತಡೆ ಬೇಕೆಂಬುದನ್ನು ಸಂವರೆ ಎಂಬ ಅನುಪ್ರೇಕ್ಷೆಯು ತಿಳಿಸುವುದು, ಬಳಿಕ ಅನಾದಿಯ ಬಂದು ಸೇರಿಕೊಂಡಿರುವ ಕರ್ಮವನ್ನು ಹೇಗೆ ನಾಶಮಾಡಬೇಕೆಂಬ ಪ್ರಕಾರವನ್ನು ನಿರ್ಜರೆಯೆ

ಅನುಪ್ರೇಕ್ಷೆಯ ತಿಳಿಸುವುದು, ಹೀಗೆ ಘಟಿಸುವ ಈ ಸಂಸಾರ ಪರಿಭ್ರಮಣ ದುಃಖವನ್ನು ಜೀವನು ಹೇಗೆ ನಿರ್ಮೂಲಗೊಳಿಸಬೇಕೆಂಬುದಕ್ಕೆ ಮೂಲವಾದ, ಜೀವನ ಸ್ವರೂಪ, ದೇಹಸ್ವರೂಪ, ಮೋಕ್ಷಸ್ವರೂಪ, ಇವೆಲ್ಲವನ್ನೂ ತಿಳಿಸುವ ಜಿನನಸ್ವರೂಪ, ಅವನ ಮುಖೋದ್ಗತವಾದ ಆಗಮದ ಸ್ವರೂಪ, ಆಗಮಪಠನದಿಂದ ದೊರಕುವ ಬೋಧಿ ಎಂಬ ಜ್ಞಾನಸ್ವರೂಪ ಇವನ್ನು ತಿಳಿಸಿ ಈ ಬಗೆಯ ಬೋಧಿಯು ಆಕಸ್ಮಿಕವಾಗಿ ಜೀವನಿಗೆ ದೊರಕಿದಾದ ಅದನ್ನು ಸ್ವೀಕರಿಸದೆ ನಿರಾಕರಿಸಿದರೆ ಮತ್ತೆ ದೊರಕದು ಎಂಬುದನ್ನು ಬೋಧಿದುರ್ಲಭಾನುಪ್ರೇಕ್ಷೆಯು ತಿಳಿಸುವುದು. ಕೊನೆಯದಾಗಿ ಈ ಬಗೆಯ ಬೋಧಿಯನ್ನು ಸಂಪಾದಿಸಲು, ಜಿನಾಗಮದಲ್ಲಿ ಶ್ರದ್ಧೆಯುಳ್ಳ ಗೃಹಸ್ಥರಾಗಿರುವ ಅಥವಾ ಯತಿಯಾಗಿರುವ ಜೀವನು ಆಚರಿಸಬೇಕಾದ ಸಾಗಾರ(ಗೃಹಸ್ಥ)ಧರ್ಮ-ಅನಗಾರ(ಯತಿ)ಧರ್ಮಎಂಬ ಎರಡುಬಗೆಯ ಧರ್ಮದ ನಡೆವಳಿಕೆಗಳನ್ನೂ ಧರ್ಮ ಎಂಬ ಕೊನೆಯ ಅನುಪ್ರೇಕ್ಷೆಯು ತಿಳಿಸುವುದು. ಹೀಗೆ ಕವಿಯು ಹನ್ನೆರಡು ಅನುಪ್ರೇಕ್ಷೆಗಳನ್ನು ವಿವರಿಸಿ ಕೊನೆಯ ಉಪಸಂಹಾರದಲ್ಲಿ ಬಂಧುವರ್ಮನೆಂಬ ಹೆಸರುಳ್ಳ ನಾನು ಜೀವಸಂಬೋಧನೆಯೆಂಬ ಈ ಕಾವ್ಯವನ್ನು ಬರೆದಿರುವೆನು, ಇದನ್ನು ಓದಿದ ಜೀವನಿಗೆ ಬೋಧಿಯು ಲಭಿಸಿ ಅಷ್ಟವಿಧಕರ್ಮಗಳೂ ಲಯವಾಗಿ ಮೋಕ್ಷವು ದೊರಕುವುದು ಎಂಬ ಫಲಶ್ರುತಿಯನ್ನು ಹೇಳಿ ಗ್ರಂಥವನ್ನು ಪಸಂಹರಿಸಿರುವನು.

ಇಂತಹ ಅಮೂಲ್ಯವಾದ ಗ್ರಂಥವನ್ನು ಮುದ್ರಿಸಲು ದ್ರವ್ಯಸಹಾಯಮಾಡಿದ ಭಾರತ ಮುಖ್ಯ ಸರಕಾರಕ್ಕೂ, ಇದರ ಮುದ್ರಣವನ್ನು ಕೈಕೊಂಡ ಮದ್ರಾಸ್ ಸರ್ಕಾರದ ಪ್ರಾಚೀನ ಪುಸ್ತಕ ಭಂಡಾರದ [Madras Government Oriental manuscripts Library Curator] ಕ್ಯೂರೇಟರ್ ಶ್ರೀ ಟಿ. ಚಂದ್ರಶೇಖರ ದೀಕ್ಷಿತರು ಎಂ.ಎ.ಎಲ್.ಟಿ. ಅವರಿಗೂ, ಇದನ್ನು ಬಹುಶೀಘ್ರಕಾಲದಲ್ಲಿ ಅಂದವಾಗಿ ಮುದ್ರಿಸಿಕೊಟ್ಟಿರುವ ಶ್ರೀವತ್ಸ ಮುದ್ರಣಾಲಯದ [Sreevatsa Press, Madras - 14] ಪ್ರೊಪ್ರೈಟರಿಗೂ ನನ್ನ ಕೃತಜ್ಞತೆಯನ್ನು ಸೂಚಿಸುವ ಹೃತ್ಪೂರ್ವಕವಾದ ವಂದನೆಗಳು.

ಇಂತು

ಪಂಡಿತ ಹೆಚ್. ಶೇಷಯ್ಯಂಗಾರ್ಯ,
ಸಂಪಾದಕ.

ಮದ್ರಾಸ್
31-12-1955

INTRODUCTION

This edition of 'Jivasambodhane' is based on the manuscript preserved in the Government Oriental Manuscripts Library, Madras under No...and seven other manuscripts. Each of these manuscripts contains different readings and these variations are given under footnotes. Of these manuscripts, the two marked ಪು and "ಧು" represent the oldest copies. A photo copy of a palm leaf from the manuscript marked 'ಪು' indicating the date of the transcription is included in this edition.

From the statements "ಸರಸ್ವತಿ ಬಂದು ಬಂಧುವರ್ಮನ ಮುಖಪದ್ಮದೊಳ್ ನೆಲಸಿ ನಿಂದು" occurring in the sixth verse of the introductory chapter, and "ನುತವೈಶ್ಯೋತ್ತಮ" etc., in the concluding portion and also from the colophons at the end of the chapters containing the statement "ಜಿನಶಾಸನ ಪ್ರಭಾವನಶಿಲೋದಿತ ವಿದಿತ ಬಂಧುವರ್ಮ ನಿರ್ಮಿತಮಪ್ಪ" it is clear that Bandhuvarma is the author of this work. Besides this, he has also written another work 'Harivamsa' describing the life of *Neminatha*, who is the 22nd *Tirthankara*. Particulars regarding this author are not available from these two works. From the religious works written by him and from the statement "ನುತವೈಶ್ಯೋತ್ತಮ" in the concluding portion of this work, it is clear that he was a Jain by religion and belonged to the *Vaisya Caste*. But there is no clear indication in any of his works as to when he lived.

Salva who lived in 1600 A. D. quotes a verse from this work and Kamalabhava who lived in 1235 A. D. praises Bandhuvarma in the introductory portion of *Santisvara Purana* written by him. Therefore there is no doubt that Bandhuvarma lived before these two poets. Bandhuvarma does not make mention of any poet who lived before him. Therefore it is not possible to fix the lower limit of his date. However leaving a reasonable margin of one or two generations previous to Kamalabhava, the date of this author may be fixed as 1200 A. D.

Jivasambodhane is of the Campu type containing 558 verses with equal number of prose passages. The one speciality in this work is that while the *campu* works of Pampa and other great poets contain greater number of verses than prose passages, this work contains verses and prose passages in equal number. This is so because these prose passages are in general intended to be a commentary on the preceeding verses, althongh some of the prose passages furnish greater information with illusrtations different from what is contained in the verse.

In Tamil also there is a work of the same title dealing with the same subject: This work also contains verses with equal mumber of prose passages which explain the meaning of the preceeding verses. Apart from this,

there is such close similarity between the Kannada and Tamil works in other respects also that it is difficult to presume whether the Kannada work is based on the Tamil version or vice versa. On the basis of certain illustrations and expressions in the Tamil version, which are not found in the Kannada, it may be presumed that the Kannada work is based on the Tamil work. On the other hand certain topics which are peculiar to the Kannadigas are also found in the Tamil work leading to the presumption that the Tamil work is based on the Kannada version. Thus, this problem of the mutual relationship between the Tamil and the Kannada versions remains unnsolved. Generally, most of the works in Dravidian languages have the Sanskrit originals as their basis and it may be that the Tamil and Kannada versions of Jevasambodhane are both derived from a Sanskrit Original, which is not available now. (For details Vide Kannada introduction— Page 8)

The title of the work "Jivasambodhane" is significant since the twelve *anupreksas* according to the Jain system *dealt* within this work are addressed to the *'Jiva' (Soul)* The author has explained the nature of the twelve *anupreksas* each followed by a story illustrating the same. The work is composed mostly in *Vrittas* other than *Sragahara* and *Mahasragdhara* and *Tarala* and *Malini* metres are also found in some places. There is only one verse in *Akkara (Piriyakkara)* metre. Twelve *Ragale* verses, one at the end of each chapter and fourteen *Tripadis* are also found in this work. Although the general nature of this work is *Sastraic*, it can undoubtedy be classed, along with the works of Pampa and others. A verse from this work is quoted by Salva in his *Rasaratnakara*. Thus the fact that some of the verses and usages from this work are quoted as illustrations in works on Kannada Rhetoric and Grammar testifies to its literary importance. (Vide Kannada Intro. Page 9).

'Jivasambodhane' is divided into twelve chapters. These chapters are variously called as *'Asvasas'* *'Adhikaras'* and *'Avataras'* in different manuscripts. *'Asvasa'* is the usual name given to a division in a *campukavya*. The term *'Adhikara'* is used in Sastraic works, but the word *'avatara'* is used very rarely. The great poet Janna, in his work *Yashodharacarite* has used the word *'avatara'* to denote a chapter. It is not inappropriate to call a chapter an *'asvasa'* in accordauce with the form of the *Kavya* and to call it an *'adhikara'* with reference to the nature of the subject.

ವಾನರ ವಂಶದ ಮೊದಲಿಗಂ ಮಿತ್ರ[1]ನಾಗಿ ನಡೆದಂತೆ ಆಪಾರಾವಾರಂಬರಂ ಬಂದ ಸುಗ್ರೀವಂ ಮೊದಲಾ[2]ಗೊಡೆಯ ವಾನರರಾಜರೆಲ್ಲಂ ರಾಮಸ್ವಾಮಿಯೊಳ್ ಕೂಡಿ ಬಂದು ಕಾದಿದೊಡವ ನೊಡವುಟ್ಟಿದ ವಿಭೀಷಣನುಮುಣ್ಣನಂ ಬಿಸುಟ್ಟು–[3]ತನ್ನೊಳ್ ಕೂಡಿ ಬಂದಿಱಿದಂ. ಅವನ ವಿದ್ಯಾ ದೇವತೆಗಳುಂ [4]ಸೋಲ್ತುಗಲ್ದು ತೊಲಗಿಪೋದುವು. ದುರ್ಗಂಗಳುಂ ನವನಿಧಿಗ[5]ಳುಂ ಸಹಾಯ ಮಾದುದಿಲ್ಲ. ಭದ್ರಹಸ್ತಿಗಳುಂ ಜಾತ್ಯಶ್ವಂಗಳುಂ ವೀರ ಭಟಸೇನೆಗಳುಂ ನೆರೆ(ಱಿ)ದು ನಿಂದುವಿಲ್ಲ. ತನ್ನ ಮನೆಯೊಳ್ ಪುಟ್ಟಿದ (ತನ್ನ) ನಚ್ಚಿನ [6]ಚಕ್ರ ರತ್ನಮುಂ ಪಗೆನನ ಕೆಯ್ದಿ [7]ಪೋಗಿ ಮಗುಟ್ಟು ತನ್ನನೆ ಕೊಂದತ್ತು. ಕೈಲಾಸಮನೆತ್ತಿದ ಬಲಮನುಳ್ಳ [8]ಮೆಯ್ಯೊಂದಾಯುಧದೊಳೆ ಕೆಡೆದತ್ತು. [9]ಇಂತು ತನಗೆಂದಿರ್ದು ವನಿತುಂತೆಱಿದ ಕಾಪುಗಳುಂ ತನಗಾಗದಿರೆ ರಾವಣಂ ಸತ್ತು [10]ನರಕಕ್ಕೆ ಪೋದನೆಂಬೀ ಕತೆಯಂ ಕೇಳ್ದನ್ಯತ್ವಮಂ ಭಾವಿ[11]ಸು ಜೀವಾ! ನಿನಗಂ ದ್ರವ್ಯಮುಂ, ಕಳತ್ರಮುಂ, ಶರೀ[12]ರಮುಂ, ಎಂಬಿವರ್ಕಂ, ಸಂಬಂಧ[13]ಮಪ್ಪಂತಾವುದಂತರಂ ?

ಚಂ|| ಕಸವರಮೆತ್ತನಂತಗುಣಮೆತ್ತ ಕಳತ್ರದ ಸಿರ್ಕಿದೆತ್ತ ನಿ।
ನ್ನ ಸದೃಶ [14]ರೂಪದೂರ್ಧ್ವಗತಿ [15]ಭಾವನಿದೆತ್ತ ಕರಂ ವಿಮೋಹದಿಂ ॥
ಕೆಸುಗುಳಮಪ್ಪ ಮೆಯ್ಯೊಳಿರ[16]ವೆತ್ತ ಸುನಿಷ್ಕಲನಪ್ಪುದೆತ್ತ ಚಿಃ ! ।
ಬಿಸುಡು ವಿರುದ್ಧದೊಳ್ ತೊಡರ್ದು ನಿಲ್ವುದು [17]ಪಾಱಿಯದಲ್ತು ಜೀವನೇ ॥ ೩೧ ॥*

— ಗದ್ಯಂ —

ಇದು ಜಿನಶಾಸನ ಪ್ರಭಾಸನ ಶೀಲೋದಿತ ವಿದಿತ

ಬಂಧುವರ್ಮ ನಿರ್ಮಿತಮಪ್ಪ

ಜೀವಸಂಬೋಧನಾ ಗ್ರಂಥಾವತಾರದೊಳ್

ಅನ್ಯತ್ವಾನುಪ್ರೇಕ್ಷಾ ನಿರೂಪಣಂ — ರಾವಣ ಕಥಾವರ್ಣನಂ

ಚತುರ್ಥಾಧಿಕಾರಂ.

---

(1) ನಾಗಿರ್ದಂತಂತೆ ಪಾರಂಪರ್ಯಂಬರಂ (ಕ) ಪರ್ಯಂ ಬಂದ (ಜ) ವಾಗಿನಡೆದಂತಾ ಪರಂಪರಂ ಪರ್ಯಯದಿಂ ಬಂದು (ಜ) (2) ಲಾಗೆ ವಾನರವಂಶದವರೆಲ್ಲಂ ರಾವಣನಂಬಿಟ್ಟು (ಕ,ಜ) ರಾಮನೊಳ್ ಕೂಡಿ ಕಾದಿದೊಡವರೊಡವುಟ್ಟಿದ (ಕ,ಜ) (3) ಟ್ಟಾತನೊಳ್ ಕೂಡಿ ಬಂದು ಕಾದಿದಂ (ಕ,ಜ) ರಾಮನೊಳ್ ಕೂಡಿ ಬಂದಿಱಿದಂ (ಳ) ತನ್ನನೆ ಬಂದಿಱಿದಂ (ಜ) (4) ಸೋಲ್ತು ಪೋದುವು (ಖ) ಸೋಲ್ತು ತೊಲಗಿ ಪೋದು (ಜ,ಳ) (5) ಳುಮಾಸೆಯಂದುವಿಲ್ಲ (ಕ,ಜ) ನಿಧಿಯುಮಾಸೆ ಯಾದುದುಮಿಂ ಭದ್ರ (ಳ) (6) ಚಕ್ರಮುಂ (ಖ) (7) ಪೋಗಿ ತನ್ನನೆ (ಕ,ಜ) ಪೋಗಿ ಬಂದು ತನ್ನ (ಳ) (8) ಮೆಯ್ಯಮೆಯ್ಕೊಂಬಿನಕ್ಕಂ ಸಂಬಂಧಮಪ್ಪಂತಾವು ದಂತರಂ (ಜ) (9) ಮತ್ತಂ ತನಗಿರ್ದುವನಿತುಂ ತನಗಾಗದಿರೆ (ಖ) ಇಂತುತನಗೆಂದಿರ್ದುವೆ ನಿತನಿತುಂ ತನಗಾಗ ದಿರೆಯುಂ (ಳ) ತನಗೆಂದಿರ್ದವೆನತಾನುಂ ತೆರದ (ಕ, ಜ) (10) ನರಕಕ್ಕೆಱಿದನೆಂಬೀ (ಳ) ನೆಂಬುದಂಕೇಳ್ದನ್ಯ (ಖ) ಕೇಳ್ದನ್ಯತ್ವಮಂ ಜೀವಾ ನೀಂ ಭಾವಿಸುವುದು. ಎಲೆ ಜೀವಾ ನಿನಗೆ (ಕ, ಜ) (11) ವಿಸೂದೆಲೆ ಜೀವಾ ನಿನಗಾದ್ರವ್ಯ (ಳ) (12) ಮೆಯ್ಯೊಂಬಿವರ್ಕೆ (ಕ,ಜ) ಮೆಯಿಯೆಂಬುದ (ಳ) (13) ಮಪ್ಪಂದಮಾವುದೋ (ಕ,ಜ) (14) ಮಾಗುವೂರ್ಧ್ವ (ಕ, ಜ, ಳ) (15) ವಾಮಮಿದೆತ್ತ (ಳ) (16) ವೆತ್ತಿದುನಿಷ್ಕಲವ (ಕ, ಜ) (17) ನಿನ್ನಳವಲ್ತು ಜೀವನೇ (ಕ, ಜ)

* ಬ್ರಹ್ಮ ವ್ರತಾನ್ತೋ ಜಿನನಾಯಕೇನೋ – ತ್ತಮಕ್ಷಮಾದಿರ್ದಶಧಾಖಿ ಧರ್ಮಂ ॥
ಯೇನ ಪ್ರಯುಕ್ತೇನ ತು ಬಂಧುಬುದ್ಧ್ಯಾ – ತಂ ಶೀತಲಂ ಶೀತಕರಂ ನಮಾಮಿ ॥ — (ಕ,ಜ)

॥ ಪಂಚಮಾಧಿಕಾರಂ ॥

(ಪಲವುಂ ಪರ್ಯಾಯಂಗಳೊಳ್ ತೊಳಲ್ವುದೆಂಬ)

— ಸಂಸಾರಾನುಪ್ರೇಕ್ಷೆ —*

ಕಂ॥ ಗತಿಗಳ್ ನಾಲ್ವವೊಳಂ |
ಕೃತದಿಂ ಪದಿನಾಲ್ಕು ತೆಱದಿನಿರ್ದುವನೇಕಾ ॥
ಕೃತಿಯಾಗಿ ತಿರಿವ ಜೀವ |
ಪ್ರತತಿಯ ತಿರಿತರುತು ಮಿರ್ಪುದೀ ಸಂಸಾರಂ ॥ ೧ ॥

ವ॥ ಆವಾವುವೆಂದೊಡೆ:— ಏಕೇಂದ್ರಿಯ ಬಾದರಪರ್ಯಾಪ್ತಕಾಪರ್ಯಾಪ್ತಕಂ, ಸೂಕ್ಷ್ಮೈಕೇಂದ್ರಿಯ ಪರ್ಯಾಪ್ತ ಕಾಪರ್ಯಾಪ್ತಕಂ, ದ್ವೀಂದ್ರಿಯ ಪರ್ಯಾಪ್ತಕಾಪರ್ಯಾಪ್ತಕಂ, ತ್ರೀಂದ್ರಿಯ ಪರ್ಯಾಪ್ತ ಕಾಪರ್ಯಾಪ್ತಕಂ, ಚತುರಿಂದ್ರಿಯ ಪರ್ಯಾಪ್ತ ಕಾಪರ್ಯಾಪ್ತಕಂ, ಅಸಂಜ್ಞಿ ಪಂಚೇಂದ್ರಿಯ ಪರ್ಯಾಪ್ತ ಕಾಪರ್ಯಾಪ್ತಕಂ, ಸಂಜ್ಞಿ ಪಂಚೇಂದ್ರಿಯ ಪರ್ಯಾಪ್ತ ಕಾಪರ್ಯಾಪ್ತಕಂ—ಎಂದಿಂತು ಚತುರ್ದಶಭೇದಜೀವಸಮಾಸೆ(ಮಾರ್ಗಣಾ ಭೇದಂ)ಗಳೊಳಿರ್ದ ಜೀವರಾಶಿಯ ಚತುರ್ಗತಿಗಳೊಳ್ ತೊಳಲುತ್ತುಮಿರ್ಪುದು ಸಂಸಾರಂ.

ವ॥ ಆ ಸಂಸಾರದೊಳಗೆ ಪರಿಣಾಮವಶದಿಂ—

---

* ಈ ಸ್ಥಳದಲ್ಲಿ ಕೆಳಗೆ ಕೊಟ್ಟಿರುವ ಸಂಸ್ಕೃತ ಶ್ಲೋಕಟೀಕೆಗಳು (ಕ,ಜ,ಜ,ಫ) ಪ್ರತಿಗಳಲ್ಲಿವೆ—

ಜಿನಸ್ತುತಿ ॥ ಕುವಾದಿವಾದಾ ಜಯತಾ ಮಹಾನ್ತಂ—ನಯಪ್ರಮಾಣೈರ್ವಚನೈರ್ಜಗತ್ಸು ॥
ಜೈನಂ ಮತಂ ವಿಸ್ತರಿತಂ ಚ ಯೇನ—ತಂ ದೇವದೇವಂ ಸುಮತಿಂ ನಮಾಮಿ ॥ ೧ ॥

ವೃತ್ಯಾ ಜಾತಿಗತಿಷ್ವವಾಪ್ತಕರಣೋಽನಂತಾಂಗಹಾರಸ್ಸದಾ |
ಪ್ರೋದ್ಭೂತಿಪ್ರಳಯೋ ನರಾಮರಮೃಗಾದ್ಯಾಹಾರ್ಯಪರ್ಯಾಯವಾ ॥
ಹಿತ್ವಾ ಸಾತ್ವಿಕಭಾವಜಾತಮಿತರೈಃ ಭಾವೈಃ ಸ್ವಕರ್ಮೋದ್ಭವೈಃ |
ಜೀವೋಽಯಂ ನಟವದ್ಭ್ರಮತ್ಯಭಿನವಃ ಸರ್ವತ್ರ ಲೋಕತ್ರಯೇ ॥ ೨ ॥

[ಈ ಶ್ಲೋಕ ಫ ದಲ್ಲಿಲ್ಲ]

ಟೀ ॥ ವೃತ್ಯಾ—ಪರಿವರ್ತನದಿಂ, ಜಾತಿಗತಿಷು—ಏಕದ್ವಿತ್ರಿಚತುಃಪಂಚೇಂದ್ರಿಯ ಜಾತಿಗಳೊಳಂ – ನಾರಕತಿರ್ಯಙ್ಮನುಷ್ಯದೇವಗತಿಗಳೊಳಂ, ಆವಾಪ್ತಕರಣಃ – ಅಯ್ದಿಂದ್ರಿಯಂಗಳ ಸ್ವರೂಪಮನುಳ್ಪಂ, ಅನಂತಾಂಗಹಾರಃ—ಅನಂತ ಶರೀರಂಗಳ ಕೆಯ್ಕೊಳುಹಮನುಳ್ಪಂ, ಸದಾ—ಎಲ್ಲಾ ಕಾಲಂ, ಪ್ರೋದ್ಭೂತ ಪ್ರಳಯಃ—ಪಲವು ಪುಟುಗಳ ಮಾಂಸಾವುಗಳುಮನುಳ್ಪಂ ? ನರಾ .....ಯವಾ—ಮನುಷ್ಯದೇವ ಮೃಗಂಮೊದಲಾದ ಕರ್ಮದಿಂ ಮಾಡಲ್ಪಟ್ಟ ಪರ್ಯಾಯಮನುಳ್ಪಂ, ಸಾತ್ವಿಕಭಾವಜಾತಂ—ಸಹಜಾನಂತ ಜ್ಞಾನಸುಖಾದಿ ಸ್ವಭಾವಂಗಳಂ, ಹಿತ್ವಾ—ಬಿಟ್ಟು, ಸ್ವಕರ್ಮೋದ್ಭವೈಃ—ತನ್ನ ಕರ್ಮಂಗಳಿಂದಾದ, ಇತರೈಃ—ಉಳಿದ, ದೌದೈ (ಕಾ) ತಾದಿ ? ಗಳಪ್ಪ ಭಾವೈಃ—ಪರಿಣಾಮಗಳಿಂ, ಅಯಂ—ಈ, ಜೀವಃ—ಜೀವಂ, ಅಭಿನವಃ—ಅಪೂರ್ವಮಪ್ಪ, ನಟವತ್—ಆಟಕಾರನಂತೆ. ಭ್ರಮತಿ—ತೊಳಲ್ಗುಂ, ಲೋಕತ್ರಯೇ—ಮೂರುಲೋಕದೊಳು, ಸರ್ವತ್ರ—ಎಲ್ಲಿಡೆಯೊಳಂ, ನಟಪಕ್ಷದಲ್ಲಿ (ವೃತ್ಯಾಜಾತಿಗತಿಷು – ಎಂಬ ಶಬ್ದಗಳಿಗೆ) ಭರತಪ್ರಯೋಗಾರ್ಥಮಂ ಪೇೞ್ದುಕೊಳ್ಳುದು. ಪಲವುಂ ಪರ್ಯಾಯಂಗಳೊಳ್ ತೊಳಲ್ವುದೆಂಬ ಸಂಸಾರಾನುಪ್ರೇಕ್ಷೆ—

ಉ॥ ಎಲ್ಲೆಡೆ[1]ಯೊಳ್ ಚತುರ್ಗತಿಗಳೊಳ್ ಪರಮಾಣುಗಳೆಲ್ಲಮಂ ತಗು।
ಳ್ದೆಲ್ಲವಱಾಯುವಂ ಪೆಸರ್ಗಳಾದು[2]ವ ನೆಲ್ಲಮನಂತೆ ಮತ್ತೆ ರೂ ॥
ಪೆಲ್ಲಮನೆಲ್ಲಕಾಲ ಸಮಯಂಗಳನು[3]ದ್ಭವಮಾದ ಸಂಖ್ಯೆಯಂ।
ತೆಲ್ಲಮನೆಯ್ದಿ ವಂದು ಪರಿವರ್ತಿಸುತಿ[4]ರ್ಪುವು ಜೀವರಾಶಿಗಳ್ ॥ ೨ ॥

ವ॥ ಅದೆಂತೆಂದೊಡೆ :— ಒಂದೆಡೆಯೊಳ್ ಪುಟ್ಟಪೊಂದಿದ ಜೀವನೆನಿತಾನುಂಭವಂಗಳಂ ತೊಳಲ್ದು ಬಂದಾ[5] ಮುನ್ನಿನ ಪುಟ್ಟಿದೆಡೆಯ ಕೆಲದೊಳ್ ಪು[6]ಟ್ಟಿಯಂತಾ ಕ್ರಮದಿಂ ಚತುರ್ಗತಿಗಳೊಳಾದ ಕ್ಷೇತ್ರ ಮನಿತಱೊಳಂ ಕೂಡಿ ಪುಟ್ಟಿದೊಡೊಂದು ಕ್ಷೇತ್ರಪರಾವರ್ತನಂ, ಒರ್ಮೆ ಶರೀರಮಂ [7]ಕೆಯ್ಕೊಳ್ವಲ್ಲಿ ತೆಗೆದುಕೊಂಡ ಪರಮಾಣುಗಳಲ್ಲದೆ ಪೆಱಪೆಱವು ಪರಮಾಣು[8]ಗಳಂ ಕೊಂಡಂತೀ ಮೂಱು ಲೋಕದೊಳುಳ್ಳ ಪರಮಾಣುಗಳೆಲ್ಲಮಂ ಕೂಡಿಕೊಂಡೊಡದೊಂದು ಪರಮಾಣುಪರಾವರ್ತನಂ–ಒಂದು[9] ರೂಪಂ ಕೆಯ್ಕೊಂಡು ಬಿಸುಟ್ಟಂತೆ ಪೆಱಪೆಱವು ರೂಪಂ ಕೊಂಡಂತೆ ಲೋಕದೊಳುಳ್ಳ ರೂಪೆಲ್ಲಮಂ ಕೂಡಿಕೊಂಡೊಡದೊಂದು ರೂಪಪರಾವರ್ತನಂ–ಒಂದು ಪೆಸರ [10]ನೊರ್ಮೆಕೊಂಡು ಮತ್ತಂ ಪೆಸರ್ಗಳವೆನಿತು ಅನಿತುಮಂ ಕೆಯ್ಕೊಂಡು ಮುನ್ನಿನ ಕೊಂಡ ಕೆಲದ ಪೆಸರಂ ಕೊಂಡೊಡದೊಂದು ನಾಮಪರಾವರ್ತನಂ – ಒರ್ಮೆಯೊಂದು [11]ಸಮಯದ ಕಾಲದೊಳ್ ಪುಟ್ಟಿ ಸತ್ತು ತೊಳಲ್ದು ಬಂದಾ ಸಮಯದ [12]ಕೆಲದ ಸಮಯದೊಳ್ ಪುಟ್ಟಿ ಅನನ್ತ ಕಾಲಸಮಯಂಗಳೆನಿತೊಳವನಿತುಮಂ ಕೂಡಿ ಪುಟ್ಟಿದೊಡದೊಂದು ಕಾಲ ಪರಾವರ್ತನಂ— ಒಂದು ಪರಿಣಾಮಮಂ [13]ಮಾಡಿ ಮತ್ತಂ ಪರಿಣಾಮವೆನಿತೊಳವನಿತುಮಂ ಕೊಂಡು ಮುನ್ನಿನ ಪರಿಣಾಮದ ಕೆಲದ ಪರಿಣಾಮಮಂ ಕೊಂಡು ಮತ್ತಂ ನೆಱೆಯೆ ಕೊಂಡೊಡದೊಂದು ಪರಿಣಾಮ ಪರಾವರ್ತನಂ, ಒಂದಾಯುಷ್ಯಮನೊರ್ಮೆಕಟ್ಟಿ ಮತ್ತಮಂತೆ ಪೆಱಪೆಱವಾಯುಷ್ಯಮೆಲ್ಲಮಂ

ಯತ್ಸುಖಂ ತತ್ಸುಖಾಭಾಸಂ ಯದ್ದುಃಖಂ ತದ್ವದಾಂಜಸಾ ॥
ಭವೇಲ್ಲೋಕಾಃ ಸುಖಂ ಸತ್ಯಂ ಮೋಕ್ಷ ಏವ ಸ ಸಾಧ್ಯತಾಂ ॥ ೩ ॥

ತಾ॥ ಎಲೈ ಭವ್ಯರಿರಾ ಸಂಸಾರದೊಳ್ ಸುಖಮಾಗಿ ತೋರ್ಪುದು ಸುಖಾಭಾಸಮಲ್ಲದೆ ಸುಖಮಲ್ತು. ದುಃಖಮುಂ ಅನಂತದುಃಖಕಾರಣಪ್ಪುದು ನಿಶ್ಚಯಂ. ಆದಱಿಂದೆ ಸತ್ಯಮಾಗಿರ್ಪ ಸುಖಾಭ್ಯುದಯಂ ಮೋಕ್ಷದೊಳಪ್ಪುದಱಿಂದಾ ಮೋಕ್ಷಮೆ ಪಡೆಯಲ್ವೇೞ್ಕೆಂಬ ಸೂತ್ರಾನುಸಾರಮಾದ ದೃಷ್ಟಾಂತಕಥಾನಿರೂಪಣಂ ಗೆಯ್ವೆನದೆಂತೆನೆ—

---

(1) ಯುಂ (ಟ) (2) ವವೆಲ್ಲವವಂತೆ (ಟ) (3) ಭಾವಶಂಕೆಯಿಂದೆಲ್ಲ (ಕ) ಭಾವಶಂಕೆ ತಾನಲ್ಲ (ಚ) ಭಾವ ಸಂಖೆ ತಾನೆಲ್ಲ (ಛ) ಕಾಲಸಂಖ್ಯೆಯಂ (ಟ) (4) ರ್ಪುದು ಜೀವನಾಗಳುಂ (ಕ,ಚ) (5) ಬಂದು ಮುನ್ನಂಪುಟ್ಟಿದ ಕ್ಷೇತ್ರದ (ಕ,ಟ) ಬಂದದಱಿಕೆಲ (ಛ) (6) ಪುಟ್ಟಿಮತ್ತೆನಿತಾನುಂಭವಂಗಳಂ ತೊಳಲ್ದುಬಂದದಱಿ ಕೆಲದೊಳ್ ಪುಟ್ಟಿಯಂತಾಕ್ರ (ಚ) ಪುಟ್ಟಿಯಥಾಕ್ರಮು (ಛ) (7) ಕೊಳ್ವಲ್ಲಿ (ಞ) ಕೊಳ್ವಂದು (ಕ,ಟ) (8) ಗಳಂತೀಲೋಕ (ಕ,ಟ) (9) ರೂಪು ಕೊಂಡುಬಿಸುಟ್ಟು ಮತ್ತಂತೆ ಲೋಕ (ಕ, ತ) ರೂಪಂ ಕೈಕೊಂಡು ಮಂತಂತೆ ಮೂಱುಂ ಲೋಕದೊಳುಳ್ಳ ಪೆಸರ್ಗಳೆನಿ (ಛ) (10) ಕೊಂಡದಂ ಬಿಸುಟು ಮತ್ತೊಂದು ಭವದೊಳೊಂದು ಪೆಸರಂ ಕೊಂಡಂತೆ ಮೂಱುಂಲೋಕದ ಪೆಸರ (ಕ,ಟ) ಕೊಂಡುಮತ್ತಂ ಪೆಸರ್ಗಳವೆನಿತೆನಿತುಮನೆಯ್ದೆಕೊಂಡು ಮುನ್ನಿನ ಕೊಂಡ ಕೆಲದ ಪೆಸರಂಕೊಂಡೊಡದೊಂದು (ಖ) (11) ಕಾಲಸಮಯದೊಳ್ (ಕ) (12) ಕೆಲದೊಳ್ ಪುಟ್ಟಿಯಂತಂತೆ ಕಾಲಮೆನಿತನಿತುಮಂ ಕೂಡೆಪುಟ್ಟಿ (ಕ) (13) ಮಾಗಿ ಪೋಗಿಯಂ ತಂತೆನಿತೆನಿತು ಪರಿಣಾಮಂಗಳನಿತುಮಂ ಕೊಂಡಿಕೊಂಡೊಡೊಂದು (ಕ, ಜ, ಟ)

[1]ಕಟ್ಟೆ ಬಿಸುಟ್ಟು ಮುನ್ನಿನಾಯುಷ್ಯದ ಕೆಲವಾಯುಷ್ಯಮುಂ ಕೂಡಿ ಕಟ್ಟಿಕೊಂಡೊಡದೊಂದಾಯುಷ್ಯ ಪರಾವರ್ತನಂ–ಇಂತಿವು ಸಪ್ತಪರಾವರ್ತನಮೊಳೊಂಬತ್ತು ನಾಲ್ಕು ಲಕ್ಕೆ ಯೋನಿಮುಖದೊ[2]ಳ್ ಪುಟ್ಟಿ ಕುದಿವ ಕೂಲಂತೆಲ್ಲಿಯುಂ ನಿಲ್ಲದೆ ತೊಳಲ್ವ [3]ಸಂಸಾರಿಜೀವಂಗಳಂದಮಂ ಜೀವಾ ನೀಂ ಚಿಂತಿಸುವುದು—

ಕಂ॥ ಮನದೊ[4]ಳಗೆದ ಶುಭಮತಿಯೆಂ ।
ಬನಲನ ಘನಮೆಂಬ ವಹ್ನಿ ಕೊಳೆ ಸಂಸೃತಿಯೆಂ ॥
ಬನವರತಮುರಿವ [5]ಕಾಲ್ಕಿ ।
ರ್ಚಿನ ಕೋಳ್ಗೊಳಗಾಯ್ತು ಭುವನ ಜೀನಮೃಗೌಘಂ ॥ ೩ ॥

ವ॥ ಕಾಲ್ಕಿ[6]ರ್ಚಿನ ನಡುವಾದ ಮೃಗಕ್ಕಂ ಸಂಸಾರದೊಳಗಾದ ಜೀವಕ್ಕಂ ಮಱುಕಂ ಸಾಮಾನ್ಯ[7]ಮಕ್ಕುಂ—

ಮ॥ ಪಲವುಂ ಜನ್ಮಮೆ ವೃಕ್ಷಜಾತಿ [8]ವಿಷಯವ್ಯಾಬಾಧೆಗಳ್ ವ್ಯಾಧ ಸಂ ।
ಕುಲಮೃತ್ಯುಗ್ರಕಷಾಯ ಸಂತತಿ ಮೃಗವ್ರಾತಂ [9]ಮಳಂಗಳ್ ಮಹಾ ॥
[10]ಚಲಮಾಗುತ್ತಿರೆ ರೌದ್ರಮಾಗೆ ನೆಗಲ್ದೀ ಸಂಸಾರಕಾಂತಾರದೊಳ್ ।
[11]ಪೊಲಗೆಟ್ಟಕ್ಕುಟ ! ಸೇದೆವ[12]ಟ್ಟು ತಿರುಗುಂ ಮಿಥ್ಯಾತ್ವಜೀವೋತ್ಕರಂ ॥ ೪ ॥

ವ॥ ಸಂಸಾರದೊಳ್ ಮಿಥ್ಯಾದೃಷ್ಟಿಯ[13]ಪ್ಪ ಜೀವಂ ಸುಲಿವ ಬೇವಸಕ್ಕಂ ಕಾಂತಾರದೊಳ್ ಪೊ[14]ಲಂಬುಗೆಟ್ಟು ಸೇದೆವಟ್ಟು ತಿರುಗುವ ಕುರುಡನಾಪತ್ತಿಂಗಮಳವಿಯುಂಟೇ ? —

ಕಂ॥ ನೆರಪುವ[15]ಳಿಪುವ ವಿಕಾರಂ ।
[16]ತಿರಿವೆ ಭವಾಂಬುಧಿಯ ನಡುವೆ[17] ಸೂಲ್ ಸೂಲ್ ಕಡೆನೇ ॥
[18]ಣ್ಬರವೆಡಬಲದೊಳ್ ತಿರಿಪು ।
ತ್ತಿರೆ [19]ಕಡೆಗೋಲೆಂತು ತಿರಿಗು ಮಂತಿರೆ ತಿರಿಗುಂ ॥ ೫ ॥

ವ॥ [20]ಕಡೆವ ಕಡೆಗೋಲ ನೇಣೊಡುಂಕಡೆಯುಮೊಂದು ಸುತ್ತುವಾಗಳೊಂದಱಿವಂತೆ ಶುಭಾಶುಭಕ[21]ರ್ಮಮೆರಡುಮೊಂದು ತಗುಳ್ವಾಗಳೊಂದಱಿಗುಮಂತೆ ಸಂಸಾರದೊಳ್ ತಿರಿ[22]ವರ್ ಮತ್ತಂ ನಿಮ್ಮಿ[23]ರ್ದೀ ಸಂಸಾರಸಮುದ್ರ[24]ಮೆಂತಿರ್ದುದೆಂಬಿರೆ–

---

(1) ಕಟ್ಟೆ ಬಿಸುಟಂತೆ ಸಂಸಾರದೊಳುಳ್ಳಾಯುಷ್ಯಮೆಲ್ಲಮಂ ಕೂಡಿಕಟ್ಟದೊಡೊಂದು (ಕ,ಜ) (2) ದೊಳೆಲ್ಲಿಯುಂ ಕುದಿವ (ಚ) (3) ಸಂಸಾರಿಗಳಂದ (ಖ) (4) ಳಗಮಶುಭ (ಚ,ಛ) (5) ಕಾಲ್ಕಿರ್ಚಿನೊಳೊಳಗಾಯ್ತಂತೆ ಜೀವನೆಂಬ ಮೃಗೌಘಂ (ಕ, ಜ, ಟ) ರ್ಚಿನ ನಡುವಱ್ಕೊಯ್ತ ವಣದಾಯ್ತು (ಚ) (6) ರ್ಚಿನನಡುವಱ್ಕೋದ (ಛ) (7) ಮಕ್ಕುಮೆ ? (ಕ,ಜ,ಟ) (8) ವಿಷಯಾತಂಕಾದಿಗಳ್ (ಛ) (9) ಮದಂಗಳ್ (ಕ,ಜ,ಛ,ಟ) (10) ಬಲ (ಟ,ಚ) (11) ಪೊಲೆ (ಖ,ಚ,ಛ) (12) ಗೆಟ್ಟು (ಟ,ಚ,ಛ) (13) ಯ ಸುಳಿಯಜೀವ (ಕ) ದೃಷ್ಟಿಜೀವ (ಛ,ಟ) (14) ಪೊಲಗೆಟ್ಟು ಸುಳಿವ ಕುರುಡ (ಕ,ಜ,ಟ) ಪೊಲೆಗೆಟ್ಟು ಸೇದೆ (ಖ) (15) ಳಿವಳ್ (ಕ,ಜ) ನಡಪುವಳಿಪಳ್ (ಟ) (16) ಕಿಡಿಪಿ (ಟ) (17) ಸುಳಿಯದೆ ಕಡೆನೇಣ್ (ಖ) ಸೊಚ್ಚಿಳ್ಳಿರದಿಂ॥ದೆಡಬಲ (ಟ,ಛ) (18) ಣ್ಬರದೆಡಬಲ (ಕ,ಜ) ಬಳದೆಡಬಲ (ಟ) (19) ಕಯಗೋಲಂತೆ (ಚ) ಕಡೆಗೋಲೆಂಬಂತೆ ತಿರುಗುವಂತಿರೆ ತಿರಿವರ್ (ಛ) ತ್ತಿರೆಕಡೆಗೋಲೆಂತು ತಿರಿಗುವಂತಿರೆತಿರಿವರ್ (ಕ,ಜ) (20) ಕಡೆದನೇಣೆರಡುಂಕಡೆ (ಚ) ಕಡೆಗೋಲಣೆರಡುಂ (ಕ,ಚ) (21) ಕರ್ಮಂಗಳೊಂದು ತಗುಳ್ವಾಗಳೊಂದಳಿವುತ್ತಿರೆ (ಕ,ಜ) (22) ವಿರ್ (ಕ,ಜ,ಛ) (23) ನಿಮಿರ್ದೀ (ಕ) ನಿಮಿರ್ದ (ಜ,ಚ) ನಿಮಿರ್ದೀಸಂಸಾರಮೆಂ (ಟ) (24) ದಂದಮಿಂತುಟೆಸ್ತೆ (ಛ) ದ್ರಮಿಂತಾಗಿರ್ದುದೆಂಬಿರೆ (ಖ)

ಮ|| ದುರಿತಂ [1]ನೀರ್ ಬಹುದುಃಖಮುಗ್ರಮಕರಗ್ರಾಹಾದಿಗಳ್ ಚಿಂತೆಗಳ್ ।
ತೆರೆಗಳ್ ಹಿ[2]ಂಸೆ ಮಹೋಗ್ರಬಾಡಬಮುಖಂ ಮಿಥ್ಯಾತ್ವಸಂಯೋಗ ದು ॥
ಪ್ಪರಿಣಾಮಂಗಳಗಾಧಮಪ್ಪ ಸುಳಿಗಳ್ ತಾಮಾಗೆ ಘೂರ್ಣಿಪ್ಪ ದು ।
ಸ್ತರ ಸಂಸಾರಸಮುದ್ರದಲ್ಲಿ ಸು[3]ಳಿಗುಂ ಜೀವಂಗಳಜ್ಞಾನದಿಂ ॥ ೬ ॥

ವ|| [4]ಸಂಸಾರದೊಳಗಿರ್ದನ ಕೇಡಿಂಗಂ ಸಮುದ್ರದೊಳಲ್ಪಿನ [5]ಸಾವಿಂಗಮೇಂ ಸಂದೆಯಮೆ? ಆದಱಿನಿಲ್ಲಿ ಸುಖಮಿಲ್ಲ—

ಕಂ|| ಒಂದಿಂದ್ರಿಯದೊಳಗೆಳ್ಪನಿ ।
ತೊಂದೆಡೆಯದೆ ಸುಖಮದೆ[6]ನಿಸುಬೇಗಮದ[7]ರ್ಕಂ ॥
ತೊಂದಿಪ ಮೆ[8]ಯ್ಯೆಲ್ಲಮನೊ ।
ಕ್ಕೆಂದುಂ ನಮೆಯುತ್ತುಮಿರ್ಪುದು[9]ಱುಗುಮೆ ಜೀವಾ ॥ ೭ ॥

ವ|| ಅಂತೆ ಸಂಸಾರ[10]ಸುಖಮೆಲ್ಲಮಿಂದ್ರಿಯಂಗಳ ದೆಸೆಯಿಂದಿಂದ್ರಿಯಂಗಳೊ[11]ಳ ಮೆಳ್ಪನಿತುಸ್ಪದೇಶದಲ್ಲಿಂದತ್ತದುವುಂ ಕ್ಷಣಮಾತ್ರದನಿತರ್ಕೆ ಮೆಯ್ಯೆಲ್ಲಮಂ ನೋವಿಂಗೊಡ್ಡಿನ[12]ಮೆವುದಾವುದಱಿಗುಮೆಲೆ ಜೀವಾ, ನಿನ್ನಿರ್ದಿರವಂ ನೋಡಾ—

ಉ|| ತೀವಿದ ಮೋಹಮೆಂಬ ತೊಱ[13] ಕೊಂಡೆಱ[13]ದರ್ಪುದು ನಿನ್ನ ನೀಗ[13]ಳಿಂ ।
ಜೀವ ನಿವೃತ್ತಿಯೆಂಬ [14]ಭುಜಗರ್ವದಿನೀಸಿ ಬರ್ದುಂಕಿ [15]ಪೋಗು ಮ ॥
ತ್ತಾವುದುಮಾಸೆಯಿಲ್ಲ [16]ಸುಳಿಯಲ್ ಕಡುವೇಗದೆ [17]ಪೋಗಿ ಮೃತ್ಯುವೆಂ ।
ಬೋವದೆ ನುಂಗುವೊಂದು ನೆಗಱುಳ್ಪ [18]ಭವಾಬ್ಧಿಯನೆಯ್ದದನ್ನೆಗಂ ॥ ೮ ॥

ವ|| ತೊಱೆಯೊಳ್ ಪೋಪಾತಂ ಸಮುದ್ರಮನೆಯ್ದದನ್ನೆಗಂ [19]ಪೊಡರ್ಪುಗೆಯಿಪ್ಪಾಸುವುದು. ಸಂಸಾರದೊಳಗಾದಾತಂ ಸಾವೆಯ್ದದನ್ನೆಗಂ ಬೇಗಮ[20]ಱುದು ನೆಗಱ್ಪುದು—

---

(1) ನೀರ್ವಹು (ಕ,ಜ,ಳ) (2) ಮಾಳ್ಪತಿ ತೃಷ್ಣೆ ಮತ್ಸ್ಯನಿಕರಂ (ಕ,ಜ) ತೆರೆಗಳೆ ಮಾಳ್ಪತಿತೃಷ್ಣೆ ಬಾಡಬಮುಖಂ (ಳ) ಒಂಸೆಸರೌದ್ರಬಾಡಬ (ಚ) (3) ಸುಳಿಗಂ (ಕ) (4) ಸಮುದ್ರದೊಳಗರ್ದನ (ಕ) ಸಂಸಾರ ಜೊಳರ್ದ (ಟ) (5) ನೋವಿಂಗಮೇ (ಳ) (6) ದಿನಿಸು (ಳ,ಖ) (7) ರ್ಕಂ (ಳ, ಜ) (8) ಯ್ಯೆಲ್ಲಂನೊಂದೆಂದುಂ (ಳ) ಯ್ಯೆಲ್ಲಂನೊಂದುಂನಮೆ (ಜ) ಯ್ಯೆಲ್ಲಮನೊರ್ಕೆಂದುಂ (ಳ) (9) ದುರಿಗುಮೆ (ಜ) (10) ದುಃಖ ಮೆಲ್ಲ (ಚ) ದೊಳಗೆಲ್ಲಮಿಂ (ಳ) ಸಂಸಾರಮೆಲ್ಲಂ (ಜ) (11) ಗಳೊಳೆಳ್ಪೆನಿತು ಪ್ರದೇಶದ ನಿತುಮಂತಸುವುಂ ಕ್ಷಣಮಾತ್ರಸುಖದ ನಿತೆಯದರ್ಕೆ (ಕ,ಜ) ಗಳೊಂದೆಳ್ಪೆನಿತುಪ್ರದೇಶದನಿತಲ್ಲದಿಲ್ಲಮಮಂ (ಳ, ಚ) (12) ನಮೆವುತ್ತಿರ್ಪುದು ಬುದ್ಧಿಯಲ್ತು (ಕ) ತ್ತುಮಿರ್ಪು ದುರಗುಮೆ ಜೀವಾನೀನರ್ದ (ಜ) (13) ಳೀ (ಕ, ಜ, ಳ) (14) ಬಲಗರ್ವ (ಕ,ಜ,ಳ) (15) ಪೋಗಿ (ಚ) (16) ಕಡೞೊಳ್ (ಚ, ಕ, ಳ, ಜ) (17) ನೀನೆ (ಚ) (18) ಭವಾಂಬುಧಿಯೆಯ್ದುದ (ಕ) (19) ಪೊದಳ್ದೀಸುವುದು (ಕ) (20) ದಾರ್ತುನೆಗ (ಕ,ಜ,ಳ)

ಕಂ॥ ಪತ್ತಿರ್ದನಂತಭವಮುಮ ।
ನಿತ್ತೆಯ್ದುಂವಿಷಯವೈರಿಗ[1]ಳ್ಗಱಿದೈ ನೀಂ ।
[2]ಮತ್ತಿನ್ನು ಕೇಳ್ ಪರತ್ರೆನಿ ।
ಮಿತ್ತಂ ನಿನಗೊಂದುಭವಮನೀ[3]ಯಲ್ಕಾಗಾ ॥ ೯ ॥

ವ॥ ಮುಂ ಪೋದನಂತಭ[4]ವಮೆಲ್ಲಮಂ ಬಸನಕ್ಕೆ ಕೊಟ್ಟು ಕೆಟ್ಟಯಿನ್ನಪ್ಪೊಡಂ ನಿನಗೊಂದು ಭವಮುಂ [5]ಕುಡೆ ಕೊಂಡು ಬಱಿಯಂ ಸುಖಮಿರ[6]ಲಾಗಾ !—

ಚಂ॥ ಕುದಿಯಿಸು ವಿಂದ್ರಿಯಂಗಳ್[7] ನಱಲ್ದು ಬಲಲ್ದು ಮನಕ್ಕೆ ವಂದುದೆ ।
ಯ್ದದೆ ಕಡುನೊಂದು ಬೆಂದು ಮಱುಗುತ್ತಱಿದಕ್ಕಟ ಸೇದೆ[8]ವಟ್ಟು ಬ ॥
ರ್ದಿದೆ[9]ಯಱಿನೀರ್ಗೆ ನೀರಡಸಿ ಬೇಸಗೆಯೊಳ್ [10]ಬಡಗೊಂದೆ ಬಂದು ತಾಂ ।
ಪದೆ[11]ದಱುನೀರನೆಯ್ದದೆಯುಮಲ್ಲಿಯ ಕೊಱ್ಕಿಸಱಿಲ್ಲಿ ಬೀಱ್ವವೋಲ್ ॥ ೧೦ ॥

ವ॥ ಕರ್ಮವಶದಿಂ ಸೇದೆಗೆಟ್ಟ ಜೀವನಿಂದ್ರಿಯಸುಖಕ್ಕಾಸೆವಟ್ಟು ನೆಗಲಿಪ್ಪೊಡಂ ಬಡಗೊಂದೆ ಕೆಸರ ನಡುವಣ ನೀರ್ಗಾಸೆವಟ್ಟು ಪುಗುವೊಡಮಾತಂ ಸುಖಮನೆಯ್ದದೆ ದುಃಖದೊಳಾಱ್ದು [12]ಮದು ನೀರನೆಯ್ದಲಾಱದೆ ಕೆಸಱೊ[13]ಳಾಱ್ದುಮುಪ್ಪುದಱಿಂ ಅಲ್ಪ ಸುಖಕ್ಕಾಸೆ[14]ವಟ್ಟೊಡೊಳ್ಳಿತಕ್ಕುಮೆ ?—

ಕಂ॥ ಕಡುದುಃಖಮೆಂಬ ಕಿರ್ಚಿಂ ।
ಕಡುಗಾಯ್ದಾ ಜೀವನೆಂಬ [15]ಲೋಹದ ಗುಂಡುಂ ॥
ಕಿಡುಗುಮೆ ಸುಖ [16]ಶೀಕರದಿಂ ।
ದಡಂಗುಗುಂ ನಿನ್ನ ಕಾಯ್ಪು ಮುಕ್ತ್ಯ[17]ಬುಧಿಯೊಳ್ ॥ ೧೧ ॥

ವ॥ ಕರಂ ಕಾಯ್ದ [18]ಕರ್ಬೊನ್ನ ಬಟ್ಟು ಸೀವರದ ಪನಿಯೊಳಾಱುಗುಮೆ ? ಸಮುದ್ರ [19]ದೊಳಿಕ್ಕಿದೊಡಾಱುಗುಮಂತೆ ನಿನ್ನೊಳ್[20] ನಾದಿಯಪ್ಪ ವಿಧ ಕರ್ಮೋದಯದಿನಾದ ಮಹಾ ದುಃಖಮಲ್ಪ ಸುಖದೊಳಾಱುಗುಮೆ ? [21]ಮುಕ್ತ್ಯಂಬುಧಿಯೊಳಾಱುಗುಮೆಂಬುದಂ ಬಗೆವುದು ಜೀವಾ, ನಿನ್ನಿರ್ದಿರವಿಂತಲ್ತೆ ?

---

(1) ಳ್ಗಱಿವೈ (ಕ, ಚ, ಳ) ಳ್ಕದೆ (ಟ) (2) ಮತ್ತೆಲ್ಲಕೇಳ್ಪರತ್ರಕ್ಕೆನಿ (ಖ) ದೀಯಉಮಾಗಾ (ಕ) ನೀಯಲ್ಕಾಱಾ (ರಾ) (ಜ,ಖ) (4) ಭವಂಗಳೆಲ್ಲಮಂ (ಕ) (5) ಕುಡು ಕೊಟ್ಟು ಬಱಿಕ್ಕೆ (ಕ,ಚ,ಳ) ಕೊಟ್ಟು ಬಱಿಯಂ (ಜ) (6) ಲಾಗದೇ (ಚ) (7) ನಗಲ್ದು (ಕ,ಜ,ಟ,ಳ) (8) ಗೆಟ್ಟು (ಖ) (9) ಮೆಲಿನೀರ್ಗೆ (ಳ) (10) ಬಿಡೆಗೊಂಡೆ (ಕ) ಬಡಗೊಂಡೆ (ಜ) (11) ದಮುನೀರ (ಖ,ಚ) ನೀರನೆಯಿದಡೆಯುಮ (ಳ) (12) ಮಿದು ನೀರನೆಯ್ದೊದೆ–(ಕ) ಮಾತಂ ನೀರ (ಚ) (13) ಬೀಳ್ಗುಮ (ಕ,ಜ) (14) ವಟ್ಟು ನೆಗಳ್ಪೊಡಂತದೊಳ್ಳಿತಕ್ಕುಮೆ (ಕ) (15) ಕರ್ಬುನಗುಂಡೇಂ (ಕ,ಜ,ಳ) (16) ಸೀವರ (ಚ) (17) ಮುಕ್ತ್ಯಂಗನೆಯೊಳ್ (ಕ) (18) ಕಬ್ಬುನದ ಗುಂಡು (ಕ, ಳ) ಕಬ್ಬೊನ್ನಬಟ್ಟು (ಜ, ಖ, ಟ) (19) ದೊಳುಳಾರುಗುಮಂತೆ (ಕ) ದೊಳಿಕ್ಕಿದೊಡಾರುವಂತೆ (ಜ,ಳ) ದೊಳ್ಳಾಂಕಿದೊಡಾರುವಂತೆ (ಟ) (20) ಳಾದಿಕರ್ಮೋದಯದಿ (ಕ,ಳ) ಳನಾದಿ ಸಂಬಂಧಿಯಪ್ಪಪ್ಪ ವಿಧ ಕರ್ಮ (ಜ, ಳ) (21) ಮೋಕ್ಷಸುಖದೊ (ಕ, ಚ, ಳ)

ಉ॥ ನಿನ್ನೊಡವುಟ್ಟಿದೊಳ್ಮಿತಮಂ ಮಿಗಿಲಾಗುವನಂತಸೌಖ್ಯಮಂ ।
ತನ್ನ [1]ಮಹತ್ಪದಿಂ [2]ಕಿಡಿಸಿ ಪೊ[3]ಲ್ಲುಣಿಸಂ ಪೊ[4]ಱಿಗಿಕ್ಕಿ ಕಾವವೋಲ್ ॥
[5]ನಿನ್ನ ಯಶೇಷದಿಂದ್ರಿಯಸುಖಂಗಳ[6]ನೂಡಿ ತೊ[7]ಡರ್ಚಲಂದು ನೀಂ ।
ಬನ್ನಮನೇನುಮಂ ಬಗೆಯದಿರ್ದುದೆ ನಾಣೆಲೆಯಾಗಿ ಜೀವನೇ ॥ ೧೨ ॥

ವ॥ ಸೆಱೆಯೊಳಿರ್ದನಾಹಾರಂಗೊಳ್ವನಿತರ್ಕೆ [8]ಮೆಯ್ಮಱೆದೊಡಂ, ಸಂಸಾರದೊಳಗಿ[9]ರ್ದನಿಂ ದ್ರಿಯಸುಖಮನೋರೊರ್ಮೆ ದೊರೆಕೊಳ್ವನಿತರ್ಕೆ ಧರ್ಮಮಂ ಮಱೆದೊಡಮಾತನ ಸೆಱೆಯುಂ ಈತನ ಕರ್ಮಮುಮೆಂತುಂ ಪತ್ತುವಿಡವು. ಮತ್ತಂ [10]ನಿನ್ನೆ(ನ್ನಿ)ರವಿಂತು [11]ನೋಡಾ ! —

ಕಂ॥ ಮನೆ ಸೆಱೆವನೆ ಧನಮಿಂಧನ ।
ಮನುಕೂಲದ ತನಯವರ್ಗಮನಯಂ ಪೆಱ[12]ದೇಂ ॥
ವನಿತೆ ಕರಂ [13]ಪಾಪಂ ನೆರೆ ।
ವನಿತೆ ಮಹಾಮೋಹಬಂಧನಂ ಬಂಧುಜನಂ ॥ ೧೩ ॥

ವ॥ ಎಂದು ಬಗೆದು ಭಯಸ್ಥ[14]ನಾಗಿ ನೆಗಲ್ವು[15]ದಲ್ಲದೊಡೆ ಮಱೆದಿರ್ಪುದೇಕೆ ?—

ಮ॥ [16]ನೆಱನಂ ದುಷ್ಕೃತಮೆಂಬ ಜೀನನೊಱೆಮೇಂ ಪಾ[17]ಯ್ದೂಱವೇ ಬಂದು ಬೆ ।
ಬ್ಬಱಿ ದುಃಖಜ್ವಲನಾರ್ಚಿಗಳ್ ಬಳಸಿಯುಂ [18]ತಳ್ತಲ್ವವೇ ಪೊಯ್ವ [19]ಸಾ ॥
ವಱಿಗಳ್ [20]ಬೆರ್ಚ್ಚದೆ ತೀಡವೇ ಕೆ[21]ವಿಗಳೊಳ್ ದುರ್ಮೋಹನಿದ್ರಾಪ್ತಿಯಿಂ ।
ದೊಱಗಿರ್ದುಂ ಮಗುಱ್ದಿನ್ನು[22]ಮೆಲ್ಬಿಱದುದೇನೊಳ್ಳಿತ್ತೆ ಪೇಱ್ ಜೀವನೇ ॥ ೧೪ ॥

ವ॥ [23]ದುಃಖಾವಸ್ಥೆಗಳಂ ಬಗೆಯದೆ ದುರ್ಮೋಹದೊಳಿರ್ದೊಡ[24]ಮೆಂತುಮೆಲ್ಬಿಱದ ನಿದ್ರೆಯೊಳಿರ್ದೊ[25]ಡಮದಂ ಕೇಡುಂ ಸಾವುಮೆನ್ನ ದೆಯುಂ ಪೆಱತೇನೆಂ[26]ಬುದೋ !—

---

(1) ಮಹಾತ್ಮದಿಂ (ಕ,ಳ) ಮಹಾತ್ಮ್ಯದಿಂ (ಜ) (2) ಮರಸಿ (ಕ) ಮಱಸಿ (ಳ) (3) ಪುಲ್ಲಣಸಂ (ಕ,ಳ) ಪೊಲ್ಲುಣಸಂ (ಖ) (4) ಸೆರೆಗಿಕ್ಕಿ (ಕ,ಜ) ಸೆಱೆಯಿಕ್ಕಿ (ಚ) (5) ನಿನ್ನನಶೇಷಮಿಂ (ಖ) ನಿನ್ನಸು ಪೇಸದಿಂ (ಚ) (6) ನೋಡಿ (ಕ, ಳ) (7) ತೊಡರ್ಚಿ ಬಯ್ತು (ಕ) ಬಯಿತ (ಳ) ಬಯ್ತೊ (ಜ, ಳ) ಬಯ್ತೆ ನೀಂ (ಟ) (8) ಮೆಯ್ಯರೆ (ಚ) (9) ಗಿರ್ದಿಂದ್ರಿಯ (ಟ) (10) ನಿಂದಿರ್ದಿರವು (ಚ,ಳ) (11) ಕಾಣಾ (ಕ, ಚ, ಳ, ಜ) (12) ಪೆಱತೇಂ (ಖ) (13) ಪೋಪಂ (ಚ) (14) ರಾಗಿ (ಚ) (15) ಱ್ವುದುಮಱೆ (ಚ) ನೆರನೆವೃ ವೃಕ್ಷಂ ಎಂದು ಚಿಕ್ಕಕ್ಷರದಲ್ಲಿ ಓಲೆಯಮೇಲ್ಗಡೆಬರೆದಿದೆ (ಜ) (17) ಪಾಯ್ದಾರವೇ (18) ತಳ್ತಳುರ್ವವೆ (ಕ,ಜ) ತಳ್ತಳ್ವಾರ್ವದೇವಾಯ್ದು (ಳ) ತಳಳ್ವಲೇವಾಯ್ದು (ಖ) (19) ಸಾಯ್ವರೆಗಳ್ (20) ಪೆಚ್ಚ (21) ಕಲಿಗಳೊಳ್ (ಳ) (22) ಮೆಚ್ಚರ (ಕ,ಜ) ಱ್ದಿಂತು ಮೆಯಿಮಱೆದುದೇನೊ (ಳ, ಜ) (23) ಎಂದು ದುಃಖಾ (ಕ, ಟ) (24) ಮೆಂದುಮೆಚ್ಚರ (ಳ) (25) ರ್ದೊಡಾಮದಂ(ಟ) ಮದಂಕೇಡೆನ್ನದೆಯುಮೆದಂಸಾವೆನ್ನದೆಯುಂ ಮತ್ತೇನೆಂ ಬುದೊ (ಕ,ಜ,ಳ) (26) ಬುದು (ಖ)

ಕಂ|| [1]ಎನಿತಂ ವಸ್ತುಗಳಂ ನೀ |
ನನುಭವಿಸಿದೆಯಕ್ಕುಮಪ್ಪೊಡಂ ತಣಿವುಂಟೇ ? ||
ಘನಮೋಹರಿಪುವನೋಡಿಸಿ |
ವಿನುತಜಯಧ್ವಜಮನೆಲಿ[3]ದುಕೊಳ್ಳದೊ[2]ಡಿಲ್ಲಂ ||೧೫||

ವ|| ಎನಿತು ಪ[3]ರಬಲಮನಿಱಿದೊಡಂ ನಾಯಕನನಿಕ್ಕಿದೊಡಲ್ಲದೆ ಗೆಲ್ಲಮಿಲ್ಲದಂತೆ ಎನಿತು ವಸ್ತು[4]ಗಳೊಳನುಭವಿಸಿದೊಡಂ ಮೋಹಮಂ [5]ಬಿಸುಟಲ್ಲದೆ ತಣಿವಿಲ್ಲ. ಏಕೆನೆ ?—

ಚಂ|| ಬಡತನಮುಳ್ಳವರ್ ಮಱುಗುವರ್ ಧನಮುಂ ಪಡೆಯಲ್ಕೆ [6]ಸೇದೆಯಿಂ |
ಪಡೆದ[7]ವರುಂ ಕರಂ ಮಱುಗುವರ್ ತಣಿವಿಲ್ಲದೆ ನೆಟ್ಟನುಳ್ಳ[8]ನುಂ ||
ಬಡವನು ಮಲ್ಲದಿಲ್ಲ ಮನುಜರ್ ಸುಖ[9]ಮಾರೊಳಮೆಂತುಮಿಲ್ಲ ಮೆ |
ಲ್ಪಡದಿರಿಮೊಳ್ಳಿಕೆಯ್ದು ಪಡೆಯಿಂ ಸುಖಮಂ [ಪೆಱತೇಂ] ಪರತ್ರೆಯೊಳ್ ||೧೬||

ವ|| ಬಡವ[10]ನೊಡೆಯನೆಂಬಿರ್ವರೊಳಂ ಸುಖಮಿಲ್ಲದೊಡಂ ಆಸಡಿ ಸುಗ್ಗಿಯೆಂಬೆರಡುಂ ಕಾಲದೊಳಮೊಕ್ಕಲ್ಗುಣಲಿಲ್ಲದೊಡಮೇ[11]ಕಲ್ಲಿ ಸುಖಮನಾಸೆವಡುವು[12]ದೇಕಾರಣಮಾರಂಬಂ ಗೆಯ್ವುದು ? ಮತ್ತಮಿಂತು—

ಕಂ|| ಒಡೆಯಂ ತಣಿಯದೆ ಮಱುಗುವ |
ನೊಡೆಯನನಳವೊದವೆ [13]ಬೇಡುವಂ ಪಡೆಯದೆ ತಾಂ ||
ಕಡುನೋವನಿರ್ವರಲ್ಲಿಯು |
ಮೊಡರಿಸಿತಲಲರ್ಥ ಮೇವು[14]ದೆಂಬರ್ ಸುಖಿಗಳ್ ||೧೭||

ವ|| ಪುಟ್ಟಿದೆಡೆಯುಮುಂ ಪೊರ್ದಿದೆಡೆಯುಮುಂ ಸುಡುವ [15]ಕಿಚ್ಚುಮನರ್ಥಮುಮಂ ಗೆಂಟು ಮಾಡುವನೆ ಸುಖಿ, ನೀಮೆಂತು[16]ಮಿಲ್ಲಿ ಮೆಲ್ಪಡದಿರಿಂ—

---

(1) ಎನಿತೆನಿತು ವಸ್ತುಗಳ ನೀ (ಕ,ಟ) ಎನಿತುಂ ವಸ್ತುಗಳೊಳ್ (ಳ) (2) ಡೆಲ್ಲಂ (ಟ) (3) ಪಲರನಿರಿದೊಡಂ (ಕ,ಜ) (4) ಗಳನನು (ಕ,ಟ) ಗಳೊಳ್ನೀ (ಳ) (5) ಕಿಡಿಸಿದೊಡಲ್ಲದೆ ಸುಖಮಾಗದೆಂತೆನೆ (ಕ,ಟ,ಜ) ಬಿಟ್ಟದಲ್ಲದೆ ತಣಿ (ಚ) (6) ಸೇದೆಯಂ (ಕ,ಟ,ಜ) (7) ವವರುಂ (ಟ) (8) ರುಂ (ಳ) (9) ಮುಳ್ವ್ಯಟಿ ಗೊಂಡು ದಿಲ್ಲಿ (ಖ) ಮೊಬ್ಬುಳಿಯಂದದಿಲ್ಲವೆ(ಟ) (10) ದೊಡೆಯರೆಂ (ಕ,ಟ) ಮೇಕೆ ಸುಖಮನರಸು (ಕ,ಟ,ಜ) (12) ದೇಕಾರಂಬಂಗೆಯ್ವು (ಕ,ಟ,ಳ) (13) ಬೇಡಿದಂ (ಚ) (14) ದೆಂದರ್ (ಕ, ಟ, ಜ) (15) ಕಿಚ್ಚಂ ಗೆಂಟುಮಾಡುವಂತರ್ಥಮಂ (ಕ,ಜ,ಳ) (16) ಮೆಲ್ಲ (ಖ)

ಚಂ|| ಮನಸಿಜನೆಂಬ ಬೇಡರಸನೀ ಖಳಸಂಸೃತಿಯೆಂಬುದೊಂದು ಕಾ |
ಪಿನೊಳಬಳಾಂಗಮೆಂಬುಲಿಯೊಳಿರ್ದಖಿಳೇಂದ್ರಿಯಮೆಂಬ ಬೇಡರಿಂ ||
ಮನದಲಲೆಂಬ [1]ಕಿರ್ಚನಿಡಿಸುತ್ತುಮೆ ಪಾರ್ದಿಸುವಾಗಳೀ ಜಗ |
ಜ್ಜನತತಿಯೆಂಬ ಬೆಳ್ಕಿಗ[2]ಮವೇಂ ಗಲಿ ಸಾಯದೆ ಪೋಗಲಾರ್ಕುಮೇ ॥ ೧೮ ॥

ವ|| ಕಿರಾತರಾಜನ [3]ಬೇಂಟೆಯ ಕೆಯ್ಯೊಳಗಾದ [4]ಬೆಳ್ಕಿಗಮುಂ, ಕಾಮ[5]ದೇವನ ಬಸ
ಮಾದ ಮಾನಸ[6]ರು ಮಾತನ ಮೊನೆಯಂ[7]ಬು ತಾಂಗೆಯುಮಿಾತನ ನನೆಯಂಬು ತಾಂಗೆಯುಂ
ಸತ್ತುವು ಕೆಟ್ಟರೆಂಬುದೇವಿರಿದು ? — ಅದೇಕೆ ಮೋಹಿಸುತಿರ್ಪೆ ? ಮೋಹಾಗ್ನಿಯಳವಮಿನ್ನು
ಮಱಿಯಾ !

ಕಂ|| ಪೆರ್ಚು[8]ವುದು ಪುಳ್ಕಿಯಿಂದಂ |
ಬರ್ಚುವುದದು ಕುಂದೆ ಕಿರ್ಚು ಮೋಹಾಗ್ನಿ ಕರಂ ||
ಪೆಚ್ಚ್ವುದರ್ಥಂ ಬರೆಯುಂ |
ಪೆಚ್ಚ್ವುದದು ಬಾರದಿರೆಯುವೇಂ ವಿಸ್ಮಯಮೋ ॥ ೧೯ ॥

ವ|| ಕಿರ್ಚಿಂಗಂ ಮೋಹಾಗ್ನಿಗಮಾವು[9]ದಂತರಮೆಂಬೆಯಾ ! ಕಿರ್ಚು ಪುಳ್ಕಿಯುಳ್ಳಾಗಳ್
[10]ಪೆರ್ಚುವುದು, ಅದು ಇಲ್ಲದೊಡೆ [11]ಕುಂದುವುದು. ಮೋಹಾಗ್ನಿ [12]ಧನಮುಳ್ಳೊಡಂ
ಪೆರ್ಚುವುದದಿಲ್ಲದೊಡಂ ಪೆರ್ಚುವುದೆಂದತಿಮೋಹಮಂ ಬಿಸುಟ್ಟುದಾರಶಕ್ತಿಯೊಳ್ ನೆಗಲ್ವ ವಸ್ತು
ಪುರುಷರಿಂ ವಸ್ತುಗ[13]ಳೇ ನಗ್ಗಳಮೆ ?—

ಮ|| ಪ್ರಿಯದೊಳ್ ಕೂಡಿದ ದಾಸಿಯಿಂ ಮಿಗಿಲೆ ಪೇಱ್ದ್ ಕಲ್ಪಾಂಘ್ರಿಪಂ ಚಂದನಂ |
ದಯೆಯಿಂ ತಣ್ಣಿತೆ ತಕ್ಕನಿಂದಮೃತಮೇಂ ಲೇಸೇ ವಿಷಂ ದುಷ್ಟನಾ ॥
ಶಯದಿಂ [14]ದುರ್ಗಮೆ ಬೇಡಿ ಬಾಲ್ವ ನರನಿಂ ಪುಲ್ ನೊಚ್ಚಿತೇ ಮಾನುಷ |
ಕ್ರಿಯೆಯಿಂದಪ್ಪ ಮಹೇಂದ್ರ ಜಾಲ[15]ಮದುವೀ ಸಂಸಾರದಿಂ ಚೋದ್ಯಮೋ ? ॥ ೨೦ ॥

ವ|| ಈವಸ್ತು ವಿಂದಂ ಮಾಡುಗು ಮಿಾವಸ್ತುವಿಂದಂ ಕೆಡಿಸುಗು[16]ಮೆಂದೆರಡರಂತರಮ
ನಱಿದು ನೆಗಲ್ವುದು[17] ಕೆಮ್ಮನಿರವೇಡಾ !

---

(1) ಕಿಚ್ಚನಿಡಿಸುತ್ತಿರೆಪೊರ್ದಿದಾಗಳೀ (ಕ) ಕಿಚ್ಚನದಿಪುತ್ತಿರದಾರ್ದಿಸುವಾತನಿಂ (ಚ) ರ್ದಿಸುವಾರನೀಂ(ಟ) ನಿಡಿಸುತ್ತಿರದಾರ್ದಿಸುವಾತನಿಂ (ಖ) ಪೋರ್ದಿಸುವಾಗ (ಗ) (2) ಮದಿಂಗಳ (ಕ,ಜ) (3) ಬೇಂಟೆಯೊಳ(ಕ,ಜ) ಬೇಂಟೆಗೊಳ (ಳ) (4) ಬೆಳುಮೃಗಕ್ಕಂ·(ಕ, ಜ) ಬೆಳ್ಕಿಗಕ್ಕ (ಟ) (5) ರಾಜನ (ಚ,ಳ) (6) ಸರ್ಗಮಾ (7) ಯಂಬು ಮಿಾತನ ನನೆಯಂಬುಕೊಳ್ಳದೇಕಿರ್ಪುವಾಸರಲ್ಯೊಳೆ ಸತ್ತರೀಸರಲ್ ಕೊಳೆ ಕೆಟ್ಟರೆಂಬುದೇಂಚೋದ್ಯಮೇಕೆಮೋಹಿಸುತಿರ್ಪ ಮೋಹಾಗ್ನಿಯನರಿಯಿರಾ (ಕ) ಯಂಬುಕೊಳೆಸತ್ತುವಾಮೃಗಂಗಳೀತನನನೆಯಂಬು ಕೊಳೆ ಕೆಟ್ಟರಿಂತೀ ಜನಂಗಳೆಂಬುದೇವಿರಿದೇಕೆ ಮೋಹಿಸುತಿರ್ಪ ಮೋಹಾಗ್ನಿಯಳವನಱಿಯದೆ (ಳ,ಚ) ಮೋಹಾಗ್ನಿಯಳವನರಿಯಿರೇ (ಚ) (8) ಪೆರ್ಚುದು (ಚ, ಳ) ಬೆಱ್ಚುದದು (ಳ) (9) ದಂತರಂ (ಚ, ಳ) (10) ಪೊರ್ಚುದು (11) ಕುಂಮೊದು (ಚ) (12) ಕಸವರಮುಳ್ಳೊ (ಚ) ಧನಮುಳ್ಳೊಡಮಿಲ್ಲದೊಡಂ (ಕ,ಜ) (13) ಗಳಗ್ಗಮೇ ? (ಕ,ಳ,ಜ) ಗಳಿನಗ್ಗಳಮೇ (ಖ) (14) ದುರ್ಗಮೆ (ಟ) (15) ಮಿದುವೀ (ಚ) (16) ಮೆಂದವರಂತರಮ (ಕ) ಮೆಂರೆಡಂತರವ (ಳ) ಮೊದಱಿದವಱಿತರವರೆಂನೆಗ (ಖ) (17) ನೀನಿಂತಿರ ವೇಡಾ (ಳ) ಮ್ಮನೆನೀನಿಂತು (ಖ)

ಕಂ|| ಏಕಱಿನನುಱಿದೆ ನೆಗಲ್ಪ್ಪ ಪೆ ।
ಯೇಕೆಱಗುವೆಯಱಸುಖಕ್ಕೆ ಶಾಶ್ವತನಿರ್ಪಂ ॥
ತೇಕೆ ಬೆಸೆದಿರ್ಪೆಯಾರುಮ ।
ನೇಕಲಲಿಪೆ ಯೇಕೆ [1]ನಂಬುವಯ್ ಸಂಸೃತಿಯಂ ॥ ೨೧ ॥

ವ|| [2]ಠಕ್ಕನಂ ನಂಬಿ ಒಟ್ಟಿವೋಪೊಡಂ ಸಂಸಾರಮಂ ನಂಬಿ ಮುಚ್ಚಿ[3]ದಂತೆ ಪಾಪದೊಳ್ ನೆಗಲಿಪ್ಪೊಡಮಾತಂಗಮಿಾತಂಗಮೊಳ್ಳಿತ್ತಾಗದೆಂದೆ [4]ಬಗೆದೊಳ್ಗುಣಂಗಳನೆ [5]ಕೆಯ್ಕೊಂಡು ನೆಗಲ್ವುದಿಂ [6]ಭ್ರಾಂತಿಸಲ್ವೇಡಾ !—

ಚಂ|| ಆಱಿಯಮೆಯಾಯ್ತು ಕೂಸುತನದೊಳ್ ಪೊಸಜವ್ವನದಲ್ಲಿ ಪೆಂಡಿರ ।
ತ್ತೈಱಗುವುದಾಯ್ತು ಮಧ್ಯಮದೊಳರ್ಥಮನಾರ್ಜಿಪುದಾಯ್ತು ಮುಪ್ಪಿನೊಳ್ ॥
ನೆಱಿಯದ ಶಕ್ತಿಯಾಯ್ತು ಮನುಜತ್ವದೊಳೆಲ್ಲಿಯು[7]ಮೊಳ್ಳಿತಪ್ಪುದೊಂ ।
ಪಱಿಕೆಯನಪ್ಪುಕೆಯ್ಯಲೆಡೆಯಿ[8]ಲ್ಲಿಮಗೆಂದೊಡೆ ಕೆಟ್ಟು ಪೋಗರೇ ? ॥ ೨೨ ॥

ವ|| ಸಮುದ್ರದೊಳ್ [9]ಮಿಾಯಲೆಂದು ಪೋಪಾತಂ ತೆರೆಯಡಂಗಿದಾಗಳ್ [10]ಮಿಾವೆನೆಂದಿರ್ದೊಡಂ, ಸಂಸಾರ[11]ದೊಳಗಿರ್ದಾತ ನಾಪತ್ತಿಲ್ಲದೆ [12]ಪದುಳಮಾಗಿರ್ದಾಗಳ್ ಧರ್ಮಂಗೆಯ್ವೆನೆಂದಿರ್ದೊಡಂ, ಆತಂಗೆ [13]ಮಿಾವುದಿಲ್ಲಮಿಾತಃಗೆ ಧರ್ಮಂ[14]ಗೆಯ್ವುದಿಲ್ಲಂ. ತಡೆದಿರ್ಪಂತು [15]ಸಂಸಾರಮೇಕಸ್ಥಿತಿಯೇ ?

ಕಂ|| ಕಡು[16]ಗೆಳೆಯನೊಂದು ಭವದೊಳ್ ।
ಕಡುವಗೆ[17]ವಂ ತಾನೆಯಾಗಿ ಕೊಲಲೆಂದಿರ್ಕುಂ ॥
ಕಡು ಚೆಲ್ವನುಮೊಂದೆಡೆಯೊಳ್ ।
ಕಡುಕಿಸುಗುಳನಾಗಿ ಪುಟ್ಟುಗುಂ ಸಂಸೃತಿಯೊಲ್ ॥ ೨೩ ॥

ವ|| [18]ಅಂತುಮಲ್ಲದೆಯುಂ—

---

(1) ನಂಬುವೈ (ಜ) ನಂಬಿದೊ (ಕ, ಳ, ಜ, ಟ) (2) ರಕ್ಕಸನ ನಂಬಿದೊಡವಟ್ಟಿವೋಪೊಡಂ (ಚ,ಳ) (3) ದಂತೆನೆಗ (ಕ,ಚ,ಟ) (4) ಬಗೆದಱಿದೊಳ್ಗುಣಂ (ಚ,ಳ) (5) ಕೊಂಡು (ಟ) ಕೆಯ್ಕೊಳ್ವುದು (ಚ, ಳ) (6) ಭ್ರಾಂತುವೇಡಾ (ಕ, ಜ) (7) ಮೊಳ್ಳಿತ ಕೆಯ್ಯದೊಂದರಿತಮ (ಚ) ಳಿತಮಪ್ಪುದೊಂದಱಿತಮ (ಳ) (8) ಯಿಲ್ಲೆನಗೆ (ಳ, ಟ) ಯಿಲ್ಲೆನಲೆಂದೊ (ಕ, ಜ) (9) ಮಿಾಯಲುಪೋ (ಕ) ಪೋಪಾತಂ (ಳ) (10) ಮಿಾಯಲೆಂ (ಕ,ಜ) (11) ದೊಳಗಾತನಾಪತ್ತಿನೊಳಲ್ಲದೆ (ಚ) (12) ಸುಖಮಿರ್ದಂದು (ಕ, ಜ, ಟ) (13) ಮಿಾರುವುದು (ಕ) ಮಿಾಱುದುಮಿಾ (ಜ) (14) ಗೆಯ್ವುದುಮಿಲ್ಲದೆ ಪೋಕುತಡೆದಿರ್ಪುದೆಂತು (ಕ, ಜ) (15) ಸಂಸಾರದಂದಮೇ (ಕ,ಚ) (16) ಕೆಳೆಯ (ಕ, ಜ) (17) ನಗೆಯಂ (ಳ) (18) ಮಗನಕ್ಕು—ಎಂಬ ೨೫ ನೆಯ ಕಂದ ಇಲ್ಲಿದೆ (ಱ,ಳ)

ಉ॥ ನಾರಕನಪ್ಪುದೊಂದೆಡೆಯೊಳೊಂದೆಡೆಯೊಳ್ ಕೃತಪುಣ್ಯಬಂಧದಿಂ |
ಚಾರುಗುಣಾಮರಾಧಿಪತಿಯಪ್ಪುದು ದೇಸಿಗನಪ್ಪುದೊಂದು ಸೂಲ್ |
ಧಾರಿಣಿಗೀಶ[1]ನಪ್ಪುದಿರದೊಂದೆಡೆಯೊಳ್ ಮಗುಲಕ್ಕೊರ್ಮೆ ಕರ್ಮದಿಂ |
ಕಾರುಕನಪ್ಪುದೊಂದೆಡೆಯೊಳುತ್ತಮ[2]ಜಾತಿಯುಮಾಗಿ ಪುಟ್ಟುಗುಂ ॥ ೨೪ ॥

[3]ವ॥ ಅಂತಾಗಿಯುಂ—

ಕಂ॥ ಮಗನಕ್ಕುವೊಂದು ಭವದೊಳ್ |
ಮಗ[4]ನುಂ ಬಟ್ಟಕೊರ್ಮೆ ತಂದೆಯಕ್ಕುಂ ಮತ್ತಂ ॥
ಮಗನಕ್ಕುಮೊರ್ಮೆ ಮಗಳುಂ |
ಮಗುಟ್ಟಿ ಭವಾಂತರದೊಳೊರ್ಮೆ ಪೆಂಡತಿಯಕ್ಕುಂ ॥ ೨೫ ॥

ವ॥ ಇಂತಪ್ಪವಸ್ಥಾಂತರದೊಳ್ ನಿಲ್ಲದೆ ಮತ್ತಂ—

ಚಂ॥ ಮದಕರಿಯಪ್ಪುದೊಂದೆಡೆಯೊಳೊಂದೆಡೆಯೊಳ್ ನರಿಯಪ್ಪುದೊಂದು ಜ |
ನ್ಮ[5]ದೊಳಲಿನಾಯುಮಪ್ಪುದಿರದೊಂದೆಡೆಯೊಳ್ ಮೃಗರಾಜರೂಪನ ॥
ಪ್ಪುದು ತೃಣಮಪ್ಪುದೊಂದೆಡೆಯೊಳೊಂದೆಡೆಯೊಳ್ ಕ್ರಿ[6]ಮಿಯಪ್ಪುದಿಂತು ಪಾ |
ಪದ ಫಲದಿಂ ತೊಳಲ್ತ[7]ರುತುಮಿರ್ಪುದು ಜೀವನನೇಕರೂಪದಿಂ ॥ ೨೬ ॥

ವ॥ ಮತ್ತ[8]ಮೆಂತುಂ ಮಾಣದೆಯುಂ—

ಕಂ॥ ಒಂದೆಡೆಯೊಳ್ ಮರುಳಾಗಿಯು[9] |
ಮೊಂದೆಡೆಯೊಳ್ [10]ಬುದ್ಧಿಗೊಡೆಯನಾಗಿಯು ಮಿರದೋ[11] ॥
ರೊಂದೆಡೆಯೊಳ್ ಕಲಿಯಾಗಿಯು |
ಮೊಂದೆಡೆಯೊಳ್ ಪಂದಿ[12]ಯಾಗಿಯುಂ ತಿರಿತಕ್ಕುಂ ॥ ೨೭ ॥

ವ॥ ಇಂತು ಭವಾಂತರದೊ[13]ಳೆಂತಪ್ಪವರುಮೆಂತಾಗ[14]ರೊಂದೇಭವದೊಳ್ ವಿಪರೀತ ಸಂಬಂಧಮಾದ ಕತೆಯಂ ಪೇೞ್ವೆನದೆಂತೆನೆ—

---

(1) ನಪ್ಪುದಧೊಂದೆಡೆ (ಕ,ಜ) (2) ಜಾತಿಯಾಗಿ (ಕ,ಜ,ಳ) ಜಾತಿಯೆಯಾಗಿ (ಶ) ಜಾತಿಯಮಾಗಿ (ಟ) (3) ಇಲ್ಲ ಇಂತವ ಸ್ಥಾಂತರದೊಳಿಲ್ಲದೆ–ಎಂಬ ಮುಂದಣವಾಕ್ಯವಿದೆ(ಚ)ಅಂತಾಗಿಯುಮಿರೆ(ಳ) (4) ಮಗನೆ ಬಟ್ಟಕ್ಕೊರ್ಮೆ (ಕ,ಜ,ಳ) (5) ನ್ಮದನಳಿನಾ (ಳ) ನ್ಮದನಳಿನಾಯಿಯ (ಖ) (6) ನರಿ(ಖ) (7) ಲ್ತ ರುತಿರ್ಪುದು(ಳ) (8) ಮಂತುಂ (ಕ,ಜ) (9) ಯು ದೊಂದೆಡೆ (ಳ) (10) ಳ್‌ಪುಟ್ಟಿ (ಖ) (11) ನಿಂತೆಂದೊಡೆ (ಕ, ಜ, ಳ) (12) ಯಾಗಿಯುಂದರಿತಕ್ಕುಂ (ಕ,ಟ) ತಿರಿತರುತಿಕ್ಕುಂ (ಜ) (13) ದೊಳುಳಿಂತಪ್ಪ (ಕ,ಜ) (14) ರೆಂದೊಡೆ ಭವದೊಳ್ವಿಪರೀತಮಾದ ಸಂಬಂಧ ಕಥೆಯಂ (ಟ) ವಿಪರೀತಸಂಬಂಧರಾದರ ಕಥೆ (ಳ)

— ನಿದರ್ಶನ ಕತೆ —

[ವಸಂತತಿಲಕೆಯೆಂಬ ವೇಶ್ಯೆಯ ಕತೆ]

ಕಂ॥ ಅಲಘುತರವಸ್ತುವಿಸ್ತೃತ ।
ಮಲಂಘ್ಯ[1] ಮುಜ್ಜೈನಿಯೆಂಬ ಪೊಲಲಾ ಪೊಲಲೊಳ್ ॥
ವಿಲಸಚ್ಛ್ರೀಯುತ ಗಣಿಕಾ ॥
ಕುಲತಿಲಕೆ ವಸಂತತಿಲಕೆಯೆಂಬಳ್ ಪೆಸರಿಂ ॥ ೨೮ ॥

ವ॥ ಆಕೆಗೆ [2]ನವಯೌವನದ ಭಾಗ್ಯದ ಗರ್ವದ ಮೇಲೆ ಗರ್ಭಮಾದಾಗಳಾಗರ್ಭದೊಳ್ ಗರ್ವಂ[3]ಗೆಟ್ಟು ಬಡಪಟ್ಟು ಕಂದಿ ಕುಂದಿ ಕೆಱಂಕುಂ ತುಱುಯುಮಾಗೆ, ವಿಳಾಸಂ ಪೋಗೆ [4]ಮೆಯ್ ಪೊಲಸು ನಾಱಿ[3], [5]ಸೊಬಗು ಪಾಱಿ[3] ಕಂಡರ್ ಪೇಸುವಂತಾದೊಡೀ [6]ಬಸಿಱ ಕೂಸೆನ್ನ ಪಗೆ [7]ಯಕ್ಕುಮಾದೊಡಮೇಂ? [8]ಎಂದಿರ್ದು ನವಮಾಸಂ ನೆಱಿದು ಗಂಡುಪೆಣ್ಣುಮಪ್ಪಮಳ್ಗಳಂ [9]ಪಡೆದು ಪೆತ್ತಾಗಳಿರ್ವರ್ ತೊಱ್ತರಂ ಕರೆದು "ನೀಮಿರ್ಬರು ಮಾಯೆರಡು ಕೂಸುಗಳು[10] ಮಂ ಈ ಪೊಲಲೊಳೆರಡುಂ ದೆಸೆಯೊಳಮಾಡಾಡಿ ಬನ್ನಿ" ಮೆಂದೊಡ[11] ವಂದಿರಂತೆ ಗೆಯ್ವಮೆಂದು ಕೊಂಡು ಪೋಗಿ ಪೊಲಲ ಪೊಱಗೆ ಮೂಡಣದೆಸೆಯೊಳೊಂದಂ ಪಡುವಣದೆಸೆಯೊಳೊಂದಂ ಬಿಸುಟ್ಟು ಬಂದರನ್ನೆಗಂ—

ಉ॥ ತೆಂಕಣಿನಾ ಪುರಕ್ಕೆ ಪರದರ್ ನರದೇವಕುಬೇರಕಾಂತನಾ ।
ಮಾಂಕಿತ[12]ರಱ್ತಿಯಿಂ ಪರದುವಂದು [13]ಮಹಾಧನರಾಗಿ ಮತ್ತೆಯುಂ ॥
ತೆಂಕಲಿ ಪೋಗಲಿರ್ದರುಮೆರಱ[3]ದೆಸೆಯೊಳ್ ಪೊಱವೀಡುವಿಟ್ಟು ತ ।
ಮ್ಮಂ ಕರಮಾಸೆವಟ್ಟೊಡನೆ ಬ[14]ರ್ಪರುಮಿರ್ಪಿನಮಿರ್ದರಿ[15]ರ್ಪಿನಂ ॥ ೨೯ ॥

ವ ॥ ಅಂತಿರ್ದು ಮೂಡಣದೆಸೆಯೊಳ್ ಬಿಟ್ಟರ್ದ [16]ಕುಬೇರಕಾಂತನ ತೊಱ್ತರತ್ತಿತ್ತ ಪೋಪವಂದಿರೊಂದು ಗಿಡುವಿನಡಿಯೊಳ್ ಪೆಣ್ಗೂಸಂ ಕಂಡು ಎತ್ತಿಕೊಂಡು ಪೋಗಿ ತಮ್ಮ ಸೆಟ್ಟಗೆ ತೋಱುದೊಡೆ ಅಱ್ತಿಯೊಳೆತ್ತಿಕೊಂಡು ತಾಂ ಕಮಳೆಯೆಂದು ಪೆಸರಿಟ್ಟು ಕೂಸಂ ನಡೆಪುತ್ತುಂ ಪಯಣಂ[17] ಬೋದಂ — ಪಡುವಣದೆಸೆಯೊಳ್

---

(1) ಮುಜ್ಜೈನಿ (ಟ) (2) ಸೌಭಾಗ್ಯದ ಜವ್ವನದ(ಕ) (3) ಗೆಟ್ಟುಕಂದಿ (ಕ,ಜ) ಗೆಟ್ಟುಕಂದಿಕುಂದಿರೆ(ಳ) (4) ಮೆಯ್ಯೆಲ್ಲಂ ದುರ್ಗಂಧಂನಾಱಿ (ಕ,ಜ,ಟ) (5) ಶೋಭೆ (ಳ) (6) ಬಸುರ (ಳ) (7) ಯಾಗಲಿವೇಱ್ಕುಂ (ಜ) (8) ಎಂದಿರ್ದು ಗಂಡುಪೆಣ್ಣು (ಕ,ಜ) (9) ಪೆತ್ತು ಇರ್ವರ್ ತೊಱ್ತರಂ (ಕ,ಜ) (10) ಱುಮನೆಮ್ಮೂರೆರಡುಂ ದೆಸೆಯೊಳಂ (ಕ,ಜ,ಳ) (11) ವಂದಿರದ (ವ) ನೆತ್ತಿ (ಕ,ಜ) (12) ರತ್ನಿ (ಕ, ಜ, ಳ) ರತ್ತಿ (ಜ) (13) ಮನೋಮುದರಾಗಿ (ಕ,ಜ,ಳ) (14) ಬರ್ಪರುಬರ್ಪಿನ (ಕ,ಜ,ಳ) (16) ನರದೇವನಮನೆಯ ತೊಱ್ತರುಮತ್ತಿತ್ತ ಸುಱುಯುತ್ತುಮಾಗಂಡುಗೂಸಂ ಕಂಡೆತ್ತಿಕೊಂಡು ಪೋಗಿ ತನ್ನ ಸೆಟ್ಟತಿಗೆ ಕೊಟ್ಟೊಡೆ ಧನದೇವನೆಂದು (ಕ, ಜ) ನರದೇವನಸೂಳೆಯರ್ ಸುಱುಯುತ್ತುಮಾಗಂಡುಗೂಡಂ (ಳ) (17) ಬೋದರ್ ಪಡುವಣ ದೆಸೆಯೊಳ್ ಬಿಟ್ಟರ್ದ (ಜ)

ಬಿ[1]ಟ್ಟರ್ದ ನ[2]ರದೇವನ ಮನೆಯ ದಾಸಿಯೊರ್ವಳಾಗಂಡು ಗೂಸಂ ಕಂಡೆತ್ತಿಕೊಂಡು ಪೋಗಿ ತಮ್ಮ ಸೆಟ್ಟಗೆ ತಂದು ತೋಱುದೊ[3]ಡಲ್ತ್ತಯಿಂ ಕೊಂಡು ಧನದೇವನೆಂದು ಪೆಸರನಿಟ್ಟು ನಡೆಪುತ್ತುಂ ಪಯಣಂಬೋ[4]ಗಿ ದಕ್ಷಿಣ ಮಧುರೆಗೆ ಬಂದು ಸುಖಮಿರ್ದಂ. [5]ಆಕುಬೇರಕಾಂತನುಂ ಪಲವು ದಿವಸದಿಂದಾ ಪೋಱಲ್ಗೆ ವಂದು ಕೆಲವಾ[6]ನುಂ ದಿವಸದಿಂ ನರದೇವಂ ತನ್ನ ಮಗನಪ್ಪ ಧನದೇವಂ ಯೌವನನಾದೊಡಾತಂಗೆ—

ಕಂ॥ ಅನುಪಮಕುಬೇರಕಾಂತನ।
ತನೂಜ[7]ಯಂ ಕಮಳೆಯೆಂಬಳಂ ಬೇಡಿ ಕರಂ॥
ಮನಮೊಸೆದು ಮಾಡಿ ಮದುವೆಯ।
[8]ನನುನಯದಿನವರ್ಗೆ ಬೇಱು[3] ಮೊದಲಂ [9]ಕೊಟ್ಟಂ ॥ ೩೦ ॥

ವ॥ [10]ಅಂತು ಕೊಟ್ಟು ಬೇಱೊಂದು ಮನೆಯೊಳಗಿರಿಸಿ ತಾಂ ಜಲಯಾತ್ರೆಗೆ [11]ಪೋದಂ. ಇತ್ತಲ್ ಧನದೇವಂ ಕಮಳೆಯೊಡ[12]ನತಿ ಸ್ನೇಹಿತನಾಗಿ ಪುದುವಾಱುತ್ತು ಮಿರ್ದೊಂದು ದಿವಸಂ ಇಂತೆಂದು ಬಗೆದಂ— "ಎನ್ಮಯ್ಯನಿತ್ತುದನಾನೆನಿತುಕಾಲಮನುಭವಿಸುವೆಂ, ಆನುಂ ಪರದು [13]ಪೋದಪೆಂ" ಎಂದು ಆಕೆಯಂ ಪೆಱಗಿರಿಸಿ ಬಡಗಲ್ ಮಾ[14]ಱುವಂತಪ್ಪ ಬಂಡಮಂ ಕೊಂಡುತ್ತರಾಪಥಕ್ಕೆ ವಂದಂತೆ ತೊಳಲುತ್ತುಂ ಬಂದುಜ್ಜೈನಿಯಂ ಪೊಕ್ಕು ತನ್ನ ತಂದ [15]ಬಂಡಮುಂ ಮಾಱು ಪಿರಿದುಂ ಲಾಭಂಬಡೆದು ಮನದ ಪೆರ್ಚ್ಚಿನೊಳಲ್ಲಿಯ ಸೂಲಿಗೇರಿಯಂ ಪೊಕ್ಕು ನಾಡೆ ನೋಡಿ ಮುನ್ನಿನಂತು ವಿಳಾಸಂ ಬೆರಸಿರ್ದ ವಸಂತತಿಳಕೆಯಿಂ ಕಂಡೊತ್ತೆ [16]ಗೊಟ್ಟು ನಿಂ[17]ದು ವಲ್ಲಭನಾಗಿ ಪತ್ತಿ ಪತ್ತುವಿಡದೆ [18]ಮಚ್ಚಿರ್ದನನ್ನೆಗಂ—

ಕಂ॥ ಇತ್ತಲ್ ಕಮಳೆಯ ಗೃಹಕ।
ತ್ಯುತ್ತಮಮುನಿ ಚರಿಗೆ [19]ವಂದೊಡಾದರದಿಂದಾ ॥
ವೃತ್ತಕುಚೆ ನಿಲಿಸಿದಾಗಳು।
ದಾತ್ತಾವಧಿಬೋಧರಱುದರಾಕೆಯ ತೆಱನಂ ॥ ೩೧ ॥

ವ॥ ಅಱುದು [20]ನಿಲಲೊಲ್ಲದೆ ಮಗುಟ್ಟು ಪೋದೊಡೆ ಕಮಳೆ ಸಿಗ್ಗಾಗಿ [21]ತನ್ನ ದೇಹಾರ ದೊಳಿರ್ದ ಕಂತಿಯಂ ಬೆಸಗೊಂಡೊಡೆ, "ಬಾ! ನಾಮುಮವರನೆ ಪೋಗಿ ಬೆಸಗೊಳ್ವ"ಮೆಂದೊಡ

---

(1) ಪಟ್ಟರ್ದ (ಕ,ಜ) (2) ಕುಬೇರಕಾಂತನ ಮನೆಯ ತೊಟ್ಟು ರತ್ತತ್ತ ಪೋಗುತ್ತೊಂದು ಗಿಡುವಿನಡಿಯೊಳ್ ಪೆಣ್ಗೂಸಂಕಂಡೆತ್ತಿಕೊಂಡು (ಕ, ಜ) (3) ಡತ್ಥಿಯಿಂ (ಕ, ಜ, ಚ,) (4) ಬಂದು ದಕ್ಷಿಣಮಧುರೆಯನೆಯ್ದಿ (ಕ,ಜ,ಟ) (5) ಆನರದೇವನುಂ (ಕ,ಜ) (6) ವುದಿವಸದಿಂ ತನ್ನಮಗಂ(ಕ,ಜ) (7) ಜೆಯೆಂಬಳಂ ಕಮಳೆಯಂ ಬೇಡಿಕರಂ (ಚ) (8) ನನುರಾಗಡಿ (ಕ,ಜ,ಛ,ಟ) (9) ಕೊಟ್ಟರ್ (ಛ) (10) ಕೊಟ್ಟುಬೇರೆಮನೆಯೊಳೆ (ಕ,ಜ) (11) ಪೋದೊಡೆ ಧನದೇವಂ (ಕ,ಜ,ಛ,ಟ) (12) ನತಿಹಿತನಾಗಿ ಪುದುವಾಜುತ್ತಿರ್ದೆಮ್ಮಯ್ಯನಿತ್ತುದನಾನೆಂತು (ಕ,ಜ) ಪುದುವಾಜುತ್ತಿರ್ದೊಂದು ದಿವಸಮೆಮ್ಮಯ್ಯ (ಛ) (13) ಪೋದಪೆನೆಂದು ಪರದುಗೆಯ್ವುದ್ಯೋಗದಿಂದಾಕೆ (ಟ) ದಾಕೆಯನಿರಿಸಿ (ಕ,ಜ) ಕೆಯನಲ್ಲಿರಿಸಿ (ಚ,ಛ,ಟ) (14) ಮಾಡುವ (ಕ,ಜ,ಛ) (15) ಭಂಡಂಮಾಱುಲಾಭ ಮಾದೊಡೆ ಮನಂಪೆರ್ಚಿ (ಕ,ಜ,ಛ) (16) ಯಿಟ್ಟು (ಚ) ಪಿರಿದರ್ಥಮನಿತ್ತು (ಜ) (17) ಕಡುನಲ್ಲನಾಗಿ (ಚ,ಛ) (18) ಬಾಜುತ್ತಿರ್ದನನ್ನೆಗಂ (ಕ,ಜ) ಪಲವುಕಾಲಂ ಪುದುವಾಜುತಿರ್ದರಿ (ಚ,ಛ) (19) ನಿಂದೊ (ಕ,ಜ) ನಿಲಿಸೆ ಪೋಪುದು (ಕ,ಜ,ಟ) (20) ನಿಲ್ಲದೆ (ಕ,ಜ) (21) ಶನಗಿಷ್ಟೆಯರಪ್ಪ ಕಂತಿ (ಕ,ಜ) ತಲೆಯಂಬಾಗಿ ತನಗಿಷ್ಟೆ (ಟ)

ಗೊಂಡು ಪೋಗಿ ಭಟ್ಟಾರಕರಂ ಬಂದಿಸಿ ಮುಂದೆ ಕುಳ್ಳಿ[1]ರ್ದು ಭಟ್ಟಾರಾ ! ನಿಮ್ಮಡಿಯನಿಂ[2]ದು ಕಮಳೆ ನಿಱಿಸಿದೊಡೀಕೆ ನಿಂದಿರಿ[3]ಲ್ಲಿದನಮೋಘಂ ಬೆಸಸಿಮೆಂದೊಡೆ ಭಟ್ಟಾರಕರೆಂದರ್— ಈ[4]ಯಬ್ಬೆಯುಮಿಾಯಬ್ಬೆಯಾಣ್ಮನುಮೊಡ[5]ವುಟ್ಟಿದರ್. ಅಂತಾಗಿಯುಮಿಾಗಳಾತಂ[6]ಪೋಗಿ ಯುಜ್ಜೀನಿಯೊಳ್ ತಮ್ಮಬ್ಬೆಯಪ್ಪ ವಸಂತತಿಳಕೆಯೊಳಱಿಯದೆ ಪುದು[7]ವಾಲುತ್ತಿರ್ಪಂ. ಇಂತು ಟವರ ಪಾಪದ ಫಲಮೆಂದಱಿದು ನಿಂ[8]ದೆನಿಲ್ಲೆಂದು ತತ್ಪಪಂಚಮೆಲ್ಲಮಂ ತಿಳಿಯೆ ಪೇೞ್ದೊಡೆ ಕಮಳೆ[9] ಬೆಱಗಾಗಿ ನಿರ್ವೇಗದಿಂದ ಮಾಗಳಂತೆ ತೊಱಿ[10]ವೆ[10]ನೆಂದೊಡೀಗಳ್ ಬೇಡ, ನೀನುಮದಂ ಕರಂ ಕಂಡು ನಂಬಿದಿಂಬಱಿಯಂ ನಿಮ್ಮ ಬಗೆದುದಂ [11]ಬಗೆಯಿಮಿನೆ [12]ಯಾಮಾತಿಂಗೊಡಂ ಬಟ್ಟು ಮನೆಗೆವಂ[13]ದು—

ಚಂ॥ ತಲೆಗಿ[14]ರಿ(ಱು)ದುಟ್ಟು ಕಾಸೆಯನೊಡಲ್ ಕುಸಿವಂತಿರೆ ನೊಂ[15]ದು ಚಿತ್ತದೊಳ್ |
ಚಲಮನೊಡರ್ಚಿ ನೆಟ್ಟನೆನಗೆಯ್ದಿದ ಪಾಪಮುಮಂ ಪ್ರಣೂತ ನಿ ||
ರ್ಮಲಮುನಿವಾಕ್ಯದಂದಮುಮನಾರಯದಿಂ[16] ತಿರಲಾಗದೆಂದು [17]ಪೋ |
ಗಲೆ ಸಮಕಟ್ಟ ಕಟ್ಟ ಮಣಿಯಂ ಗೊರವಬ್ಬೆಯ ವೇಷದೋಜೆಯ(ಯಿ)ಂ ॥ ೩೨ ॥

ವ॥ ಕೆ[18]ಯ್ಕೊಂಡು ಸೆಜ್ಜೆಯಂ ಪಿಡಿದು ಪೊಱಲಂ ಪೊಱಮಟ್ಟು ಕೆಲವಾನುಂ ದೆವಸದಿಂ ದುಜ್ಜೀ[19]ನಿಯನೆಯ್ದೆವಂದು ವಸಂತತಿಲಕೆಯರಮನೆಯಂ ಬೆಸಗೊಂಡು [20]ಪೋಗಿ ಮನೆಯಂ ಪೊಕ್ಕು ನೋಟ್ಪಾಗಳಾ ವಸಂತತಿಳಕೆಯುಂ ಧನದೇವನುಮೊಂದೆ ಮಂಚದೊಳ್ ಕುಳ್ಳಿ[21]ರ್ದು "ಎಲೆ ಗೊರವಬ್ಬಾ ! ಯೆಲ್ಲಿರ್ದು ಬಂದಿರಿ" ಎಂದೊಡೆ "ದೇಶಾಂತರದಿಂ ತೀರ್ಥಯಾತ್ರೆಗೆ ವಂದಿಲ್ಲಿ ನಿಮ್ಮ ಶ್ರೀಯ ಪೆಂಪಂ ಕೇೞ್ದಲ್ತಾಯಿಂ ನಿಮ್ಮಂ ನೋಡಲ್ ಬಂದೆಂ" ಎಂದೊಡೆ "ಬನ್ನಿಂ ಕುಳ್ಳಿರಿ"ಮೆಂದು ಮಣಿಯನಿಕ್ಕಿಸೆ ಕುಳ್ಳಿರ್ದಾ ಕಮಳೆಯಂ ಧನದೇವಂ ನೋಡಿ ಚೋದ್ಯಂ ಬಟ್ಟು ತಲೆಯಂ ತೂಗಿ ಕದಪಿನೊಳ್ ಕೆಯ್ಯಿಟ್ಟು ಬಾಯಂಬಿಟ್ಟು ಬೆಱಗಾಗಿರ್ಪನ್ನೆಗಮಾ[22]ಯಿರ್ವರ್ಗಂ ಪುಟ್ಟಿರ್ದ ಗಂಡುಗೂಸನರ ಮುಂದೆ ತೊಟ್ಟಿಲೊಳ್ ಪಟ್ಟಿರ್ದಱಿತ್ತುಮಿರೆ ಕಮಳೆ ಸೈರಿಸ [23]ಲಾಱದೆಱ್ದು ನಿಂದಾ ಕೂಸಂ ತೂಗುತ್ತುಮಿಂತೆಂದು ಪಾಡಿದಳ್—

---

(1) ರ್ದುಕೈಗಳಂ ಮುಗಿದುಭಟ್ಟಾರಕಾ (ಕ) (2) ನೀಕೆನಿಲಿಸಿದೊಡೆನಿಂದಿ (ಕ,ಜ,ಟ) ನಿಮ್ಮಡಿಯೇಕೆನಿಲಿಸಿ ಪೊಡೆ (ಳ) ನಿಮ್ಮಡಿಗಳೀಕೆ ನಿಲಿಸಿ (ಜ) (3) ರಿಲ್ಲಿದಮೋ (ಕ, ಜ) (4) ಯಿಾಯಕ್ಕನುಮಿಾಯಕ್ಕನಾಣ್ಮ (ಕ,ಜ,ಟ,ಳ) (5) ವುಟ್ಟಿದರಂತಾಗಿಯುಂ (ಳ) (6) ಪೋಗಿ ತಮ್ಮಬ್ಬೆ (ಕ,ಜ,ಟ) ವಸಂತತಿಲಕೆಯಪ್ಪ ತಮ್ಮಬ್ಬೆಯೊಳಱಿಯದೆ (ಳ) (7) ವಾಜ್ಜಿಪ್ಪನಿದಿವರ (ಕ) ವಾಜ್ಜಿಪನಿದಿರವ (ಟ) (8) ನಿಂದುದಿಲ್ಲೆಂ (ಕ, ಜ) ನಿಂದೆ ಮಿಲ್ಲೆಂ (ಳ) (9) ಕೇಳ್ದು ಸಿಗ್ಗಾಗಿ ತಲೆಯಂ ಬಾಗಿ ನಿರ್ವೇಗಪರಾಯಣೆಯಾಗಿ, (ಕ, ಜ, ಟ) (10) ನೆಂದುಂ ಬಡೊಡೀ (ಚ) (11) ಬಗೆವುದೆನೆ (ಕ) (12) ಅಂತೆಗೆಯ್ವೆನೆಂದುಗುರುಗಳ (ಚ) (13) ವಂದಿರ್ದು (ಕ, ಜ) (14) ಗೆದರುಟ್ಟು (ಕ,ಚ,ಜ) (15) ನೋಂತು(ಕ,ಜ,ಚ) (16) ದಂತಿರದಂದಿರಲಾಗ(ಳ) (17) ಪೋಗನೆ(ಜ) (18) ಕೊಂಡು ಪೊಱಮಟ್ಟು ಕೆಲವಾನುಂ (ಖ) (19) ಜ್ಜಯಿನಿಗೆವಂದು (ಕ, ಟ) (20) ಪೊಕ್ಕು (ಕ,ಜ,ಟ) ಗೊಂಡುಮನೆಯಂ ಪೊಕ್ಕು (ಳ) ಗೊಂಡು ಪೋಗಿ ಪೊಕ್ಕು (ಳ, ಖ) (21) ರ್ದುದಂಕೆಂದು ದೇಶಾಂತರದಿಂ ತೀರ್ಥಯಾತ್ರಾ (ಕ,ಜ,ಟ) (22) ಮವರಿರ್ವರ್ಗಂ (ಕ,ಜ) (23) ಲಾಜದಾಕೂಸಂ (ಚ,ಜ,ಟ)

ಕಂ|| ಜೋ ನೀಂ ಮಗನೇ ತಮ್ಮನೆ ।
ಜೋ ನೀನಳಿ[1]ಯಂಮ ಮೆಯ್ದುನಾ ಕಿಱಿಯಮ್ಮಾ ॥
ಜೋ ನಿಮ್ಮ[2]ಬ್ಬೆಗೆ ವೊ[3]ಮ್ಮನೆ ।
ಜೋ ನಿಮ್ಮಮ್ಮಂಗೆ ತಮ್ಮನಪ್ಪನೆ ಜೋಜೋ ॥ ೩೩ ॥

ಉ|| ಜೋ ನಿನಗಾದ ತಾಯೆನಗೆ ತಾಯ್ವಿರುಮಕ್ಕನುಮತ್ತೆಯುಂ ದುರ ।
ಜ್ಞಾನದಿನೊಂದಿದತ್ತಿಗೆಯು ಮಾದಳಿ[4]ದಬ್ಬೆಯ ಪಾಪದೋಳಿ ಜೋ ॥
ಜೋ ನಿನಗಾದ ತಂದೆ ಯೆನಗಣ್ಣನು[5]ಮಾಣ್ಮನುಮಯ್ಯನಾದನಿಂ ।
ತಾನೆ [6]ಯುದಣ್ಣ ನಮ್ಮ ಕಡುಪಾಪದ ಬಂಧನಮಲ್ತೆ ಬಾಲಕಾ ॥ ೩೪ ॥

ವ|| ಎ[7]ಂಬುದುಂ ಕೇಳ್ದು ವಸಂತತಿಲಕೆಯುಂ ಧನದೇವನುಂ ಬೆಕ್ಕಸಮಾಗಿರ್ದಿರಲಾಱದೆ ಮಂಚದಿಂ[8]ದಿಱಿದು ಬಂದು "ಎಲೆ ಗೊರವನಬ್ಬಾ! ಪೇಱುದರ[9]ನ್ತಮದೇ" ನೆನೆ "ನಿನ್ನ ಗರ್ಭಮಾದಂದುಮೊದಲಿಂದುವರಮಾದವಸ್ಥಾಂತರಮುನೆಲ್ಲಮನೆನಗೊರ್ವರ್ ದಿವ್ಯಜ್ಞಾನಿಗಳ್ ಪೇಳಿ[3] ಕೇಳ್ದೆನಂತೆ ನಿಮ್ಮಲ್ಲಿಯುಂ ಕಂಡೆಂ. ನೀಮೆನ್ಮಬ್ಬೆ ವಸಂತತಿಳಕೆಯಯ್ [10]ಆಂ ನಿಮ್ಮ ಮಗಳ್ ಕಮಳೆಯೆಂ. ಈ ಯಿರ್ದ ಧನದೇವಂ ನಿಮ್ಮ ಮಗನೆನ್ಮುಣ್ಣಂ, ಈಗಳೆನಗಂ ನಿಮಗ ಮಾಣ್ಮನಾದಂ. ಇಂತಾಯ್ತು" [11]ನಮ್ಮ ಪಾಪದ ಫಲಮೆಂದಬ್ಬುದುಂ ಕಂಡು ತಾಮುಂ ಮತ್ತೆ ತಮ್ಮುಳ್ಳರ್ಥಮೆಲ್ಲನುಂ ದಾನಂಗೆಯ್ದು ಪೊಱಮಟ್ಟು ಬಂದು ಮುಂ ಪೇೞ್ದ ಪೊಲಲೊಳಗಿರ್ದ ದಿವ್ಯ ಜ್ಞಾನಿಗಳ್ಗೆ ಪೊಡೆವಟ್ಟು "ನಮೋಸ್ತು ಭಟ್ಟಾರಕಾ, ಬೆಸಸಿಮೆಮಗೀ ಜನ್ಮದೊಳಿಂತಾದುದಾವ ಭವದ ಪಾತಕದ ಫಲ" ಮೆನೆ ಭಟ್ಟಾರಕರಿಂತೆಂದರ್—

ಕಂ|| ಮುನ್ನಿನ ಭವದೊಳ್ ನೀಂ ವಿ ।
ಪ್ರೋನ್ನತ [12]ಚಾವೇದನಾದೆ ಯಿ[13]ವರ್ಗಳುಮಂದುಂ ॥
ನಿನ್ನ ತನಯರ್ಕಳಂಗಿ ।
ರ್ಪನ್ನೆವರಂ ಬಡಗನಾಡ ಮಧುರಾಪುರದೊಳ್ ॥ ೩೫ ॥

ವ|| ವೈಶ್ಯಕುಲಪ್ರಧಾನಂ ಜಿನದತ್ತನೆಂಬಂ ಶ್ರಾವಕಂ. ಆತಂ ತನ್ನ ಮಗಂ ತಪಂಬಟ್ಟೊಡೆ ತಾನುಂ ತಪಂಬಟ್ಟರ್ವರುಂ ತೀರ್ಥಯಾತ್ರೆಗೆ [14]ಪೋದೊಡೆ ಪಿಂದಾತನಸೆಟ್ಟಿತಿಯುಂ ಸೊಸೆಯು

(1) ಯೆಂಮ (ಳ) (2) ಬ್ಬೆಯ (ಕ,ಜ) (3) ಮ್ಮನ ಜೋನಿಮ್ಮಯ್ಯಂ (ಚ) ನಿಮ್ಮಬ್ಬೆಯ (ಕ,ಜ) ನಿಮ್ಮಯ್ಯಂಗೆ (ಳ) ನಿಮ್ಮಣ್ಣಂಗೆ (ಟ) (4) ದವ್ವೆಯ(ಳ) (5) ಯೆನಗಣ್ಣನು ಮಣ್ಣನುಮಯ್ಯನಾದನುಂ (ಳ) (6) ಯಿದೆನ್ನ ನಿನ್ನ (ಕ,ಜ) (7) ಎಂದುದಂ (ಖ) ಎಂಬುದಂ (ಳ) (8) ದೆಳ್ದುಬಂದೆಲೆ (ಚ) ದಿದೆರ್ದು (ಖ) (9) ಳಿದರಂದ ಮೇನಿನೆನಗೆ (ಕ) ಳಿದರಂದಮನೆನೆ (ಜ) ಳಿದಜಿಂದಮನೆನೆ ಪೇೞ್ದಳ್ಳಿನಗೆ (ಳ) (10) ನಿಮ್ಮ ಮಗಳಾಂಕಮಳೆಯೆನಾಂ ಯಾ ಯಿರ್ದ ಧನದೇನಂ ನಿಮ್ಮ ಮಗನೆನಗಣ್ಣಂ ನಿಮಗಮಾಣ್ಮನಾದಂ (ಕ,ಜ) ಮೆಮ್ಮ ಬ್ಬೆಗಳಿರಾಂ ಕಮಳೆಯೆನಾಂಯಾಯಿರ್ದಂ ನಿಮ್ಮರ್ಮಂ ಧನದೇವನೀಗಳೆಮಗಂನಿಮಗ ಮಾಣ್ಮನಾದ (ಜ) ನೀಮೆಮ್ಮವ್ವೆ ವಸಂತತಿಳಕೆವಿರಾಂ ಕಮಳೆಯೆ ನೀಯಿರ್ದಂ ನಿಮ್ಮ ಮಗಂ ಧನದೇವನೀಗಳೆಮಗಂನಿಮಗಮಾಣ್ಮನಾದಂ (ಳ) (11) ಯಾ ಪಾಪದಫಲಮೆಂದಬ್ಬರಂ ಕಂಡವರು ಮಬ್ಬು ತಮ್ಮುಳ್ಳುದಂ ದಾನಂಗೆಯ್ದು ಪೊಱಮಟ್ಟು ಪೊಱವೊಬಲೊಳಿರ್ದ ದಿವ್ಯಜ್ಞಾನಿಗಳಲ್ಲಿಗೆವಂದು ವಸಂತತಿಳಕೆ ಭಟಾರಾ ಬೆಸಸಿಮೆಮಗೀಜನ್ಮದೊಳಿಂತಿದಾವ ಭವದ ಪಾಪದಫಲಂ (ಕ, ಜ, ಟ) (12) ಚೌವ್ವೀರ (ಕ) ಚವುವೇದ (ಳ) (13) ಯಿರ್ವರ್ಗಂಡುಂ ಯವರ್ಗಳುಮೆಂದು (ಟ) (14) ಪೋದೊಡಾತನಸೆಟ್ಟಿತಿ ಸೊಸೆಯುಮವರ್ತಪಂ (ಕ,ಜ)

ಮಿ[1]ರ್ವರುಂ ತಪಂಬಟ್ಟೊಡಾಮೇಕರ್ಪೆವೆಂದು ಅವರುಂ ತಪಂ[2]ಬಟ್ಟು ಪೋಗಿ ವಿಹಾರಿಸುತ್ತುಂ ಒಂದೂರೊಳೊಂದು ಬಸದಿ[3]ಯಲ್ಲಿ ಯಾರ್ಯಿಕೆಯರಿರ್ವರುಮಾ ಋಷಿಯರ್ಕಳಂ ಕಂಡು ವಂದಿಸಿ ಕುಳ್ಳಿರ್ದು ತಮ್ಮ ಮಗನಪ್ಪ ಕಿತ್ತಯ್ಯಂಗಳ ಸಾರೆ ಮುತ್ತ ಕಂತಿಯರ್ ಪೋಗಿ ಕ್ಷೇಮಕುಶಲಂಗಳಂ ನುಡಿಯುತ್ತು[4] ಮಿರ್ದರ್. ಸೊಸೆಯಪ್ಪೆಳವಜ್ಜಿಗಳುಂ ಮಾವಂಗಳಪ್ಪ ಮುತ್ತ ಭಟ್ಟಾರಕರ ಸಾರೆಯಿರ್ದು ವಿನಯದಿನಾಳೋಚಿಸುತ್ತಿರೆಯುಂ, ಮುಂ ಪೇಳ್ದ [5]ಚೌವೇದನೆಂಬ ಪಾರ್ವಂ ತನ್ನ ಮಕ್ಕಳಪ್ಪಿರ್ವರ್ ಮಾಣಿಗಳುಂ ತಾನುಂ ವಾದಾ[6]ರ್ಥದಿಂ ತೊಳಲುತ್ತುಮಲ್ಲಿಗೆ ವಂದು ಋಷಿಯರ್ಕಳುಮಂ ಆರ್ಜ್ಜಿಯರ್ಕಳುಮಂ ಕಂಡು.

ಕಂ॥ [7]ನೋಡ ! ವಿಧಾತ್ರನ ಗೊಡ್ಡಮ ।
ನಾಡಿದುದಂ [8]ಮುದು ಸವಣ್ಣೆಯೊಳ್ ಕಿತ್ತಯ್ಯಂ ॥
ಕೂಡಿದ[9]ನೆಳಯಜ್ಜಿಯೊಳಂ ।
ಕೂಡಿದನಾ ಮುತ್ತ ಸವಣನುಂ [10]ತಾನೆನುತುಂ ॥ ೩೬ ॥

ವ॥ ಅಂತಾ [11]ಮೂವರು ಮೇಡಿಸಿ ನಗುತ್ತುಂ ಪೋಗೆ ಕೆಲವಾನುಂ ದಿವಸದಿಂದಾ ಪಾರ್ವಂಗೆ [12]ಕುಷ್ಮವ್ಯಾಧಿ ಪೆರ್ಚೆ ಸತ್ತು ಆ ಪಾಪದಫಲದಿಂ ನೀಂ ವಸಂತತಿಲಕೆಯಾಗಿ ಪುಟ್ಟಿದಯ್. ಆಮಾಣಿ[13]ಯರಿರ್ವರುಮೊಂದು ತೊಱೆಯಂ ಪಾಯ್ವಲ್ಲಿ ಪಱುಗೋ[14]ಲಲ್ತು ಸತ್ತು ಒಡನೆ ನಿನಗೆ ಗಂಡುಪೆಣ್ಣುಮಪ್ಪಮಳ್ಗಳಾಗಿ [15]ಪುಟ್ಟಿದಂದು ಇರ್ವರುಮಂ ನೀಂ [16]ಬಿಸುಟ್ಟೊಡೆ ಇವರುಮನಿರ್ವರ್ ಪರದರ್ ಕೊಂಡು ಪೋಗಿ(ನಡೆಪಿ) ಧನದೇವನುಂ ಕಮಳೆಯುಮೆಂದು ಪೆಸರನಿಟ್ಟು ನಡೆಪುತ್ತುಂ ಬೇಱೆ ವೇಱೆ ಪಯಣಂ ಬೋಗಿ ತೆಂಕಣನಾಡೊಳೊರ್ಬುಳಿ [17]ಯಾಗಿರ್ದೆಡೆಯೊಳಿರ್ವರ್ಗರ್ಂ ಮದುವೆಯಂ ಮಾಡಿದರೀತನುಂ ಪರದುವಂದು ನಿಮ್ಮೊಳಱಿಯದೆ ಪುದು[18]ವಾಲ್ಪಂತಾಯ್ತು. ಇಂತೀ ಮೂವರುಂ ಮುನ್ನಿನ ಭವದೊಳ್ ಮಹಾಗುಣವಂತರಂ ಪಱಿದ ಪಾಪದ ಫಲದಿನಿಂತಾದಿರೆನೆ [19]ಕೇಳ್ದು ವಸಂತತಿಳಕೆಯುಂ ಸಂಸಾರಕ್ಕೆ ಪೇಸಿ ನಿರ್ವೇ

---

(1) ಮಿರ್ವರುಂ ತಪಂಬಟ್ಟು ಪೋಗಿ ವಿಹಾರಿಸುತ್ತುಂ (ಖ) (2) ತಪಂಬಟ್ಟಿರ್ವರುಂ ವಿಹಾರಿಸುತ್ತುಂ ಪೋಗಿ (ಚ,ಛ) (3) ಯೊಳಾಋಷಿಯರಂ ಕಂಡು ಬಂದಿಸಿ ಕುಳ್ಳಿರ್ದುಕ್ಷೇಮ(ಚ,ಛ) ಯಲ್ಲಿಯಾಋಷಿಯರ್ಕಳ ಸಾರೆ ಪೋಗಿ ಕ್ಷೇಮ (ಕ,ಜ) (4) ಮಿರೆ (ಕ,ಚ,ಟ) (5) ಚೌವೀರ (ಖ) ಚಳುವೀರ (ಛ) (6) ದಾನಾರ್ಥಿಯಾಗಿ (ಕ,ಚ) ದಾನಾರ್ಥಿಗಳಾಗಿ ತೊಳಲುತ್ತಿಲ್ಲಿಗೆವಂದು (ಛ) ತೊಳಲುತ್ತು ಮಲ್ಲಿಗೆ (ಕ,ಜ) (7) ನೋಡಿ (ಛ) ನೋಡೆ (ಟ) (8) ಮುದುಕಿಸವಣೆಯೊಳ್ (ಚ,ಛ) ಮುದುಪಸವಣೆ (ಖ) (9) ನೆಳಯಬ್ಬಿಯುಮಂ (ಛ,ಚ,ಕ) ಯಬ್ಬಿಯೊಳಂ (ಖ) (10) ನೋಡೆನುತುಂ (ಖ) (11) ಮೂವರುಮವರಂ ದೂಷಣೆಗೆಯ್ದುನಗು (ಚ, ಛ) (12) ಕುಷ್ಠಿಯಾಗಿ ಸತ್ತಾ ಪಾಪದ (ಕ, ಚ) (13) ಗಳಿರ್ವರುಂ (ಕ, ಜ) (14) ಗೋಲ್ಮುಟ್ಟುಗೆ (ಟ) (15) ಪುಟ್ಟಿದರ್ ಪುಟ್ಟಿದಾಗಳೆ ನಿಮ್ಮಿರ್ವರುಮಂ (ಕ,ಜ) (16) ಬಿಸುಡಿಸಿದೊಡೆಯಿರ್ವರ್ ಪರದರ್ ಕೊಂಡು ಪೋಗಿ ಧನದೇವ (ಕ, ಜ) (17) ಯಾದಲ್ಲಿ ಯಿರ್ವರ್ಗರ್ಂ ಮದುವೆಯಂ ಮಾಡಿದರೀತನುಂ (ಚ) ಯಾಗಿರ್ದೆಡೆಯೊಳ್ ಬೇಗಮಿರ್ವರ್ಗರ್ಂ (ಕ, ಜ, ಟ) (18) ವಾಳ್ವುದಂತುಟಾಯ್ತು ನೋಡೀ ಪಾಪದ ಫಲದಿಂ ದಿಂತಾದಿರೆನೆ ಸಂಸಾರಕ್ಕೆ ಪೇಸಿ ತಪಂಬಟ್ಟು ಬೇರೆವೇರೆಪೋಗಿ ತಪಂಗೆಯ್ದು ಶುಭಧ್ಯಾನದಿಂ ಮುಡುಪಿ ಪರಂಪರೆಯಿಂ ಮುಕ್ತಿವಡೆದರೆಂಬೀಕತೆಯಂ ಜೀವಾ ನೀನವಧಾರಿಸುವುದು (ಕ,ಜ) (19) ರೆನೆವಸಂತತಿಳಕೆ ಅವಧಿಜ್ಞಾನಿಗಳ ವಚನಮುಂ ತನ್ನ ನೆಗಟ್ಟಿಯುಮೊಂದಾದುದಂ ಕಂಡು ನಂಬಿ ನಿರ್ವೇಗದಿಂ ತೊಜ್ಜಿದು ತಮ್ಮ ಮೂವರುಂ ಒಡಲಂ ತವೆ ನೋಸ್ತು ಮುಡಿಪಿಸುಗತೆ (ಚ) ನಂಬಿಮನೆಯುಮಂ ಶಿಶುವುಮಂ ಕ್ರಮದವರ್ಗೆ ಕೊಟ್ಟು ನಿರ್ವೇಗದಿಂ ತೊಜ್ಜಿದು ತಮ್ಮ ಮೂವರುಂ ತಪಂಬಟ್ಟು ಬೇಱೆವೇಱೆ ತಪಂಗೆಯ್ದೊಡಲಂ (ಛ, ಖ)

ಗದಿಂ ತೊಱೆದು ತಮ್ಮ ನೂವರುಂ ಬೇಱೆ ಬೇಱೆ ಪೋಗಿ ತಪಂಬಟ್ಟು ಶುಭಧ್ಯಾನದಿಂ ಮುಡಿಪಿ ಸುಗತಿವಡೆದರ್. ಎಂಬೀ ಕಥೆಯಂ ಜೀವಾ! ನೀನವಧಾರಿಸಿ ಸಂಸಾರಕ್ಕೆ ಬೆರ್ಚಿ ಶುಭಪರಿಣಾಮ ದೊಳ್ ನೆಗಲ್ವುದು.

ರಗಳೆ— ಒಂದೆ ಭವದೊಳಗಿಂತು — ಬಂದುದಳಮೇಂ ಭ್ರಾಂತು ॥ ೧ ॥
ಪರಿಣಾಮವಶಮಾಗಿ — ನೆರಪಿದಳಿದಿಂ ಪೋಗಿ ॥ ೨ ॥
ಪುಟ್ಟಿದ ಭವಾಂತರದ — ಕಟ್ಟಿದ ಮಹಾಂತರದ ॥ ೩ ॥
ಯೋನಿಫಲವಾದುವಂ — [1]ಸ್ಥಾನದ ವಿಭೇದವಂ ॥ ೪ ॥
ಎಸುಕದುದ್ರೇಕಮಂ — ವೆಸ[2]ರ್ಗಳನನೇಕಮಂ ॥ ೫ ॥
ಗೋತ್ರ ಭೇದಂಗಳಂ — [3]ಕ್ಷೇತ್ರ ಭೇದಂಗಳಂ ॥ ೬ ॥
ಮೊಱೆಯ ವಿಪರೀತಮುಂ — ಅಱಿವಿನ ವಿಘಾತಮುಂ ॥ ೭ ॥
ಕೀಲ[3] ಮೇಲಪ್ಪುದುಂ — ಮೇಲೆ ಕೀಲಪ್ಪುದುಂ ॥ ೮ ॥
ಭಯಮೆ ನಯಮಪ್ಪುದುಂ — ಪಾಱೆ ಪಗೆಯಪ್ಪುದುಂ[4] ॥ ೯ ॥
ಕುಲಮಕುಲಮಪ್ಪುದುಂ — ಬಲಮಬಲಮಪ್ಪುದುಂ[5] ॥ ೧೦ ॥
ಒಡೆಯರಲ್ಲಂವದಮಂ — ಬಡವರೊಗೆವಂದಮಂ ॥ ೧೧ ॥
ಕೆಳೆಯೆ ಪಗೆಯಪ್ಪುದುಂ — ಮುಳಿಸೊಸಗೆಯಪ್ಪುದುಂ ॥ ೧೨ ॥
ಕೇಡೆ ಪೆರ್ಚಪ್ಪುದುಂ — ಮಾಡೆ ಕೇಡಪ್ಪುದುಂ ॥ ೧೩ ॥
ಅರಸಿ ತೊಲ್ತಪ್ಪುದುಂ — [6]ಸುರುಳಿ ಸುಖಿಯಪ್ಪುದುಂ ॥ ೧೪ ॥
ನೆನೆದೊಡೀಸಂಸಾರ — ವೆನಿತಾನುಮಾಕಾರಂ ॥ ೧೫ ॥—॥ ೩೭ ॥

ಕಂ॥ ಸಾರಮಣಮಿಲ್ಲದೀ ಸಂ ।
ಸಾರದೊಳತಿ [7]ಘೋರದೊಳ್ ಗಭೀರದೊಳುಗ್ರಾ ॥
ಕಾರದೊ[8]ಳುಂಟೊಂದೆನಗಾ ।
ಧಾರಂ ಜಿನಧರ್ಮಮೊಂದೆ ಬಗೆ ನೀಂ ಜೀ[9]ವಾ ॥ ೩೮ ॥

ವ॥ ಮಹಾಸಮುದ್ರ[10]ದೊಳಗಾದಾತಂಗೆ ಭೈತ್ರಂ ದೊರೆಕೊಂಡೊ[11]ಡಂ, ಮನುಷ್ಯ ಭವಂಗಳೊಳಗೆ ಸದ್ಧರ್ಮಂ ದೊರೆಕೊಂಡೊಡಮದನ್ನುದಾಸೀನಂಗೆಯ್ಯ[12]ದಿರಿಂ, ನುತ್ತಂ—

---

(1) ಸ್ಥಾನಕದ ಭೇದ (ಛ, ಟ) (2) ರ್ಗೊಳನ ನೇಮಮಂ (ಟ) (3)' ಗಾತ್ರದಂಡಂಗಳಂ (ಛ, ಟ) (4) [ಈ ಪಾದ ಹೆಚ್ಚಿದೆ] ಹಿತಮಹಿತಮಪ್ಪುದುಂ ಮತಿಯಮತಿಯಪ್ಪುದುಂ (ಟ) (5) ಕೆಳೆಯೆ....ದುಂ। ಮಾಡೆ ಕೇಡಪ್ಪುದುಂ ಭಯಮಭಯಮಪ್ಪುದುಂ ॥ ನಯಮನಯಮಪ್ಪುದುಂ ಅರಸಿ ತೊಲ್ತಪ್ಪುದುಂ। ಸಿರಗಿಸುಖಿಯಪ್ಪುದುಂ ॥ ಹಿತಮಹಿತ....ಪೊಡೆಯರಳಿವಂದಮಂ, ಬಡವರೊಗೆವಂದಮಂ (ಛ) (6) ಮುರಳಿ (ಟ) (7) ಘೋರದುಃಖದಿಂದಂ ಗಂಭೀರಾಳೆನಗೊಂದುಂಟಾ (ಚ, ಕ) (8) ಳೆನಗೊಂದುಂಟಾಧಾರ (ಚ) (9) ಮನದೊಳ್ (ಚ) (10) ದೊಳಿರ್ದಾತಂಗೆ (ಛ, ಚ) (11) ಡೊಡಂತೀ ಮನುಷ್ಯಭವದೊಳೆಂತಾನುಂಧರ್ಮಂ (ಚ, ಛ) (12) ದಿರು (ಚ)

ಚಂ॥ ನರಕದೊಳುಂಟೆ ದಿವ್ಯನಿಳಯಂಗಳೊಳುಂಟೆ ಬಹುಪ್ರಕಾರ[1] ದಾ ।
[2]ತಿರಿಕದೊಳುಂಟೆ [3]ಕುತ್ಸಿತ ಕುಭೂಮಿಯೊಳುಂಟೆ ಕುಮಾನುಷಾಲಯಾಂ ॥
ತರದೊಳಗುಂಟೆ ಪಾಪಹರಮಾಗುವ ಧರ್ಮನುದಿಲ್ಲಿ ಸೈಪಿನಿಂ ।
ದೊರೆಕೊಳೆ ಗೆಂಟುಮಾಡಿದೊಡೆ ಜೀವನೆ [4]ಮತ್ತಮದೇಂ ಸುಸಾಧ್ಯಮೇ ॥ ೧೧ ॥*

— ಗದ್ಯಂ —

ಇದು ಜಿನಶಾಸನ ಪ್ರಭಾಸನ ಶೀಲೋದಿತ ವಿದಿತ

ಬಂಧುವರ್ಮ ನಿರ್ಮಿತಮಪ್ಪ

ಜೀವಸಂಬೋಧನಾ[5] ಗ್ರಂಥಾವತಾರದೊಳ್

[6]ಸಂಸಾರಾನುಪ್ರೇಕ್ಷಾ ನಿರೂಪಣಂ — ವಸಂತತಿಲಕಾ ಕಥಾವರ್ಣನಂ

[7]ಪಂಚಮಾಧಿಕಾರಂ.

* ಯಸ್ಯಾವತಾರೇ ಸತಿ ಸುಪ್ರತಿಷ್ಠೇ — ವವರ್ಷ ರತ್ನಾನಿ ಹರೇರ್ನಿದೇಶಾತ್ ॥
ಧನಾಧಿಪಸ್ಪನ್ನವನಾಸಪೂರ್ಣಂ — ಪದ್ಮಪ್ರಭಂ ತಂ ಪ್ರಣಮಾಮಿ ನಿತ್ಯಂ ॥

(1) ದಿಂ (ಖ) (2) ತಿರಿತದೊ (ಟ) (3) ದುಷ್ಕೃತಭೂಮಿ (ಕ, ಜ) ದುಷ್ಕೃತದೊಳುಂಟೆ ಭೂಮಿಯೊಳುಂಟೆ ಕುಮಾನುಷಾಂ ತರವಿನೊಳುಂಟೆ (ಚ) (4) ಮತ್ತಣಮೆಂತು ಬರ್ಕುಮೇ(ಕ,ಜ) ಮಂತಣಮೆಲ್ಲ (ಲ್ಲಿ) ಕಾಪ್ಪೆನೋ (ಚ) ಮತ್ತಣಮೆಂತು ಕಾಪ್ಪೆನೊ (ಛ) (5) ನೆಯೊಳ್ (ಚ) (6) ಸಂಸಾರಾಭಿಧಾನಂ ತೃತೀಯಾಧಿಕಾರಂ (ಕ, ಜ) (7) ಪಂಚಮಾಶ್ವಾಸಂ (ಖ, ಚ)

॥ ಷಷ್ಠಾಧಿಕಾರಂ ॥

[1]— ಲೋ ೀ ಕಾ ನು ಪ್ರೆ ೀ ಕ್ಷೆ —

*ಕಂ॥ ಅಡಿ ವೇತ್ರಾಸನದಂತಿರೆ।
ನಡು ಝಲ್ಲರಿಯಂತೆ ಮೇಗು ಮುರಜ(ವ)ದ ತೆರದಿಂ ॥
ಡೆಡೆವಿಡದೆ ಮೂಱು ಲೋಕ[2]ಮು।
ಮೊಡನನಿಲತ್ರಯದೆ ಸುತ್ತಿ ನಿಂದತ್ತಿತ್ತಂ ॥ ೧ ॥

ವ॥ ಆ (ಇ) ಂತಾಗಿರ್ದ ಮೂಱುಂಲೋಕಮುಂ ಚತುರ್ದಶರಜ್ಜೂತ್ಸೇಧ ಪ್ರಮಾಣೋತ್ಸೇಧ ಮುಂ, ಸಪ್ತೈಕ ಪಂಚೈಕ ರಜ್ಜು ವಿಸ್ತಾರಮುಮಾದಲ್ಲಿಯಧೋಭಾಗಸ್ಥಿತಂ ನರಕಂ. ಆ ನರಕದೊಳ್ ರತ್ನಪ್ರಭೆ ಶರ್ಕರಾಪ್ರಭೆ, ವಾಳುಕಾಪ್ರಭೆ, ಪಂಕಪ್ರಭೆ, ಧೂಮಪ್ರಭೆ, ತಮಃಪ್ರಭೆ, ಮಹಾತಮಃಪ್ರಭೆಯೆಂದಿಂತೇೞುಂತೆೞಿದುಗ್ರಭೂಮಿಯ ಪಟಲಂಗಳೊಳಗಣ ಮೆಯ್ಯೊಳ್ ತಲೆಕೆಳಗಾಗಿ(ರ್ದ) ಪೆರ್ಜೇನ[3] ಪುಟ್ಟಿಗಳಂತಿರ್ದ ಪುಟ್ಟಿ(ಆಟ್ಟು)ಗಳೊಳ್ ಪುಟ್ಟಿ [4]ಪಿರಿದುಪಾಪಮಂ ನೆರಪಿ ಹಿಂಸಾನಂದಮೃಷಾನಂದಸ್ತೇಯಾನಂದ ಸಂರಕ್ಷಣಾನಂದಮೆಂದು ಚತುರ್ವಿಧಮಾಗಿರ್ಕುಮಲ್ಲಿ.

---

* ಈ ಸಂಸ್ಕೃತ ಶ್ಲೋಕ ಟೀಕಾ ತಾತ್ಪರ್ಯಗಳು (ಕ, ಚ, ಜ, ಳ) ಪ್ರತಿಗಳಲ್ಲಿ ಮಾತ್ರ ಇವೆ—

ರತ್ನತ್ರಯಂ ಪೂರ್ವಭವಾನ್ತರೇ ಯೋ – ವ್ರತಂ ಪವಿತ್ರೀಕೃತವಾನಶೇಷಂ ॥
ಕಾಯೇನ ವಾಚಾ ಮನಸಾಪಿ ಶುದ್ಧಂ – ತಂ ಮಲ್ಲಿನಾಥಂ ಪ್ರಣಮಾಮಿ ನಿತ್ಯಂ ॥ ೧ ॥

ಮಧ್ಯಾಂಶಃ ಪರಿತೋಽಪ್ಯನಂತವಿಯತೋ ಲೋಕಸ್ತ್ರಿವಾತಾವೃತಃ ॥
ಪಂಚದ್ರವ್ಯಚಿತಃ ಪ್ರಕರ್ತೃರಹಿತೋ ನಿತ್ಯಃ ಸದಾಽವಸ್ಥಿತಃ ॥
ಸಂಸ್ಥಾನೇನ ತು ಸುಪ್ರತಿಷ್ಠಕಸಮೋಽಸಂಖ್ಯಪ್ರದೇಶಪ್ರಮೋ ।
ಮಧ್ಯಸ್ಥತ್ರಸನಾಳಿರತ್ರ ಭವಿನಾಽಸ್ಪೃಷ್ಟಂ ನ ದೃಷ್ಟಂ ಪದಂ ॥ ೨ ॥

ಟೀ॥ ಪರಿತೋಽಪಿ–ಸುತ್ತಲುಂ, ಅನಂತ ವಿಯತಃ–ಅನಂತಮಪ್ಪಾಕಾಶದ, ಮಧ್ಯಾಂಶಃ–ನಟ್ಟನಡುವಣಭಾಗಂ, ಲೋಕಃ–ಲೋಕಮೆಂಬುದು, (ಆದುಂ) ತ್ರಿವಾತಾವೃತಃ–ಮೂರುಗಾಳಿಗಳಿಂದ ಸುತ್ತಲ್ಪಟ್ಟುದು, ಪಂಚದ್ರವ್ಯಚಿತಃ–ಉೞಿದಯ್ದು ದ್ರವ್ಯಂಗಳಿಂ ತೀವಿದುದು. ಪ್ರಕರ್ತೃರಹಿತಃ–ಬುದ್ಧಿವಂತನಿಂದ ಮಾಡಲ್ಪಟ್ಟುದಲ್ಲ; ಸ್ವಭಾವದಿಂದಿರ್ದುದು, ನಿತ್ಯಃ–ಕೇಡಿಲ್ಲದುದು, ಸದಾ–ಎಲ್ಲಾ ಕಾಲಂ, ಅವಸ್ಥಿತಃ–ವೊಂದೆಡೆಯೊಳಿರ್ದುದು (ಮತ್ತೆ), ಸಂಸ್ಥಾನೇನ–ಆಕಾರದಿಂದ, ಸುಪ್ರತಿಷ್ಠಕಸಮಃ–ಮುಚ್ಚಳಮುಳ್ಳಪಡಿಗಮಂ ಪೋಲ್ವುದು. ಅಸಂಖ್ಯಪ್ರದೇಶಪ್ರಮಃ–ಅಸಂಖ್ಯಾತ ಪ್ರದೇಶಂಗಳ ಪ್ರಮಾಣಮನುಳ್ಳುದು, ಮಧ್ಯಸ್ಥತ್ರಸನಾಳಿಃ–ನಡುವಿರ್ದ ತ್ರಸನಾಳಿಯನುಳ್ಳುದು. ಅತ್ರ–ಈ ಲೋಕದೊಳು, ಭವಿನಾ–ಪುಟ್ಟುತಿರ್ಪ ಜೀವನಿಂ, ಅಸ್ಪೃಷ್ಟಂ–ಮುಟ್ಟಲ್ಪಡದ, ಪದಂ–ಎ (ಯೆ) ಡೆ, ನ ದೃಷ್ಟಂ–ಕಾಣಲ್ಪಡುವುದಿಲ್ಲ. "ಪಂಚದ್ರವ್ಯ ಪರಿಪೂರ್ಣಮಪ್ಪಾಕಾಶಪ್ರದೇಶಂ ಲೋಕ"ಮೆಂಬ ಲೋಕಾನುಪ್ರೇಕ್ಷೆ—(ಈ ಟೀಕೆ–ಕ ಪ್ರತಿಯಲಿಲ್ಲ)

---

(1) ಲೋಕತ್ವಾನು (ಕ,ಟ) (2) ಮು ನೊಡ (ಟ,ಕ) (3) ಪುಟ್ಟಿಗಳೋಳಿಗೆಳಂ ಪೋಲ್ವ (4) ಪುಟ್ಟುವಲ್ಲಿಯಿಂತಪ್ಪವರ್ಗಳಿಂತೆಂದೊಡೆ (ಕ, ಜ, ಳ)

ಚಂ॥ ಭರ[1]ದೆ ತಗುಳ್ದ ರೌದ್ರಪರಿಣಾಮಮಹಾವಿಷಮಂತ್ಯಕಾಲದೊಳ್ ।
ದೊರೆಕೊಳೆ ಸತ್ತವರ್ ನರಕಮಂ ಪುಗೆ ನಾರಕರಾಗಳೊರ್ವರೊ ॥
ರ್ವರನತಿ [2]ಕೋಪದಿಂ ಬಿಡದೆ [3]ಖಂಡನ ಭೇದನ ತಾಡನಾದಿನಿ ।
ಷ್ಮಾರಕ(ತ)ರಮಪ್ಪ ದಂಡಣೆಯನೆಯ್ದಿಪರೆಂಬುದನೇನೊ [4]ಕೇಳಿರೇ ॥ ೨ ॥

ವ॥ ಕೇಳದಂತಲ್ಲಿಯ ದಂಡಣೆಗಳುಂ, ದುಃಖಂಗಳುಂ [5]ಸಾಮಾನ್ಯಂಗಳಲ್ಲವೆಂತೆಂದೊಡೆ:— ಪುಟ್ಟದಂದೆ ಪುರಾಣ[6]ನಾರಕರ್ಕಳ್ ಕಂಡು ತಮತಮಗೆ ತಂತಮ್ಮ ಮುನ್ನಿನ ಭವದೊಳ್ ಗೆಯ್ದ ಪಾತಕಂಗಳಂ ವಿಭಂಗಜ್ಞಾನದಿಂದಱಿದೋರೊ[7]ರ್ವ (ರಂ) ರ್ಗೆ ಕರಂ ಮುಳಿದು ಮೂದಲಿಸಿ ಯಸಿಮುಸಲಕಣೆಯ [8]ಕಂಪಣನಾರಾಚಪರಶುತೋಮರಮು (ಭು) ಸುಂಡಿ ಪಿಂಡಿವಾಳ [9]ಮುದ್ಗರಗದಾಚಕ್ರತ್ರಿಶೂಲಾದಿ ಭಯಂಕರಾಕಾರಂಗಳಪ್ಪ ಮೂವ[10]ತ್ತೆರಡುಂ ತೆಱದಾಯುಧಂಗಳಿನ್ನೋರೊರ್ವರ *ನಿಱಿದುಂ, ತಱು[11]ದುಂ ಕೊಱಿದುಂ, ಮುಱಿದುಂ, ಪಱಿದುಂ, ಜಡಿದುಂ, ಬಡಿದುಂ, ಕಡಿದುಂ, ಪೊಡೆದುಂ, ಪಿಡಿದುಂ, ತಿದಿಯುಗಿದುಂ, [12]ಸುಗಿದುಂ, ಬಯ್ದುಂ, ಬಿಗಿದುಂ, ಬಗಿದುಂ, ತೆಗೆ[13]ದುಂ, ಕಾಯ್ದುಂ, ಉಗಿದುಂ, ಕೊಯಲ್ದುಂ, ಪೊಯ್ದುಂ, [14]ನೂಂಕಿಯುಂ, ನೋಂಕಿಯುಂ, ಅವುಂಕಿಯುಂ, ಕಟ್ಟಿಯುಂ ಬೆಟ್ಟಿಯುಂ, ಮೆಟ್ಟಿಯುಂ, ಕುಟ್ಟಿಯುಂ, [15]ಸುರುಳ್ಚಿಯುಂ, ಮುರಳ್ಚಿಯುಂ, ಪೊರಳ್ಚಿಯುಂ, ಚುರ್ಚಿಯುಂ ಸೀಳ್ದುಂ, ಪೋಳ್ದುಂ, ಕಾರ್ದುಂ, ಪೀರ್ದುಂ, [16]ಆರ್ದುಂ, ಪಾರ್ದುಂ, ನೇರ್ದುಂ, ಕೆಲ್ತುಂ, ನೆಗಲ್ದುಂ (ತೆಗೆದುಂ) ಇಂತನೇಕಪ್ರಕಾರದಿಂ ದಂಡಿಸೆ ಕನಲ್ದೊನಲ್ದು, ಬಲಲ್ದಲಲ್ದು ಜೋಲ್ದು ನೇಲ್ದು ಸುಯ್ದು ಬಯ್ದು ಬೆಂದು ನೊಂದು ಕಂದಿ ಕುಂದಿ ಬೇಸತ್ತಾತಸತ್ತು ಮುಮ್ಮಲಂಮುಱುಗಿ ಸಹಜ ಶರೀರಮಾನಸಾಗಂತುಕಮೆಂಬ ನಾಲ್ಕುಂತೆಱದ ಮಹಾದುಃಖಂಗಳ್ [17]ಪೋಲ್ಮರನಂ ಕೆರ್ದು

ಲೋಕಸ್ಸರ್ವೋಽಪಿ ಸರ್ವತ್ರ ಸಾಪಾಯಶ್ಚಿತಿರಧ್ರುವಃ ॥
ದುಃಖಿಕಾರೀತಿ ಕರ್ತವ್ಯೋಮೋಕ್ಷ ಯೇವ ಮತಿಸ್ಸತಾಂ ॥ ೩ ॥

ತಾ॥ ಎ(ಯ)ಲೆ ಜೀವನೇ, ನರನಾಗಸುರಮೆಂಬೀಲೋಕತ್ರಯದಲ್ಲಿ ಪ್ರವರ್ತಿಸುವ ಪ್ರಾಣಿಗಳಪಾಯಂಗಳೊಡಗೂಡಧ್ರುವಮಾಗಿರ್ಪ ಸ್ಥಿತಿಯಂ ನೋಡಿ ಮಹಾಪುರುಷರ್ ಮೋಕ್ಷ

---

(1) ಭರದಿ (ಕ,ಜ,ಟ) (2) ವೇಗದಿಂ (ಕ,ಜ) (3) ಛೇದನ (ಕ,ಜ,ಛ) (4) ಕಾಣಿರೇ (ಜ,ಛ) (5) ಸಾಮಾನ್ಯಮೇ (ಕ, ಜ) (6) ನಾರಕರ್ಕಳುಂತಮ್ಮಮುನ್ನಿನ (ಕ,ಜ) ನಾರಕರ್ಕಳುಂ ಮುನ್ನಿಗೆಯ್ದ (ಛ) (7) ರ್ವರಂ ಮೂದಲಿಸಿ ಮುಸಲ ಕಣೆಯ (ಕ, ಜ) ಶಿಲೀಮುಖಮುಸಲ (ಚ) (8) ಕಂಪಣಪರಶು (ಕ, ಜ) (9) ಮುದ್ಗರಾದಿ ಭಯಂಕರ (ಕ, ಜ) ಮುದ್ಗರ ಚಕ್ರತ್ರಿಶೂಲಾದಿ (ಛ) (10) ತ್ತೆರಡಾಯುಧದಿನ್ನೋರೊರ್ವರ (ಕ,ಜ) (11) ದುಂ ಪರಿದುಂಬಡಿದುಂ (ಕ, ಜ) (12) ಸುಗಿದುಂ ಬಗಿದುಂ (ಕ, ಜ) (13) ದುಂ ಬಿಗಿದುಂ ಕೊಯ್ದುಂ (ಕ,ಜ) (14) ನೋಂಕಿಯುಂ, ನೂಂಕಿಯುಮುವುಂಕಿಯುಂ (ಕ,ಜ) (15) ಸಾರ್ಚಿಯುಂ ಮಗುರ್ಚಿಯುಮುರ್ಚಿಯುಂ ಚುರ್ಚಿಯುಂ (ಕ, ಜ) ಸುರಳ್ಚಿಯುಂ ಮರಳ್ಚಿಯುಮುರ್ಚಿಯುಂ ಕಿರ್ಚಿನೊಳ್ ಪೊರಳ್ಚಿಯುಂ ಮಗುಳ್ಚಿಯುಂ ಬರಿಗಳನುರ್ಚಿಯುಂ ನಾಲಗೆಯಂಕಿಚ್ಚು ಮಾರ್ದುಂಪಾರ್ದುಂನೇರ್ದುಂ (ಕ, ಚ) (16) ಆರ್ದುಂ ನೆಗಲ್ದುಂ ನಾಲ್ಕುಂದೆಸೆಯೊಳಮಿಂತನೇಕ (ಕ, ಜ) ಆರ್ದುಂಪಾರ್ದುಂ ಪೋಲ್ದುಂನೇರ್ದುಂ ಸೀಳ್ದುಮಿಂತನೇಕ (ಛ) (17) ಗಳೊಳ್ ಪೊಣ್ಮರನಂ ಕಿಚ್ಚಳುರ್ದುಕೊಳ್ವಂತೆ (ಛ)

* ಇಲ್ಲಿ ಹೇಳಿರುವ ಇಱಿದುಂ ಮೊದಲಾದ ಅಸಮಾಪಕ ಕ್ರದಂತಗಳು ೩೨ ಆಯುಧಗಳಿಂದ ನಡೆವ ಕ್ರಿಯೆಗಳೆಂದು ತೋರುವುದು. ಆದರೆ ಒಂದು ಕ್ರಿಯೆಯು ಪ್ರಮಾದದಿಂದ ಬಿಟ್ಟುಹೋಗಿರುವುದು (೩೧ ಕ್ರಿಯೆಗಳು ಇವೆ)

ತಗುಳ್ದಂತೆ ಯೆಡೆವಱಯದಳುರ್ದು ಕೊಳೆ ಕಣ್ಣೆವೆಯಿಕ್ಕುವನಿತುಪೊೞ್ತಪ್ಪೊಡಂ ಸುಖಮನಱಯ[1]ದುತ್ಕೃಷ್ಟದಿಂ ಮೂವತ್ತುಮೂಱುಸಾಗರೋಪಮಕಾಲಂಬರಂ ನಮೆವರಿಂತು ನರಕಲೋಕದವ್ಯವಸ್ಥೆಯಂ ಸಂಕ್ಷೇಪದಿಂ [2]ಪೇೞಲ್ದಿನಿನ್ನು ಮಧ್ಯಮಲೋಕದಲ್ಲಿ—

ಕಂ॥ ಅಮಿತದ್ವೀಪಸಮುದ್ರಾಂ।
ತಮಹಾಪ್ರ[3]ಖ್ಯಾತಮಾ ಸ್ವಯಂಭೂರಮಣೋ ॥
ತ್ತಮವಾರಿಧಿಪರ್ಯಂತಂ।
ಸಮ[4]ಸ್ತತಿರ್ಯಂಚಮಿರ್ಪ ತಿರ್ಯಗ್ಲೋಕಂ ॥ ೩ ॥

ವ॥ ಅಲ್ಲಿ[5] ಪುಟ್ಟಿದ ತಿರ್ಯಗ್ಜಾತಿ ಜೀವಂಗಳುಂ ತ್ರಸಸ್ಥಾವರಮೆಂದಿರ್ತೆಱನಕ್ಕುಂ. ಆ ತ್ರಸ ಜೀವಿಗಳುಂ ದ್ವೀಂದ್ರಿಯಾದಿ ವಿಕಳೇಂದ್ರಿಯಂ ಷಡ್ವಿಧಂ. ಸಕಳೇಂದ್ರಿಯಂ ಚತುರ್ವಿಧಂ. ಅಂತು ದಶವಿ[6]ಧಂ. ಸ್ಥಾವರಂಗಳೊಳ್ ಪೃಥಿವ್ಯಪ್ತೇಜೋವಾಯು ಸಾಧಾರಣವನಸ್ಪತಿಕಾಯಂ[7]ಗಳೆಂದು ಪ್ರತ್ಯೇಕಂ ಚತುರ್ವಿಧಂ. [8]ವನಸ್ಪತಿಕಾಯಂ ದ್ವಿವಿಧಂ. ಅನ್ತು ದ್ವಾವಿಂಶತಿಭೇದಮಕ್ಕುಂ ಅಲ್ಲಿ—

ಮ॥ ಮನದೊಳ್ ನೀಲಕಪೋತಲೇಶ್ಯೆ ತೊಡರ್ದಾರ್ತಧ್ಯಾನ[9]ಮಂ ಮಾಡೆ ಸ।
ತ್ತೆನಸುಂ ಮಾಣದನೇಕರೂಪಕದ ತಿರ್ಯಗ್ಜಾತಿಯೊಳ್ ಪುಟ್ಟಿ ಮ ॥
ತ್ತೆನಿತಾನುಂ ತೆಱದಿಂ ವಿಘಾತಿಸೆ ಮಹಾಸಂಕ್ಲೇಶದಿಂದಾದ ವೇ।
ದನೆಯಿಂದಿರ್ಪುವು ಜೀವರಾಶಿ ಪಲವುಂ ಸಂತಾಪದಿಂ [10]ಪಾಪದಿಂ ॥ ೪ ॥

ವ॥ [11]ಅಂತವು ಮುನ್ನಿನ ತಮ್ಮ ಮಾನಮಾಯಾ [12]ಕಷಾಯೋದ್ರೇಕದೊಳಾದಶುಭ ಪರಿಣಾಮದಿಂ ಪುಟ್ಟ ನಮೆಯುತ್ತುಂ—

ಕಂ॥ ಶೀತದಿನುಷ್ಣದಿನುತ್ಕಟ।
ವಾತದಿನನ್ಯೋನ್ಯಘಾತದಿಂ ತೀವ್ರರುಜಾ ॥
ವ್ರಾತ[13]ದಿನತಿಕ್ಷುಧಾತೃ।
ಡ್ಜಾತದಿನಸುಸಮಿತಿ ಬಿಡದೆ [14]ನೋಗುಂ ಸಾಗುಂ ॥ ೫ ॥

ವ॥ ಮತ್ತ ಮಲ್ಲಿ ಪರವಶಮಾಗಿ ಕೆಲವು ಜೀವಂಗಳ್—

ದಲ್ಲಿಯೇ ಮತಿಯಂ ಮಾಟ್ಪುದು – ಎಂಬೀ ಸೂತ್ರಾನುಸಾರಮಾದ ದೃಷ್ಟಾಂತಕಥಾನಿರೂಪಣಂ ಗೆಯ್ವೆನದೆಂತೆನೆ—ಅಡಿವೇತ್ರಾ (ಎಂಬ ಕಂದ ನಿರಂತರವಾಗಿದೆ)—

---

(1) ಯದೆ ದುಸ್ಕೃತದಿನುತ್ಕೃಷ್ಟಮಪ್ಪ (ಚ) (2) ಪೇೞ್ದುಮಿನ್ನುಂ (ಟ) ಪೇೞ್ದುನುಧ್ಮನು (ಕ, ಜ) (3) ಖ್ಯಾಪಿತಸ್ಯ (ಕ,ಜ,ಟ) (4) ಸ್ತ ಮಾತಿರಿಕಮಿರ್ಪ (ಕ,ಜ) ಮಿಂತಿರಿಕಮಿರ್ಪ (ಳ) (5) ಪುಟ್ಟಿ ತಿರಿವ ತಿರ್ಯಗ್ಜಾತಿ ಜೀವ ಜ (ನ್ಮಂ) ಲ್ಕಂಗಳು (ಳ) ತಿರಿದ....ಜೀವಂಗಳುಂ (ಟ) ತಿರಿವ—(ಕ, ಜ)— (6) ವಿಧಂಗಳ್ (ಜ,ಳ) (7) ಗಳೊಂದೊಂದುಂ ಚತುರ್ವಿಧಂ ಪ್ರತ್ಯೇಕ ವನಸ್ಪತಿ ತ್ರಿವಿಧ ಮಂತು (ಕ, ಜ) (8) ಪತ್ಯೆಯ್ದುಂ ವನಸ್ಪತಿ (ಳ) ವಾಯುವನಸ್ಪತಿ ಸಾಧಾರಣ ಕಾಯಂಗಳೊಂದು (ಟ) ಕಾಯಂಗಳೊಂದು ಪ್ರತ್ಯೇಕಂ ಚತುರ್ವಿಧಂ, ವನಸ್ಪತಿ ಕಾಯಂ ದ್ವಿಧ (ಖ) (9) ದಿಂಕೊಡೆ (ಕ,ಜ,ಟ) (10) ತಾಪದಿಂ (ಖ,ಜ,ಳ) (11) ಅವು ತಿರಿ ಯಗ್ಜಾತಿಯೊಳ್ (ಚ) (12) ಕಷಾಯೋದ್ರೇಕಾಶುಭಪರಿಣಾಮ (ಳ) (13) ನಸಹ್ಯಕ್ಷುತ್ತೃಡ್ಜಾತದಿ (ಕ,ಜ,ಚ) (14) ನೋಯ್ಗುಂ, ಸಾಯ್ಗುಂ (ಕ, ಜ)

ಉ॥ ಕಟ್ಟ [1]ಕೊಡಂಕೆ ನೂಂಕೆ ಸುಡೆ [2]ಮರ್ದಿಡೆ ಖೆರ್ಚಿಸೆ ನೋಯೆ ಗಂಟಲಂ।
ಮೆಟ್ಟಿ ಪೊರಳ್ಚೆ ಪೇಱ[3] [3]ಬಿಡದೇಱ[3] [4]ತಗುಳ್ದುಱ[3] ಸುತ್ತೆ ಮುತ್ತೆ ಬೆ॥
ನ್ನಟ್ಟ ಬದಲ್ಚೆ ಸಾರ್ದಿಱಸೆ [5]ಪೋರಿಸೆ ಪಾಱಿಸೆ ಬಯ್ಯೆ ಪೊಯ್ಯೆ ಬಾ।
ಯ್ವಿಟ್ಟತಿದುಃಖದೊಳ್ ನಮೆಯುತಿರ್ಪುವನಪ್ಪೊಡಮೇನೊ ಕಾಣಬೇ ॥ ೬ ॥

[6]ವ ॥ ಅಂತುಮಲ್ಲದೆಯುಂ—

ಕಂ॥ ಎನಿತಾನುಂ ತೆಱದಿಂ[7]ದಂ।
ದನವರತಂ ಬೆಂದು ನೊಂದು [8]ಬೆಬ್ಬುರ್ತು ಕರಂ॥
ಕನಲುತ್ತಳಿವು[9]ತ್ತದಲು।
ತ್ತೊನಲುತ್ತ ಗಿದಗಿದು [10]ನಮೆಗುಮಾ ತಿರ್ಯಂಚಂ ॥ ೭ ॥

ವ॥ ಈ ತೆಱದಿಂ ನಮೆವ ತಿರ್ಮಗ್ಲೋಕದ ಜೀವರಾಶಿಗ[11] ಳೆಲ್ಲಮೆಲ್ಲಾ ಲೋಕದ ಜೀವ ರಾಶಿಗಳಂ [12]ನೋಡೆ ಕರಂ ಪಲವೆಂದು ಕಿಱಿದಱಿತೊಳೆ ಪೇಳ್ದಿಂ. ಇನ್ನಾ ಮನುಷ್ಯಗತಿಯೆಂಬು ದದು ತಾಂ ಜಂಬೂದ್ವೀಪದ ಲವಣಸಮುದ್ರದ ಧಾತಕೀಷಂಡದ ಕಾಳೋದಕಸಮುದ್ರದ ಪುಷ್ಕರವರದ್ವೀಪಾರ್ಧಸ್ಥಿತಮಾನುಷೋತ್ತರ [13]ಮಹೀಧರಾವಧಿಯಪ್ಪುದು. ಅಲ್ಲಿ ಕರ್ಮಭೂಮಿ ಭೋಗಭೂಮಿ ಪ್ರಕಾರದಿಂ ದ್ವಿವಿಧಮಕ್ಕುಮಾ ಭೋಗಭೂಮಿಯೊಳ್—

[14]ಉಪಜಾತಿವೃತ್ತಂ— ಮದ್ಯಾಂಗ ತೂರ್ಯಾಂಗ ವಿಭೂಷಣಾಂಗ।
ಜ್ಯೋತಿ[15]ರ್ಗೃಹಂ ಭೋಜನ ಭಾಜನಾಂಗಂ॥
ಪ್ರದೀಪ ವಸ್ತ್ರಾಂಗ ವರಪ್ರಜಾಂಗಂ।
ದಶಪ್ರ[16]ಕಾರಾಸ್ತರವಸ್ತು ತತ್ರ ॥ ೮ ॥

(ಇದು ಸಂಸ್ಕೃತ ಶ್ಲೋಕ–ಇಲ್ಲಿ ಅನುವಾದಮಾಡಿದೆ)

ವ॥ [17]ಮದ್ಯಾಂಗ, ತೂರ್ಯಾಂಗ, ವಿಭೂಷಣಾಂಗ, ಜ್ಯೋತಿರಂಗ, ಗೃಹಾಂಗ, ಭೋಜ ನಾಂಗ, ಭಾಜನಾಂಗ, ದೀಪಾಂಗ, ವಸ್ತ್ರಾಂಗ, ಮಾಲ್ಯಾಂಗಮೆಂಬ ದಶವಿಧಕಲ್ಪವೃಕ್ಷಂಗಳುಂ ಬಗೆದ ವಸ್ತುವನೀಯೆ ನಿರಂತರಂಭೋಗಭಾಗಿಗಳಪ್ಪುದಱಿಂ [18]ಧರ್ಮಕರ್ಮಾನುಷ್ಠಾನಮಿಲ್ಲ. ಮ್ಲೇಚ್ಛಖಂಡಂಗಳೊಳಂ ಧರ್ಮಮಿಲ್ಲ. ವಿನೀತಾಖಂಡದೊಳುಂಟು. ಅದಱೊಳ್

---

(1) ತೊಡಂಕಿ (ಳ) (2) ಮಟ್ಟಿಡೆ (ಳ) (3) ಬಡಿದೇಟಿ (ಟ) (4) ತಗುಳ್ದಿಳಸುತ್ತೆ (ಳ, ಟ) (5) ಪೋರ್ದಿಸೆ (ಜ) (6) ಈವಚನ (ಕ,ಜ,ಳ) ಪ್ರತಿಗಳಲ್ಲಿಲ್ಲ (7) ದಂತನ (ಳ, ಟ) (8) ಬಬ್ಬುತ್ತೆ (ಳ) ಬೇಕ್ಕೆಂದು (ಟ) (9) ತ್ತೊಳಲುತ್ತೊನಲು ತ್ತು (ಳ) ತ್ತೊನಲುತ್ತನಿತನಿದಗಿದುಗಿದು (ಳ) (10) ನುಗಿದು ನಮೆವುದು ತಿರಿಕಂ (ಕ, ಜ) ನಮೆವುವು ತಿರಿಕಂ (ಜ) ನುಗಿದುನಮೆಯುತ್ತಿರ್ಕುಂ (ಳ) (11) ಳೆಲ್ಲಾಲೋಕದ (ಕ,ಜ) (12) ನೋಡಿ ಪೊಲ್ಲವೆಂದು ಕಿಱಿದೆ (ಳ) ನೋಡೆಕರಂ ಫಲಮೆಂದು (ಕ, ಜ) (13) ಮಹೀಧರಾಧಿ (ಕ, ಜ) ಮಹೀಧರಮಾಗಿಯಪ್ಪುದಲ್ಲಿ (ಳ) (14) ವೃತ್ತ ಶ್ಲೋಕ (ಕ) ವೃತ್ತ (ಜ, ಳ) ಉಪಶೀತಿ (ಕ) (15) ಗೃಹಾಂಗಾತನ (16) ಕಾರಂದ್ರುಮಮಸ್ತಿ ತತ್ರ(ಕ) ಧ್ವಮ (ಜ) ಕಾರಾಸ್ತರುಮತ್ಸುತತ್ರ(ಳ): ವಿಭೂಷಣಾಂಗ ಗೃಹಾಂಗ ಜ್ಯೋತಿರಂಗ ಭೋಜನಾಂಗ ದೀವಾಂಗ ವಸ್ತ್ರಾಂಗ ಮಾಲ್ಯಾಂಗವಾದನಾಂಗವೆಂಬ ದಶವಿಧ (ಎಂಬ ಗದ್ಯ) (ಟ) (17) ವಾದ್ಯಾಂಗ (18) ಧರ್ಮಕರ್ಮಮಿಲ್ಲ (ಕ,ಜ)

ಚಂ|| ಸಮಸಮನಾಗೆ ಪಾಪಮುಮಮೊಪ್ಪುವ ಧರ್ಮಮುಮಂ ನಿಜಕ್ರಮ |
ಕ್ರಮದೊಳೊಡರ್ಚಿ ನೆಟ್ಟನೆ ಶುಭಾಶುಭಮೆಂಬೆರಡುಂ ವಿಚಿಂತೆಗಳ್ ||
ಸಮನಿಸೆ[1] ಪೊರ್ದಿ ದುಃಖಸುಖಮಿಶ್ರಿತಮಪ್ಪ ಮನುಷ್ಯಲೋಕ[2]ದೊಳ್ |
ನಮೆವುತುಮಲ್ಪಮಪ್ಪ ಸುಖಮು(ದಿ)ಂ ಬೆರಸಿರ್ಪುವು ಜೀವರಾಶಿಗಳ್ ॥ ೮ ॥

ವ|| ಮಹಾಸಮುದ್ರದ ಕೆಲದೊಳೊಂದೊಂದು ಕಿಱುದಾನುಂ ಕೊಳಂಗಳಿ[3] ರ್ಪಂತೆಲ್ಲಾ ಗತಿಗ ಳೊಳಂ ಕ್ಷೇತ್ರಪ್ರಮಾಣದಿಂ ಜೀವಸಮೂಹಂ ಪಿರಿಯವಪ್ಪೆಲ್ಲಾ ಗತಿಗಳ್ಗಂ ಮನುಷ್ಯಗತಿಯೇ ಕಿಱುದ ಪ್ಪುದಱುನದಂ [4]ಬೇಗಮಱಿಯೆ ಪೇೞ್ದಿಂ–ದೇವಲೋಕಮೆಂತೆನೆ ಮಂದರ ಮಹೀಧರದ ಕೆಳಗಣ ಚಿತ್ತೆಯೆಂಬ[5] ನೆಲದಿಂದಡಿಯ ವಜ್ರೆಯೆಂಬ ಭೂಮಿಯೊಳಗೆ ಅಸುರ [6]ನಾಗ ವಿದ್ಯುತ್ ಸುಪರ್ಣಾಗ್ನಿ ವಾತಸ್ತನಿತೋದಧಿದ್ವೀಪದಿಕ್ಕುಮಾರವಿಕಲ್ಪದಿಂ ದಶವಿಧಮಾಗಿರ್ದ ಭವನವಾಸಿಗರಿಂದಂ, ಅಸಂಖ್ಯಾತದ್ವೀಪ ಸಮುದ್ರಾಂತರ್ವರ್ತಿಗಳಪ್ಪ ರಮ್ಯಕ್ಷೇತ್ರಂಗಳೊಳ್ ವಸಿಯಿಸುವ ಕಿನ್ನರ ಕಿಂಪುರುಷಮಹೋರಗಗಂಧರ್ವಯಕ್ಷ ರಾಕ್ಷಸಭೂತ ಪಿಶಾಚ ಕುಲ ನಾಮಪ್ರಕಾರದಿಂ[7] ದಷ್ಟ ವಿಧಮಪ್ಪ ವಾನವ್ಯಂತರಿಗರಿಂದೀ ನೆಲದ ಮೇಲೆ ನೂಱು ತೊಂಬತ್ತುಯೋಜನಂ [8]ನೆಗೆದಲ್ಲಿ ನೂಱುಹತ್ತು ಯೋಜನಬಾಹುಳ್ಯಮಾಗಿ ಮೇರುವಿನ ಬಳಸಿಯುಂ ಒಂದು ರಜ್ಜುವಿನಗಲದಿಂ ಚಂದ್ರಾದಿತ್ಯಗ್ರಹನಕ್ಷತ್ರತಾರಕಾಭೇದದಿಂ ಪಂಚವಿಧಮಪ್ಪ ಜೋತಿರ್ಲೋಕದ ದೇವರಿಂ, ಮೇರು ಶಿಖರದಿಂ ಮೇಗೇಕರಜ್ಜುಪ್ರದೇಶದೊಳಗಪ್ಪಪಟಲಾಂತರಿತಮಪ್ಪ ಸೌಧರ್ಮೈಶಾನ ಸನತ್ಕುಮಾರ ಮಾಹೇಂದ್ರ ಬ್ರಹ್ಮ ಬ್ರಹ್ಮೋತ್ತರ ಲಾಂತವಕಾಪಿಷ್ಠ ಶುಕ್ರಮಹಾಶುಕ್ರ ಶತಾರಸಹಸ್ರಾರಾನತ ಪ್ರಾಣತಾಚ್ಯುತ ವಿಕಲ್ಪದಿಂ ಷೋಡಶ ವಿಮಾನಪಙ್ತಿಗಳೊಳಿರ್ಪ ಕಲ್ಪವಾಸಿಗರಿಂ, ಅಲ್ಲಿಂ ಮೇಲೆ ನವಗ್ರೈವೇಯಕ, ನವಾಣೂತ್ತರೆ, ಪಂಚಾಣೂತ್ತರೆಗಳೊಳಿರ್ಪಹಮಿಂದ್ರರ್ಕಳಿಂದಯ್ದು(ತ)ತೆಱನಕ್ಕುಂ, ಇಂತಲ್ಲಿ ಪುಟ್ಟುವರ್—

ಕಂ|| ಪಿರಿ[9]ದಪ್ಪ ಧರ್ಮದಿಂ ಕರ |
ಮರಿದಪ್ಪ [10]ತಪಂಗಳಿಂ ಸಮಾಧಿಯ ಫಲದಿಂ ||
ಸುರಲೋಕದಲ್ಲಿ ಪಾಸಿನ |
ವೊರೆಯೊಳ್ ಸಂಭವಿಸಿ ದಿವ್ಯದೇ[11]ಹಿಗಳಪ್ಪರ್. ॥ ೯ ॥

---

(1) ಪೊಂದಿ (ಕ, ಜ) ಪೋಗಿ (ಳ) (2) ದೊಳನುಪಮ ಮುಲ್ಯ (ಖ) (3) ರ್ಪಂತೆಲ್ಲಾ ಗತಿರ್ಗಳೊಳ್ ಕ್ಷೇತ್ರ (ಕ) ತೆಲ್ಲಾ ಗತಿಗಳೊಳಂ ಮನುಷ್ಯಗತಿಯೇ ಕಿಱುದು (ಜ) ರ್ಪಂತೆ ಕ್ಷೇತ್ರಪ್ರಮಾಣಜೀವಸಮೂಹದಿಂ ಪಿರಿಯವಷ್ಟಿಪ್ಪ ಗತಿಗಳಂ ಮನುಷ್ಯಗತಿಯೇ (ಟ) (4) ಬೆಗ (ಳ,ಜ) (5) ನೆಲದಡಿಯ (ಕ,ಜ) (6) ನಾಗಸುಪರ್ಣ ದ್ವಿಷೋದ್ಧಸ್ತನಿತ ವಿದ್ಯುದ್ದ್ವೀಪಾಗ್ನಿ ಕುಮಾರಾಭಿಧಾನ ಕುಲವಿಕಲ್ಪದಿಂ (ಟ) (7) ದಿಂದೆಂಟು ವಿಧದಿನಿರ್ಪ (ಕ,ಜ) (8) ನೆಗೆದು ಪೋದಲ್ಲಿ ನೂಱಿಯ್ವತ್ತು ಯೋಜನ ಬಹುಳಮಾಗಿ (ಚ) (9) ದಾಗುವ ಧರ್ಮದ (ಕ) ಪಿರಿಪಿರಿದಾಗುವ ಧರ್ಮದ (ಚ) (10) ತಪಸ್ಸಮಾಧಿಯ (ಟ) ಸತ್ಯಮಾಧಿಯ (ಕ, ಜ) ದಾಗುವ ತಪಸ್ಸಮಾಧಿಯ (11) ದೇಹಜರಪ್ಪರ್

ವ|| [1]ಅಂಡಜ, ಪಿಂಡಜ, ವಾಳಜ, ವಲ್ಮಜರೋಮಜಮೆಂಬಯ್ದುಂತೆಱದ [2]ಪಾಸಿನ ಪೊರೆಯೊಳ್ [3]ಪುಟ್ಟದಂತರ್ಮುಹೂರ್ತದಿಂ ಸೋಡಶಾ[4]ಭರಣ ಭೂಷಿತರಾಗಿ ನವ[5]ಯೌವನ ವಯಸ್ಕರಾಗಿರೆ ಪರಿವಾರ[6]ದೇವರ್ಕಳ್ ಬಂದು ನಾನಾ [7]ವಿಧಾತಿಶಯವಸ್ತುಗಳಿಂದೋಲಗಿಸೆ—

ಉ|| ನಚ್ಚುವ ರತ್ನದಿಂ ಸಮೆದ ಮಾಡ[8]ದೊಳೊಪ್ಪುವ ದಿವ್ಯಶಯ್ಯೆಯೊಳ್ |
ಮಚ್ಚಿದ ವಸ್ತುಗಳ್ ತಮಗೊಡಂಬಡೆ ಬಂದಿರೆ ನಿಚ್ಚ[9]ಮಲ್ತುಯೊಳ್ ||
ಮಚ್ಚುವ ಮಚ್ಚ ನಿಚ್ಚಯಿಸುವಚ್ಚರಕನ್ನೆಯರೊಳ್ ಸರಾಗದಿಂ |
ಬಿಚ್ಚತ[10]ಮಾಗಿ ಕೂಡಿ ಸುಖಮಿರ್ಪರನಿಂದಿತದೇವಲೋಕದೊಳ್ ||೧೦||

ವ|| ಅದಲ್ಲದೆಯುಂ—

ಕಂ|| ಕಲ್ಪಕುಜಸಮಿತಿ ತೊಳಗುವ |
ನಲ್ಪ ಫಲ[11]ಪ್ರಣುತನೂತ್ನ ಚಿಂತಾಮಣಿ ಸಂ ||
ಕಲ್ಪಮನೀಯುತ್ತಿರೆ [12]ಸಲೆ |
ಕಲ್ಪಾಯು[13]ವಿನೊಡೆಯರಾಗಿ ಸುಖದಿಂದಿರ್ಪರ್ ||೧೧||

ವ|| ಅವರ್ಗಳ್ ಅಣಿ[14]ಮ ಮಹಿಮ ಗರಿಮಲಘಿಮ[15]ಪ್ರಾಪ್ತಿ ಪ್ರಾಕಾಮ್ಯಮಿಶಿತ್ವವಶಿತ್ವ (ಕಾಮರೂಪತ್ವ ?)[16]ಮೆಂಬಷ್ಟೈಶ್ವರ್ಯದೊಳ್ ಕೂಡಿ ಸುಖಮಿರ್ಪರ್. ಎಂದು ದೇವಲೋಕದ ಸ್ಥಿತಿಯನಿನಿಸಾನುಮುಱಿದು ಪೇೞ್ದಂತಪ್ಪ ಮೂಱುಂಲೋಕದ ತುದಿಯೊಳ್ ನಾಲ್ವತ್ತಯ್ದು ಲಕ್ಷ[17]ಯೋಜನ ವಿಸ್ತಾರದಿನಷ್ಟಯೋಜನ ಬಾಹುಳ್ಯದಿಂ ಶುದ್ಧಸ್ಫಟಿಕ(ರತ್ನ)ಮಯಮಾಗಿರ್ದ ಸಿದ್ಧಕ್ಷೇತ್ರದಲ್ಲಿಗೆ—

ಚಂ|| ಪರಮತಪೋನಿಯೋಗಸಹಿತರ್ ಮಹಿತರ್ ನೆಗೞ್ದಿರ್ದ ಸೋಡಶೋ |
ತ್ಕರ ವ(ತ)ರ ಭಾವನಾನ್ವಿತರನಿಂದಿತರೂರ್ಜಿತರಾರ್ಜಿತವ್ರತರ್ ||
ನಿರುಪಮ[18]ಋದ್ಧಿ ಶುದ್ಧ ಪರಿಣಾಮ ವಿಶೇ[19]ಷರಶೇಷಕರ್ಮದಿಂ |
ವಿರಹಿತರಾಗಿ ಪೋಗಿ [20]ನೆಲಸಿರ್ದರಸಂಚಳ ಸಿದ್ಧಭೂಮಿಯೊಳ್ ||೧೨||

ವ|| ಕಿಂಚಿದೂನ [21]ಚರಮ ಶರೀರ ಪ್ರಮಾಣದೊಳ್ ಅಶರೀರ ಜೀವ ಘನಾಕಾರದಿನನನ್ತ ಜ್ಞಾನಾನನ್ತದರ್ಶನಾನಂತವೀರ್ಯ ಸೂಕ್ಷ್ಮತ್ವಾವಗಾಹನಾಗುರು ಲಘುತ್ವ ಕ್ಷಾಯಿಕ ಸಮ್ಯಕ್ತ್ವಾವ್ಯಾಬಾಧಮೆಂಬೆಂಟುಂಗುಣಂಗಳನುಳ್ಳ ಸಿದ್ಧಪರಮೇಷ್ಠಿಗಳಿರ್ಪ ಮೋಕ್ಷಪದವಿಯಂ ಪಡೆವ ಕರ್ಮಕ್ಷಯ ಕಾರ್ಯಮುಮಂ ಪೇೞ್ದು ಇಂ ಮೂಱುಂ ಲೋಕದೊಳಗೆ ಮಧ್ಯಮಲೋಕದೊಳಿರ್ದೀ

---

(1) ಅಂತುಂಅಂಡಜ ಪುಂಡಜ ವಾಳಜ (ಳ) (2) ಪಾಸುಗಳ (ಕ) ಯ್ದುಂಪಾಸಿನ (ಟ) (3) ಪುಟ್ಟುವಂ (ಕ,ಚ) (4) ತನು ಹಸ್ತಾಭರಣ (5) ಯೌವನ ಪುರಸ್ಸರನಾಗಿ ಪರಿವಾರ (6) ದೇವಿಯರ್ಕಳ್ (ಕ, ಟ) (7) ವಿನೋದದೊಳಿತಿಶಯ (ಕ,ಚ) (8) ದಿನೊಪ್ಪು (ಕ,ಟ) (9) ಮರ್ತ್ಥಿ (ಟ) (10) ವಾಗಿ ಪೋಗಿ ಸುಖ (ಕ,ಚ,ಟ) (11) ಪ್ರಗುಣ (ಗ,ಟ) (12) ನಿಲೆ (ಕ,ಟ) (13) ಯುವನೊಡೆ (ಕ, ಟ) (14) ಮಾ..... ಘಿಮಾ..... (ಕ,ಟ) (15) ಪ್ರಾಪ್ತಿಪ್ರಾಗಲ್ಭ್ಯ ಪ್ರಾಕಾಮ್ಯ(ಕ,ಚ) (16) ಮೆಂಬಪ್ಪವಿಧಗುಣೈಶ್ವರ್ಯೋಪೇತದೊಳ್ ಕೂಡಿರ್ಪರ್ (ಕ,ಟ,ಚ) (17) ಯೋಜನ ಬಾಹುಳ್ಯದಿಂ ಶುದ್ಧ (ಚ,ಜ) (18) ತತ್ತ್ವ (ಕ) ಸಿದ್ಧ (ಚ) ರುದ್ಧಿ (ಗ) ತೇಜ (ಟ) (19) ಷದ ಕರ್ಮದಿಂದಿಯುಂ (ಕ,ಗ) ಷಕರಸ್ಪರ್ಶಕರ್ಮ (ಘ,ಟ) (20) ಸುಖಮಿರ್ಪರನಿಂದಿತ ಸಿದ್ಧಲೋಕದೊಳ್ (ಟ) (21) ಪೂರ್ವ (ಟ)

ಮನುಷ್ಯಗತಿಯೊಳಲ್ಲದೆಲ್ಲಿಯುಂ ಸುಗತಿಯಲ್ಲಪ್ಪುದಱಿಂದೆಲ್ಲಾ ಗತಿಗಳ್ಗಂ ಮನುಷ್ಯಗತಿಯಗ್ಗಳ ಮಪ್ಪುದಲ್ಲಿಯುಂ—

ಕಂ॥ ಕರಮಗ್ಗಳಮವು ವಸ್ತ್ರಗ ।
[1]ಳಿರಡೆರಡೆ ವಿಶುದ್ಧಮಪ್ಪ ತಪಮುಂ ಶ್ರುತಮುಂ ॥
ಭರದಿನವಂ[2]ತಾಳ್ದಿರ್ದಂ ।
ಗರಿದೆ ನೆಗಟ್ಟಿಂದ್ರಗತಿಯು[3]ಮಾ ನಿರ್ವೃತಿಯುಂ ॥ ೧೩ ॥

ವ॥ [4]ಅಂತೆ ಮುಕ್ತಿಶ್ರೀಯಂ ಪಡೆಯಲಾರ್ಪ ತಪಮುಂ ಶ್ರುತಮುಮಿಾ ಮೆಯ್ಯೊಳ್ ದೊರೆಕೊಂಡು ನೆಗಲ್ವಂಗೆ ಜಯಶ್ರೀಯಂ ಪಡೆ[5]ಯಲಾರ್ಪ ಕೆಯ್ದುಂ ಬಲಮುಂ ದೊರೆ[6]ಕೊಂಡು ಪಗೆಯಂ ಸಾಧಿಸುವಂಗೆರಡುಂ [7]ಶ್ರೀಗಳುಂ ಕೂಡಿ ಬರ್ಕುಂ. ಮತ್ತಮಿಾ ಲೋಕ[8]ದೊಳ್ ಪಾರತ್ರಿಕ ಮೈಹಿಕಮೆಂಬೆರಡುಂ ಕಾರ್ಯಂಗಳ್ಗೆ ಪ್ರಧಾನ[9]ಕಾರಣಮಪ್ಪ—

ಚಂ॥ ಅಱಿತದೊಳೊಂದಿದೊಂದು ತಪಮುಂ ಸುಜನತ್ವದೊಳೊಂದಿ ಪೆಂಪಿನೊಳ್ ।
ನೆಱಿ[3]ದಱಿಸುಂ ಜಗಂಗ[10]ಳೊಳಗಗ್ಗಳಮಿಂತೆರಡಲ್ಲಿ ರಾಜ್ಯಮುಂ ॥
ತೊಱೆದು ತಪಕ್ಕೆ ಬರ್ಪ ಬರವುತ್ತಮಮೊಳ್ತಪಮಂ ಬಿಸುಟ್ಟು ಬಂ ।
ದಱುಕೆಯ ರಾಜ್ಯದತ್ತೆಱಗುವಂದ[11]ದು ಕಷ್ಟಮನಿಷ್ಟಮೆಲ್ಲಗಂ ॥ ೧೪ ॥

ವ॥ ಮುಱುಗಿಸಿದ ಪಾಲಂ ಖಂಡಶರ್ಕರೆಯುಮುಂ ಬಿಸುಟ್ಟ[12]ಳೆಗಾಸೆಗೆಯ್ವಂತೊಳ್ಳಿತಪ್ಪ ತಪಮಂ ಶ್ರುತಮುಮಂ ಬಿಸುಟ್ಟು[13] ರಾಜ್ಯಕ್ಕಳಿವುವುದು ಮರುಳ್ತನಂ – [14]ಅಳಿಪಿಂಗಮಾರ್ಪ [15]ಗುಣಕ್ಕ ಮಾವುದಂತರಂ ?—

ಕಂ॥ ಪರಮಾಣುಕಿಱಿದು ಗಗನಂ ।
ಪಿರಿ[16]ದೆಂಬರ್ ಕಂಡರಿಲ್ಲ ।ದೀನತೆ ಕಿಱಿದಾ ॥
ಪರಮಾಣುಗೆ ಗಗನಕ್ಕುಂ ।
ಪಿರಿದಭಿಮಾನಮೆ ದಲೆಂದು [17]ನುಡಿವರ್ ಕಂಡರ್ ॥ ೧೫ ॥

ವ॥ ಎಲ್ಲವಱಿಂ ಕಿಱಿದಪ್ಪ ಪರಮಾಣು[18]ವಿಂಗಮಾ ದೀನತೆ ಕಿಱಿದು. ಎಲ್ಲವಱಿಂ ಪಿರಿದಪ್ಪಾಕಾಶಕ್ಕೆ ಅಭಿಮಾನಮೇ ಪಿರಿದು, ಎಂದು ಬಗೆದಳಿಪಂ ತೊಱೆ[3]ದು ಪೆಂಪಂ[19]ತಳೆವುದು. ಆತನೆನಸುಂ ದೋಷಮನಾಗಲೀಯದಿರ್ಪು[20]ದೇಕೆಂದೊಡೆ :—

---

(1) ಳಿರಡೆವಿಶುದ್ಧೆಮಪ್ಪ (ಳ) (2) ತಾಳ್ದಿದವಂ (ಕ,ಜ) ತಾಳ್ದಿರ್ದೊಂ ಅರಿದೆ (ಳ) (3) ಯುಮುರು (ಕ,ಜ,ಳ) ಮುಂನಿರ್ವೃತಿಯುಂ (ಟ) (4) ಅಂತು (ಕ, ಜ, ಳ) (5) ಯಲ್ಕಾರಣಮಪ್ಪಾ (ಜ, ಖ) ಣಮಪ ಕೆಯ್ದು (ಳ) (6) ಕೊಂಡೆಸಾಧಿ (ಕ,ಜ) (7) ಶ್ರೀಯೊಳ್ (ಚ) (8) ಲೈಹಿಕಾಮುತ್ರಿಕ (ಚ) (9) ಕಾರ್ಯಂಗ ಳಪ್ಪ (ಜ) (10) ಳೊಳಿಂತೆರಡಗ್ಗಳಮಲ್ಲಿ (ಕ) ಳೀತೆರಡಗ್ಗಳಮಲ್ಲಿ (ಜ) ಳಗಿಂತೆರಡಗ್ಗಳಮಲ್ಲಿ (ಚ) ಳಗಗ್ಗಳ ಮಂತೆರ (ಳ) (11) ಮನಿಷ್ಟ ಮನಿಷ್ಟಮೆಲ್ಲಿಗಂ (ಜ) (12) ಳೆಯನಾಸೆ (ಕ, ಜ) ಳೆಗಾಸೆವಡುವ ಗಾವಿಲನಂ ತೊಳ್ಳಿ (ಳ) (13) ಟ್ಟರಸಿಂಗಾಸೆವಡುವುದು (14) ಅರಿವಿಂಗಮಳಿಪಿಂಗಮಾವು (ಕ, ಜ) (15) ಗುಣವಿಂ ಗಮಾ (ಚ) (16) ದೆಂಬಂ ಕಂಡನಿಲ್ಲದಿನಿತೇಕಿರಿ (ಕ) ಬೊಂ ಕಂಡನಿಲ್ಲದಿನತೆ (ಜ) (17) ನುಡಿವಂ ಕಂಡಂ (ಕ,ಟ) ಕಂದಂ (ಖ,ಳ) (18) ವಿಂಗಳಿಪೆ ಪಿರಿ (ಕ) (19) ತಾಳ್ದುವುದು ಪೆಂಪಂತಾಳ್ದಿದಾತನೆಂತು ದೋಷಮ (ಕ,ಜ,ಳ) (20) ದೇಕೆಂಬ (ಕ,ಜ) ದೇಕೆನಾಂ (ಳ)

ಮ|| ಕಿಱಿದಾನುಂ ಕಱಿಯಿಂ [1]ಕಳಂಕಿ ಶಶಿ ತಾನೆಂಗುಂ ಜನಂ ರಾಹು ಮೆಯ್ |
ನೆಱಿಯೆಲ್ಲಂ ಕರಿದಾಗೆಯುಂ ಕಱಿಯದರ್ಕುಂಟೆಂಬರೇ ಪಾಪದ ||
ತ್ತೆಱಗಿರ್ದಾತನ ದೋಷದುರ್ವಿನಮನಾರ್ ಕಾಣ್ಬರ್ ಗುಣಶ್ರೇಣಿಗಳ್ |
ತುಱುಗಿರ್ದಂಗಿನಿತೊಂದು (ಸಾನು) ದೋಷಮನದಂ ಬಿಟ್ಟಾಗೆ ಕಾಣ್ಗುಂ ಜನಂ ||೧೬||

ವ|| ಅವಱಿಂ ಗುಣದೊಳ್ [2]ಪ್ರಭುವಪ್ಪಾತಂ ದೋಷಕ್ಕಂಜಿ ನೆಗಲ್ವುದು.

ಕಂ|| ತೊಱೆದು ಪರಿಗ್ರಹಮೆಲ್ಲಮ |
ನಱಿದು ತಪಂಗೆಯ್ವನಗ್ಗಳಂ ತಪದೊಳ್ಪಂ ||
ತೊಱೆದು ಮತಿಮಱಿದು ಪಱಿಯಂ |
ಮೆಱೆದು ಗುಣಂಗೆಟ್ಟ ದುಷ್ಟನವನೆ [3]ನಿಕೃಷ್ಟಂ ||೧೭||

ವ|| ಪರವಿಯೊಳ್ ತೀವಿದ ಪಾಲೆಲ್ಲಂ [4]ಇನಿಸಾನುಂ ಪುಳಿ ಪೊರ್ದಿದನಿತಱೊಳೆ ಮುಸ್ಸಿನ ಗು[5]ಣಮುಂ ಸವಿಯುಂ ಕಿಡುವಂತೆ ಪೊಲ್ಲಮೆ ಕಿಱಿದಾದೊಡಂ ಮುನ್ನಳ್ಳ ಗುಣಮನೆಲ್ಲಮನಱಿಗುಂ [6]ಎಂದು ದೋಷಕ್ಕಂಜಿ ನೆಗಲ್ವುದು. ಎಂದಿಂತು ಸಾಮಾನ್ಯ ಜೀವಂಗಳ್ಗೆಲ್ಲಂ ಪೇೞ್ದು ತಪಂ [7]ಗೆಯ್ದು ಬಿಡುವರ ಕೇಡಿಂಗಂ ಕರಮ[8]ಱಿಲ್ದ (ಱಿ) ಲ್ದು ಮತ್ತಮಿಂತೆಂಗುಂ—

ಮ|| ನೆಲವಾಸಿಂ ನೆಲದತ್ತ ಬೀೞ್ವಳವಿಗಂ ಕೂಸಂಜುಗುಂ ನಾಡೆಯುಂ |
[9]ಫಲಮಂ ಪೂಣ್ದು ತಪಕ್ಕೆ ವಂದು ತಪದಿಂ ಮೇಲಾದ ಲೋಕಂಗಳೊಳ್ ||
ನೆಲೆಯಪ್ಪಂತಿರೆ ಮಾಡದತ್ತಣಿ[10]ನಧೋಭಾಗಕ್ಕೆ ಬೀೞ್ತಪ್ಪುದ |
ರ್ಕೆಲೆ ನೀನಂಜಲೆಯಲ್ತೆ ಯೇಂ ಕಲಿಯೆಯೋ[11]ದೀನಾತ್ಮ ದೀನಕ್ರಿಯಾ ||೧೮||

ವ|| ಭಯಮನಱಿಯದ [12]ಪಸುಮಕ್ಕಳುಂ ನೆಲವಾಸಿಂದಂ ನೆಲಕ್ಕೆ ಬೀೞ್ವನಿಕರ್ತಂ[13]ಜುಗುಮೆಂದೊಡೆ, ಸಂಸಾರದ ಭಯಮನಱಿದು ತಪಂಗೊಂಡು ತಪದಿಂ[14]ಮೇಲಾದ ಲೋಕಂಗಳೊಳಿರ್ಪಾಯುಷ್ಯಮಂ ಕಟ್ಟಿರ್ದ[15]ಗಾಧವಪ್ಪಧೋಲೋಕಕ್ಕೆ ಬೀೞ್ತಪ್ಪುದರ್ಕಂಜು[16]ವೆಯಲ್ತೆಲೆ ತಪಸ್ವಿ [17]ನಿನ್ನಿಂ ಕಲಿಗಳಾರೆಂದು ತೆಗೞ್ದು ಮತ್ತ[18]ಮಿಂತಲ್ತೆ—

---

(1) ಕಳಂಕತಾನೆಂಗುಂಜನಂ (ಕ) ಜಗಂ (ಕ,ಳ) (2) ಪ್ರಭವನಪ್ಪನೆ (ಕ, ಜ) ಪ್ರಯತನಪ್ಪಾತಂ (ಚ) (3) ಕನಿಷ್ಠಂ (ಕ, ಳ) ನೇಕಷ್ಟಂ (ಜ) (4) ಇನಿತಾನುಂ (ಜ) (5) ಗುಣಮೆಲ್ಲಂ ಕಿಡುಗುಂ (ಚ) (6) ಎಂದಂಜಿ (ಕ,ಜ) (7) ಗೆಯ್ವರ (ಕ,ಜ,ಖ) (8) ರಮಱಿಲ್ದಿಂತೆಂಬರ್ (ಳ) ದಿಂತೆಂಬಾ (ಕ,ಜ) (9) ಫಲಮಂಮಾಣ್ಮ (ಕ,ಜ) (10) ನಧೋಲೋಕಕ್ಕೆ (ಕ,ಜ) (11) ಹೀನಾತ್ಮ ಹೀನಕ್ರಿಯಾ (ಕ, ಚ) (12) ಪಸುಗೂಸುಗಳುಂ (ಕ,ಜ) ಪಸುಗೂಸು (ಳ) (13) ಮಂಜುವರೆಂದೊಡೆ (ಕ, ಜ) (14) ಮೇಗಾದ ಲೋಕಕ್ಕಾಯು (ಕ,ಜ) (15) ಘಾತ (ಟ) (16) ಜುವೆಲೆತಪಸ್ವಿ (ಕ,ಜ) (17) ನಿನ್ನನ್ನರಾರ್ಕಲಿಗಳೆಂದು (ಕ, ಚ) ನಿನ್ನಿಂಕಲಿಗಳಾರುಮಿಲ್ಲೆಂದು (ಜ) (18) ಮಿಂತೆಂಬರ್ (ಚ)

ಮ|| [1]ಕ್ರಮದೊಳ್ಪಿಂಗೆ ಗೃಹಸ್ಥರೀ[2]ವರುಣಸಂತರ್ಕಂ ತಗುಲ್ದಿರ್ದ ಮೆ ।
[3]ಯ್ಯಮದಲ್ತೆಂದವರೊಪ್ಪಿ ಕೊಳ್ವ[4]ರದುವುಂ ಸರ್ವೋಪಕಾರಕ್ಕೆ ಸಂ ॥
[5]ಯಮಮಿಂತಪ್ಪೆಡೆಯಲ್ಲಿ ಪುಟ್ಟುವುದು ರಾಗದ್ವೇಷ[6]ಮೇಂ ಪೆರ್ಚಿದ ।
ಕ್ರಮದೇ(ದಿ)ಂ ಬಲ್ಲಿದ[7]ನಾವನೋ ಕಲಿ[8]ಯುಗ ಪ್ರಖ್ಯಾತರಾಜೇಶ್ವರಂ ॥ ೧೯ ॥

ವ|| ವಿಷಯಂಗಳೆಲ್ಲಮಂ ಗೆಲ್ದು ಗೆಲ್ಲಂಗೊಂಡಿರ್ದ ತಪಸ್ವಿಯೆಂಬ ಬಲ್ಲಾಳುಮಂ ಪೊರ್ದಿಸೋಂಕುವ (ಕರ್ಮಂಗಳುಂ) ಕಲಿ[9]ಕಾಲಮೆಂಬತಿಪರಾಕ್ರಮಿಯಿ(ಯು)ಂ ಬಸನಕ್ಕೆ ಸೋಲ್ತು ಪರಿಗ್ರಹಭಾರಾಕ್ರಾನ್ತನಾಗಿರ್ದೇಱುದರನೇಗೆಯ್ಯನೆಂದು [10]ಬಗೆದು ಗೃಹಸ್ಥರ್ [11]ನೀಮುಂ ಬೆರ್ಚ[12]ದಿರ್ಪಿರೆಂಬುದೇನೋ !

ಕಂ|| ಕೇಡಿನೊಳಪ್ಪುದು ದುಃಖಂ ।
ನಾಡೆ ಸುಖಂ ಲಾಭದಿಂದಮೆಂಬುದನಱಿದುಂ ॥
ನೋಡಿರೆ ಲಾಭಮನೊಲ್ಲದೆ ।
ಕೇಡೆಯ್ದು[13]ಲ್ ಬಗೆ[14]ವಿರಿದುವೆ ಜೋದ್ಯಂ ಜಗದೊಳ್ ॥ ೨೦ ॥

ವ|| ಪಣದ ಕೇಡು ದುಃಖಮಂ ಮಾಡುಗುಮೆಂದೊಡೆ ಗುಣದ[15]ಕೇಡಿಂದಪ್ಪ ದುಃಖಂ ಸಾಮಾನ್ಯ(ಮಕ್ಕು)ಮೆ ? ಕೆಮ್ಮನಾಲಸ್ಯ[16]ಮಂ ಮಾಡಿ ಕೆಟ್ಟರಕ್ಕಟಾ ! ಕಲಿ[17]ಯುಗದುಗ್ರತೆಯಂ [18]ಬಗೆಯಿರಾಗದೆ

ಮ|| ಬಿಸುಟೀ ಸಂಸೃತಿಹೇತುವಪ್ಪ ಪಲವುಂ ದೋಷಂಗಳಂ ಮೆಲ್ಪಿನಿಂ ।
ದೊಸೆದೊಪ್ಪಿರ್ದ ಮಹಾತಪೋಧನರೊಳಂ ತಂತಮ್ಮೊ[19]ಳೊಂದೊರ್ವರೊಳ್ ॥
ನಿಸದಂ ಬೆಕ್ಕಿನ ಮೂಷಕಂಗಳೆಡೆ[20]ಯೆಂತಂತಾಗೆ(ಗಿ)ನೂಡಿರ್ಕುಮೇಂ ।
ಮಸಗಿತ್ತೋ ಕಲಿಕಾಲರಾಜನ ಮಹಾತ್ಯುಗ್ರಪ್ರತಾಪಾನಳಂ ॥ ೨೧ ॥

ವ|| ತಪೋಧನರೆಂಬ ಮಹಾಸಮುದ್ರಮುಮಂ [21]ಶೋಷಿಸುವ ಕಲಿಕಾಲರಾಜನ ಮಹಾಪ್ರತಾಪಾಗ್ನಿ ಗೃಹಸ್ಥರೆಂಬ [22]ಬೆಳ್ಗಂಡರುಮನುಱಿಯಲೀಗುಮೆ ? ಬೇಗಮಿಾ ಕಲಿಕಾಲದೊಳ್ ಗುಣವಂತ[23]ನಾಗಿರ್ಪುದೊಳ್ಳಿತ್ತೆನ್ನಾ !—

---

(1) ತಮದೊ (ಕ,ಚ) ತಪದೊ (ಜ) (2) ವರುಣಸೀವರ್ತಂ (ಟ) ಸೀವರ್ದಂ (ಚ,ಜ) (3) ಯ್ಯಮರ್ದಲ್ತೆಂಬವರೊಪ್ಪೆ (ಟ) (4) ಲ್ವೆರಡುಮಂ (ಕ, ಟ) (5) ಯಮಿನಿಂತ (ಕ, ಟ) (6) ಮಂ (ಗ, ಚ) (7) ನಾದನೊ(ಗ,ಚ) (8) ದಿನ(ಕ,ಚ) (9) ಕಾಲಮಹೋರಗಂ (ಟ,ಕ) ಕಾಲರಾಜಂ (ಜ,ಚ) (10) ಪೇಟ್ದು (ಕ,ಟ) (11) ನೀಮುಂಗುಣದ ಕೇಡಿಂಗಂ(ಕ,ಟ) (12) ದಿರ್ಪುದೆಂಬಿರೆಂತೋ(ಟ) ದಿರ್ಪುದೆಂಬುದೆಂತೋ(ಕ) ದಿರಲಾಗದು (ಜ,ಚ) (13) ಯಿದ (ಕ,ಗ) (14) ವರಿದು (ಟ) ಯ್ದಲೆಬಗೆ (ಕ,ಗ) (15) ಕೇಡಿನ ದುಃಖಂ (ಕ, ಟ) ಕೇಡು ಸಾಮಾನ್ಯಮಕ್ಕುಮೆ (ಜ, ಚ) (16) ಸ್ಯರಾಗಿ ಕೆಟ್ಟಪರಕ್ಕಟಾ (ಕ, ಟ) (17) ದಿನ (ಕ, ಗ) (18) ಯಲಾಗದೆ (ಕ,ಟ) (19) ಳೋರೊರ್ವರೊಳ್ (ಕ,ಗ) ಳಂದೊರ್ವ (ಟ) (20) ಯಂತಾಂತಾಗೆ (ಟ) (21) ಸೋಂಕುವ (ಕ) (22) ಕರಂಡಮನೇಕುಳಿಯ (ಟ) (23) ನಪ್ಪುದೇಕೆನ್ನ (ಕ, ಗ) ನಪ್ಪುದೊಳ್ಳಿತೆನ್ನಾ (ಟ)

ಕಂ|| [1]ಮನೆಯೊಳಿರುಳ್ ಸೊಡರೆಸೆವಂ |
ತನುಪನುಗುಣಮಿಾ ಮನುಷ್ಯಲೋಕದೊಳೆನಯುಂ ||
ಘನ[2]ಮಾಯ್ತಾ ಕಲಿಕಾಲದೊ |
ಳನೂನಮಾಗೆ[3]ಸೆವುದಿಲ್ಲಿ ತಡೆವುದು ಚದುರೇ ? || ೩೨ ||

ವ|| ಸೊಡರ್ ಬೆಳಗುವಾಗಳ್ ಕಿಱಿದಪ್ಪೋವರಿ[4]ಯೊಳಂ ಕಲ್ತಲೆಯೊಳ್ಕಿತ್ತಾಗಿ ಬೆಳಗುಗುಂ. ಗುಣಮೆಸೆವಾಗಳೀ ಮನುಷ್ಯಭವದೊ[5]ಳಂ ಪೊಲ್ಲದ(ಮ)ಪ್ಪ ಕಲಿಕಾಲದೊಳ ಮೆಸೆಗುಗುಂ. ಅದಱಿಂ ನೀಮಿಾಗಳೆ ಗುಣಂಗಳಂ ಕೆಯ್ಕೊಳ್ವುದು. ಇಲ್ಲಿಂ ಕೆಯ್ವಂತಾ ಗುಣಂಗ ಳೇನಿಱಿಯವೆ ?—

ಮ|| ಅರಸರ್ ಪಾಱಿಗೆ ದಂಡಿ[6]ಪರ್ ಕಸವ[7]ರಕ್ಕೆಂದಲ್ಲ ಮಾಚಾರ್ಯರುಂ |
ಕರುಣಂ ಕೆಯ್ಯಿಗೆ ಕಲ್ಪಿ[8]ಪರ್ ಬೆಸಗೆಯಲ್ಕೆಂ ದಿರ್ಪ[9]ವಂಗಲ್ತವಂ ||
ತೆರಡುಂ [10]ಲಕ್ಷ್ಮಿಗೆ ಕಾರ[11]ಣಂ ಪ್ರಭುಗಳಾದೊಂದಂದ [12]ಮಿಾ ಯಂದಮೇ |
ನರಿದೋ ಪೇಱರ್ ಕಲಿಕಾಲ[13]ದೋಷರಹಿತಪ್ರಾರಂಭಶುಂಭದ್ಗುಣಂ || ೩೩ ||

(1) ದೋಷಂ (ಖ,ಗ,ಳ) (2) ಮರ್ದು (ಳ) ಮಗುಳೆ (ಜ,ಜ) ಮರ್ದನಱಿವರುಮೊಳರೇ (ಕ,ಖ) (3) ಕೊಂಡಮರ್ದಿಂ (ಕ,ಚ) (4) ದೊಳ್ ದೋಷಂ ಅಪ್ಪೊಡ (ಖ,ಗ) (5) ಡಮದರ್ಕಪಾಯಮಲ್ಲದು ಪಾಯಮಿಲ್ಲಂ (ಕ,ಚ) (6) ಚ್ಛಾಹದಿ (ಳ) ತ್ಸಾಹದಿನೊತ್ತಿತ್ತನಿತಿ(ಕ,ಚ) ತ್ಸಾಹದಿನೊಂದುತುಂ(ಳ) (7) ನೆರೆ ದೋಷಿ ತಪಸ್ತಿಗುಪ್ತಿಯೊಳ್ (ಚ) ನೆರೆಸೊಪ್ಪಿತಪ (ಕ) (8) ಕ್ಕಲಿನರೊಳ್ (ಕ,ಚ) (9) ದೋವುಮತಿಯಂ (ಕ,ಚ) ನೋವುದೋವದೆಸೆಯಂ (10) ರನಂ (ಳ) (11) ಸಕಳಿಯನಿಡ (ರ) ದೆ (ಕ,ಚ) ತನಗಸಕಳಿಯಲ್ಲದೆ (ಳ) ಸಕಳಸತ್ವಮಿಲ್ಲದೆ (ಖ, ಗ) (12) ತಳೆಯಲಾಱದಂತೆರಡುಂ (ಳ) ಕಳೆಯಲ್ಕಾರದಂತೆರಡುಂ (ಖ) (13) ದ್ರುತಿ (ಳ) ವೃತಿಯುಗುಪ್ತಿ (ಖ,ಗ) (14) ಸುಂದಿಂದ್ರಾನ್ವಿತ (ಕ) (ಸುಂರಂಧ್ರಾನ್ವಿತ—ಎಂದಿರಬಹುದು—ಲೇಖಕರ ಪ್ರಮಾದದಿಂದ ಈ ಪಾಠವು ಬಂದಿರಬಹುದು) (15) ಕೋಲ್ಪಡುಗುಂ (ಕ,ಚ) (16) ಪಣಮು ಳ್ಳಾತಂ ತನ್ನಮನೆಯಂ ಬಲ್ಲಿತ್ತುಮಾಱ್ಪರ್ (ಕ,ಚ) (17) ಮಾಱ್ಪಂ (ಕ,ಚ) (18) ಗುಣಮುಳ್ಳ (ಕ,ಚ) (19) ನಿನ್ನಳವುಕಿರಿದೇ (ಕ) ನಿನ್ನಳವುಂಕಿರಿದೆ (ಚ) ನಿನ್ನಳವುಮೇಂಕಿಱಿದೆ (ಳ)

ಉ॥ [1]ಓಡಿಸಲಾರ್ಪನೇ ನೃಪ[2]ಮುಖಂ ಸ್ಮರನೆಂಬ ಕಿರಾತರಾಜನೆ।
ಜ್ಯೋಡಿಸಲಾ[3]ರ್ಪನೇ ನನಿತೆಯತ್ತ ಪರಾಭವದೂಳಿ ಪೊರ್ದಿ ತಾ ॥
ನೋಡಿಸಲಾ[4]ರ್ಪುದೇ [5]ರುಸಿಯನೋ! ಕಲಿ ಮೋಹಮನೊಪ್ಪಿನೋಳಿಯೊಳ್।
ಕೂಡಿದನಂಗನೆಂದೊಡೆ ಪರತ್ರ ಸುಖಕ್ಕೆ[6]ಬಂ(ಳಿ)ಪುಂಟೆ ಸಂಯತಾ ॥ ೨೨ ॥

ವ॥ ಸಸಿಯ ಕೋಮ[6]ಳಿಕೆಯೆ ಮೇಲಪ್ಪ ಫಲಮಂ ಪೇಳ್ವಂತೆ ಋಷಿಗಿಲ್ಲಿಯ ಗುಣದಗ್ಗಳಿಕೆಯೆ ಮೇಗಣ ಸುಖದೊಪ್ಪಂ ಪೇಳ್ದಿಪ್ಪುದಱಿಂ ಗುಣಮಂ ಕಾಯದೆ ದೋಷಕ್ಕೆ ಮೆಲ್ಪಿಟ್ಟು ನೆಗಲಿಪ್ಪೊಡೊ[7]ಳ್ಪಿತಲ್ತು—

ಕಂ॥ [8]ಸುರಲೋಕಭೋಗದಳಿಪಿನ।
ಭರದೆ ತಪಂಗೆಯ್ವ ತವಸಿ[9]ಯಿಂ ಸಂಸೃತಿ[10]ಯ ॥
ಲ್ಲಿರವಿಂಗೇವಯಿಪ ಗುಣಾ।
ಭರಣಂ ಶ್ರಾವಕನೆ ಲೇಸು ವೈರಾಗ್ಯಯುತಂ ॥ ೨೩ ॥

ವ॥ [11]ದ್ರವ್ಯಂ ಭಾವಮೆಂಬರ್ತೆಱದ ತಪಮೊಳಂ ಭಾವತಪನುಗ್ಗಳಮಪ್ಪುದಱಿಂ ಗೃಹಸ್ಥನಕ್ಕೆ ತಪಸ್ವಿಯಕ್ಕೆ ವೈರಾಗ್ಯಭಾವ[12]ಮುಳ್ಳನೆ ಲೇಸು. ಆ ವೈರಾಗ್ಯ ಭಾವನೆಯಂ ನಿಷ್ಪರಿಗ್ರಹತ್ವದಿನಲ್ಲದಾಗದೆಂದು [13]ತಪಸ್ವಿಯುಮಪ್ಪುದುಂತೆ ದೀಕ್ಷೆಯೇವುದೆಂಬೀ ನುಡಿಯ ಪರಿಭವ ಮನಪ್ಪೊಡಂ ಬಗೆವು[14]ದೆಲೆ ತಪಸ್ವೀ ನೀಂ!—

ಉ॥ [15]ಆಗಳುಮೋದು ಕುಂದಿ[16]ಸೊಡಲಂ ವಿಷಯಂಗಳಡಂಗುವಂತು ಮ।
ತ್ತೀಗಡಿನೊಂದು ಮನ್ನಣೆಯನಾಸೆವಡಲ್ ಕಡುಮೆಲ್ಪನುಂಟುಮಾ ॥
ಡಾಗಮಕಂ [17]ತಪಕ್ಕಮಿದೆ ಸಾರಮಡುರ್ತು ಕಷಾಯವರ್ಗಮಂ।
ಬೇಗದಿನಿಕ್ಕುವಂತೆ ನೆಗಲಲ್ಲದೊಡೇಂ [18]ಮುನಿ ವಿ(ಬಿ)ಟ್ಟಯೇ ತಪಂ ॥ ೨೪ ॥

ವ॥ ವೇಳೆ[19]ಗೊಂಡಾತಂ ಸಾವಿಗಂಜುವೊಡಂ ತಪಂ[20]ಗೊಂಡಾತನನುಷ್ಠಾನಕ್ಕಂಜುವೊಡಂ ಅದೆಲ್ಲಿಯವೇಳೆ? ಅದೆಲ್ಲಿಯ ತಪಂ! ಎನಲೀಯದುತ್ತರೋತ್ತರ[21]ಮಾಗಿ ನೆಗಲ್ಪುದು—

---

(1) ನೋಡಿಸಲಾರ್ತುದೇ (ಕ,ಚ) ನೋಡಿಸವರ್ಪುದೇ (ಛ) (2) ಮುಖ (ಕ,ಚ) (3) ಲಾರ್ತುದೇ ನವ ವಿಯತ್ತ (ಛ) (4) ಪೆರಂನೊಕ್ಕು ವಿಮೋಹದಿನೊಪ್ಪಿ ನೋಳಿಯೊಳ್। ಕೂಡಿದರೆಂದರಲ್ಲಿ ಮಜ್ಜುಮೆಯ್ಯ (ಕ,ಚ) (5) ಕ್ಕಳವು (ಉ) ಂನ (ಖ,ಗ) (6) ಳಿಕೆ ತುದಿಯಫಲ (ಕ,ಚ) (7) ನೆಗಱ್ದೊಡೊಳ್ಪಿತ್ತೆ (ಕ,ಚ) (8) ಸಿರಿ ದಪ್ಪ ಭೋಗದೊಳ್ಪಿನ (ಕ,ಚ) (9) ಯುಂ (ಕ) (10) ಯೊಂದಿರದಿಂ ಗಂಜುವ (ಕ, ಚ) ಯೆಂದಿರದಿಂದೆಯಲ್ಪಗುಣಗಳ (ಛ) (11) ದ್ರವ್ಯತಪಂ ಭಾವತಪಮೆಂಬೆರಡುಂ ತೆರವ (ಕ,ಚ) (12) ವನೆಯುಂ ನಿಃಪರಿಗ್ರಹ ಭಾವನೆಗಳಲ್ಲದಾಗ (ಕ,ಚ) (13) ತಪಸ್ಥನಪ್ಪುದಂತು ದೀಕ್ಷೆಯೇ (ಕ,ಚ) (14) ದೆಲೆ ತಪೋಧನಾ ನೀಂ (ಛ) (15) ಅವಗಮೊಂದಿ(ಚ) (ಪ್ರಾಸುಕೆಡುವುದು) (16) ಸೊಡರಂ(ಚ) (17) ತಪಕ್ರಮವೇ (ಕ,ಚ) ತಪಕ್ಕಮವೆ (ಛ) (18) ತಪಮಾರ ಬಿಟ್ಟಯೋ (ಕ,ಚ) (19) ಗೊಂತಂ (ಕ,ಚ) ಗೊಂಡು (ಖ,ಗ) (20) ಗೊಂಡನನು (ಕ,ಚ) ಗೊಂಡು ಅನು (ಖ,ಗ) (21) ಮಾಗೆ (ಕ)

ಕಂ|| ಸಂಸಾರಮೆಂಬ [1]ಕುಟುಂಯೊಳ್ |
ಹಿಂಸಾದಿಗಳೆಂಬ [2]ಫಣಿಗಳಂ ಸಾರ್ದಿರುತುಂ ||
ನೀಂ [3]ಸೈಪು ಪೊಱಮಟ್ಟ |
[4]ರ್ದಿಂ ಸಂಸಾರಕ್ಕೆ ಮಗುಟ್ಪು ಪುಗದಿರ್ ಮುನಿಪಾ || ೨೫ ||

ವ|| ಇರುಳ್ ಬಿಟ್ಟ ಕುಟುಂಯೊಳ್ ಪಗಲೇಕೆ ಬೀಟ್ವರ್ ? [5]ಎಂಬಂತೆ ಮೋಹದ ಕಟ್ಟಲೆ [6]ಯುಳ್ಳಂದು ಸಂಸಾರದೊಳ್[7]ಗಿರ್ದಿಯಾಗಳ್ ತಪಸ್ತಪನನ ಬೆಳಗಿನೊಳಿರ್ದು ಮತ್ತೊಳಗಪ್ಪು ದೆಂಬುದೇನೆಲೆ ತಪೋಧನಾ !—

ಮ|| ಅರಸೇ[8]ಬಂಡಮೊ ಪಾಪಹೇತು ತಪಮಂ ಕೆಯ್ಕೊಳ್ವೆನೆಂದಣ್ಮೆ ಬಂ |
ದರಿದುಂ ಬಲ್ಲಿತುಮುಪ್ಪುದೊಂದು ತಪಮಂ ಕೆಯ್ಕೊಂಡು ದೋಸಂಗಳಂ ||
ಬರಲಿತ್ತೊಳ್ಳಪದಲ್ಲಿ ತಂದು ಕಿಡಿಯಂ ನೀನಿಕ್ಕಿ ನಿನ್ನಂ ಸುಡಲ್ |
ಮರುಳೆ ಸೈರಿಸಿ ಪಾಪಮುಂ ಕಿಡಿಸು ನೀಂ [9]ಸದ್ಜ್ಞಾನದಿಂ ಧ್ಯಾನದಿಂ || ೨೬ ||

ವ|| [10]ದ್ರವ್ಯಮಂ ಕೊಟ್ಟು ಕೆಯ್ಯಂ ಕೊಂಡಾತಂ ಆರಂಬಂಗೆಯ್ಯದೊಡಂ ಶ್ರೀಯಂಬಿಟ್ಟು [11]ತಪಮಂ ಕೆಯ್ಕೊಂಡಾತಂ ವ್ರತಂಗೆಯ್ಯದೊಡಂ ಆಯಿರ್ವರುಮಾಯಿರಡಱಂ [12]ಕೆಟ್ಟರೆಂಬವ ರಂತಾಗದೆಲೆ ತಪೋಧನಾ! [13]ಕೇಳ್ದಿನ್ನಪ್ಪೊಡಂ ನೀನಱಿದು ನೆಗಲ್ವುದು. ಗೃಹ[14]ಸ್ಥರುಮಿನ್ನು ಮೊಂದುಮಾತನೊ[15]ಳ್ಕಿತ್ತಾಗಿ ಕೇಳಿಂ(ಳ್ವುದು)—

ಕಂ|| ಸ್ನೇಹಂ ಕಳತ್ರದಿಂ ಕಡು |
ಮೋಹಂ ಧನದಿಂದಗಲ್ದು ಬಂದೆಡೆವಿಡದಾ ||
ಸ್ನೇಹಂ [16]ಗುಣದೊಳ್ ಗತಿಯೊಳ್ |
ಮೋಹಂ ಪತ್ತಿದೊಡೆ [17]ಪೊರ್ದಲಾರ್ಕುಮೆ ಪಾಪಂ || ೨೭ ||

ವ|| ಗಾಳಿಯುಂ [18]ದೂಳಿಯೊಳ್ ಕೂಡಿದೊಡೊಳ್ಳಿಕೆಯ್ಗುಮೆ ? [19]ಕಂಪಿನೊಳ್ ಕೂಡಿ ದೊಡೊಳ್ಳಿಕೆಯ್ಗುಂ. ಪಾಲುಂ ಪುಳಿಯೊಳ್ ಬೆರೆಸಿದೊಡಿನಿದಕ್ಕುಮೆ ? ಖಂಡಶರ್ಕರೆಯೊಳ್ ಬೆರೆಸಿದೊಡಿನಿದಕ್ಕುಂ. ಅಂತೆ ನಿನ್ನ ಸ್ನೇಹಂ ಕಳತ್ರ[20]ದೊಳ್ ಪತ್ತಿದೊಡೊಳ್ಳಿಕೆಯ್ಯದು. [21]ಗುಣದೊಳ್ ಪತ್ತಿದೊಡೊಳ್ಳಿಕೆಯ್ಗುಂ. ಮೋಹಂ ದ್ರವ್ಯದೊಳ್ ಪತ್ತಿದೊಡೊಳ್ಳಿಕೆಯ್ಯದು. ಸುಗತಿಯೊಳ್ ಪತ್ತಿದೊಡೊಳ್ಳಿಕೆಯ್ಗು[22]ಮಪು ದಱಿನಾ ಯೆರಡುಮನಾ ಯೆರಡಱೊಳ್ ಪತ್ತಿ ಸದೀ ಯೆರಡಱೊಳ್ ಪತ್ತಿಸಿದೊಡೆ ಪಾಪಮೆಂತು[23] ಪತ್ತುಗುಂ ?

---

(1) ಕುಟಿಯೊಳ್ (ಳ) (2) ಫಣಿಗಣಸ್ಥಾನದೊಳಿರ್ದಂ (ಕ,ಚ) ಫಣಿಗಳಸ್ಥಾನ (ಳ) (3) ಸ (ಶ) ಂಕಿಸಿ (ಕ,ಚ) (4) ರ್ದಿಂಸ್ವಲ್ಪ ಸುಖಕ್ಕೆ (ಕ,ಚ) ರ್ದಿಂಸಲ್ವಸುಖಕೆ (ಳ) (5) ಎಂಬುದೆ (ಕ,ಚ) ಎಂಬುದೇಂ (ಳ) (6) ಯುಳ್ಳ ಸಂಸಾರ (ಳ) (7) ಗಟ್ರ್ದಿಯಾಗಳ್ ಮೋಹದ ಕಳ್ತಲೆಪಿಂಗೆ ತಪದ ಬೆಳಗಿನೊಳಿರ್ದುಮತ್ತಂ ಸಂಸಾರಸಂಕ್ಲೇಶಕ್ಕೊಳಗಪ್ಪ (ಕ,ಚ) (8) ಕಜ್ಜಮೊ (ಳ) (9) ಸಂಜ್ಞಾನ (ಳ) (10) ದ್ರವ್ಯಂಗೊಟ್ಟು(ಕ,ಚ) (11) ತಪಂಗೊಂಡಾತಂ (ಕ,ಚ) (12) ಗೆಂಟಱಬರವಿನಂದಮಾಗೆ (ಳ) ಗೆಟ್ಟರಬರವಂನೋಡೆಂಬಂತಾಗದೆಲೆ (ಖ,ಗ) ಯೆರಡಱಂಕೆಟ್ಟಕಱುವಿನಂದಮಾಗೆ (ಚ) (13) ಯಿನ್ನಿನಪ್ಪೊಡಂ ನೀಮಱಿವಿರಿಂಗ್ಗಹ (ಕ) (14) ಸ್ಥರ್ಕಳಿನ್ನೊಂದುಮಾತು (ಚ) (15) ಳ್ಕಿತ್ತಂ (ಚ) (16) ವ್ರತದೊಳ್ (ಕ,ಚ) (17) ಪತ್ತಲಾರ್ಕು(ಳ) (18) ದೂಳಿಯೋಳಿಯೊಳ್ (ಖ,ಗ) (19) ಸುಗಂಧದ್ರವ್ಯದೊಳ್ (ಕ,ಚ) (20) ದೊಳೊಳ್ಳಿಕೆಯ್ಯ (ಕ,ಚ) (21) ಸದ್ವ್ರತಂಗಳತ್ತ ಪತ್ತಿ (ಕ,ಚ) (22) ಮದಱಿಂದಾ (ಕ,ಚ) (23) ಪತ್ತುವಿಡುಗುಂ (ಳ)

ಉ॥ ಆರುಮನೆನ್ನ ನಾಂ ಬಗೆವವೋಲ್ ಬಗೆ[1]ದೋವುವೆನೊಲ್ಲೆನುಗ್ರಸಂ।
ಸಾರ[2]ವಿಕಾರಹೇತುಗಳನುತ್ತಮಶೀಲವಿಶುದ್ಧವೃತ್ತಿಸಂ ॥
ಧಾರಿತನಪ್ಪೆನೆಂದು ನೆಗಲಿಪ್ಪಿನ ತೆಪ್ಪಿನೊಳೊಪ್ಪಿ ತೋರ್ಪ ಸಂ।
[3]ಸಾರಮೆ ಪಾಪಮೆಂದಱಿವರಿರ್ದಱಿಪುತ್ತಿರೆ ತಪ್ಪು[4]ಗೇಳ್ವುದೇ? ॥ ೨೮ ॥

ವ॥ ಇಂತು [5]ಪೇಱಿಯುಂ [6]ಕೇಳದೆ ಕೆಳಗಿವಿಗೆಯ್ದೊಡಂ ಮುನ್ನಂ ಸಂವರೆ[7]ಯಂದಮುಂ [8]ದೃಷ್ಟಾಂತಮುಖದಿಂ ತೋಱಿ ತಿಳಿಪಿದವರ್ಗಳ ಕಥೆಯನವ್ವೊಡಂ ಕೇಳ್ದು [9]ನಂಬಿಮದೆಂತೆನೆ—

ದೃಷ್ಟಾಂತ-[ಉದಾಹರಣ] ಕಥೆ

(ನಾಗಿಲಗಾವುಂಡನ ಕಥೆ)

ಕಂ॥ ನಿಂಬ ಗ್ರಾಮದ [10]ನಾಗಿಲ।
ನೆಂ[11]ಬೊಂ ಗಾವುಂಡನಾತ್ಮಜರ್ ಮುಪ್ಪಿನೊಳೆ ॥
ನ್ನಂ [12]ಬಗೆಯರೆಂದು ಪೋಗಿ ತ।
ಪಂ[13]ಬಟ್ಟಂ ಋಷಿಯರಲ್ಲಿ ಜೈನಾಲಯದೊಳ್ ॥ ೨೯ ॥

ವ॥ ತಪಂಬಟ್ಟು ಕೆಲವು ದಿವಸದಿನವರ ಗುರುಗಳ್ "[14]ನೀನೋದಲ್ವೇಟ್ಟುದು, ಸುದ್ದಗೆಯಂ ಬರೆಯಿ"[15]ಮೆಂದೊಡೆ "ಆನೀ ಕಿಱುಗೂಸುಗಳಂತೆ ಸುದ್ದಗೆಯಂ ಬರೆವೆಂ ಗಡ! ನಾಂ [16]ಪಲವು ಕಾಲದಾತ[17]ನೆಂ" ಎಂದೇವಯ್ಸಿ ಗುರುಗಳನಗಲ್ದು ಪೋಗಿ "ಕಲ್ನೆಲೆ, ಮರಮೊದಲ್, ಬೆಳ್ಳವಾಸಂ ಎಂಬಿವನಱಿವೆಂ. ತಪ[18]ಕ್ಕೆ ಬೇಡಿದುವುಮದುವೆ! ಸಾಲ್ಗುಂ." ಎಂದೊಂದೂರ್ಗೆ ವಂದಲ್ಲಿಯೋದು ಕೆಱಿಯ ಏಱಿಯ [19]ಮೇಗಣ ಮರದ ಪೋಲೊಳಗಿರ್ದು ಮರಮೊದಲಿರ್ದೆನೆಂದಿರ್ದು [20]ನಿಚ್ಚಲುಂ "ಆಕೊಕ್ಕಿನಿತು ವಿಾನಂ ಪಿಡಿದುದು, ನೀರ ಕೊಡಂಗಳಿನಿತುಂ ತುಂಬಿ

---

(1) ದೋವದೆ (ಳ) (2) ವಿಚಾರ (ಖ,ಗ) (3) ಸಾರಱು (ವು) (ಕ,ಚ,ಳ) (4) ಗೇಳ್ವಿರೇ (ಕ,ಚ) (5) ಪಳಿಯಂ (ಕ,ಚ) (6) ಕೇಳೆ ಕಿವಿಗೆಯ್ದೊಡಮೇಂ (ಕ,ಚ) ಕೆಳವಿಗೆಯಿದಿಡಮೇಂ (ಳ) ಕೇಳದಗಿವಿಗೆ (ಖ,ಗ) (7) ಯುಮನದಂ (ಳ) ಯಂಮದಂ (ಚ) (8) ದೃಷ್ಟಾಂತಮಂತೋಱುತಿಳಿದೊಡವರ್ಗಳ (ಖ,ಗ) ದೃಷ್ಟಾಂತರದಿಂ (ಚ) (9) ನೆಗಳಿಮದೆಂತೆನೆ (ಕ,ಚ) ನೆಗಳ್ವುದದಂತೆನೆ (ಳ) (10) ಗಾಣಿಲ (ಕ,ಚ) (11) ಬಂಗವುಂಡ (ಕ,ಚ) (12) ಬಗೆಯಱಿದು (ಚ) (13) ಬಟ್ಟು ಋಷಿಯರೊಡನೆ (ಳ) (14) ನೀಮೋದಲುವೇ (ಖ,ಗ) (15) ಮೆಂದು ಪೋಗಿ (ಪೇಳಿ?) ದೊಡಾನಿನ್ನು (ಕ) (16) ಪಲಗಾಲ (ಕ, ಚ) (17) ನೆಂದವರನಗಲ್ದು (ಕ,ಚ) (18) ಕ್ಕಿವು ಸಾಲ್ಗುಂ (ಕ,ಚ) (19) ಮರದ ಮೇಗಣ (ಳ) ಮರದ ಮೊದಲಿರ್ದು(ಚ) (20) ನಿಚ್ಚಕೊಕ್ಕಿನಿತುವಿಾನಂ ಪಿಡಿದುದಿನಿತು ನೀರಂಕೊಂಡು ಪೋದರೆಂಬುದೆ ತನಗೊಳವಾಗಿಯಂ ತಲ್ಲಿ (ಕ,ಚ) ನಿಚ್ಚನಿಚ್ಚಂ ಕೆರೆಯೊಳಗಣ ಕೊಳ್ಳು

ಪೋದುವು" ಎಂಬುದೆ [1]ತನಗಧ್ಯಯನಮಾ(ದ)ಗಲ್ಲಿ ಯಾ ಮಾರ್ಗದಿಂದಲ್ಲಿಯೆ ಪಲವುದೆವಸಂಗಳ್ ಪೋದಂದಿಂಗೆ ಯವರ ಮುನ್ನಿನ ಭವದ ಕೆಳೆಯಂ [2]ದೇವನಾಗಿ ಪುಟ್ಟಿರ್ದು ಬಗೆದಱಿದು "ಎಲೆ ! ಯೆನ್ನ ಮುನ್ನಿನ (ಭವದ) ಕೆಳೆಯನೀಗಳ್ ಸಂಯಮಮಿಲ್ಲದೆ ಮೂರ್ಖನಾಗಿ ತಪಂ[3]ಗೆಯ್ದು ಪ ನವನಂ ತಿಳಿಪುವೆನೆಂದು ಮತ್ತೊರ್ವದೇವನನೊಡಗೊಂಡು ಬಂದು ಕೆತ್ತಡಿಗಳ ರೂಪುಗೊಂಡವನ ಮುಂದೆ ಕುಳ್ಳಿರ್ದು "ಪೇಱಮಾಸ್ಯವ ಸಂವರೆ ನಿರ್ಜ[4]ರೆಗಳೆಂಬುವೆಂತೆಂ"ದೊಡೆ ಯಾ ಮುತ್ತ ಗೊರವಂ ಮುಳಿ(ನಿ)ದು—

ಶಾ॥ [5]ಎನ್ನುಂಡುಪ್ಪಿನೊಳಾದ ಲೆಕ್ಕದನಿತುಂ ಕೂ[6]ಟುಂಡುದಿಲ್ಲೆಂತು ನೀ ।
ಮೆನ್ನಂ ಕಾಡುವಿರೇಕೆ ಪೇಱಪ್ಪಿನಿರವೇಡಿಂ ಪೋಗಿಮೆಂದಾಗ[7]ಳಿ ॥
ರ್ದಿನ್ನೀ ಮೂರ್ಖನನಾಗದಿಂತು ತಿಳಿಪಲ್ಕೆಂದಂತೆ ಬಂದಲ್ಲಿಗಾ ।
ಸನ್ನೋದ್ದೇಶದೊಳಿರ್ದು ತೊಟ್ಟನೆ ಗೃಹಸ್ಥಾಕಾರಮಂ ಕೊಂಡವರ್ ॥ ೩೦ ॥

ವ॥ [8]ಆ ಮುತ್ತಗೊರವನ ಸಾರೆ ನೀರ ತಡಿಯೊಳ್ ಪಿರಿದಪ್ಪ [9]ಮಱಿಯಂ ಪೊನಲ್ಪುಗು ವಂತಾಗಿ ವಿಗುರ್ವಿಸಿಯಲ್ಲಿ ಯಾ ಕೆಱಿಯ ನೀರನೊರ್ವಂ ಮಾಣದೆ ತುಳುಂಕುತ್ತಿರೆಯುಮೊರ್ವ ನಱಿಯದಂತೆ ಬಂ"ದಿದೇಕೆ ನೀರಂ ತುಳುಂಕಿದಪೆ"ಯೆಂದೊ"[10]ಡೆನ್ನ ಕೆಯ್ಯ ಮಾಣಿಕದುಂಗುರ ಮಿಲ್ಲಿ [11]ಬಿಲ್ತೊಡೀ ನೀರಂ ತುಳುಂಕಿ ಕಳೆದಪೆ"ನೆಂದೊಡೆ "ಎಲೆಮರುಳೇ ಬರ್ಪ ಪೊನಲಂ ಕಟ್ಟದಿಂ ಬಱಿಯಿಮಿಾ ಕೆಱಿಯ ನೀರಂ ತೂಂಬನುರ್ಚಿ ಕಳೆದು ಕೆಱಿದಾನುಮುಱಿದ ನೀರಂ ತುಳುಂಕಿ ಕಳೆದೊಡೆ ನಿನ್ನಱಿಸುವುದಂ ಕಾಣಲಕ್ಕುಂ.[12]ಅಲ್ಲದೊಡೆ ಸೇದೆಗಿಡುವನಿತಲ್ಲದೆ ಪೆಱತಿಲ್ಲ" ಎಂದೊಡೆ "ಆಂತೆಗೆಯ್ವೆ"ನೆಂದಿರ್ವರುಮಾ[13]ಗೊರವರ್ ಕೇಳ್ವಂತಾಗಿ ನುಡಿದು ಅಲ್ಲಿಂ ತಳರ್ದು ಪೋಗಿ ಕೊಕ್ಕುಂ (ಕುರ್ಕುಂ) ನೀರ್ಗಾಗೆಯುಮಾಗಿ ಬಂದವರ ಸಮಿಾಪದ ನೀರ ತಡಿಯೊಳಿರ್ದು ಕೊಕ್ಕುಂ (ಕುರ್ಕುಂ) ನೀರ್ಗಾಗೆಯಂ ಬೆಸಗೊಳ್ಗುಂ. "ಪೇಱೀ ಕೆಱಿಯ ತಡಿಯ ನೀರೆನಿತು ಗುಣ್ಪು ? ನಡುವೆನಿತು ಗುಣ್ಪು ?" ಎಂದೊಡೆ ಕೊಕ್ಕು (ಕುರ್ಕು) ಇಂತೆಂಗುಂ "ಎನಗಪ್ಪೊ [14]ಡೆಲ್ಪತ್ತಿರ್ಪಾಸಿರಬರಿಸಮಾಯುಷ್ಯಂ. ಆಂ ಪಲ[15]ಕಾಲಂ ಬಲ್ತಿರ್ಪಂ. [16]ನೀಂ ಪನ್ನೆರಡು ಬರಿಸದಾತನೆ. [17]ಏನುಮನೆತ್ತಲಱಿವೆ ? ಆನಪ್ಪೊಡೆ ನಿಮ್ಮಜ್ಜಪಜ್ಜರಂ (ಗೊಜ್ಜಗೊಜ್ಜರುಮ) ನೆಲ್ಲರುಮನಱಿವೆಂ. ಈ ನೀರಳವಿಯನಱಿಯೆನೆ ? [18]ನೀನಿಂ ಬಲ್ಲೆಯಪ್ಪೊಡೆ ಪೇಱ್" ಎಂದೊಡಾ ನೀರ್ಗಾಗೆ ಬೇಗಮೆಱ್ದಾ ನೀರಂ—

---

(1) ತನಗೋದಾಗೆ (ಳ) ತನಗೊಳವಾಗಿಯಂತಲ್ಲಿ ಮೂವತ್ತುವರ್ಷಂ ಪೋದಂದವನ (ಕ, ಚ) (2) ದೇವ ಲೋಕದೊಳ್ (ಕ, ಚ) (3) ಗೆಯ್ವನ (ಚ) (4) ರೆಯೆಂಬುದೆಂತೆಂದು ಬೆಸಗೊಂಡೊಡೆದುರ್ಮುಖನಾಗಿಯಾ ಮುತ್ತ ಸವಣಜಂ (ಕ, ಚ) ಮುತ್ತ ಸವಣಂ (ಳ) (5) ಏನುಂಡು (ಳ) (6) ಳುಂಡಿರಿಲ್ಲೆಂದು (ಕ, ಚ) (7) ಳುಂ ಮಿನ್ನೀಮೂರ್ಖ (ಚ) ಳೆಮ್ಮಿನ್ನೀಮೂ (ಕ) ಳೆರ್ದೆನ್ನೀಮೂ (ಳ) (8) ಆಸವಣನ (ಳ) ಆ ಸಾಧುವಿನ (ಖ, ಗ) (9) ಮಳೆಯನಲ್ಲಿವಿಗುರ್ವಿಸಿ (ಳ) ಪೊನಲ್‌ವುಗುವಂತಾಗಿವಿಗುರ್ವಿಸಿ (ಚ) ಮಳೆಯಂ ವಿಗುರ್ವಿಸಿ ಪೊನಲ್ ಪುಗುವಂತಾಗಿವಿಗುರ್ವಿಸಿ (ಕ) (10) ಡೆನ್ನಮಾಣಿಕದುಂಗು (ಕ, ಚ) (11) ಬಿಳ್ದೊಡದನಱಿಸಿ (ಳ) (12) ಇಲ್ಲದೆ (ಕ, ಚ) (13) ಸವಣನಂ ಕೇಳೆನುಡಿದಲ್ಲಿ (ಳ) (14) ದಿರ್ಪತ್ತಿರ್ಯಾಸಿರ (ಳ) (15) ಕಾಲದಾ ತನೆಂ (ಖ, ಗ) (16) ನೀನಪ್ಪೊಡೆ ಪನ್ನೆರಡುವರ್ಷದಾಯುಷ್ಮನಯ್ (ಳ) (17) ಯೆಮ್ಮನೆಂತಱಿವಯ್ (ಕ) (18) ಯೆನೆ ಯೆನುತ್ತುಂನೀನೆನಿತಱಿವೆ ಪೇಱಿಂ (ಳ).

ಕಂ॥ ತಡಿಯೆಡೆಯೊಳೊರ್ಮೆ [1]ಮುಱುಗುತೆ |
ನಡುನೀರೊಳಗೊರ್ಮೆ [2]ಮುಱುಗಿ ಬಂ[3]ದಿಂತಿನಿತೆಂ ||
ದೊಡೆ ಕೊಕ್ಕು ಬೆಕ್ಕಸಂಬಡೆ |
ನುಡಿಗುಂ ನೀರ್ಗಾ[4]ಗೆ ವಾಸಿಯಿಂದಂ ಮತ್ತಂ ॥ ೩೧ ॥

ವ॥ "[5]ನೀನುಂ, ಇಲ್ಲಿ ಮುನ್ನಂ ನೀರಂ ತುಳುಂಕುತಿರ್ದಾತನುಂ, ಈ [6]ಪೋಲಲೊಳಿರ್ದ (ರ್ಪ) ಮುತ್ತಗೊರವನುಂ ಪಲ[7]ಕಾಲದೆಂಬವರನಿತ್ತಲ್ಲದೆ ಮೂರ್ಖರ್ ; ಏನುಮನಱಿಯಿರಿ" ಎಂದಾ[8]ಗೊರವಂ ಕೇಳೆ ನುಡಿದಾ(ದು) ದೇವರ್ಕಳುಂ ಪೋದ ಬಳಿಯಂ [9]ಆಗೊರವಂ ನಾಣ್ಚಿ ಮತ್ತೆ [10]ಬಂದೋದಿಯಾಗಮಮಂ ಕಲ್ತು [11]ಸಂಯಮದೊಳ್ ಕೂಡಿ ಸಂವರೆಯಂಮಾಡಿ ನೆಗಟ್ಟು ಸುಗತಿಯಂ ಪಡೆದನೆಂಬುದಂ ಬಗೆದು [12]ನಂಬುವುದಲ್ಲದೆ ಕೆಮ್ಮನಿರಲ್ವೇಡಾ !

ರಗಳೆ–ದಯೆ ತಳ್ತಿರೆ ಸಲೆ ನಿಚ್ಚಂನಡೆಯಿಂ–ಕ್ರಿಯೆ(ದ)ತಪ್ಪದೆ ಶುಭಮತಿಯಂ ಪಡೆಯಿಂ॥ ೧ ॥
ಸತ್ಯವ್ರತ[13]ಸಂಯಮರಾಗತಿರಿಂ–ನಿತ್ಯಂ [14]ಮಳಕುಳಮಂ ನೀಗುತಿರಿಂ ॥ ೨ ॥
ಅಸ್ತೇಯಮಹಾವ್ರತಮಂ ಸಲಿಸಿಂ–ಪ್ರಸ್ತುತ್ಯ[15]ರೆನಿಪ್ಪವರಂ ನಿಲಿಸಿಂ ॥ ೩ ॥
ಪರದಾರ[16]ಮನೆಂತುಂ ಕಲಿಯದಿರಿಂ–ಪರನಿಂದೆಯನೆಂತುಂ [17]ನುಡಿಯದಿರಿಂ ॥ ೪ ॥
[18]ಪರಿಮಾಣದೊಳಾಳಿಂ ಕಸವರಮಂ–ನೆರಗಿಲ್ಲದೆ ಕೇಳಿಂ ಹಿತಕರಮಂ ॥ ೫ ॥
ನಿಱಿಸಿಂ ಸಮ್ಯಕ್ತ್ವಗುಣೋನ್ನತಿಯಂ–[19]ಮುಱಿದಿರದಿರಿ ಕೊಂಡ ವ್ರತಮಂ ॥ ೬ ॥
ತ್ರಿಕರಣಪರಿಶುದ್ಧತೆಯೊಳೆ ನೆಗೞಿಂ–ಸಕಳೋತ್ತಮಗುಣಯುತರಂ ಪೊಗೞಿಂ ॥ ೭ ॥
ಕೆಡೆ ನೆಗೞಿದಿರಾಗಮಪದ್ಧತಿಯಂ–ಕಡೆ ಗಣಿಸದಿರಿಂ ಬುಧಸಂತತಿಯಂ ॥ ೮ ॥
[20]ಅಱಿವಿಂ ಪೊರೆದೊಳ್ಪಿಂ[21] ತಳ್ತಿರಿಸಿಂ–ಪೆಱಿದೇಂ ಮನದೊಳ್[22] ತೆಳ್ಪಂಬರಿಸಿಂ॥ ೯ ॥
ಎಂತುಂ ಮಳಮಂ ಬರಲೀಯದಿರಿಂ–ಭ್ರಾಂತಾದವಗುಣ[23]ದತ್ತೊಲೆಯದಿರಿಂ ॥ ೧೦ ॥

॥೩೨॥

---

(1) ಮುಳ್ಗುತೆ (ಕ,ಚ) (2) ಮುಳ್ಗಿ (ಕ,ಚ) (3) ದಿನಿತಾಯಿತೆಂ (ಕ, ಚ) ದಿನದಿನಿತಾಯ್ತೆಂ (ಛ) (4) ಗೆಳಸೆಯಿಂ (ಕ)ಗೆಗೋಷಿಯಂ (ಚ) ಸೊಗಯಿಂ (ಛ) ವಾಸೆಯಿಂದಂ (ಖ) (5) ನೀನುಂ ಮುನ್ನಮಿಲ್ಲಿ (ಛ) (6) ಈ ಮರಮೊದಲೊಳಗಿರ್ದ ಮುತ್ತ ಸವಣನುಂ (ಕ,ಚ) (7) ಕಾಲದವರೆಂಬನಿತಲ್ಲದೆ ಮೂರ್ಖರಿರ್ (ಕ,ಚ) (8) ಸವಣನಂ (ಛ) (9) ಅಸವಣನಿಂತುಸಿಗ್ಗಾಗಿ ಮತ್ತೆ ಗುರುಗಳಲ್ಲಿಗೆ ಬಂದು (ಛ) (10) ಬಂದೋದೀಯಾಗಮ (ಚ) (11) ಸಮಯದೊಳ್ (ಚ) (12) ನಂಬಿನೆಗಳ್ವುದಲ್ಲದೆ (ಕ,ಚ) (13) ಸಂಯುತ (ಕ,ಚ) (14) ಮರವಿಗಳಂ (ಕ) ಮಳವಿಗಳ (ಗ) (15) ರಿಗಪ್ಪವಂ ಸಲಿಸಿಂ (ಕ,ಚ) (16) ಮನೆಲ್ಲಿಯುಮೊಲ್ಲ (ಕ,ಚ) (17) ಕಲಿಯದಿರಿಂ (ಛ) ಕಲ್ಲದಿರಿಂ (ಖ,ಗ) (18) ಪರಿಣಾಮ (ಛ) (19) ಮರೆಯದೆ ನೆಗಳಿಂ(ಕ,ಚ) (20) ಅರಿವಿಂದೊಗೆದೊಳ್ಪಿಂ (ಕ) (21) ತಾಳ್ದಿರಿಸಿಂ (ಖ, ಗ) (22) ತಳ್ಪಂ ತಳ್ತಿರಿಸಿಂ (ಕ, ಚ) (23) ಗುಣವಿಂಗೊಲಿ (ಛ) ಗುಣದಿಂದೊಲೆ (ಕ) ಗುಣದಿಂದೊದವ್ದದಿರಿಂ (ಛ)

ಕಂ॥ ಈತೆಱದ [1]ಕಲ್ಪಿಯಂ ಕೇ ।
ಳ್ದೀತೆಱದಿಂ [2]ಮಾಣದಮಳಗುಣಚಾರಿತ್ರ ॥
ಕ್ಕೋತೊಂದಿ ನೆಗಲು[3] ದುರಿತ ।
ವ್ರಾತಂ ಪುಗವದಱಾನಾವುದುಂ ಬಱಿಕರಿದೇ ॥ ೩೩ ॥

ವ॥ ಬಲ್ಲಿ[4]ತ್ತಾಗಿ ಸನ್ನಹಂದೊಟ್ಟವನಂ ಕೆಯ್ದುಗಳ್ ಮುಟ್ಟದಂತೆ, ಸಂವರೆ ಬಲ್ಲಿತ್ತಾ[4]ಗೆ ರ್ದೊನಂ ಕರ್ಮರಜಂಗಳ್ ಪೊರ್ದವದಱಿಂ ಭವ್ಯಜೀವಿಗಳಿರಾ !—

ಶಾ॥ ಚಾರಿತ್ರಾನ್ವಿತರಾಗಿಮುನ್ನತ ಗುಣಪ್ರಖ್ಯಾತಸರ್ವಜ್ಞ [5]ಭಾ ।
ಭಾರಶ್ರೀಪದಭಕ್ತರಾಗಿ[6]ಮಸುಭೃದ್ವರ್ಗಕ್ಕೆ ನೀವಾಗಳುಂ ॥
ಕಾರು[7]ಣ್ಯಾನ್ವಿತಚಿತ್ತರಾಗಿಮಿನಿತಾಗಿರ್ದಂದು ಕರ್ಮಂಗಳಂ ।
ಸಾರಲ್ಕೀಗುಮೆ ಸಂವರಕ್ರಿಯೆಗಳುಂ ಸಾಮಾನ್ಯ[8]ಮೇ ಭವ್ಯನೇ ॥ ೩೪ ॥

— ಗದ್ಯಂ —

ಇದು ಜಿನಶಾಸನ ಪ್ರಭಾಸನ ಶೀಲೋದಿತ ವಿದಿತ
ಬಂಧುವರ್ಮ ನಿರ್ಮಿತಮಪ್ಪ
ಜೀವಸಂಬೋಧನಾ ಗ್ರಂಥಾವತಾರದೊಳ್

[9]ಸಂವರಾನುಪ್ರೇಕ್ಷಾ ನಿರೂಪಣಂ — ನಾಗಿಲಗಾವುಂಡಕಥಾನುವರ್ಣನಂ

ನ ವ ಮೂ ಧಿ ಕಾ ರಂ.

ಈ ಸಂಸ್ಕೃತ ಶ್ಲೋಕವು ಕ,ಚ,ಜ,ಳ ಪ್ರತಿಗಳಲ್ಲಿವೆ—
ಯಶ್ಚಕ್ರವರ್ತೀ ಭುವಿ ಪಂಚಮೋಽಭೂತ್ – ಶ್ರೀನಂದನೋದ್ವಾದಶಮೋಗುಣಾನಾಂ ॥
ಽಧಿಪ್ರಭುಃ ಷೋಡಶಮೋ ಜಿನೇಂದ್ರಃ – ತಂ ಶಾಸ್ತಿನಾಥಂ ಪ್ರಣಮಾಮಿ ನಿತ್ಯಂ ॥

---

(1) ಕಲ್ಪಿಯಂ (ಕ) (2) ದಿಂದೆಸೆಯಲಮಳಚಾರಿತ್ರಂಗಳ್ಗೋತೊಂದಿ (ಳ) (3) ಸನ್ನಾಹಂ ಬಲ್ಲಿತ್ತಾಗಿರ್ದನಂ ಕೈದುಮುಟ್ಟ (ಕ,ಚ) ತ್ತಾಗಿತಾಗಿದೊನಂಕೆಯ್ದು (ಳ) (4) ರ್ದೊೀಗೆ ಕರ್ಮರಜಂ(ಳ) (5) ಸಚ್ಚಾರು (ಕ,ಚ) (6) ಮುಸುಹೃದ್ವರ್ಗಕ್ಕೆ (ಕ,ಚ) ಮಶುಭಪೃದ್ವರ್ಗ(ಜ) (7) ಹ್ಯೋದಯಾಚಿತ್ತ (ಕ,ಚ) ಹ್ಯೋದಿತ(ಳ) (8) ಮೇಂ ಜೀವವೇ (ಳ) (9) ಸಂವರಾಭಿಧಾನಂನವಮಾ

॥ ದಶಮಾಧಿಕಾರಂ ॥

*— ನಿ ರ್ಜ ರಾ ನು ಪ್ರೇ ಕ್ಷೆ —

ಕಂ॥ ಎರಡುಂತೆಱದ ಪರಿಗ್ರಹ ।
ಭರಮಂ ಕಳೆದಿಕ್ಕಿ [1]ತಾಳ್ದಿ ಸಂಯಮಮಂ ಪ ॥
ನ್ನೆರಡುಂತೆಱದ ತಪಂಗಳ್ ।
ಕರಮೊಪ್ಪರೆ [2]ನೆಗಲಿ[3] ಕರ್ಮನಿರ್ಜರೆಯಕ್ಕುಂ ॥ ೧ ॥

ವ॥ ಆಭ್ಯಂತರಂ [3]ಬಾಹ್ಯಮೆಂಬೆರಡುಂತೆಱದ ಪರಿಗ್ರಹಮನೀಡಾಡಿ ಪ್ರಾಣಸಂಯಮ ಮಿಂದ್ರಿಯಸಂಯಮಮೆಂಬೆರಡುಂತೆಱದ ಸಂಯಮನಮುಂ ತಾಳ್ದಿ, ಅನಶನಾವಮೋದರ್ಯ, ವೃತ್ತಿ[4]ಪರಿಸಂಖ್ಯಾನ,ರಸಪರಿತ್ಯಾಗ, ವಿವಿಕ್ತಶಯ[5]ನಾಸನ, ಕಾಯಕ್ಲೇಶ,ಪ್ರಾಯಶ್ಚಿತ್ತ, ವಿನಯ, ವೈಯಾಪೃತ್ಯ, [6]ಸ್ವಾಧ್ಯಾಯ, ವ್ಯುತ್ಸರ್ಗ, ಧ್ಯಾನಮೆಂಬ ಪನ್ನೆರಡುಂ ತೆಱದ ತಪಂಗಳ್ ಸಲೆ, ಶುದ್ಧಪರಿಣಾಮಂ ನಿಲೆ ಕರ್ಮನಿರ್ಜರೆಯಕ್ಕುಂ [7]ಮತ್ತೆ—

---

* ಈ ಸಂಸ್ಕೃತ ಪದ್ಯ ಟೀಕೆಗಳು (ಕ, ಚ, ಜ) ಪ್ರತಿಗಳಲ್ಲಿನವೆ—

ಪ್ರಶಂಸಿತೋ ಯೋ ನ ಬಿಭರ್ತಿ ಹರ್ಷಂ—ವಿರಾಧಿತೋ ಯೋ ನ ಕರೋತ್ಯಹರ್ಷಂ ।
ಶೀಲವ್ರತಂ ಬ್ರಹ್ಮಪದಂ ಗತೋ ಯಃ—ತಂ ಕುಂಥುನಾಥಂ ಸತತಂ ನಮಾಮಿ ॥ ೧ ॥

ಸಂಶ್ಲಿಷ್ಟಾತ್ಮಮಲಸ್ಯ ನಿರ್ಗಮನತೋ ನಿಶ್ಶೇಷವಿಶ್ಲೇಷತ ।
ಶ್ಚಾಂತರ್ಬಾಹ್ಯಚತುಃಸ್ವ(ಸ್ಥ)ಹೇತುವಶತಃ ಸ್ವರ್ಣೋಪಲೇ ಸ್ವರ್ಣತಾ ॥
ಯದ್ವದ್ದೇಹಿನಿ ಕರ್ಮಣೋಽಂಶಗಲನಾನ್ನಿಶ್ಶೇಷವಿಶ್ಲೇಷತಃ ।
ಸಮ್ಯಕ್ತ್ವ ಗ್ರಹಣಾದ್ಯನೇಕಕರಣೈಃ ತತ್ತದ್ವಿಶುದ್ಧಾತ್ಮತಾ ॥ ೨ ॥

ಟೀ॥ ಅಂತ.....ತಃ—ಅಂತರಂಗ ಬಹಿರಂಗಮುಪ್ಪ ದ್ರವ್ಯ ಕ್ಷೇತ್ರ ಕಾಲ ಭಾವಮೆಂಬ ನಾಲ್ಕು ಕಾರಣದಿಚ್ಛೆಯಿಂ, ಸ್ವರ್ಣೋಪಲೇ—ಪೊಂಗಲ್ಲೊಳ್, ಸಂಶ್ಲಿಷ್ಟಾತ್ಮಮಲಸ್ಯ—ಮುನ್ನಂ ತನ್ನೊಳ್ ನಿಜದಿಂ ಕೂಡಿರ್ದ ಕೆಟ್ಟ ಕಾಳಿಕೆಯ, ನಿರ್ಗಲನತಃ—ಕೆಲಂಕೆಲಂದಾಗಿ ಪೋಪುದಱತ್ತಣಿಂದಮುಂ, ಸ್ವರ್ಣತಾ—ಪೊನ್ನತನಂ, ಯದ್ವತ್—ಎಂತಕ್ಕುಂ, ತದ್ವತ್—ಅಂತೆ, ಸಮ್ಯಕ್ತ್ವ ಗ್ರಹಣಾದ್ಯನೇಕಕರಣೈಃ—ಸಮ್ಯಕ್ತ್ವಮೆಂಬೆಕೊಳ್ವುದು ಮೊದಲಾದ ಪಲವು ಪರಿಣಾಮಂಗಳಿಂ, ದೇಹಿನಿ—ಶರೀರದೊಳ್,(ಆತ್ಮನೊಳ್?)ಕರ್ಮಣಃ—ಕರ್ಮದ, ಅಂಶಗಲನಾತ್—ಕೆಲಕೆಲವುಭಾಗಂಗಳ್ ಪೋಪುದರತ್ತಣಿಂದಮುಂ, ನಿಶ್ಶೇಷವಿಶ್ಲೇಷತಶ್ಚ—ನೆಱಿಯಗಲ್ತೆಯತ್ತಣಿಂದಮುಂ, ವಿಶುದ್ಧಾತ್ಮತಾ—ಶುದ್ಧಮಪ್ಪ ತನ್ನ ಸ್ವರೂಪಮಕ್ಕುಂ.

---

(1) ತೂಳ್ದಿಸಂಯಮಮುಂ (ಳ) (2) ನೆಗಟಿ (ಕ) (3) ಬಾಹಿರ(ಚ) (4) ಪರಿಗ್ರಹ (ಚ) (5) ನಾಶನ (ಕ,ಚ) (6) ವುತ್ಸರ್ಗಸ್ವಾಧ್ಯಾಯ (ಕ) ಪ್ರತ್ಯಸ್ವಾಧ್ಯಾಯಧ್ಯಾನಮುತ್ಸರ್ಗ (ಜ) (7) ಮತ್ತಂ (ಕ)

ಮ|| ಅಱುವಂ ತಾಳ್ದಿರವುಂ ಹಿ[1]ತಾತಿರುಚಿಯುಂ ಸಾವದ್ಯದೂರತ್ವಮುಂ।
ಪೆಱಗೊಳ್ವಂ ತನಗೊಳ್ವಮಪ್ಪ ನುಡಿಯುಂ ಸಂಸಾರಭೀರುತ್ವಮುಂ ॥
ನೆಱಿದೊಪ್ಪಿರ್ದ ಮಹಾತಪಃಪ್ರಸರಮುಂ ದುಷ್ಕರ್ಮಬಂಧಂಗಳಂ।
[2]ಪಱಿದೀಡಾಡುಗು[3]ಮೊಯ್ಗುಮಕ್ಷಯಸುಖಾವಾಸಕ್ಕೆ ಕೇಳ್ ಜೀವನೇ ॥ ೨ ॥

ವ|| [4]ಬಿನ್ನಣಮುಂ, ಮನಮುಂ, ಸತ್ವಮುಮುಳ್ಳವಂಗಿದಿ[5]ರ್ಚಿದನರ್ ಸೋಲ್ವಂತೆ ಯಱುವುಂ ತತ್ಪರುಚಿಯುಂ ನೆಗಲ್ತ್ತಿಯು ಮುಳ್ಳಂಗೆ ಕರ್ಮಂ(ಗಳ್) ಪೋಕುಂ—

ಕಂ|| ಮುಳಿಸು ಕಡುಲೋಭ[6]ಮುಕ್ಕೆವ।
ಮಳವಲ್ಲದ ಮಾನಗರ್ವಮೆಂಬ ಕಷಾಯಂ ॥
ಗಳ ಬೇರನೊಡನೆ ಕಿಲ್ತ್ತೊಡೆ।
ಗಳಿಯಿಸದೇ[7]ಕಿರ್ಕುಮಯ್ಯ ಕರ್ಮಸಮೂಹಂ ॥ ೩ ॥

ವ|| ಕೋಮಳಮಪ್ಪ ಸಸಿಯೆಡೆಯ ಕಸಮಂ [8]ಕಳೆದೊಡಂ, ಭವ್ಯನಪ್ಪನ ಬಗೆಯೊಳಗಣ ಕಷಾಯಂಗಳಂ ಕಳೆದೊಡಮಾಕೆಯ್ಯ ಫಲದೊಳಾತನೆಡಱ್ [9]ಪೋಕುಂ. ಈ ಗುಣದೊಳೀತನ ಕರ್ಮದ ತೊ(ಪೊ)ಡಪ್ಪು ಪೋಕುಂ, ಮತ್ತಮೆಂತೆಂಬಾ—

ಉ|| ಏನುಮನೊಲ್ಲೆನೀಭವದ ಮಚ್ಚುಗಳಂ ನುತಸಚ್ಚರಿತ್ರಸಂ।
ತಾನಮನಪ್ಪುಕೆಯ್ವೆನಱುವುಳ್ಳ ಮಹಾತಪದಿಂದಮಾದನು ॥
ಷ್ಠಾನದೊಳಿರ್ಪೆನೆಂದು ನೆಗಟ್ಟಿಂದಮನೆಯ್ದುವ ಮಚ್ಚಿನಿಂ ಶುಭ।
ಧ್ಯಾನದ [10]ಕಿರ್ಚಿನಿಂ ದುರಿತಬಂಧನಮಿಂಧನದಂತೆ ಬೇಯದೇ ॥ ೪ ॥

ವ|| ಗಾಳಿಯೊಳ್ [11]ಕೂಡಿರ್ದ ಕಿಚ್ಚು ವೊಟ್ಟಿರ್ದ ಪುಳ್ಳಿಯಂ ಸುಡದಿರ್ಕುಮೆ? ಚಾರಿತ್ರ ಮುಳ್ಳ ತಪದೊಳ್ [12]ಪುಟ್ಟಿದ ಶುಭ ಧ್ಯಾನಂ [13]ಪುಟ್ಟಿದೊಡೆ ಕರ್ಮಂಗಳಂ ಕಿಡಿಸದಿರ್ಕುಮೆ?—

ನಿರ್ಜರಾ ಸತತಂ ಪ್ರೋಕ್ತಾ ಪೂರ್ವೋಪಾರ್ಜಿತಕರ್ಮಣಾಂ।
ತಪೋಭಿರ್ಬಹುಭಿಸ್ತಾ ಸ್ಯಾತ್ ವೈರಾಗ್ಯಾಶ್ರಿತಚೇಷ್ಟಿತೈಃ ॥ ೩ ॥

ತಾ|| ಎಲೆ ಜೀವನೇ, ಮುನ್ನಂ ನಿನ್ನಿಂದುಪಾರ್ಜಿತಮಾದ ಕರ್ಮಂಗಳ(ಳ್) ವೈರಾಗ್ಯ ದೊಡಗೂಡಿದಂತರಂಗಬಹಿರಂಗಮೆಂಬುಭಯಪರಿಗ್ರಹಮಂ ಕಳೆದಿಕ್ಕಿ, ಪನ್ನೆರಡುಂತೆಱದ ತಪಂಗ ಕೊಡಗೂಡಿ ನೆಗಟ್ಟಿ ನಿರ್ಜರೆಯಕ್ಕುಂ. ಆ ನಿರ್ಜರೆಯುಂ ಮೋಕ್ಷಾರ್ಥಮಾಗಿ ನಿನ್ನಿಂ ನೆಗಳಲ್ವೇಱ್ಕುಮೆಂಬೀ ಸೂತ್ರಾನುಸಾರಮಾದ ದೃಷ್ಟಾಂತಕಥಾನಿರೂಪಣಂಗೆಯ್ವೆನದೆಂತೆನೆ—

---

(1) ತಾವಿರುಚಿ (ಕ) ಹಿತಾರ್ಥ (ಘ) ಹಿತಾಭಿ (ಖ, ಗ) (2) ಪಿರಿದೀ (ಘ) (3) ಮೊಯ್ದು (ಗ) (4) ಬಿನ್ನಣಮುಂಸತ್ವಮುಂಕೈದುಮುಳ್ಳ (ಕ, ಚ) (5) ರ್ಚಿದರೂಪು ಸಾಲ್ವಂತೆ (ಚ) (6) ಮುರ್ಕ್ಕೆವ (ಕ) ಮುರ್ಕ್ಕೆಯ (ಚ) (7) ಕಿರ್ಪುದ(ವ್ಕು)ಯ್ಯ (ಖ,ಗ) (8) ಕಳೆಯದೊಡಂ (ಕ,ಚ) (9) ಪೋಗದು (ಕ,ಚ) (10) ಕರ್ಚ್ಚಿನಿಂ(ಕ,ಚ) (11) ಪುಟ್ಟಿರ್ದ(ಖ,ಗ) (12) ಕೂಡಿರ್ದ(ಖ,ಗ) (13) ಪತ್ತಿರ್ದಕರ್ಮಂಗಳಂ(ಕ,ಚ)

ಕಂ॥ ತೊಱೆದು ಪರಿಗ್ರಹಮುಂ ಸಲೆ ।
ನಿಱಿಸೆ ಸಮ[1]ತ್ವಪ್ರಭಾವಮಂ ತ[2]ನ್ನೊಳಗಂ ॥
ಪೊಱಗುಮನೊಳ್ಕಿ[3]ತ್ತಾರ ।
ಯ್ದಱಿದಾಱಿದ ಬಗೆಯಿನಳಕುಳಂ ಗಱಯಿಸುಗುಂ ॥ ೫ ॥

ವ॥ ಕಾಯ್ದಾಱಿದ ಪಾಲೊಳಂ ಪಿತ್ತಂ ಪೋಕುಂ. ಱಿದಾಱಿದ ಬಗೆಯೊಳ್ ಕರ್ಮಂ ಪೋಕುಂ. ಎಂಬುದೇಂ ಸಂದೆಯ[4]ಮೆ ?—

ಶಾ॥ ಅಂತಿಂತೆನ್ನದೆ ಕೇಳಿ[5]ಮೊಂದೆ ಪಡೆ (ಡಿ) ವಾತೆಲ್ಲಂದದಿಂ ಪ್ರಾಣಿಗ ।
ಳ್ಗಿಂತುಂ ದುಃಖಮನಾಗಲೀಯದಿರಿ[6]ಮಂತಿರ್ದಂದು ಕರ್ಮಂಗಳಂ ॥
ಸಂತಂ ಸಾಧಿಸಿ ಗೆಲ್ದು ಸಿದ್ಧಸುಖಮಂ ಕೆ[7]ಯ್ಕೊಳ್ವಿರೇಂ ಕೆಟ್ಟುದೆಂ ।
ಬಂತಂತಿರ್ದೊಡೆ ಮುಂದೆ ಕೇಡಡಸಿದಂದೇಗೆಯ್ದು ಮೇಗೆಯ್ವಿರೋ ॥ ೬ ॥

ವ॥ ಕಿರ್ಚಿಬ್ಬಾಗಳ್ ಬಾವಿ[8]ಯಂ ತೋಡಲುದ್ಯೋಗಂಗೆಯ್ದೊಡಂ, ಸಾವಡಸಿದಾಗಳ್ ಧರ್ಮಕ್ಕೊಡರ್ಚುವೊಡಂ ಅಲ್ಲಿಗವು ದೊರೆಕೊಳ್ಳವು. ಮುನ್ನಮೇ ನೆಗಳ್ದುದು—

ಕಂ॥ ಱಿಯ[9]ದನನಂತಭವ[10]ದೊಳ್ ।
ನೆಱಿದುಱಿ[11] ಪೆರ್ಚಿರ್ದ್ದ ಕರ್ಮಮಂ ಸಲೆ ಮಿಕ್ಕಿ ॥
[12]ರ್ದಱಿವಿಂ ಗುಪ್ತಿತ್ರಯದಿಂ ।
[13]ನೆಱಿದಿರ್ದಂತರ್ಮುಹೂರ್ತದಿಂ ಪಿಂಗಿ[14]ಸುವರ್ ॥ ೭ ॥

ವ॥ ಅನಾದಿಕಾಲದೊಳ[15]ನಂತಭವದೊಳ್ಪತ್ತಿರ್ದ ಕ[16]ರ್ಮಂಗಳೆಲ್ಲಮೇಕೆ ಪೋಕುಮೆಂಬ ಬೆರ್ಚಂ[17] ಬಿಸುಟ್ಟುದು. ಪಲವುದೆವಸಂ [18]ಕಡಿದು ತಂದೊಟ್ಟಿದ ಪುಳ್ಕಿಯರಾಶಿಯಂ ಕಿಚ್ಚುತಗುಲಿಸ್ದೊಡದೊಂದೆ ಘಳಿಗೆಯೊಳ್ ಬೇನಂತೆ ಸಮ್ಯಕ್ಚಾರಿತ್ರದೊಳ್ ಶುದ್ಧಧ್ಯಾನಂ ದೊರೆಕೊಂಡೊಡೆ ಆತಂಗಂತರ್ಮುಹೂರ್ತದಿಂ ಕರ್ಮಕ್ಷಯಮಕ್ಕುಂ. ಎಂದೊಡೆ ಅದರ್ಕ[18]ಲ್ತ್ತವಡದೆಯುಂ, ಒಡಂಬಡದೆಯುಂ [19]ಇರ್ಪಿರೆಂಬುದೇ ?—

---

(1) ತ್ವಭಾವವುಮಂ(ಕ,ಚ) (2) ತಮ್ಮೊಳಗಂ(ಚ) (3) ತ್ತೆಂದರಿದಾಬಗೆಯನ(ಕ)ತ್ತಾರ್ಯೆದರಿದಾಱಿದ(ಜ) (4) ಯಮೋ (ಚ) (5) ಮೆಲ್ಲ (ಕ,ಚ) (6) ರಿಮಿವಂತಿರ್ದಂತು (ಕ) ರಿಮಿವಂತಿರ್ದು (ಚ) (7) ಕೆಯ್ಕೊಳ್ವುದೇ (ಕ) (8) ತೆಗೆಯಲು (ಚ) ಯನಗುಬ್ಬುದ್ಯೋಗ (ಛ) (9) ಱಿದೆಯನಂತ (ಛ) (10) ಭವಮಂ ನೆಱಿಗುಂಪೆರ್ಚಿಸಿದೆ (ಕ) (11) ರ್ದಱಿವುಂ (ಕ,ಚ) (12) ನೆರೆಮೊಡಮಂತರ್ಮು (ಜ) (13) ಪಿಂಗಿಸುಗುಂ (ಕ,ಚ) (14) ನಂತಮಪ್ಪ ಭವಂಗಳಿಂ (ಖ,ಗ) (15) ಕರ್ಮಮದೀಗಳೇಕೆ (ಕ,ಚ) (16) ಬಿಸುಡುವುದು (ಜ) (17) ಕಡಿದು ಸೀಳ್ದುತಂದೊ (ಛ) (18) ತ್ಥಿವಡ (ಕ,ಚ) (19) ಇರ್ಪುದೆಂಬುದೇಂ (ಕ,ಚ)

ಚಂ॥ ಎಲೆ ಎಲೆ ಜೀವರಾಶಿಗಳಿರಾ ! ಮುಂದಿನ್ನೆಗ[1] ಮಿರ್ದು ಕೆಟ್ಟ ಗಾ ।
ವಿಲಿಕೆಯೆ ಸಾಲ್ಗು ಮಿನ್ನಱಿದು ಬಂಧನಹೇತುಗಳಪ್ಪವೆಲ್ಲಮಂ ॥
ತೊಲಗಿಪುದಾರ್ತು ತಕ್ಕೆಡೆಯೊಳೀವುದು ಕಾವುದು ಸದ್ಗುಣಂಗಳಂ ।
ಸಲಿಸುವುದೀ ಮನುಷ್ಯಭವಮಂ ಪಡೆದುಂ [2]ತಡೆದಿರ್ಪುದೊಳ್ಳಿತೇ ? ॥ ೮ ॥

ವ॥ ತೊಱ[3]ಯಂ ಪಾಯ್ವಾತಂ ಎತ್ತಾನುಂ ಪಱುಗೋಲು ದೊರೆಕೊಂಡೊಡದಂ ಕೆಯ್ಕೊಂಡೇಱದೊಡಂ, ಸುಗತಿಯಂ ಬಯಸುವವಂ ಮನುಷ್ಯಭವಂ[4] ಬಡೆದಲ್ಲಿ ಗುಣಂಗಳಂ ಕೆಯ್ಕೊಂಡು ನೆಗಲದೊಡಮಾತನಾ ತಡಿಯನೆಯ್ದುಂ. ಈತಂ ಸುಗತಿಯನೆಯ್ದನದಱಿಂ—

ಕಂ॥ ಬೇಗಂ ಮನುಷ್ಯಜನ್ಮಂ ।
ಪೋಗದೆ ಕಿಡಿಸುವುದು ಕರ್ಮಮಂ ಪೋದ ಬಳಿ ॥
ಕ್ಕೇಗೆಯ್ದುಂ [5]ಕಿಡಿಸಲ್ ನಿಮ ।
ಗಾಗದು ಗಡ ಮರ್ತ್ಯಜನ್ಮ ಮೆನಿತನಿತಱೊಳಂ ॥ ೯ ॥

ವ॥ ಒಂದು ಪಾಲ ಕೊಡಂ ಬೆರೆಸು ಎಂಬತ್ತು ನಾಲ್ಕುಲಕ್ಕೆ [6]ಕಳ್ಳ ಕೊಡಂಗಳಿರ್ದಲ್ಲಿ [7]ಜಾತ್ಯಂಧಕನ ಕೆಯ್ಯಿಂ ಮಾಣಿಕಮೊಂದನೀಡಾಡಿದೊಡದು [8]ಕಾಕತಾಳನ್ಯಾಯದಿಂ ಪಾಲ ಕೊಡದೊಳ್ ಬೀೞ್ವಂತೆ ಜೀವನುಮೆಂಭತ್ತುನಾಲ್ಕುಲಕ್ಕೆ ಯೋನಿ[9]ಮುಖಂಗಳೊಳೊಂದು ಬಾರಿ ಮನುಷ್ಯ[10] ಯೋನಿಯಲ್ಲಿ ಪುಟ್ಟಿಯುಮುದಂ ವಿತೆಗಳೆದೊಡೆ ಸೆಱುವ ಜನ್ಮಂಗಳೊಳೆಲ್ಲಿಯುಮಾ [11]ಕರ್ಮಮಂ ಕಿಡಿಸಲ್ಬಾರದು – [12]ಮೆಲ್ಪಡದಿರಿಂ—

ಉ॥ "ಬಲ್ಲಿತು ಕರ್ಮಮೇವೆ"ನೆನಲಕ್ಕುಮೆ ಸಂಯಮ[13]ಮುಂ ತಪಂ ಕರಂ ।
ಬಲ್ಲಿತು ಪತ್ತಿ ಪತ್ತು ವಿಡದಿರ್ದೊಡೆ ನಿರ್ಜರೆಯಕ್ಕು[14] ಮೆಂತು ತ ॥
ಳ್ವಿಲ್ಲದೆ ಕೊಳ್ವ ಕಿಚ್ಚು[15] ನದಿಪುತ್ತರೆ ನಂದುಗು[16] ಮಂತು ಮತ್ತಮಂ ।
ತಲ್ಲದೆಯುಂ ಕರಂ ಬಯಸಿ [17]ಮಾಲಿಪ್ಪೊಡೆ ಕಾಯ್ಗಳೆ ಪಣ್ಗಳಾಗವೇ ॥ ೧೦ ॥

ವ॥ ಕಲ್ತ್ರಲೆ [18]ಪಿರಿದೆಂದು ಕೆಮ್ಮನಿರದೆ ಸೊಡರಂ ಪತ್ತಿಸಿ [19]ಬಾಲ್ತೆಯಂ [20]ತೀರ್ಚಿ ಕೊಂಬುದು. ಕರ್ಮಂ ಬಲ್ಲಿತ್ತೇಗೆಯ್ವೆ[21] ನೆನ್ನದೆ ತಪಮಂ ಪೊರ್ದಿ ಸದ್ಗುಣಂಗಳಂ ಕೆಯ್ಕೊಂಡು ನೆಗೞ್ವುದು.

---

(1) ಪೊರ್ದಿ (ಖ) (2) ಮರೆದಿರ್ಪುದೊ (ಕ,ಚ) (3) ಯೊಳ್ (ಕ,ಚ) (4) ಬಡೆದು (ಕ,ಚ) (5) ತಾಗದುಗತಿ (ಖ,ಗ) (6) ಮದ್ಯದ (7) ಮಾಣಿಕಮೊಂದನನಿತಱಮೇಲೆ ಪುಟ್ಟುಗುರುಡನೀಡಾಡಿದೊಡೆ (8) ಕಾಕತಾಳೀಯನ್ಯಾಯ (ಕ,ಚ) (9) ಮುಖದೊ(ಕ,ಚ) (10) ಯೋನಿಯದಱೊಳೆಂತಾನುಂ ತಾರುವಾರಾಗಿ ಬಂದಲ್ಲಿಯೇಂ ಪುಟ್ಟಿಯು (ಕ,ಚ) (11) ಕರ್ಮಂಗಳಂ (ಕ,ಚ) (12) ಮೆಳ್ಪಟ್ಟು, ಮೆಯ್ಪಟ್ಟು ಕಿಡದಿರಿಂ (ಕ,ಚ) (13) ದಿಂಕರಂತಪಂ (ಕ,ಚ) (14) ಮಂತು (ಕ,ಚ) (15) ನಡಿಪು (ಕ,ಚ) (16) ಮೆಂದು ತು (ಕು) ತ್ತಮಂ (ಖ,ಳ) (17) ಮಾಣ್ದೊಡೆ (ಳ) (18) ತಿಣ್ದೆ(ವೆ)ಂದು.(ಕ,ಚ) ಬಲ್ಲಿತ್ತೇವೆನೆಂದು (ಖ,ಳ) (19) ಬಾರ್ತೆಯಂ(ಕ,ಚ) ಬಾರ್ತೆಯಿಪ್ಪ ಕಾರ್ಯಮಂತೀರ್ಚಿ (ಖ,ಳ) ಬತ್ತಿಯಂ(ಗ) (20) ತಿರ್ದುವುಹು(ಕ,ಚ) (21) ನೆಂದಿರದೆತಪಂ ಪೊರ್ದುವುದು (ಕ,ಚ)

ಕಂ|| ಇದು [1]ಭೋಜ್ಯಮಭೋಜ್ಯಮುಮೆಂ |
ದ(ದಿ)ದುವುಂ [2]ಪ್ರವೃತಿಯಿಟ್ಟು ನೋಡ ನಿರ್ವೃತಿ ದೊರೆಯಿಂ ||
[3]ಬುದನಱಿದವಧಾರಿಸಿ ಯ |
ಪ್ಪುದಱಿಂ ನಿರ್ಜರಿಸದಿರ್ಕುಮೇ ಕರ್ಮರಜಂ ॥ ೧೧ ॥

ವ|| ಸಾಧ್ಯಮಸಾಧ್ಯಮೆಂಬೆರಡಱಿಕೊಳಂ ಅಸಾಧ್ಯಮಂ ಬಿಸುಟ್ಟು ಸಾಧ್ಯಮಂ ಕೆಯ್ಕೊಂ[4]ಡು ಬೆಜ್ಜುಗೆಯ್ಯೆ ಕುತ್ತಂ[5]ಪೋಕುಂ. ಅಪ್ಪುದಾಗದೆಂಬೆರಡಱಿಕೊಳಮಾಗದುದಂ ಬಿಸುಟ್ಟಪ್ಪುದನಪ್ಪುಗೆಯ್ದು ನೆಗಟ್ಪ[3] ಕರ್ಮಂ [6]ಪೋಕುಂ ಎಂದೊಡನಾವುವೆಂಬಿರೆ !—

ಚಂ|| ವ್ರತನಿಯಮಸ್ಥರಾಗಿ ಬಹಿರಂಗದ ಗುಪ್ತಿಯುಮಂತರಂಗಶು |
ದ್ಧತೆಯುಮಳುರ್ಕೆವೆತ್ತು ನಿಲೆ[7]ಗೆಲ್ಪು ಪರೀಷಹಮೆಲ್ಲಮಂ ಮನೋ ||
ಗತಪರಮಾತ್ಮನಾತ್ಮನೊಡಗೂಡಿರೆ ನಿಶ್ಚಳಮಪ್ಪ ಚಿತ್ತ ದಿಂ |
ದತಿನುತಮಾಗಿ ಚಿಂತಿಸದೊಡೇಂ [8]ಕಿಡವೇ ದುರಿತಪ್ರಬಂಧನಂ ॥ ೧೨ ॥

ವ|| ಕೆಯ್ಪಡೆದ [9]ವೊಕ್ಕಲ್ (ಕಸಮಂ) ಸೋದಿಸಿ ಪದದೊಳ್ ಬಿತ್ತಿ [10]ಬೆಳಸಂ ಕೊಳ್ವಂತೆ [11]ಭವ್ಯನುಪದೇಶಂಬಡೆದು ಗುಣದೊಳ್ ನೆಗಟ್ಪು ದೋಷಂಗಳಂ [12]ಸೋದಿಸಿ ಮನದೊಳ್ [13]ಶುದ್ಧಧ್ಯಾನಮಂ ನಿಱಿಸಿ ಕೇಡಿಲ್ಲದ [14]ಶುಭಪರಿಣಾಮದೊಳ್ ನೆಗಟ್ಪುವುದು. ಕೆಮ್ಮಗಿರ್ದು ಮುನ್ನಂ[15]ಕೆಟ್ಟುದಿಂತಲ್ತೆ !—

ಕಂ|| [16]ಮಚ್ಚಿಂ ರಾಗದ್ವೇಷಂ |
ಮೆಚ್ಚಮೆ[17]ಯಿಂದಾಗೆ [18]ಕೆಟ್ಟರೀ ಯೆರಡಱಿಕೊಳಂ ||
ನಚ್ಚುವುದಾಸೀ[19]ನಂ ತಾಂ |
ವೊಚ್ಚಂ ಭೋಗದೆ ತಗು[20]ಬ್ಬಿ[3]ಡಪಮಱಿಯದುದೇ ॥ ೧೩ ॥

ವ|| ಶತ್ರುಮಿ[21]ತ್ರರಿರ್ದ ಸಭೆಯೊಳ್ ಬವರಂ ನೀಗದು. [22]ಮಧ್ಯಸ್ಥರಿದ್ದಲ್ಲಿ ನೀಗುಗುಂ. ರಾಗದ್ವೇಷಂಗಳುಳ್ಳ ಬಗೆಯಿಂ ಕರ್ಮಂ ಪೋಗವು. ಉದಾಸೀನಭಾವದೊಳಲ್ಲದೆ—

---

(1) ಭೋಗ್ಯಮಭೋಗ್ಯಮಿದಿಂತಿದುವುಂ (ಕ,ಚ) (2) ಪ್ರವೃತ್ತಿಗೆ ಮೊದಲೆಂದು ನಿವೃತ್ತಿಗೆ ದೊರೆ (ಕ,ಚ) (3) ಬುದಮನದೊಳಾಲಿಸಿ ಸಲೆ ಸದ್ಮ(ದುಗು)ಣದೊಳ್ ನೆಗಳೆ ಕರ್ಮನಿರ್ಜರೆಯಕ್ಕುಂ (ಕ,ಚ) ಬುದನರಿವನಲ್ಲ ಮಾಡಿಪ್ಪುದಱಿಂ ನಿರ್ಜರಿ (ಖ,ಳ) (4) ಡುಜ್ಜುಗಂಗೆಯ್ಯೆ (ಖ) (5) ಪೋಪಂತೆ (ಕ,ಚ) (6) ಪೋಕು ಮಪ್ಪುವನಾವುವೆಂದೊಡೆ (ಕ,ಚ) (7) ಗೆಯ್ದು (ಳ) (8) ಕಿಡವೇಂ ದುರಿತೋಗ್ರಬಂಧನಂ (ಕ, ಚ) (9) ವೊಕ್ಕಲುಟ್ಟು (ತ್ತು) (ಕ,ಚ) (10) ಬೆಳೆದು ರಕ್ಷಿಸಿಫಲಮಂ ಕೊಳ್ವಂತೆ (ಕ,ಚ) (11) ಭವ್ಯನಪ (ಖ) (12) ದಿಸಿಕಳೆದುಮನ (ಕ,ಚ) (13) ಶುಭಧ್ಯಾ (ಳ) (14) ಸುಖಮಂ ಕೆಯ್ಕೊಳ್ವುದು (ಕ,ಚ) (15) ಕೆಟ್ಟ ಕೇಡುಮಿಂತಲ್ತೆ (ಕ,ಜ) (16) ಮೆಚ್ಚಿದ (ಕ,ಚ) (17) ಯೊಂದಾಗಿ (ಖ,ಳ) (18) ಕೆಟ್ಟರಿಯೆ (ಚ) (19) ನತೆಯಾವೊಚ್ಚಂ ಪೋಗದೆ (ಕ,ಚ) (20) ಳ್ದುದಪ (ಖ) (21) ತ್ರರುಗಳ್ತಿರ್ದ (ಕ) (22) ಮಧ್ಯಸ್ಥರಿಂದಲ್ಲದೆ (ಖ)

ಉ|| "ಆದಂತಕ್ಕೆನಗೆಂ"ದು ಸೈರಿಸದೆ ನೀಂ [1]ದುರ್ಮೋಹದಿಂದಂ ಮನಃ |
ಖೇದಂ ಪೆರ್ಚಿ ಕಡಂಗಿ [2]"ನಾಡೆ ಪಡೆದಾಂ [3]ಬೀಯಂಗಳಂ ಮಾಲ್ಪಿ"ನೆಂ ||
[4]ದಾದೀ ಭ್ರಾಂತಿಯೊಳೇನೊ "ಕರ್ಚಿ ಬಿಸುಡಲ್ಕಾಂ ಕೊಂಡೆ"ನೆಂಬಿಗ್ಗೆನೊಳ್ |
*"ಬೋದಂ ಮೋದಗೆಗೊಂಡು"ದೆಂಬ ನಗೆಯಂ ನೀಂ ಮಾಡದಿರ್ ಜೀವನೇ || ೧೪ ||

ವ|| ಒರ್ವಂ ಭೌತಿಕಂ ತಿರಿಯಲ್ಪೋದಲ್ಲಿ ಲಡ್ಡುಗೆದೊರೆಕೊಂಡೊಡೆ ಪಿಡಿದು ಬರುತ್ತಿರ್ದಲ್ಲಿ ಯೊಂದು ಲಡ್ಡುಗೆ ಕೆಯ್ಯಿಂ ಜಗುಲ್ದು ಕಿಸುಕುಳ[5]ದಮೇಲೆ ಬಿೞ್ದೊಡದ ನೆತ್ತಿಕೊಂಡೊಡೆ ಪೆಱಗೆ ಬರ್ಪಾತಂ ಕಂಡು "ಚಿಃ ಅದನೇಕೆ[6]ಕೊಂಡಿರೆ"ನೆ ಮಗುೞ್ದು ನೋಡಿ "[7]ಕರ್ಚಿ ಬಿಸುಡಲ್ ಕೊಂಡೆ"ನೆಂದು ನಗಿಸುವಂತೆ ಧರ್ಮಕ್ಕೆ ಬೀಯಂಗೆಯ್ವೆನೆಂದು ಪಾಪಂಬೆರಸಿರ್ಪರ್ಥಮುಂ ಪಡೆಯಲುದ್ಯೋಗಂ[8]ಗೆಯ್ದುಮಱುವುಳ್ಳವರಂ ನಗಿಸುವಂತು ನೀನೀಗಳಾರ್ತಧ್ಯಾ[9]ನದಿಂ ಮೂಡಲ್ ಪೋಪ ಬಾಲ್ತಿಗೆ ಪಡುವಲ್ ಪೋಗಿ ಸೇದೆಗಿಡುವನಿತೆಯಕ್ಕುಂ. ಅಂತೆ ಪಡೆವ ಸಂಕ್ಲೇಶಪರಿಣಾಮ[10]ದೊಳೇಂ ?

ಕಂ|| ಆಗದುದಣಮಾಗದು [11]ಮ |
ತ್ತೇಗೆಯ್ದೊಡಮಪ್ಪುದಾಗದಿರದೆಂಬೀ ಸಂ ||
ವೇಗಾನ್ಮತಮುಂ ಸೇವಿಸೆ |
ನೀಗದುದೇಕಯ್ಯ ! ಚಿಂತೆಯೆಂಬತಿ[12]ವಿಷಮುಂ || ೧೫ ||

ವ|| ಇರುಳಪ್ಪ ಪೊೞ್ತಱಿಯೊಳ್ [13]ಬೆಳಕು ಪೋಗಿಯಲ್ಲದಿರದು. ಆದಿತ್ಯೋದಯಮಪ್ಪ ಪೊೞ್ತಱಿಯೊಳ್ ಕೞ್ತಲೆ [14]ಪೋಗಿಯಲ್ಲದಿರದು. ಇಂತು ನಿಶ್ಚಯಮಱಿವಂ(ದು)ತು ಕೇಡಡ [15]ಸುವಾಗಳ್ ಅರ್ಥಂ ಪೋಗಿಯಲ್ಲದಿರದು. ಪುಣ್ಯೋದಯಮಪ್ಪಂದು [16]ಎಡಱಿ ಪೋಗಿ ಯರ್ಥಮಾಗಿಯಲ್ಲದಿರದು. ಎಂಬುದಂ [17]ನಿಶ್ಚೈಸುವುದು. ಅಮೃತಸೇವನೆಯೊಳ್ ವಿಷಂ ಪುಗದಿಂತೀ ಬಗೆಯೊಳ್ [18]ಚಿಂತಾದುಃಖಮಾದಾಗಳ್ ಪಾಪಮೆಂಬುದನೆ ಬಗೆಯಾ !—

---

(1) ದುರ್ಮಾರ್ಗದಿಂದಂ (ಕ,ಚ) (2) ನೋಡೆ (ಖ) (3) ಬೀಯಂಗೆಯುತ್ತಿರ್ಪೆ (ಕ,ಚ) (4) ದಾದಂ (ಕ,ಚ) *ಪೋದಂ ಮೋದವೆ (ಕ,ಚ) ಬೋದಂಪೋದಗಿಗೊಂಡುದೆಂಬ ಪಗೆ (ಖ,ಘ) (5) ದಲ್ಲಿ ಬಿರ್ದಡಂ ಕೊಂಡಡೆಪೆರಗಂ (ಕ,ಚ) (6) ಕೊಂಡೆಯೆಂದೊಡೆ (ಕ,ಚ) (7) ತೊಳೆದು ಬಿಸುಡಲ್ (ಘ) (8) ಗೆಯ್ದುದರಿವುಳ್ಳ (ಕ,ಚ) (9) ನಂ ಮಾಡಲ್ ಮೂಡಲಪ್ಪಕಾರ್ಯ (ಕ,ಚ) (10) ದೊಳ್ (ಘ) (11) ದದಳ್ ಮಾಗದು ಮತ್ತೆಗೆಯ್ದೊಡಮಪ್ಪ (ಕ) (12) ವಿಷಯಂ (ಖ) (13) ಬೆಳಗು ಪೋಗದಿರದು ಬೆಳಗಾಗದಿರದೆಂತು ನಿಶ್ಚಯ (ಕ) ಬೆಳಗುಪೋಗದಿರದು ಕೞ್ತಲೆಯಾಗದಿರದಿಂದಿತ್ತೋ (ಚ) (14) ಪೋಗದಿರದು ಬೆಳಗಾಗದಿರದೆಂತು (ಜ) (15) ಸುವಂದು (ಕ) (16) ಪೋಗದಿರದರ್ಥಂಗಳಾಗದಿರವೆಂಬುದಂ (ಕ,ಜ) (17) ನಿಶ್ಚೈಸಿದೊಡಮೃತ (ಕ,ಚ) (18) ಚಿಂತಾದುಃಖಮಾಗದೆಂಬುದಂ ಬಗೆವುದು (ಕ) ದೆಂಬುದನೆಬಗೆ (ಚ)

* ಈ ವಿಷಯಕ್ಕೆ ಆದಿಪುರಾಣದ — ಖಾತ್ವಾಸಮಾಕರಣಂ ಭೌತಿಕಮೋದಕವ್ಯತಿಕರಂ ತಾನಾಗದೇಂ ಪೋಕುಮೇ—ಎಂಬ ನ್ಯಾಯಡೊಡನೆ ಸಂವಾದವಿದೆ. ಅಲ್ಲಿರುವ ಭೌತಿಕಮೋದಕವ್ಯತಿಕರವೆಂಬ ಶಬ್ದಕ್ಕೆ ಈ ವಿವರಣೆ ತಿಳಿಯದಿದ್ದರೆ, ಅರ್ಥವಾಗುವುದು ದುಷ್ಕರ.

ಚಂ॥ ಬಡತನದೊಂದು ದುಃಖಮುನ[1] ಡಂಗಿಸಲರ್ಥಮನುಂಟುಮಾಡಲೆಂ |
ದೊಡರಿಸುವಾಸೆ ದುಃಖಮನೆ ಪೆರ್ಚಿಸುಗುಂ [2]ಬಿಸಿಲಲ್ಲಿದಪ್ಪುದೆಂ ||
ದಡವಿಯ ಬೀವ [3]ಪೆರ್ಮರನನಾಶ್ರಯಿಸಿರ್ದೊಡೆ ತಣ್ಣಿತಕ್ಕುವೇಂ |
[4]ತೊಡರ್ದ ವಿಮೋಹಮಂ ಪಱೞೊಡಲ್ಲದೆ ಪೋಕುಮೆ ದುಃಖ[5]ಮಾತ್ಮನೇ || ೧೬ ||

ವ॥ ಪರದಂ ಮಾಱುವಬಂಡಮಂ ಪಸರಿಸದೊಡಂ, ಭವ್ಯಂ ಕರ್ಮಮಂ ಕೆಡಿಸುವ ಮಹಾ [6]ವ್ರತಂಗಳಂ ತನ್ನೊಳ್ ಪಸರಿಸದೊಡಂ ಆತಂಗೆ ಪಣಮಾಗದೀತಂಗೆ ಗುಣಮಾಗದಿರ್ವರುಂ ಲಾಭಮಂ ಸುಖಮನೇಕಾ[7]ಸೆವಡುವರ್ ?—ಇಂತುಮಪ್ಪುದೇ !

ಮ॥ ಇನಿದೆಂಬಯ್ ವಿಷಮಪ್ಪ ದುರ್ವ್ಯಸನಮಂ ಧರ್ಮಾಮೃತಂ ಕೈಪೆ ಯೆಂ |
ದೆನಸುಂ ನಿಯ್ಪರಲಾಱಿ[8] ಯಾವ ತೆಱನೋ ನಿನ್ನೀ ಮರುಳ್ಗೆಯ್ತುದು ||
[9]ರ್ವಿನಮಕ್ಕುಂ [9]ಬಗೆದಾ ವಿಮೋಹವಶದಿಂ [10]ಪೆರ್ವೈತ್ತಿಕಂಗೊಂಡೆ [11]ಯಿಂ |
ಜಿನವಾಕ್ಯಾಮೃತಸೇವೆಯಿಂ ಕೆಡಿಸದಂ [12]ಮೆಯ್ವಟ್ಟರಲ್ ಜೀವನೇ || ೧೭ ||

ವ॥ ಪಿತ್ತಪ್ರಕೋಪಂ ಮಧುರರಸದೊಳ್[13] ತೀರ್ಪಂತೆ ವಿಪರೀ[14]ತಮಾದ ಚಿತ್ತಂ ಜಿನೇಂದ್ರಾಗಮದೊಳ್ [15]ತಿಳಿಗುಂ. ಅಲ್ಲಿ ತಿಳಿದಾರ್ತು ನೆಗಱಿ ಮಳಂ ಪೋಗಿ ಶುದ್ಧನಕ್ಕುಂ.

ಕಂ॥ ಕರಮೆರ್ದೆಯೊಳ್ ಶ್ಲೇಷ್ಮಂ ಮಿ |
ಕ್ಕಿರೆ [16]ಮದ(ದಿ)ಂ ಹರಿಸ(ಸಿ)ದಾಗಳುರದಿಂ ಮೇಗೆಂ ||
ತಿರೆ ಶುದ್ಧ [17]ಮಂತೆ ಮನದೊಳ |
ಗಿರಿಸದೆ [18]ಬಿಸುಡಾಸೆಯಂ ಭವದ್ಗತಿ[19]ಶುದ್ಧಂ || ೧೮ ||

ವ॥ ವಮನಕ್ರಿಯೆಯಿಂ ಮೇಗಣ ಶ್ಲೇಷ್ಮ[20]ದೋಷಮುಂ ಸೋದಿಸುವಂತೆ ನಿವೃತ್ತಿ [21]ಕ್ರಿಯೆ ಯಿಂ ಕರ್ಮಮುಂ ಕಳೆದು ಶುದ್ಧಂಮಾಡುಗುಂ. ಬೇಗಂ ಕ್ರಿಯಾಸಹಿತ[22]ನಾಗು.

---

(1) ಡಂಗಿಸಿಯರ್ಥ (ಕ,ಚ) ಡಂಗಿಸಿದರ್ಥ (ಖ) (2) ಬಿಸಿಲೊಳ್ಪೇದಪ್ಪುದೆಂ (ಕ) ಬಿಸಿಲಳುರ್ವುದಪ್ಪು (ಖ) (3) ಸೀರ್ವರನ (ಝ,ಳ) (4) ದೊಡೆರ್ದ (ಝ) (5) ಮಾಗದೇ (ಝ) (6) ವ್ರತಮಂ (ಕ) (7) ಸೆವಡುವುದಿಂತುಮಪ್ಪುದೇ (ಖ,ಝ) ವೊಡಿಂತುಮೆಂತುಂ ದೊರೆಗೊಳ್ಳದು (ಳ) ಸೆವಡದಿಂತಿರ್ಪುದು (ಕ) ವಡುವಡಿಂತು ವಿಪರೀತಮಪ್ಪುದೇ (ಚ) (8) ರ್ವಿನದಕ್ಕಂ (ಕ, ಚ) (9) ಬಗೆದೆಂ (ಚ) ಬಗೆದೇಂ (ಚ) (10) ಪೆರ್ಬಯ್ತಿಕಂ (ಕ,ಳ) (11) ಯಿಂದಿನವಾಕ್ಯ (ಚ) (12) ಮೆಯ್ಪಿಟ್ಟ (ಕ,ಚ) (13) ತಿಳಿವಂತೆ (ಕ,ಚ) ಅಱಿವಂತೆ (ಝ) (14) ಕಚಿತ್ತಂ (ಕ) (15) ತಿಳಿದುಮಂತಲ್ಲಿ ತಿಳಿದಾರ್ತು (ತಥ) (ಕ,ಚ) (16) ಮರ್ದಿಂ ಪುರಿಪಿದಾಗಳುರದಿಂ ಮೇಗೆತ್ತಿರೆ (ಕ,ಚ) ಗಳ್ ರಜದಿಂಮೇಗೆ (ಖ) (17) ಮಕ್ಕು (ಚ) (18) ಬಿಡುವಾಸೆಯಂ (ಚ) (19) ಶುದ್ಧಾ (ಖ) (20) ದೋಷಂಕಳೆದು ಶುದ್ಧಂ ಮಾಡುವಂತೆ (ಕ,ಚ (21) ಕ್ರಿಯೆ ಕರ್ಮಂ ಗಳೆದು ಮೇಗೆಶುದ್ಧ (ಕ,ಚ) (22) ನಪ್ಪುದು (ಕ,ಚ) ಹಿತಮಾಡಲುದ್ಯುಕ್ತನಪ್ಪುದು (ಖ)

ಮ|| ಬೆಳಗುಂ ಬೆಂಕೆಯು ಮೊಂದಿ [1]ತನ್ನೊಳ್ಕೊಡಗೂಡಿರ್ದಂದದೊಳ್ಪಿಂ ಸೊಡರ್ ।
ಕಳೆಯುತ್ತಿರ್ಪುದು ತನ್ನ ಕಾಡಿ(ಡ)ಗೆಯ[2]ನಿಂತೆಂತಲ್ಲಿ ಭವ್ಯಂ ಮಹೋ ॥
ಜ್ಜ್ವಳಮಾಗಿರ್ದಱಿತಂ ನೆಗಲ್ತ್ತಿಯೊಡಗೂ[3]ಡಿರ್ದಂದು ದುಷ್ಕರ್ಮಮಂ ।
ಕಳೆಯುತ್ತಿರ್ಪುದು ನೆಟ್ಟ[4]ನಿಂತಱಿಪೆಯುಂ ಮಾಣ್ದಿರ್ಪುದೇ ಜೀವನೇ ॥ ೧೯ ॥

ವ|| ಅಂತಾ ಸೊಡರ ಬೆಳಗುಂ ಬೆಂಕೆ[5]ಯುಮೊಂದಿ ತನ್ನೊಳಡಂಗಿರ್ದ ಕಾಡಿ(ಡ)ಗೆಯಂ ಪೋಱಮಡಿಸಿ ಕಳೆವಂತೆ [6]ಜೀವನುಂ ತನ್ನಱಿತದಿಂ ನೆಗಲ್ತ್ತಿಯಿಂ ಕರ್ಮಮಂ ಕಳೆದುಪದೇಶಂ [7]ಬಡೆವುದು. ತಡೆವುದೇಕೆ ?

ಕಂ|| ರಾಗದ್ವೇಷಂಗಳನುಱಿ ।
[8]ದಾಗಳಮಱಿದಾರ್ತು ನೆಗಲ್ವ ತಪದೊಂದು ಮಹೋ ॥
[9]ದ್ಯೋಗದ ಸುಧ್ಯಾನಂ ಸಂ ।
ದಾಗಡೆ ಸೋರಲ್ ತಗುಳ್ಗುಮ[10]ಘವಿಷಯಂಗಳ್ ॥ ೨೦ ॥

ವ ॥ ಪೂರ್ವಾಹ್ಣಂ ಮಧ್ಯಾಹ್ನಮೆಂಬೆರಡುಂ ಪೊೞ್ತುಗಳಂ [11]ಕಳೆದಿಱಿಯುಂಬೊೞ್ತಿಱೊಳ್ [12]ವೈದ್ಯಕ್ರಿಯೆಯಿಂ ಬೆಜ್ಜಂ ದೋಷರಕ್ತಮಂ ಕಳೆವಂತೆ ರಾಗದ್ವೇಷಮೆಂಬೆರಡುಮಂ ಕಳೆದು ಸಲ್ಲೇಖನಾಕಾಲದೊಳ್ ಶುದ್ಧಧ್ಯಾನಕ್ರಿಯೆಯಿಂ ತಪಸ್ವಿ ಕರ್ಮಕಳಂಕಪಂಕಮಂ [13]ಕಳೆವುದಿರವೇಡಾ !—

ಮ|| [14]ನೆಲೆವಾಱೀವ ಧನಂ ಸುವರ್ಣ[15]ನಿಕರಂ ರತ್ನವ್ರಜಂ ಧಾನ್ಯಸಂ ।
ಕುಲಮಿಷ್ಟರ್[16] ಸಹಜರ್ ಸುತರ್[17] ವನಿತೆಯರ್ ತಾಯ್ ತಂದೆಯೆಂದಿಂತು ಕೇಳ್ ॥
ಪಲವುಂ ಬಂಧ[18]ಪರಿಗ್ರಹಾಗ್ರಹವಿನಿರ್ಮುಕ್ತಂಗೆ ಚಾರಿತ್ರದೋ ।
ರ್ವಲಯುಕ್ತಂಗೆ ದುರಷ್ಟಕರ್ಮರಿಪುಗಳ್ ತೂಳ್ದೋಡದೇಂ [19]ನಿಲ್ವುವೇ ॥ ೨೧ ॥

ವ|| ಪೆಱ[20]ರಱಿದು ತನ್ನ ಸಾಲಂಗೊಟ್ಟೊಡಂ, ತಾನಱಿದು ಸಂಸಾರ[21]ಮೋಹಂ ಗೆಟ್ಟೊಡಂ ಆತನ ತಗಪುವಿಾತನ ಕರ್ಮದ ಬಿಗಿ(ಗು)ಪುಂ ಪತ್ತು[22]ವಿಡುಗುಂ. ಇಂತೆಂದು ತಡೆದಿರವೇಡಾ !—

---

(1) ತನ್ನನೊಡಗೂಡಿರ್ದಂದುವೊಲ್ಪಿಂ(ಖ) (2) ನೆಂತಂತಲ್ಲಿ(ಕ) (3) ಡಿರ್ದೊಳ್ಪು(ಕ,ಚ) (4) ನೆಂದಱಿಪೆಯುಂ (ಕ,ಚ) (5) ಯುಂ ತನ್ನೊಳ (ಕ,ಚ) (6) ಜೀವಾ ನಿನ್ನರಿಕೆಯಂ (ಕ,ಚ) (7) ಬಡೆವುವೇಕೆ (ಚ) (8) ದಾಗಮಮಱಿ (ಕ) (9) ದ್ಯೋಗದೆ ಸಂಯಮದೊಳ್ನಿಂದಾಗಳೆ (ಕ,ಚ) ಯಮದೊಲ್ಪಿಂದಾಗಳೆ (ಝ) (10) ಮಘಕುಲಸಲಿಲಂ (ಕ,ಚ) (11) ಕಳೆದು ಮಧ್ಯಾಂತರದೊಳ್ (ಖ,ಝ) (12) ವೈದ್ಯಶಾಸ್ತ್ರ ಕರ್ಮ ಕ್ರಿಯೆಯಿಂ ಕುತ್ತಮಂ (ಕ,ಚ) (13) ಕಳೆದುಸುಖಮಪ್ಪುದು (ಕ,ಚ) (14) ನೆಲವೊಳ್ಜೀವ (ಖ) ನೆಲೆವಾ ೞ್ದೀನಧನಂ (ಕ) (15) ನಿಚಯಂ (ಕ,ಚ) (16) ಸುಹೃದರ್ (ಕ,ಜ) (17) ವನಿತೆಮೆಯ್ತಾಯ್ (ಝ) (18) ಪರಿಗ್ರಹಧ್ವಯವಿನಿ (ಕ) ಪರಿಗ್ರಹದ್ವಿತಯಮುಕ್ತಂ (19) ಪೋಕುಮೇ (ಕ,ಚ) (20) ರಱಿಯೆ (ಕ) (21) ಮೋಹಮಂ ಕಿಡಿಸದೊಡಂ (ಕ,ಚ) (22) ವಿಡದು (ಕ,ಚ) ವಿಡದಱಿದು ನಡೆಯದಿರವೇಡಾ (ಕ)

ಕಂ|| ವರಕಾಲಲಬ್ಧಿ ದೊರೆಕೊಳೆ |
ದುರಿತಂಗಳಡಂಗಿ ಬರುತುಮಿರೆಯುಂ [1]ತನ್ನಿಂ ||
ದರಿಗಳಲಿಯಲ್ಕೆ ಬಗೆಯೆಯು |
ಮಿರಲೆ ಕಿಡೆ ನೆಗಲ್ವುದಳಮನಲಿಯಲ್ ಬಗೆಯಿಂ ||೨೨||

ವ|| ತನಗೆ ಸಾಮರ್ಥ್ಯಮುಳ್ಳಂದು ಪಗೆವನಸಿಯ[2]ನಾದಂದು ಬೇಗಁ ಕಿಡಿಸದೊಡಂ, ಭವ್ಯಂಗೆ ಕಾಲಲಬ್ಧಿ ದೊರೆ[3]ಕೊಂಡಲ್ಲಿ ದುಷ್ಕರ್ಮಮಾಸನ್ನಮಾಗಿರೆ ಶುದ್ಧಾನುಷ್ಠಾನದೊಳ್ ನೆಗಲಿ ದೊಡಂ ಆತನ ಪಗೆಯುಮಿಾತನ ಕ[4]ರ್ಮಮುಮೆಂದುಂ ಕೆಡವು. [5]ಪೆಱವು ವಾರ್ತೆಯೊಳೇಂ ?—

ಮ|| ಮಱಿದತ್ಯುಗ್ರತಪಂಗಳೆಂಬ ಬೆಳಗಿಂ[6]ದಾ ತತ್ತ್ವಮುಂ ಕಂಡು ಮು |
ತ್ತಱಿದಿರ್ದಾಱಿದ ಚಿತ್ತದಿಂದಡವಿಯಂ ಪೊಕ್ಕಿರ್ದು [7]ಕೆಲ್ಲಯ್ಸಿ ಬೆ ||
ಟ್ಟುಱಿದಿರ್ದೊಯ್ಯನೆ ಪುಲ್ಲೆಗಳ್ ಪೊಳೆವ ಕಣ್ಣಿಂ ನೋಡೆ ನಿಶ್ಚಿಂತಮಾ |
ತೆಱಿದಾಶ್ಚರ್ಯ[8]ದಿನಿರ್ದು ಪೋಗೆ ದೆವಸಂ ಕರ್ಮಂಗಳೇಂ [9]ಪೋಗವೇ ? ||೨೩||

ವ|| ಪದನಱಿದು ಕಾಸಿದ ಪಾಲೊಳ್ ಸವಿ[10]ಪುಟ್ಟುಗುಂ. ತತ್ತ್ವಮಱಿದು ನೆಗಲ್ದ ತಪದೊಳ್ ಧ್ಯಾನಂ ನಿಲ್ಕುಂ, ಆಸವಿ ನಾಲಗೆಯನೆಯ್ದಿದೊಡಂ ಈ ಧ್ಯಾನಂ ಮೋಕ್ಷನನೆಯ್ದಿದೊಡಂ ಸುಖಮಾಗದಿರ್ಕುಮೆ ?

ಕಂ|| ಆವೊಂಗೆ ಪುಣ್ಯಪಾಪಂ |
ತೀವುವು[11]ದಡಗಿರ್ಕುಮಿರ್ದು[12]ದುಂ ಸೋರ್ಗುಂ ಮು ||
ತ್ತಾ ವಿಭು ವಿಯೋಗಿ ಮುಕ್ತಿಯು |
ಪಾವಗಮಾತಂಗೆ ತಡೆಯ[13]ದಿರ್ಕುಂ ಜೀವಾ ||೨೪||

ವ|| ಉದಾರ ಶಕ್ತಿಯೊಳ್ [14]ದ್ರವ್ಯಂ ಪೋಗೆ [15]ಚಾಗಿಯಕ್ಕುಂ. ತಪದ ಶಕ್ತಿಯೊಳ್ ಕರ್ಮಂ ಪೋಗೆ ಪರಮಯೋಗಿಯಕ್ಕುಂ. ಆಚಾಗಿ ಪೊಗಲ್ತಿಯನೆಯ್ದುಗುಂ. ಈ ಯೋಗಿ ಮುಕ್ತಿಯನೆಯ್ದು[16]ಗುಂ ನೀಮಿದಂ ಬಗೆಯಿರೆ ! ಕೆಮ್ಮನಿರ್ಪಿರೆ—

---

(1) ತಮ್ಮಿಂ।ದರಿಯರಳಿಯಲ್ಕೆ ಬಗೆಯೆ ಬರೆ ತಡ॥ವಿರವೆಂ ಕಿಡೆನೆಗಲ್ದುದಳಮನರಿವುದುಪಗೆಯಂ (ಕ,ಚ) ದರಿಯಲಳಿಯಲ್ಕೆ ಬರೆಯುಮಿರಲೆ ಕಿಡೆ ನೆಗಲ್ದುದಳಮ (ಖ,ಝ) (2) ನಾದೊಡೆ (ಕ,ಚ) (3) ಕೊಂಡೊಡಂ ಕರ್ಮಂಸಂತಮಾಗಿರೆ (ಕ,ಚ) (4) ರ್ಮಮೆಂತುಂ ಕಿಡದಿರವು (ಖ,ಝ) (5) ಪೆರವುನೆಗಳ್ತೆಯೊಳೇಂ (ಕ,ಚ) (6) ತಾಂ (ಕ,ಚ) (7) ಕಲ್ಲಯ್ಸಿ (ಝ) (8) ದಿನೆರ್ದು (ಝ) (9) ಪೋಕುಮೇ (ಝ) (10) ಪುಟ್ಟುವಂತೆ (ಕ,ಚ) (11) ದುಡುಗಿ (ಕ,ಚ) ದುಟು (ಳ) ದಿರ್ಕು (ಖ,ಗ) (12) ದಂ (ಕ,ಚ) (13) ದಕ್ಕುಂ (ಳ) (14) ದ್ರವ್ಯಮಂಕೊಡಲ್ (ಳ) (15) ಜೋಗಿ (ಕ,ಚ) (16) ಮೆಂಬುದಂ ಬಗೆಯದೆ ಕೆಮ್ಮನಿರ್ಪುದೇ (ಕ,ಚ)

ಮ|| ನೆನೆದೀ ಸಂಸೃತಿಯಂದಮಂ ನೆಡುಗುತುಂ [1]ಬೆ(ಳ್ಳ)ಲ್ಲುತ್ತು(ರ್ಪ) ಮತ್ತಾವಗಂ ।
ಮನದೊಳ್ ಮೋಹವು[2]ನುಂಟುಮಾಡದೆ ಕರಂ ಬೇಱಾಗಿ ಮಾಡಿ[3]ರ್ದ ಮ ॥
ತ್ತನುವಂ ತಮ್ಮೊಳಡಂಗುವಂತಿರೆ ಕಲಿಲ್ದಿ[4]ರ್ಪಂದದುಂ ಮಾಡುವಾ ।
ಮುನಿಪಂ ಮಾಡುಗುಮುಗ್ರಕರ್ಮವಱಿವಂ ತಾಂ ಮುಕ್ತಿಯೊಳ್ ಕೂಡುಗುಂ ॥ ೨೫ ॥

ವ|| ಬಟ್ಟೆಯೊಳ್ ಭಯ[5]ಮುಳ್ಳುದನಱಿದಂಜಿ ಕೆಯ್ದುವನೋಸರಿಸಿಕೊಂಡು [6]ಪದುಳಿಗ ನಾಗಿ ನಡೆವಾತಂ [7]ತನ್ನುದ್ದೇಶಿಸಿದೆಡೆಯಂ ಬೇಗ[8]ಮೆಯ್ದುವನಂತೆ ಸಂಸಾರದ ಭಯಕ್ಕಂಜಿ ಮಹಾವ್ರತಂಗ[9]ಳಂ ಕೆಯ್ಕೊಂಡು ಮೆಯ್ಯಂ ತನ್ನೊಳಡಂಗಿಸಿ ನಡೆವಾತಂ ಬೇಗಂ ಮುಕ್ತಿಯ ನೆಯ್ದುಗುಮೆಂ[10]ಬಿದಂ ಕಂಡು ನಂಬಿರೇ !

ಕಂ|| ಚಾರಿತ್ರಮುಮೊಳ್ತಪಮುಮು ।
ವೋ(ನೋ)ರಂ[11]ತೊಡನೊಡನೆ ಪೆರ್ಚಿ ಶುಭಪರಿಣಾಮಂ ॥
[12]ನೇರಿತ್ತಾಗಿರೆ ನಿಲೆ ಸಂ ।
ಸಾರವಿಷದ್ರುಮದ ಬೇ[13]ರ್ಗಳಂ ಪಱಿಯದುವೇ ॥ ೨೬ ॥

ವ|| ಚತುರಂಗಬಲಮುಂ ಬುದ್ಧಿಯಬಲಮುಂ ತಿಣ್ಣಮಾಗೆ ಪದುಳಮಿರ್ಪ ಮನಂ ಕೂರಿತ್ತಾಗೆ ನಡೆವಾತಂ ಪಗೆಯಂ ಗೆಲ್ವಂತೆ ಅಱಿವುಂ ನೆಗಲ್ತ್ತಿಯುಮೊಂದಿ[14]ಪೆರ್ಚಿದಲ್ಲಿ ನಿಶ್ಚಳ ಮಪ್ಪ ಶುದ್ಧಧ್ಯಾನಂ ನಿಲೆ ಕರ್ಮವೈರಿಯಂ [15]ಗೆಲ್ವುದಱಿಂ ಜೀವಾ, ನೀನುದ್ಯೋಗಂಗೆಯ್ಯ ದೇಕಿರ್ಪೆ ? ಯೆಂದಿಂತ [16]ವಿಪಾಕನಿರ್ಜರೆ [17]ಸವಿಪಾಕನಿರ್ಜರೆಯೆಂಬೆರಡುಂ ತೆಱದ ನಿರ್ಜರೋಪಾಯಮಂ ಪೇೞ್ದು ತೋಱಿ ಕಲ್ಪಿಸೆಯುಮೇಂ ತಿಳಿಯು(ಯಿ)ರಿ ? [18]ತಮ್ಮಿಂ ತಾಮೆ ತಿಳಿದು ಬೇಗಂ ನಿವೃತ್ತಿಗೆಯ್ದು ಕರ್ಮಕ್ಷಯಂಗೆಯ್ದ ಮಹಾಪುರುಷರ ಕಥೆಯನವ್ವೊಡಂ [19]ಕೇಳಿಮದೆಂತೆನೆ :—

---

(1) ಬೆಳ್ಳುರ್ತುಮಂತಾಗಳುಂ (ಕ,ಚ) (2) ನೊಂದಲೀಯದೆ (ಕ,ಚ) (3) ರ್ದವರ್ತನು (ಕ,ಚ) (4) ರ್ಪಂತುಟಂ (ಕ,ಚ) (5) ಮಕ್ಕುಮೆಂದಂಜಿ (ಕ,ಚ) ಮುಂಟೆಂದಂಜಿ (ಳ) (6) ಪದುಳಿದನಾಗಿ (ಕ) (7) ತನ್ನ ಬಗೆದೆಡೆಯಂ (ಕ,ಚ) ತನ್ನುದ್ಯೋಗಿಸಿ (ಖ,ಗ) (8) ಮೆಯ್ದುಗುಮಂತೆ (ಕ,ಚ) ಮೆಯ್ದುವಂತೆ (ಖ,ಗ) (9) ಳಂಕೊಂಡು (ಕ) (10) ಬಿದನವ್ವೊಡಂ ಕಂಡು (ಕ,ಚ) (11) ತಿರೆಯೊಡನೆ (ಕ,ಚ) (12) ನೇರಿತೆನೆ ಪೆರ್ಚಿ (ಕ,ಚ) (13) ರ್ಗಳೀಂಪರಿಯದುದೇ (ಕ,ಚ) (14) ಯುಂ ತಪಮುಂ ಪೆರ್ಚಿ ನಿಂದಲ್ಲಿ (ಕ,ಚ) (15) ಗೆಲ್ದುಮಿಲಿಜೀವಾ (ಕ,ಚ) (16) ಸವಿಪಾಕನಿರ್ಜರೆ (ಕ,ಚ) (ಕ,ಚ) (17) ಅವಿಪಾಕ (ಕ,ಚ) (18) ತಿಳಿಯದರ್ಥವಿಯಿಂತಾಮೆತಿಳಿದು ಬೇಗಂಸರ್ವಸಂಗಪರಿತ್ಯಾಗಂಗೆಯ್ದು ಕರ್ಮಕ್ಷಯಂಗೆಯ್ದ (ಕ,ಚ) (19) ಕೇಳ್ದು ನೆಗಲ್ತಮದೆಂತೆಂದೊಡೆ (ಕ,ಚ)

— ನಿದರ್ಶನ ಕಥೆ —

(ಸುವರ್ಣಭದ್ರನೆಂಬ ಖಚರನ ಕಥೆ)

ಕಂ|| ಭಾನುಪುರಮೆಂಬ ಪುರವಂ ।
ಭೂನುತನಾಳ್ಗಂ ಸುವರ್ಣಭದ್ರಂ ನಿಜವಿ ||
ಜ್ಞಾನಿ ವರ[1] ದಾನಿ ಸಂದಭಿ ।
ಮಾನಿ ಗುಣಸ್ಥಾನಿ ಖಚರನಿಕರಾಧೀಶಂ ॥ ೨೭ ॥

ವ|| ಆತಂಗೆ ನೈಸರ್ಗಿಕಮಪ್ಪ ಸಮ್ಯಗ್ದರ್ಶನ ಸಮ್ಯಗ್ಜ್ಞಾನ ಸಮ್ಯಕ್ಚಾರಿತ್ರಂಗಳುದಯಮಾಗೆ ಬಂಧಹೇತುಗಳ್ ಪೋಗೆ [2]ಪುಣ್ಯಕರ್ಮದ ಫಲಂ ಸಫಲಮಾಗನುಭವಿಸುತ್ತಿರೆ ಸುರಲೋಕದ ದೇವಂ ವಿಮಳವಾಹನನೆಂಬಂ[3] ಸಮ್ಯಗ್ದೃಷ್ಟಿ ಚೈತ್ಯಾಯಯವಂದನಾ[4] ನಿಮಿತ್ತಂತೊಟ್ಟ[5]ಲುತ್ತುಮಾ ಪೊಲ ಲ್ಗೆ ವಂದಲ್ಲಿಯ ರತ್ನರಚಿತಾತಿಶಯಮಪ್ಪ ಚೈತ್ಯಾ[6]ಲಯಮುಂಬಂದಿಸುತ್ತುಂ ಪೂಚಿಸುತ್ತುಮಿರ್ಪಲ್ಲಿ ಸುವರ್ಣಭದ್ರನುಂ ದೇವನಂ ಬಂದಿಸಲ್ [7]ಬಂದಾ ದೇವನಂ ಕಂಡಾತನೊಳತಿಪ್ರೀತಿಯಾಗೆ ಧರ್ಮಾನುರಾಗದಿಂದಾತ[8]ನಂ 'ಬಾ ನಾಮುಂ ನಂದೀಶ್ವರದ್ವೀಪದ ಚೈತ್ಯಾಲಯಂಗಳಂ ಬಂದಿಸಿ ಬರ್ಪ' ಮೆಂದೊಡೆ 'ಅಂತೆ ಗೆಯ್ವ' ಮೆಂದಿರ್ವರುಂ ತಂತಮ್ಮ ವಿಮಾನಂಗಳನೇ[9]ಱಿಕೊಂಡು ಪೋಗೆಪೋಗೆ ಮಾನುಷೋತ್ತರಪರ್ವತದಲ್ಲಿ ಸವರ್ಣಭದ್ರನ ವಿಮಾನಂ [10]ಪೋಗದೆ ಕೀಲಿಸಿ ದಂತಿರೆ ನಿಲೆ ಯಾ ದೇವನಱಿದಿಂತೆಂದಂ—

ಚಂ|| ಎಲೆ ಬಗೆಯಿಲ್ಲದೆನ್ನೊಡನೆ ತಂದೆನನಿಂ[11] ದಿತಮಾನುಷೋತ್ತರಾ ।
ಚಲಮಿದು ನಿನ್ನ ಸಲ್ವಳವಿ[12]ಯಲ್ತು ಬರಲ್ ನಿನಗಾಗದಾಯ್ತು ನಿ ॥
ರ್ಮಲ[13]ಗುಣರತ್ನ ಮುಕ್ತಿಪದಭಕ್ತ ಕಳಂಕವಿರಕ್ತ ನೀಂ ಮನಃ ।
ಸ್ಖಲಿತನೆಯಾಗದಿರ್ [14]ಮಗುಟ[15] ಪೋಗು ಶು[15]ಭೋದಯನಾಗು ಖೇಚರಾ॥ ೨೮ ॥

---

(1) ಲಸದಭಿಮಾನಿ (ಕ) ವಾಗಿಲಸದಭಿಮಾ (ಚ) (2) ಪುಣ್ಯಫಲಂ ಸಫಲಮಾಗುತ್ತಿರೆ (ಕ,ಚ) ಪುಣ್ಯ ಕರ್ಮಂಗಳ ಫಲ (ಖ) ಸಫಲಮಾಗೆ ಸುಖವಿಂದಿರೆ (ಖ,ಛ) (3) ಸದ್ರಿಷ್ಟಿ (ಛ) ಸದ್ದೃಷ್ಟಿ, ಸದೃಷ್ಟಿ (ಕ,ಚ) (4) ದನಾಭಕ್ತಿನಿಮಿ (ಕ,ಚ) (5) ತೊಳಲ್ವನಾಪೊಳ (ಕ,ಚ) (6) ಲಯಂಗಳಂ (ಕ,ಚ) (7) ಬಂದೊಡಾ ದೇವಂಕಂಡಾತನೊಳತಿಪ್ರೀತಿ (ಕ,ಚ) (8) ಬನ್ನಿಮಾಮುಂ ನೀಮುಂ ನಂದೀ.... (ಕ) ಬನ್ನಿಮೆಂದೊಡಂತೆ ಗೆಯ್ವೆ ನೆಂದಿರ್ವರುಂ ತಂಮ್ಮತಮ್ಮ (ಚ) ಬನ್ನಿ ನೀಮುಮಾಮುಂ ನಂದೀಶ್ವರ (ಖ) (9) ನೇಱುಪೋಪಾಗಳ್ (ಕ, ಚ) ಕೀಲಿಸಿದಂತೆ ಪೋಗದೆ ನಿಂದಾಗಳಾದೇವನಱಿ (ಕ, ಚ) (10) ಪೋಗದೆನಿಲೆಯಾದೇವ (ಖ) (11) ದೆನಗಿಂದಿತ (ಕ, ಚ) (12) ಯತ್ತ (ಕ, ಚ) (13) ಗ ಣಯುಕ್ತ ಜೈಪನದ (ಚ) ಗುಣಯುಕ್ತ ಜೈನ (14) ಮುಗುಳ್ದು (ಕ) (15) ಸುಬೋಧಕನಾಗು (ಖ)

ವ|| ಎಂದಾ ದೇವಂ [1]ಪೋಗೆಯಾಗಳ್ ಸುವರ್ಣಭದ್ರಂ ಪೋಗಲ್ ಪಡೆಯ[2]ದ ಸಿಗ್ಗಿನೊಳಂ, ಬಗೆಯದೆ ಬಂದೆಗ್ಗಿನೊಳಂ ತನಗೆ [3]ವೈರಾಗ್ಯಂ ಪುಟ್ಟಿ ಪೊಲಿಲ್ಗೆ ಪೋಗಲೊಲ್ಲದೆ [4]ಚಂಪಾಗಿರಿಯ ಕೆಲದ ವಿಶಾಲೆಯೆಂಬ ತೊಱೆಯ ತಡಿಗೆ ಬಂದು ವಿಮಾನಮಂ ಬಿಸುಟ್ಟು, ನಿರ್ಜಂತುಕ ಪ್ರದೇಶದೊಳಿರ್ದುಭಯಪರಿ[5]ಗ್ರಹನಿವೃತ್ತಿಗೆಯ್ದು "ನಮಸ್ಸಿದ್ಧೇಭ್ಯಃ" ಎಂದು ಪಂಚಮುಷ್ಟಿಯಿಂ[6]ಕುಂತಳಮಂ ಪಱಿದೀಡಾಡಿ ಸಕಳವ್ರತಿಯಾಗಿರ್ದಲ್ಲಿಯೆ [7]ತಾಂ ಪ್ರತಿಮಾಯೋಗದೊಳಿರ್ಪನ್ನೆಗಂ—

ಕಂ|| ಅವರ ಕುಲಕ್ಕೆ ಹಿತಾರ್ಥ।
ಪ್ರವರಗುಣಂ ಮಾಣಿಭದ್ರನೆಂ[8]ಬಂ ದೇವಂ ॥
ಪ್ರವಿದಿತಸುವರ್ಣಭದ್ರನ।
ನವಧಾರಿಸಿ [9]ಮಿತ್ರ ನೀಗಳಿಂತಾಗಿರ್ದಂ ॥ ೨೯ ॥

ವ|| ಎಂದು ನೋಡಿ ಮಾನ[10]ಭಂಗದೇವದೊಳಂ ತಾನೆ ದೀಕ್ಷೆಗೊಂಡಿರ್ದನೆಂಬುದನಱಿದಾಯಿರವಿನೊಳ್ ಪದುಳನೊ? ಪದುಳನಲ್ಲನೊ? ಪರೀ[11]ಕ್ಷಿಸುವೆನೆಂದು ಬಂದು [12]ವಿಗುರ್ವಣೆಯೊಳಿಂತಪ್ಪುಪಸರ್ಗಂಗಳಂ ಮಾಡಿದಪನೆಂದೊಡೆ—

ಕಂ|| ಸರಸಿಜಮುಖಿಯೊರ್ವಳ್ ತ।
ಸ್ಕರರಿಂ ಕೋಲ್ಪಟ್ಟು ನಾಡೆ ಕ[13]ಣ್ಗೆಟ್ಟು ಭಯ ॥
ಜ್ವರದ ನಡುಕದೊಳೆ ಮು[14]ನಿಪತಿ।
ಯರ ಕಾಲ್ಗೆಱಗಲ್ಕೆ ಪೋಗಿ ಶರಣೆಂದೆಂಗುಂ ॥ ೩೦ ॥

ವ|| [15]"ಆನಪ್ಪೊಡೆ ರಾಜಪುತ್ರಿಯೆಂ, ಎಮ್ಮವರೆನ್ನಂ ಧರ್ಮಮನ[16]ಱಿದವರ್ಗಲ್ಲದೆ ಕುಡೆವೆಂದಿರ್ದೀಗ[17]ಳಿಂತೊಂದಾ ನಾಡೊಳೊಯ್ದು ಕುಡುವೆವೆಂದೆನ್ನನೊಯ್ದುತರ್ಪಲ್ಲಿ ಕಳ್ಳರೀ ಯಡವಿಯೊಳಾಱಿಡಿಗೊಂಡೊಡೆಮ್ಮವರೆಲ್ಲಂ ಸತ್ತು ಕೆಟ್ಟು ಯಥಾಯಥಮಾದೊಡೆ [18]ಯಾನೊರ್ವಳೆ (ಳುಂ) ಬರ್ದುಂಕೆ ಪಲವಿನೊಳ್ ಪೊಲಗೆಟ್ಟು ತೊಲಲುತ್ತುಂ ಬಂದು ನಿಮ್ಮಂ ಕಂಡೆಂ. ಅನಾಥೆಯೆನ್ನನೊಳಕೊಳ್ವುದು ನಿಮಗೆ ಬೆಸಕೆಯ್ದು ಬಾಲ್ತಿಂ'' ಎಂದು ಕರುಣಸ್ವರದೊಳಂ, ಶೃಂಗಾರವಿಕಾರದೊಳಂ [19]ನಾಡೆಯುಂ ಕಾಡೆಯುಮಾ ಮುನಿಯ ಚಿತ್ತಂ ಚಳಿಯಿಸದಿರೆ ಕರ್ಮಂ[20]ಗಱಯಿಸುತ್ತಿರೆ ಯನ್ನೆವರಮಾದೇವನಾಕೆಯಾಣ್ಮನ ರೂಪುಗೊಂಡು [21]ಮುನಿದು ಬಂದು—

---

(1) ಪೋದನಾಗಳ್ (ಕ,ಚ) (2) ಯದೆ ಮಾನಭಂಗದಸಿಗ್ಗಿ (ಕ,ಚ) (3) ಹೇಯಂಪುಟ್ಟಿ (ಖ) ವೈರಾಗ್ಯಮಾಗಿ (ಕ, ಚ) (4) ರುಚಕಗಿರಿಯ (ಕ, ಚ) ಮಳೆಯಗಿರಿ (ಖ) (5) ಗ್ರಹಮಂ ತೊಱೆದು (ಕ, ಚ) (6) ತಲೆಯಂ ಪರಿದುಕೊಂಡು (ಕ, ಚ) (7) ತಾಂ ರಾತ್ರಿಪ್ರತಿಮಾಯೋಗಸ್ಥರಾಗಿ (ಕ, ಚ) (8) ನೆಂಬೊಂ (ಖ) (9) ಕೆಳೆಯನೀಗ (ಖ) ಮಿತ್ರನೀಗಳಿಂತಾಗಿರ್ದಂ (ಘ) ನೀಗಳಿಂತಿರ್ದಪನೋ (ಕ,ಚ) (10) ಭಂಗಂದೇವನೊಳಂತೆ ಬಂದು ತನಗೆ ತಾನೆ ದೀಕ್ಷೆ (ಕ, ಚ) (11) ಕ್ಷಿಸಿನೋಡುವೆನೆಂದು (ಖ) (12) ವಿಗುರ್ವಿರೊಳಂ (ಕ,ಚ) (13) ಕಣ್ಬೆಟ್ಟು (ಕ) (14) ಬಂದಾವರಮುನಿಯರ ಕಾಲ್ಗೆರಗಿ ಶರ (ಕ,ಚ) ಶರಣೆಂದಾಗಳ್ (ಚ) (15) ಆಂ ರಾಜಪುತ್ರಿ (ಕ,ಚ) (16) ನಱಿತಂಗಲ್ಲದೆ (ಕ) (17) ಳಿಂತೆಂದೊಂದು ನಾಡೊಳೊಯ್ದು ಕುಡು (ಚ) (18) ಪೋಧೊಡಾನೊರ್ವಳೇ (ಳುಂ) (19) ನಾಡೆಯುಮಾ ಮುನಿ (ಕ) (20) ಚಳಿಯಿಸುತ್ತುಮಿರ್ದನನ್ನೆಗಮಾದೇವ (ಕ) (21) ಮುಳಿದು (ಚ)

ಕಂ॥ [1]ಓಡೆ ಪಿಡಿದೆನ್ನ ವಧುವಂ ।
ಕಾಡೊಳಗತಿಭಯದೆ ಬಂದಳಂ ನೀನಳಿಸಿ
ಕೂಡಿರ್ದ ಫಲ[2]ಮನಾನಿರ ।
ದೂಡುವೆನೆಂದೆಯ್ದೆ ವಂದು ನಿಮಿರ್ದಿರ್ಪಾವಾಗಳ್ ॥ ೩೧ ॥

ವ॥ ಆಕೆ [3]ಬೇಗಂ ಬಂದಿರ್ಪನ ಕೆಯ್ಯಂ [4]ಪಿಡಿದೆಂಗುಂ. "ಆಂ ಪೊಲ್ಲೆನ(ಯ)ಲ್ಲೆಂ, ಇವರು [5]ಮಾನ್ಯರಂ, ನೀಂ ಪರೀಕ್ಷಿಸದೆ ಕೊಲ್ಲದಿರ್" ಎಂದೊ[6]ಡಿರ್ಪುದುಮನುಱದು "ನೀಂ [7]ಪೊಲ್ಲೆಯಲ್ತೆಯೆಂದೊಡೆ ಸೂರುಳ್" ಎಂದೊ"ಡಿ[8]ವರಿಂದಗ್ಗಳ ಮಾರುಮಿಲ್ಲ" ಎಂದೊ"ಡಿವರಂ [9]ನಂಬೆ"ನೆಂದೊಡೆ "ಋಷಿಯರಡಿಯಾಣೆ"ಯೆಂದೊಡಾತನಿಂತೆಂದಂ—

ಕಂ॥ [10]ಏನೋ ಪೇಱ್ಪುಮಿದೀಗಳ್ ।
ಮೌನಂಗೊಂಡಿರ್ದನೆಂದೊಡೇನೊಳ್ಳಿದನೇ ॥
[11]ಏನೆಂಬೆಯಾ(ನೀ)ತನಿಂ ನು ।
ತ್ತಾ ನಿಂದ ಮಹೋಗ್ರತಾಪಸಂ ಲೇಸಲ್ತೇ ॥ ೩೨ ॥

ವ॥ ಎಂದಿಂತವರಂ [12]ನಿರಾಕರಿಸುತ್ತುಂ ಪರಸಮಯದ [13]ತಾಪಸರಂ ಪೊಗಲುತ್ತುಂ [14]ಎನ್ನೆಂದುದನೆಂಬೆಯಪ್ಪೊ[15]ಡೆ "ಆ ತಾಪಸರನಡಿಯಾಣೆ"ಯೆಂದೊಡಾ ತಾಪಸರಡಿಯ ದಾಗಳ್ ಭಸ್ಮಮಾಗಿರ್ದೊಡದಂ ಕಂಡು "ಇನ್ನಾರಾಗವೇಡಾ ! ತಪಸ್ವಿಗ"ಳೆಂದವರಂ ಪೊಗಲ್ದುಮಿವರಂ ತೆಗಲ್ದುಂ ನಾನಾವಿಧದಿಂ[16] ದಂಡಿಸುವೆನೆಂದಿರ್ಪನ್ನೆಗಂ—

ಕಂ॥ ತಡೆಯದೆ ತಳ್ತೊಂದೊಂದಱೊ ।
ಳೊಡನೊಡನೊಗೆವುರಿಯ ಬಂಬಲಿಂ ಕಾಱ್ಕರ್ಚಿ ॥
ಱ[3]ಡೆಯುಡುಗದೆ ಬಳಸಿರೆ ತಗು ।
ಳ್ದೊಡಮಾ ಮುನಿಪತಿಯ ಚಿತ್ತಮುದಿರದು ಮತ್ತಂ ॥ ೩೩ ॥

---

(1) ಓಡಿದೊಡೆನ್ನೇ (ಛ) ಓಡಿದಳೆನ್ನೀ (ಖ) ಓಡುವಳೆನ್ನೀವಧುವಂ (ಘ), (2) ಮನೂಡುವೆನೋಡುವುದೆಂ (ಖ) (3) ಆಕೆ ಬಂದಿ (ಖ) (4) ಪಿಡಿದುಕೊಂಡಾಂ (ಕ) (5) ಮನ್ನರನ್ನಾರ್ (ಚ) (6) ಡಿರಿನಕೆಯ್ಯುಡು (ಕ,ಚ) (7) ಪೊಲ್ಲೆಯಲ್ಲಾದೊಡೆ (ಜ) (8) ವರಿಂದಾರುಮಗ್ಗಳ (ಕ,ಚ) (9) ನಚ್ಚೆನೆಂ (ಖ) (10) ಏನೇನೊ ಪೇಳಿಮಿಗಳ್ (ಕ,ಚ) (11) ನೀ ನಂಬೆ ಯಾತನಿಂ (ಕ,ಚ) ಏನೆಂಬೆನ್ನೀತನಿಂಮತ್ತಾ (ಖ) ನೀನೆಂತುಪೊಗಳ್ವೆ ಯಾತನಾ ನಾನಿಂದ (ಛ) ಬೇಗಂಬಾಯಿಮಯತ್ತಾ (ಘ) (12) ತಿರಸ್ಕರಿಸುತ್ತುಂ (13) ತವಸಿಯಂ (ಗಳಂ) ವಿಗುರ್ವಿಸಿ (ಕ,ಚ) (14) ಏನೆಂಬುದನೆಂಬೆ (ಖ) (15) ಡಾಮಹಾತಪಸ್ವಿಯಡಿಯಾಣೆಯೆಂದೊಡಂತೆಗೆಯ್ವೆ ನೆಂದಾತಾಪಸ (ಕ, ಚ) (16) ನೆಂದಿರ್ಪಿನಮನ್ನೆಗಂಮತ್ತಂ (ಕ,ಚ) ಎಂದು ಬರೆಯುತ್ತುಂ (ಖ) ಎಂದುಮತ್ತ ಮಿರ್ಪಿನಮನ್ನೆಗಂ (ಗ)

ವ|| ಅಂತಪ್ಪಗ್ನಿಭಯದೊಳಂ ಚಿತ್ತಮದಿರದೆ [1]ಕರ್ಮಮದಿರುತ್ತಿರೆ ಆಗಳ್ ಬಟ್ಟೆ[2]ವೋ ಪರಂತಾಗಿ ಬಂದು ಬೆಳಗಿನೊಳಾದ ಋಷಿಯರಂ ಕಂಡು ಕಿರ್ಚಂ ನದಿ[3] ಪುತ್ತುಮಿರೆಯವರ ತಾಯ್ವಿರಂದದೊಳೊರ್ವಳುಮೊರ್ವಳ್ ಪೆಂಡಿತಿಯಂದದೊಳಂ[4] ಒರ್ವಂ ಮಗನಾದಂತಾಗಿಯುಂವಿಗುರ್ವಿಸಿ ಭಟಾರರ ಕಾಲಂ ಪತ್ತಿಯಲುತ್ತಿರ್ಪನ್ನೆಗಂ ಒಡನೆವಂದವರ್ "ನಿಮ್ಮಬಿಸುವರಂ ಕಂಡಿರೆ, ಅವಿಂ ಪೋದಪ್ಪೆ"ವೆಂದವರ್ ಪೋದಿಂ ಬಲು[5]ಯಂ ಅತ್ತಮೆನಿತಾನುಂ ಸ್ನೇಹಬಂಧಗಳಂ ತೋಱಿ ದುಃಖಂಗೆಯ್ಯುತ್ತಿರೆ ಕಳ್ಳರ್ ಬಂದು—

ಕಂ|| ಆ ಮುನಿಯ ನೋಡೆ [6]ನೋಡ।
ಲ್ಕೇಮಾತೆಂದವರ್ಗಳುಟ್ಟುದಂ ಮೇಲುದುನುಂ ||
ತಾಮೆಲೆ[7]ದುಕೊಂಡು ಪಿರಿದುಂ।
ತಾಮಸದಿಂ ಬಯ್ದು ಪೊಯ್ದು ಪಿಡಿದೆಲೆ[8]ದುಯ್ವರ್ ॥ ೩೪ ॥

ವ|| ಅಂತವರನೆಲೆ[9]ದುಕೊಂ[7]ಡುಯ್ವಾಗಳೊಂದೆಡೆಯೊಳೊಂದು ಕಾಡಾನೆ ಬಂದೆಲ್ಪಟ್ಟಿ ಕಳ್ಳರುಮವರು [8]ಮೋರೊರ್ವರೊಳ್ ನೆರೆಯದೋಡಿಪೋದಲ್ಲಿ ಯಾ ಕೂಸೊಂದೆ ಯಂತಂತೆ ಬಂದು ಋಷಿಯರ ಕಾಲ[9]ಮೊದಲೊಳ್ಬಿಲ್ದಲುತಿರ್ಪನ್ನೆಗಮೊಂದು[10] ಪಾವು ಬಂದಾ ಕೂಸಂ ಕೊಂಡೊಡವರ ಮುಂದಾ ಕೂಸುಂ ಮಿಡುಮಿಡು[11]ಕಾಡುತ್ತುಂ ಬಿಲ್ದು [12]ಸತ್ತಾಗಳ್—

ಕಂ|| ಆ ಪಾವು ಪೋಗದೆಯ್ತುಂ।
ದಾ ಪರಮ[13]ತಪೋಧನರೊಡಲನಡರ್ದು ತಳ್ತ ॥
ರ್ದಾ ಪದದೊಳ್ ವರಮುಕ್ತಿ।
ಶ್ರೀಪದಮನೆ [14]ಬಗೆಗುಮಹಿಯನೆನೆಸುಂ ಬಗೆಯಂ ॥ ೩೫ ॥

ವ|| ಆಗಳುಮವರಬ್ಬೆಯು ಮಾಭಯದೊಳ್ ಮಗುಲ್ದು ಮವರಲ್ಲಿಗೆ [15]ವಂದಿರ್ದು ಮೊಮ್ಮನ ಪೆಣನನೆತ್ತಿಕೊಂಡುಮವರ ಮೊಗಮಂ ನೋಡಿ "ಮಗನೇ, ನಿನ್ನಿಂದೆ ಕೆಟ್ಟಿಂ, ಮತ್ತೆ ನಿನ್ನ ಮಗನಂ ನಡೆಪಿ ಬಾಲ್ತನವ್ಪೋಡೀ'ತನುಮಂ ಪಾವು ಕೊಳೆ ಸತ್ತಂ. ಇನ್ನೇ[16]ವಾಲ್ತೆ"ನೆಂದು ಪುಯ್ಯಲಿಟ್ಟೊಳಱಯಲು[17]ವಾಗಳ್ ಆಕೆಯಂ ಪುಲಿ ಪಾ[18]ಯ್ದುವರ ಮುಂದೊಂದು ಭಾಗ ಮುಱಯೆ ತಿಂದು ಪೋಯ್ತಂತೆಯವರ [19]ಪೆಂಡಿತಿಯಪ್ಪಾಕೆ ಬಂ[ದಲ್ಲಿ ಮನಗಪೆಣನಮು]ತ್ತೆಯ ಪೆಣನುಮಂ ಕಂಡು ಮೂರ್ಛೆವೋಗಿ [20]ಬಿಲೆ[3]ದ್ದೆಲ್ಚತ್ತು ಮಗನ ಪೆಣನನೆತ್ತಿಕೊಂಡು ಅವರತ್ತಲ' ಕೆಯ್ಯಂ ನೀಡಿ—

---

(1) ಕರ್ಮಮುದುರುತ್ತಿರೆ (ಕ,ಚ) (2) ವೋಪರಾಗಿ ಬಂದಾ ಬೆಳಗಿನೊಳಾದ (ಕ,ಚ) (3) ಪುತ್ತಿರೆಯವರಿರ್ದಲ್ಲಿಗೆವಂದು ನೋಳ್ಪಾಗಳವರತಾ (ಕ,ಚ) ನಂದಿಸುತ್ತುಮವರಲ್ಲಿಗೆ ಬಂದು ಋಷಿಯರಂನೋಡನೋಡೆ ತಾಯ್ವಿ (ಖ,ಗ) (4) ಒರ್ವಳೊಂದು ಪಸುಗೂಸಾಗಿರ್ದಂತಾಗಿ (ಘ) ಹ(ಪ)ಸು ಮಗುವಿನಂತಾಗಿ (ಕ,ಚ) ಳೊಂದುಕೂಸು ಮಗನಾದಂತಾಗಿ ವಿಗುರ್ವಿಸಿಕೊಂಡು ಕಾಲಂಪತ್ತಿಯಳುತ್ತಿರ್ದನ್ನೆಗಂ (ಖ,ಛ) (5) ಯಮೆನಿತಾನುಂ (ಕ,ಚ) (6) ನೋಡದವೋಲೆಮುಂಟೆಂದವರ್ಗ (ಕ,ಚ) (7) ಡುಯ್ವಾಗಳೊಂದು ಕಾಡಾನೆ (ಕ,ಚ) (8) ಮೊಂದೊರ್ವರೊಳ್ ನೆರೆ (ಕ, ಚ) ರೊರ್ವರ್ನೆನೆನೆದಂತೋಡಿದಲ್ಲಿ (ಖ) (9) ಮೇಲಿರ್ದು (ಖ) (10) ಪನ್ನಗಂ (ಕ,ಚ) (11) ಡುಕುತ್ತುಂ (ಕ,ಚ) (12) ಸತ್ತಂತಾಗಳ್(ಲ್) (ಚ) (13) ತಪಸ್ವಿಯೊಡಲನಡರ್ದುಸುತ್ತಿರ್ಪಾ(ಕ,ಚ) (14) ಬಗೆದುಮೈಯ್ಯನೇನಂ ಬಗೆಯಂ(ಕ,ಚ) ಬಗೆಮಹೀಮನೇನಂಬಗೆಯಂ (ಜ,ಗ) (15) ವಂದುಮೊಂದುಪೆಣ (ಕ,ಚ) (16) ನ್ನೇ ವೇಟ್ಟಿ (ಖ,ಗ) (17) ಪೆಂಡಿತಿಕೊಂಡೊಂದುಕೆಯ್ಯನವರತ್ತ (18) ಜುವಾಕೆಯಂ (ಕ,ಚ) (19) ಯ್ದವರ್ನೋಡನೋಡೆ (ಜ,ಛ) (20) ಯೆತ್ತಾನುಮೆಳ್ಚತ್ತು (ಕ)

ಕೇ॥ [1]ಹಾ ! ಎನ್ನ[2]ನೇಕೆ ಕೊಲ್ಲೈ |
ಹಾ ! ಎನ್ನಂ ಕೊಂದೊಡೆಂತು ಸುಗತಿಗೆ ಸಲ್ವೈ ॥
ಹಾ ! ಎನ್ನ[3]ನಿದೇಕಳುರ್ವೈ |
ಹಾ ! ಎನ್ನನಿದೇಕೆ [4]ಬಿಸುಟು ದುರ್ಗತಿಗಿಱುವೈ ॥ ೩೬ ॥

ಹಾ ! ಎನ್ನ[5]ನೇಕೆ ತೊಱೆ[3]ವೈ |
ಹಾ ! ಎನ್ನನಿದೇಕೆ [6]ತೊಱೆ[3]ದು ಪಲಱಯಂ ಮೆಱೆ[3]ವೈ ॥
ಹಾ ! ಎನ್ನನೇಕೆ ಸುಡುವೈ |
ಹಾ ! ಎನ್ನಯ[7]ಬೇರೊಳೇಕೆ [8]ಕುಡುಗೋಲಿಡುವೈ ॥ ೩೭ ॥

ವ॥ "[9]ಇನ್ನೆನ್ನ ನೋವುಮಂ ನಿನ್ನ ಮಗನ [10]ಸಾವುಮಂ ಬಗೆಯದೆ ತಪಂಗೆಯ್ದೊಡೀ ತಪದೊಳಂ ನಿನಗೆ ದುರ್ಗತಿಯಲ್ಲದೆ ಸುಗತಿಯಾಗದು" ಎನೆಯುಂ ಕೇಳದಂತಿರ್ದೊಡೆ "ಅಕ್ಕುಂ ಆದೊಡಂ ನಿನಗೆ ಬಮ್ಮೇತಿಯಾಗೆ ಸಾವೆ"ನೆಂದು ಅವರ [11]ಕಾಣ್ಬಲ್ಲಿಯೊಂದು ಮರದೊಳ್ ಬಳ್ಳಿಯಂ ಕಟ್ಟಿ ಕೊರಲೊಳ್[12] ಸುತ್ತಿ ನೇಲ್ದು ಸತ್ತಳ್. ಇಂತು ಬಂಧುವಿಯೋಗಂಗಳನಿತುಮವರ ಮನಮನಿನಿಸುಂ ತಳರ್ಚಲಾರ್ತುವಿಲ್ಲ. ಮತ್ತಂ—

ಕಂ॥ ಕರಿಯವು ಪಿರಿಯವು [13]ಪವಣಿಸ |
ಲರಿಯವು ಬಹುವಿಧದಿನಾದ ಕಟ್ಟಿ[14]ಱುಪೆ ತಗು ॥
ಳ್ದಿರದಡಿ[15]ಯಿಂದಡರ್ದು ಸಿರಂ |
ಬರೆಗಂ ಮುಸುಱುರ್ದು ಕಡಿಯೆಯುಂ ಸೈರಿಸಿದಂ ॥ ೩೮ ॥

[16]ವ॥ ಅಲ್ಲಿಂ ಬಲಱಯಂ—

ಕಂ॥ ಒಡನಡಿಯಿಂದಾ ಮಸ್ತಕ |
ದೆಡೆವರೆಗಂ ಜೇನ[17]ನೊಲಿವುಗಳ್ [18]ಪಾಯ್ದುಂ ತಗು ॥
[19]ಳ್ದಿಡೆಯುಡುಗದೊಱಲುತಿರೆಯುಂ |
ದೃಢಮಾಗಿರ್ದತ್ತು ಚಿತ್ತಮಾ ಮುನಿಪತಿಯಾ ॥ ೩೯ ॥

---

(1) ಹೋಯೆನ್ನ (ಚ) (2) ನೆಂತು (ಖ) (3) ನಱುದೇಕಱುವೈ (ಚ) (4) ಬಿಟ್ಟು (ಚ) (5) ಎನ್ನನಿದೇ ಕಿರಿವೈ (ಕ,ಚ) (6) ಬಿಸುಟು (ಖ,ಗ) (7) ಬೆನ್ನೊಳೇಕೆ (ಚ) (8) ಕುಡುಗಲನಿಡುವೈ (ಕ,ಚ) ಕುಡಿಗಿಲ ನಿಡು (ಛ) (9) ದಿಂತೆನ್ನ ನೋವು (ಕ) ಇಂತೆನ್ನ (ಚ) (10) ಗನ ತಾಯುಮಂಸಾವುಮಂ (ಕ) (11) ಕಾಣ್ಬನಿತ ರೊಳ್ (ಛ) (12) ತಗುಳ್ಚಿಸತ್ತೊಡೆಯಂತು ಬಂಧು (ಕ,ಚ) (13) ಪಸರಿಸ (ಛ) (14) ಕಟ್ಟುಱುಪೆ (ಛ) (15) ಯಿಂದಾಮಸ್ತಂಬರೆ (ಛ) (16) ಈ ವಚನ ಚ, ಛ, ಖ ಪ್ರತಿಗಳಲ್ಲಿಲ್ಲ (17) ನೊಣವುಗಳ್ (ಕ,ಚ) (18) ಪಾಯ್ದುಂ (ಖ,ಚ) (19) ಳ್ದಿಡೆವಿಡದೆಯುಮೂಡುತ್ತಿರೆಯುಂ (ಕ)

ವ|| [1]ಅದಲ್ಲದೆಯುಂ—

ಕಂ|| ಅಳುರ್ದೊಗೆ[2]ವುರಿನಾಲಗೆಗಳ |
ಬಳಗಂಗಳ ಕೆದಱಿ ಮಿಸುಪ ಕೆಂಡಂಗಳ [3]ಗೊಂ ||
ದಳವುಂ ವಿಷದುರುಳಿಯ [4]ಗೊಂ |
ದಳವುಂ ಮಿಕ್ಕಿರ್ದು ಮಿಡಿವ ಕೆಂದೇಲ್ [5] ಪಲವುಂ ||೩೯||

ವ|| ಅವಂತು ತಮ್ಮಂ ಕಡಿಯೆ ತಾಂ [6]ದುರಿತವೃಕ್ಷದ ಬೇರಂ [7]ಧರ್ಮಧ್ಯಾನಮೆಂಬ ಕುಠಾರವಿಂ ಕಡಿಯುತ್ತಿರೆ ಮತ್ತಮಿನ್ನುಮೆಂತಪ್ಪುಪಸರ್ಗಂಗಳಂ ಮಾಡಿದಪ್ಪನೆಂದೊಡೆ :—

ಕಂ|| ಸಿಡಿಲುಂ ಮಿಂಚುಂ ಮೊಲಗುಂ |
ಕಡುಗಾಳಿಯು [8]ಮೊದವಿದೈಕೆಲುಂ ಬೆರೆಸಿ ತಗು ||
ಳ್ದೆಡೆವಿಡದೆ ಪೊಯ್ವವೋಲಂ |
ತಡಸಿ ಕರಂ ಕೊಳ್ವ ಮಱಿ[9]ನೇನಂ ಬಗೆಯಂ ||೪೦||

ವ|| [10]ಅಂತು ಬಗೆಯದಿರ್ದುದಂ ಕಂಡು [11]ಮತ್ತಂ ವೇವಂ ಮಾಣದೆ—

ಕಂ|| ತರತರದೆ [12]ನೆಗೆವ ಬೇಗಂ |
ನೊರೆವೆರೆಸೊಂದೊಂದನಟ್ಟುತುಂ ಬಂದು ಕರಂ ||
ತೆರೆ ಪೊಯ್ಯೆ ಮಸಗಿ ತೊಱ[13] ಕಾ |
ಲ್ಪುರಮಾಗಿಯೆ(ರೆ)ಬಂದವುಂಕೆಯುಂ ಮುನಿ[14]ಪದುಳಂ ||೪೧||

ವ|| [15]ಅದರ್ಕಮಲ್ಲಾ(ಲ್ಯಾ)ಡದಿರೆ—

ಕಂ|| ಕಡುಗಾಳಿಯ ಪೊಯ್ಲಿಂದಂ |
ತಡೆಯದೆ ಬೇರ್ವೆರೆ[16]ಸು ಕೆಲ್ತು ಪೆರ್ಮರಗಳ್ ಬಂ ||
ದೊಡನೊಡನೆ ಮೇಗೆ ಪಲವುಂ |
[17]ಕೆಡೆದಿರೆಯುಂ ಧ್ಯಾನಮುಚಲಿತಂ [18]ತನ್ಮುನಿಯಾ ||೪೨||

ವ|| ಅಂತು ಪರಿಣಾ[18]ಮಂ ತೊಲಗದಿರ್ದುದನಱಿದು ಮತ್ತಮಾರಯ್ವೆನೆಂದು—

---

(1) ಅಂತುಮಲ್ಲದೆ ಮತ್ತಂ (ಕ) ಅಲ್ಲಿಂ ಬಳಿಯಂ (ಚ) (2) ವುರಿಗಳ ನಾಲಗೆ ಗಳತೆಱನುಮ ನಿಳಿಸಿ ಬಳಸಿಕೆಂಡಂ (ಘ,ಝ) ನಾಲಗೆಗಳ ಬಳಗಂಗಳ ತೆರನನಿಳಿಸಿಕೆಂಡಂ(ಳ) (3) ವೊಂದಳವುಂ ಮಿಕ್ಕಿರ್ದು ಕಡಿಯೆ(ಕ) ವೊಂದಳಿವುಂ ಮಿಕ್ಕಿರ್ದು ಕಡಿಯೆ ಪಲವುಂ ತೇಳ್ಗಳ್(ಚ) (4) ಮಿಱಿ ಕಡಿಯೆ ಕೆಂಜೇಳ್(ಘ,ಖ) (5) ದುರಳಿ (ಚ) (6) ಶುಭಧ್ಯಾನ (ಳ,ಝ) (7) ತ್ತಿರ್ದಂ (ಚ) (8) ಮೊಂದಿದೈಕೆಲು (ಕ,ಚ) ದೇಸಾವೆಳ್ದಂ ತಡಸಿ (ಕ,ಚ) ಪಾವೆಳ್ದಂತಡಸಿ (ಘ,ಝ) (9) ನೆನಸುಂ (ಖ) (10) ಅಂತು ಬೆದಱಿ ಬೆದಱಿ ಚಿತ್ತಕ್ಕೆ ಮತ್ತೆಯುಂ (ಚ) ಅಂತು ಬೆವಱಿವ ಚಿತ್ತಕ್ಕೆಮತ್ತೆಯುಂ (ಕ) (11) ಮತ್ತೆಯುಂಮಾಣವೆ (ಖ,ಗ) (12) ನಡೆದು(ಕ,ಚ) ನೆಗೆದು(ಖ,ಘ) (13) ಪತಿಯುಂ (ಖ,ಗ) (14) ಅದರ್ಕಜ್ಜದೆಮ(ಯ)ಲ್ಲಾಡದಿರೆ(ಕ,ಚ) ಅದರ್ಕಮದಿರದಿರೆ (ಛ,ಳ) ಲ್ಲಾಡದಿರೆಯುಂ (ಖ,ಗ) (15) ಸಿಕೀಬ್ಪ (ಖ,ಗ) (16) ಕೆಡೆತರೆಯುಂ (ಕ,ಚ) (17) ಮುನಿಪತಿಯಾ (ಕ,ಚ) ತನ್ಮುನಿಪಂ (ಘ,ಗ) (18) ಮದಿಂ ಬೆದಱಿದಿರ್ದುದಂ ಕಂಡು (ಖ,ಗ) ಮುಂಜಱಿಗದಿರ್ದು (ಘ,ಳ)

ಕಂ|| ಕೆಂಡಂಗಳನುಗುಳುತ್ತುಂ |
ಖಂಡಂಗಳನರಿದು ತಿನಲೆ ಕೂರ್ಗತ್ತಿಗೆ[1]ಯಂ ||
ಕೊಂಡದ್ಭುತ [2]ರಾಕ್ಷಸಿಯರ |
ತಂಡಂ ಬರೆ ಮಂದರಾದ್ರಿಗೆಣೆಯಾಯ್ತು ಮನಂ ॥ ೪೩ ॥

ವ|| [3]ಅಂತಗರ್ವಾಗೆ ವಿಗುರ್ವಿಸಿದ ವಿಗುರ್ವ[4]ಣೆಗೆ ಚಲಿಸದಿರ್ದುದರ್ಕೆ ಮಚ್ಚಿ ತನ್ನಿಂದ್ರ (ಮೆಚ್ಚ)ನಟ್ಟಿದಂ "[5]ಬನ್ನಿ ಮಾ ವಿಮಾನಮನೇಱಿ" ಮೆಂದು—

ಕಂ|| ಅನುಪಮವಿನೂತನಮೊಂದಂ |
ವಿನಯವಿ[6]ನವಟಿಯ್ಸಿ ಮುಂದೆ [7]ಬಂದಿರ್ದ ಸುರರ್ ||
ನಿನಗೆ ಬಲು[8]ಸಂದೆವೆನೆಯುಂ |
ಮುನಿ[9]ಕುರುಡನ ಕಿವುಡನಂತೆ ಕಾಣಂ ಕೇಳಂ ॥ ೪೪ ॥

ವ|| [10]ಅಂತತಿಸ್ನೇಹದ ಮೋಹದ ಭಯದ ನಯದ [11]ತಮಗೂನದ ಕರಮುಪಮಾನದ ನೋವಿನ ಸಾವಿನ ಕಾ[12]ರಣಂಗಳನುಂಟು ಮಾಡಿ—

ಕಂ|| ಎಂತುಂ ಸೈರಿಸಲಾಗೆಂ |
ಬಂತಾಗಿ ಪರಾಭವಕ್ಕೆ(ಕ್ಕ)ನು(ಮ)ಂತಾಗೆ ಗುಣ ||
[13]ಕ್ಕೆಂತಾಗೆ ಬಂದ ಪದಿನಾ |
ಲ್ಕುಂತೆಱದುಸಸರ್ಗಮೆಲ್ಲಮುಂ ಮುನಿ ಗೆಲ್ದಂ ॥ ೪೫ ॥

ವ|| ಅಂತು[14]ಗೆಲ್ದ ಗೆಲ್ಲದೊಳಂ ದ್ವಾದಶಾನುಪ್ರೇಕ್ಷಾಧ್ಯನುಪಮಧರ್ಮ[15]ಧ್ಯಾನದೊಳ್ ಮುನ್ನಮೆ ದೇಶನಿರ್ಜರೆಯಾಗುತ್ತುಂ ಬಂದು ಶುಕ್ಲಧ್ಯಾನ ಸಂಪೂರ್ಣತೆಯೊಳ್ [16]ಸಕಲಕರ್ಮ ನಿರ್ಜರೆಯಾಗಿ ಕೇವಲಜ್ಞಾನ[17]ಮೊಗೆದಾಗಳ್ ವಂದನಾಭಕ್ತಿಗೆ ಇಂದ್ರನಾಜ್ಞೆಯಿಂ ಕುಬೇರ ನಿರ್ಮಿತಮಪ್ಪ ಗಂಧಕುಟೀ ವಿರಾಜಮಾನರಾಗಿರ್ಪನ್ನೆಗಂ ವಂದನಾಭಕ್ತಿಗೆ ಚತುರ್ನಿಕಾಯಾಮರ ದೇವರ್ಕಳ್ ಬಂದು ಬಲ[18]ಗೊಂಡರ್ಚಿಸಿ ಪೊಡೆವಡುತ್ತುಮಿಂತೆಂದು ಸ್ತುತಿಯಿಸಿದರ್—

---

(1) ಯಿಂ (ಕ,ಚ) (2) ರಕ್ಕಸಿಯರ್ (ಜ,ಗ) (3) ಅಂತುವಿಗುರ್ವಿಸಿ (ಕ,ಚ) (4) ಣೆಗಳ್ಕದಿರ್ದುದಂ ಕಂಡುಮತ್ತಿಂದ್ರಂ ಮೆಚ್ಚಿ (ಕ,ಚ) ಣೆಗದಿರದಿರ್ದುದಂ (ಖ,ಗ) (5) ಬನ್ನಿನೀಮಾವಿಮಾನ (ಕ,ಚ) (6) ವಟ್ಟಿಸಿ (ಕ,ಚ) (7) ನಿಂದಿರ್ದ (ಕ,ಚ) (8) ವಂದೆ (ಕ,ಚ) (9) ಕುರುಡಂ (ಖ,ಘ) (10) ಇಂತತಿ (ಕ,ಚ) (11) ತಮಗಾನದ (ಕ,ಚ) (12) ರಣಂಗಳುಂಟುಮಾಡಿ (ಕ,ಚ) (13) ಕ್ಕಂತಾನೆ (ಡಿ) (14) ಸೈರಿಸಿಗೆಲ್ದ (15) ಧ್ಯಾನೋದಯದೊಳ್ (16) ಸಕಲನಿರ್ಜರೆ (ಕ,ಚ) (17) ಮಾದಾಗಳ್ ಇಂದ್ರನಾ (ಛ) (18) ಗೊಂಡ ಭಿಮುಖದೊಳಿರ್ದು ಪೂಜಿಸಿಪೊಡೆವಡುತ್ತುಂ ಮತ್ತ ಮಿಂತೆಂದು (ಕ,ಚ)

ರಗಳೆ– ಜಯ ವಿಬುಧಪತಿವಂದ್ಯ – ಜಯ ವಿಳಸದಭಿ[1]ನಂದ್ಯ ॥ ೧ ॥
ಜಯ ಕರ್ಮ ನಿರ್ನಾಶ – [2]ಜಯ ಮುಕ್ತಿ[3]ಪದವೀಶ ॥ ೨ ॥
ಜಯ ದುಷ್ಟ ಮಳ[4]ವಿಳಯ – ಜಯ [5]ವಿಪುಳಸುಖ ನಿಳಯ ॥ ೩ ॥
[6]ಜಯ ಶಿಷ್ಯ ಗುಣನೂತ – ಜಯ ಭವ್ಯ ಜನಪೂತ ॥ ೪ ॥
ಜಯ ಪರಮಪದರಾಜ – ಜಯಲೋಕ ವಿಭ್ರಾಜ ॥ ೫ ॥
ಜಯ ಗುಣಗಣಾಭರಣ – ಜಯದುರಿತ[7]ಗಣ ಹರಣ ॥ ೬ ॥
ಜಯ ಸರ್ವಗುಣಮೂರ್ತಿ – ಜಯಧವಳತರ ಕೀರ್ತಿ ॥ ೭ ॥
ಜಯದೋಷ ಭಯರಹಿತ – ಜಯಪರಮ[8]ಪದ ಸಹಿತ ॥ ೮ ॥
ಜಯ ಭುವನನುತಶೌರ್ಯ – ಜಯ ವಿಗತಮುಳಕಾರ್ಯ ॥ ೯ ॥
ಜಯ ವಿಶ್ವವರ ಬೋಧ – ಜಯ [9]ವಿದಿತ ನಿಷ್ಕ್ರೋಧ ॥ ೧೦ ॥
ಜಯ ಶುಭದ ಪದಕಮಳ – ಜಯಸಕಳ ಜಗದಮಳ ॥ ೧೧ ॥
ಜಯ ಸತತ ಸಂಶುದ್ಧ – ಜಯಜೀವಹಿತ [10]ಸಿದ್ಧ ॥ ೧೨ ॥ – ॥೪೬॥

ಕಂ॥ ಸುರರೀ ತೆಱದಿಂ ಸ್ತುತಿಯಿಸು ।
ತಿರೆ ವಿನಯದೆ ಬಂದು ಮಾಣಿಭದ್ರಂ [11]ಬೇಗಂ ॥
ಕರಯುಗಮಂ ಮುಗಿದಾಗಳ್ ।
ಪರಮೇಶ್ವರನಡಿಗೆ ಬಾಗಿ ಪೊಡೆವಡುತಿರ್ದಂ ॥ ೪೭ ॥

ವ ॥ [12]ಅಂತು ಸುವರ್ಣಭದ್ರಸ್ವಾಮಿ ತನಗೆ ತಾನೇ ದೀಕ್ಷೆಗೆಯ್ದೊಂದೆದೆವಸದೊಳು ಪಸರ್ಗ[13]ಗಳುಮಂ ಸೈರಿಸಿರ್ದು ಗೆಲ್ದು [14]ಶುಭಧ್ಯಾನದಿಂ ಕರ್ಮಕಳಂಕಮಂ ನಿರ್ಜರಿಸಿ ಕೇವಳಿಯಾಗಿ ಕೆಲವುದೆವಸದಿಂ ಮುಕ್ತಿಯನೆಯ್ದಿದನೆಂಬ[15] ಕಥೆಯನಪ್ಪೊಡಂ ನೀಂ ಕೇಳ್ದಲ್ತಿವಡಲಾಗದೆ !—

---

(1) ವಂದ್ಯ (ಕ,ಚ) (2) ಈ ಪಾದ ಚ ಪ್ರತಿಯಲ್ಲಿಲ್ಲ (3) ಪದಕೀಶ (ಖ,ಗ) (4) ವಿಜಯ (ಕ,ಚ) (5) ವಿಮಳ(ಖ,ಗ) (6) ಜಯದಿವ್ಯಗಣನಾಥ ಜಯಪರಮ ಪದನಾಥ (ಖ,ಘ,ಜ) ಜಯದಿವ್ಯಗುಣನೂತ (ಗ) ಜಯಭವ್ಯಗಣನಾಥ (ಛ) (7) ಕುಲ (ಕ,ಚ) (8) ಬಲ (ಖ,ಘ) (9) ವಿಜಿತ (ಕ,ಚ) (10) ಶುದ್ಧ (ಗ) (11) ದೇವಂ (ಖ,ಘ) (12) ಅಂತಾಸು (ಖ) (13) ಗಳಂ (ಕ) (14) ಶುಕ್ಲಧ್ಯಾನ (ಕ,ಚ) (15) ನೆಂಬೀ ಕತೆಯಂ ಕೇಳ್ದಪ್ಪೊಡಮರ್ತ್ಥವಡಲಾಗದೆ (ಕ) ಕೇಳ್ದಱಿವಟ್ಟುನೆಗಱೀಯಾಗದೆ (ಜ)

ಮ|| ಮಳವಿಧ್ವಂಸನಕಾರ್ಯಮಂ [1]ನೆಗಲದಿಂ ನಿರ್ಮಿರ್ಪ ಪಾಂಗೇನೊ [2]ನಿ |
ರ್ಮಳನಾಗಿರ್ದೊಡಮೆಂತು ಭೇದಿಸುಗುಂ[3]ಮೆಂದಿರ್ಪುದೇ ಬೇಡದಂ ||
ಕಳೆಯಿಂ ಮೋಹಮನಿಕ್ಕು ಮಿಕ್ಕು ತಪಮುಂ ಕೆಯ್ಕೊಂಡು ಸುಜ್ಞಾನದಿಂ |
ತಿಳಿದಿರ್ದಾಱುದ ಚಿತ್ತಮೊಂದೆ ದುರಿತ[4]ಪ್ರಧ್ವಂಸಮುಂ ಮಾಡದೇ ||೪೮||

— ಗದ್ಯಂ —

ಇದು ಜಿನಶಾಸನ ಪ್ರಭಾಸನ ಶೀಲೋದಿತ ವಿದಿತ

ಬಂಧುವರ್ಮ ನಿರ್ಮಿತಮಪ್ಪ

ಜೀವಸಂಬೋಧನಾ ಗ್ರಂಥಾವತಾರದೊಳ್

ನಿರ್ಜರಾಭಿಧಾನಂ

[5]ನ ವ ಮಾ ಧಿ ಕಾ ರ ಂ.

(ಕ,ಜ,ಚ ಗಳಲ್ಲಿದೆ)

ನ ಸಂಸ್ತುತೋ ನ ಪ್ರಣತಃ ಸಭಾಯಾಃ – ಯಸ್ಸೇವಿತೋಂತರ್ಗಣಪೂರಿತಾಯಾಃ ||
ಪದಚ್ಯುತೇ ಕೇವಲಿಭಿಃ ಜಿನಸ್ಯ – ದೇವಾಧಿದೇವಂ ಪ್ರಣಮಾಮ್ಯರಂ ತಂ ||

---

(1) ನೆಗಟ್ಟು ನೀಂ (ಖ,ಗ) ನಗಟುತುಂ ನೀಮಿರ್ಪ (ಛ) (2) ದುರ್ಮಳರಾಗಿರ್ದಡನೆಂತು (ಖ,ಗ) (3) ಮೆಂದಂಜಿರ್ಪರೇ (ಛ,ಜ) (4) ಪ್ರಧ್ವಂಸನಂ (ಕ,ಚ) (5) ದಶಮಾಶ್ವಾಸಂ (ಖ,ಛ)

॥ ಏಕಾದಶಾಧಿಕಾರಂ ॥

— ಬೋಧಿ ದುರ್ಲಭಾ [ಕಸ್ಮಾ] ಪಾಪ್ತೇಃ —

ಕಂ॥ ಮಾನಿತಗುಣ[1] ತತ್ವಪರಿ ।
ಜ್ಞಾನಮೆ ತಾಂ ಬೋಧಿತತ್ವಮೆಂಬುದು ಮಳಸಂ ॥
ತಾನಕ್ಷಯಕರಮಪ್ಪುದು ।
ತಾನಾಪ್ತಾಗಮ ಪದಾರ್ಥನಿರ್ಣಯ ರೂಪಂ ॥ ೧ ॥

ವ॥ ಆಪ್ತನೆಂತಪ್ಪನೆಂದೊಡೆ :—

ಶ್ಲೋಕಂ॥ "ಕ್ಷುಧಾ ತೃಷಾ ಭಯಂ ದ್ವೇಷೋ ರಾಗೋ ಮೋಹಶ್ಚ ಚಿಂತನಂ ॥
ಜರಾ ರುಜಾ ಚ ಮೃತ್ಯುಶ್ಚ ಸ್ವೇದಃ ಖೇದೋ ಮದೋ ರತಿಃ ॥
ವಿಸ್ಮಯಂ ಜನನಂ ನಿದ್ರಾ ವಿಷಾ[2]ದೋಷಾಷ್ಟಾದಶ ಸ್ಮೃತಾಃ ॥"

ವ॥ [3]ಎಂದಿಂತಷ್ಟಾದಶದೋಷವರ್ಜಿತನಪ್ಪನಾತ್ಮಂ. ಆತನವಚನಮಾಗಮಂ. ಅಂತಪ್ಪಾಗಮದಿಷ್ಟದಿಂ ನೆಗಲ್ತ ಪದಾರ್ಥಮಕ್ಕುಮಲ್ಲಿ—

ಈ ಸಂಸ್ಕೃತ ಪದ್ಯ ಟೀಕೆಗಳು (ಕ, ಜ, ಚ) ಪ್ರತಿಗಳಲ್ಲಿ ಮಾತ್ರ ಇವೆ—

ವಿದ್ಯಾವತೇ ತೀರ್ಥಕರಾಯ ತಸ್ಮಾ – ಆಹಾರದಾನಂ ದದತೋ ವಿಶೇಷಾತ್ ॥
ಗೃಹೇ ಜಿನಸ್ಯಾಽಜನಿ ರತ್ನವೃಷ್ಟಿಃ – ತಂ ಶ್ರೇಯಮಿಶಂ ಶರಣಂ ವ್ರಜಾಮಿ ॥ ೧ ॥

ನೈಕಾಕ್ಷೈಃ ವಿಕಲಾಕ್ಷಸಂಚಕರಣಾಸಂಜ್ಞಿವ್ರಜೈರ್ಜಾತು ಯಾ ।
ಲಬ್ಧಾ ಬೋಧಿರಗಣ್ಯಪುಣ್ಯವಶತಃ ಸಂಪೂರ್ಣಪರ್ಯಾಪ್ತಿಭಿಃ ॥
ಭವ್ಯೈಃಸಂಜ್ಞಿಭಿರಾಪ್ತಲಬ್ಧಿವಿಧಿಭಿಃ ಕೈಶ್ಚಿತ್ಕದಾಚಿತ್ ಕ್ವಚಿತ್ ।
ಪ್ರಾಪ್ಯಾ ಸಾ ರಮತಾಂ ಮದೀಯಹೃದಯೇ ಸ್ವರ್ಗಾಪವರ್ಗಪ್ರದಾ ॥ ೨ ॥

ಟೀ॥ ಏಕಾಕ್ಷೈಃ–ಏಕೇಂದ್ರಿಯಂಗಳಿಂ, ವಿಕಲಾಕ್ಷ ಪಂಚಕರಣಾ ಸಂಜ್ಞಿವ್ರಜೈಃ–ದ್ವೀಂದ್ರಿಯ ತ್ರೀಂದ್ರಿಯ ಚತುರಿಂದ್ರಿಯ ಸಂಜ್ಞಿ ಪಂಚೇಂದ್ರಿಯಗಳಿಂ, ಜಾತು–ಎಂತಪ್ಪೊಡಂ, ಯಾ–ಯಾವುದಾನೊಂದು ಬೋಧಿಃ, ನ ಲಬ್ಧಾ–ಪಡೆಯಲ್ಪಟ್ಟುದಿಲ್ಲ. ಅಗಣ್ಯ ಪುಣ್ಯವಶತಃ–ಪಿರಿದಪ್ಪ ಪುಣ್ಯವಶದಿಂ, ಸಂಪೂರ್ಣಪರ್ಯಾಪ್ತಿಭಿಃ – ನೆರೆದ ಪರ್ಯಾಪ್ತಿಗಳನುಳ್ಳ ಭವ್ಯೈಃ – ಭವ್ಯರಿಂ, ಸಂಜ್ಞಿಭಿಃ–ಸಂಜ್ಞಿಗಳಿಂ, ಆಪ್ತಲಬ್ಧವಿಧಿಭಿಃ–ಪಡೆದಯ್ದುಲಬ್ಧಿಗಳನುಳ್ಳುದಱಿಂ, ಕೈಶ್ಚಿತ್–ಕೆಲಬರಿಂ, ಕದಾಚಿತ್–ಎತ್ತಾನುಂ, ಕ್ವಚಿತ್–ಎಲ್ಲಿಯಾನುಂ, ಪ್ರಾಪ್ಯಾ–ಪಡೆಯಲ್ಪಡುವುದು, ಸಾ–ಅದು, ಮದೀಯಹೃದಯೇ–ಎನ್ನ ಮನದೊಳ್, ರಮತಾಂ–ಕ್ರೀಡಿಸುತಿರ್ಕೆ, ಸ್ವರ್ಗಾಪವರ್ಗಪ್ರದಾ – ಸ್ವರ್ಗಮೋಕ್ಷಂಗಳಂ ಕುಡುವುದು, — ಬೋಧಿ ಪಡೆಯಲ್ಬಾರದುದಂ ಪೇಳ್ದ್ವ ಬೋಧ್ಯತಿದುರ್ಲಭತ್ವಾನುಪ್ರೇಕ್ಷೆ (ಕ ದಲ್ಲಿ ಈ ಟೀಕೆಯಿಲ್ಲ)

---

(1) ಗುಣರತ್ನ (ಕ) ರತ್ನ (ಚ) (2) ಹಾನೋ ದೋಷವರ್ಜಿತಃ (ಕ,ಚ) (3) ಇಂತಪ್ಪಾತ್ಮನ ವಚನಮಾಗಮದಿಷ್ಟನೆಗಳ್ತ ಪದಾರ್ಥಮಪ್ಪುದಲ್ಲಿ (ಚ) ಇಂತಪ್ಪನೆಗಳ್ತ ಗೊಪ್ಪುತಿರ್ಪನಾತ್ಮನಾತನ ವಚನ (ಛ,ಗ) ಇಂತಪ್ಪ ನಾತ್ಮನಾಪ್ತನ ವಚನ (ಖ,ಝ)

ಶಾ|| ಅಜುಂದ್ರವ್ಯದ ಭೇದಮುಂ ನವ[1] ವಿಕಲ್ಪೋದ್ಯತ್ಪದಾರ್ಥಂಗಳಂ |
ಮೂಜುಂಲೋಕವಿಧಾಗದಾಕೃತಿಗಳಂ ಪಂಚಾಸ್ತಿ ಕಾಯಂಗಳಂ ||
ಬೇಱಾಗಿರ್ದ ಚತುರ್ಗತಿ ಸ್ಥಿತಿಗಳಂ [2]ಷಡ್ಜೀವ ಕಾಯಂಗಳಂ |
ಮಿಾಜುತ್ತಿರ್ಪ ದುರಷ್ಟ ಕರ್ಮದಳವಂ ಮೋಕ್ಷಕ್ರಿಯೋಪಾಯಮಂ || ೨ ||

ವ|| [3]ಪೆಜುವುಮವುಮೊದಲಾಗೊಡೆಯ ವಸ್ತುಸ್ಥಿತಿಗಳ ತೆಜುನನಜುದು ನಂಬಿ [4]ಮಚ್ಚು ತಿರ್ಪುದು ಬೋಧಿಲಕ್ಷಣಂ – ಮತ್ತಂ—

ಕಂ|| [5]ಜ್ಞಾನಾದಿತ್ರಿಕ ರತ್ನ ವಿ |
ಧಾನಂಗಳ [6]ನಜುದು ನೆಜುಯೆ ಕೆಯ್ಕೊಂಡು ಗುಣ ||
ಸ್ಥಾನಂಗಳ ತುದಿಗೆಯ್ವುವೆ |
ನಾನೆಂಬುದ್ಯೋಗಮಲ್ತೆ ಬೋಧಿಗೆ ಸಾರಂ || ೩ ||

ವ|| ಅಂತು ಬೋಧಿಗೆ ಸಾರಮಪ್ಪ ಸಮ್ಯಗ್ದರ್ಶನ ಜ್ಞಾನ ಚಾರಿತ್ರಂಗಳ ಸಂಪೂರ್ಣತೆಯೊಳ್ ಮೋಕ್ಷಮಕ್ಕುಂ—

ಉ|| ಈ ತೆಜುದಿಂದಮಿತೆಜುದ ಜೀವಮನೋವುವುವೀ ನಿರೋಧದಿಂ |
ದೀ ತೆಜುದಿಂದ್ರಿಯಂಗಳನಡಂಗಿಪುದೀ ಪರಿಣಾಮಶುದ್ಧಿ ಯಿಂ ||
ದೀ ತೆರ[7]ದುದ್ದತಾಳೆಸಕರಂ ಕಿಡುಗುಂ ದಲಮೋಳಮೆಂಬಭಿ.|
[8]ಪ್ರೇತದಳುರ್ಕೆಯುಂ ರುಚಿಯುಮಿಲ್ಲದೊಡೇವುವೊ ಪೇಜ್ ವ್ರತಾದಿಗಳ್ || ೪ ||

ವ|| ಬಿನ್ನಣಮುಂ, ಕೆಯ್ದುವುಂ ಮನಮುಮಿಲ್ಲದೊಂಗೆನಿತು[9]ಮೆಯ್ಯಾದೊಡಂ ಪಗೆಯಂ ಗೆಲಲಾಗದುತೆ ಅಜುವು[10]ಮಾರ್ವು ಮಲ್ತುಯು ಮಿಲ್ಲದನೆನಿತು ತಪಂಗೆಯ್ದೊಡಂ ಕರ್ಮಂಗಳಂ ಗೆಲಲಾಜುಂ—

ರತ್ನತ್ರಯಮತಿಪ್ರಾಪ್ತಿಃ ಬೋಧಿಸ್ಸಾತೀವ ದುರ್ಲಭಾ ||
ಲಬಾ(ಬ್ಧುಂ ?)ಕಥಂಕಥಂಚಿತ್ ಚೇತ್ ಕಾರ್ಯೋಯತ್ನೋ ಮಹಾನಿಹ || ೩ ||

ತಾ|| ಎಲೆ ಜೀವನೇ ಸಮ್ಯಗ್ದರ್ಶನ ಜ್ಞಾನ ಚಾರಿತ್ರ ವಿಷಯಮಪ್ಪ ಜುವತಿದುರ್ಲಭಮಾಗಿರ್ಪುದು. ಅದೆಂತೋ ಪೂರ್ವಾರ್ಜಿತಮಪ್ಪ ಮಹಾಸುಕೃತವಿಶೇಷದಿಂ ಪ್ರಾಪ್ತಮಾದುದಾ ಸಮಯದೊಳೆ ಮೋಕ್ಷವಿಷಯಮಪ್ಪ ಮಹಾಪ್ರಯತ್ನಂ ನಿನ್ನಿಂದಿಲ್ಲಿ ನೆಗಜಲ್ವೇಜ್ಕುಮೆಂಬೀ ಸೂತ್ರಾನುಸಾರಮಾದ ದೃಷ್ಟಾಂತಕಥಾನಿರೂಪಣಂಗೆಯ್ವೆನದೆಂತೆನೆ—

---

(1) ವಿಡೋದ್ಯೆತ್ಪ (ಕ, ಚ) ವಿಧಾನೋದ್ಯ (ಖ, ಳ) (2) ತತ್ಪಪ್ರತತ್ವಂಗಳಂ (ಕ, ಚ) (3) ಇವು ಮೊದಲಾಗಿ ಪೆಜುವುವಸ್ತುಸ್ಥಿತಿ (ಕ,ಚ) (4) ಮಚ್ಚಿನೆಗಜುತ್ತಿರ್ಪುದು (ಕ,ಚ) (5) ಜ್ಞಾನಂತ್ರಿಕರಣ ರತ್ನ (ಚ,ಜ,ಕ) (6) ಕಿಜುದು ನೆಗಟೆ (ಖ,ಗ) (7) ದಿಂದಳಿಪ್ರಕರಮುಂ (ಖ,ಳ) ದಿಂದಳಾಳನಿಕರಂ (ಳ) (8) ಸ್ರಾಯದಳು (ಸ್ರಾಸ ಕಿಡುವುದು) (9) ಕುಳಿಮೊಡಂ (ಳ,ಳ) (10) ಮೊಳ್ಪು (ಕ,ಚ)

ಕಂ॥ [1]ಅಱಿವಿಂ ತ್ರಿಭುವನಘೆಲ್ಲಮ |
ನಱಿವಂತಕ್ಕುಂ ಮಹಾನುಭಾವದಿನೆಂದಿಂ ॥
ತಱಿಪೆಯುಮಱಿವಂ ಕೆಯ್ಕೊಳ |
ಲಱಿಯ(ಯಿ)ರಿ ಬಱಿಯಂ ವಿಮೋಹವಶದಿಂ ಕಿಱಿಯರ್ ॥ ೫ ॥

ವ॥ ಬಾವಿಯ ಕಪ್ಪೆ ಸಮು[2]ದ್ರಮಂ ಮಚ್ಚದಂತೆಲೆ [3]ಮೂಢಾ, ನಿನ್ನಳವಿಗೆ ಕೇವಲ ಜ್ಞಾನದಳವನುದಾಸೀನಂ[4]ಗೆಯ್ದು ನೀಂ ಮರುಳಾಗದಿರಿಂತಪ್ಪ ವಸ್ತುಗಳನಱಿದೊಡಂ ಬಲ್ಲಿದನಾಗಿ ಪಗೆವನೊಳ್ ಪೊಣರ್ದೊಡಲ್ಲದೆರಡೆಡೆಯೊಳಂ ಗೆಲ್ಲಮಕ್ಕುಮೆ ?

ಉ॥ ನೆಟ್ಟನೆ ಜೀವ[5]ಮಂತದು ಮಳಚ್ಚ್ಕದಮಾಮಳ[6]ಮಾಸ್ರವೋದ್ಭವಂ |
ತೊಟ್ಟನದುಂ ಪ್ರಮಾದದೆ ಮಳವಜ್ರದಿಂ ವಿಪರೀತದಿಂದೊಡಂ ॥
ಬಟ್ಟಿಹ ಕರ್ಮ[7]ದಿಂದಮದಱಿಂಗೊಳ್ ಸಮ[8]ವಾಯದೆ ಕಾಲಲಬ್ಧಿಗಳ್ |
ಪುಟ್ಟುಗುಮಲ್ಲಿ ತತ್ವರುಚಿಯಾಗಿರೆ ದೇಹಿಗೆ ಮುಕ್ತಿ ಕೂಡುಗುಂ ॥ ೬ ॥

ವ॥ ಮಹಾವ್ಯಾಧಿಯುಳ್ಳಾತಂಗೆ ರುಚಿ ಪುಟ್ಟಿ ಕುತ್ತಂ [9]ಕಿಡಲ್ ಬಗೆದುದೆಂದಱಿವುದು. ಸಂಸಾರಿಜೀವಕ್ಕೆ ತತ್ವರುಚಿ ಪುಟ್ಟಿ ಕರ್ಮಂ ಕಿಡಲ್ ಬಗೆದುದೆಂದಱಿವುದು. ಮತ್ತುಮೆಂ [10]ತಪ್ಪುದಱಿಂ ನಿವೃತ್ತಿಯೊಳ್ ಮುಕ್ತಿ ಕೂಡುಗುಮೆಂದೊಡೆ—

ಕಂ॥ [11]ಆವೆಡೆಯೊಳಾವ ತೆಱದಿಂ |
ಜೀವಂ ದುರ್ಗತಿಯೊಳಾಱ್ಗುಮದನಾ[12]ತೆಱದಿಂ ॥
ಭಾವಿಸಿ ಬಗೆದಱಿ[13]ದಾಗಳು |
ಮೋವದೆ ತಾಂ ತೊಱಿ[3]ದು ನೆಗಲ್[3] [14]ನಿರ್ವೃತಿಯಕ್ಕುಂ ॥ ೭ ॥

ವ॥ ರಾಜಾನುಮತದಿಂ ಸೆಱೆಯೊಳಿರ್ದನ ಸಂಕಲೆ ಪಱಿದೊಡಂ, ಗುರುಮತದಿಂ ಬಂಧ ಹೇತುಗಳ್ ಪಱಿದೊಡಂ ಆ ನಿಗಡಬಂಧಕ್ಕವಿಾ ಕರ್ಮಬಂಧಕ್ಕಂ ಮೋಕ್ಷಮ[15]ಕ್ಕುಂ. (ಇದನಱಿದು) ನೀನಾಲಸ್ಯನಾಗದಿರು.

---

(1) ಅಱಿವಂ (ಳ) (2) ದ್ರದಪೆಂಪಂ ಮಚ್ಚ (ಕ,ಚ) ಪೆರ್ಚಂಮಚ್ಚ (ಛ,ಜ) (3) ಮೂಢಜೀವಾ (ಕ,ಜ) ಮೂಢನಾಗಿರ್ದಜೀವಾ (ಛ,ಖ,ಗ) (4) ಗೆಯ್ವೆಯೇಕೆ ನೀಂಮರು (ಕ,ಚ) ಗೆಯ್ವುದೇಕೆ (ಖ,ಗ) (5) ಮೆಂತದು (ಖ,ಛ) (6) ಮಾಶ್ರ (ಖ,ಗ) (7) ಮಂತದಱಿಂಗೊಳಂ (ಕ,ಚ) ಮೆಂದಿವಱಿಂಗೊಳಂ (ಛ,ಜ) (8) ನಾಗದೆ (ಛ) (9) ಕಿಡುಗುಂ (ಛ,ಜ) (10) ತಪ್ಪವರನೀನಿವೃತ್ತಿ (ಛ,ಜ,ಖ)ನಿರ್ವೃತಿ (ಛ) (11) ಆವುದ ಱಿನಾವ (ಕ,ಚ) (12) ನೇತೆಱಿ (ಕ,ಚ) ನೀತೇಱಿ (ಛ,ಜ,ಗ) (13) ವಾಗಳ್ (ಕ,ಚ) (14) ನಿವೃತ್ತಿ(ಛ) (15) ಕ್ಕುಮಾಲಸ್ಯನಾಗದಿರ್ (ಕ,ಚ)

ಮ|| ಮತಿ ಬೇರ್ ನೈಗಮಮಾದಿಯಾ[1]ಗಮನಯಂ ಕೊಂಬಸ್ತಿನಾಸ್ತಿಪ್ರವಾ ।
ಕ್ತಿಗಳ್ ತಾಮೆಲೆಗಳ್ ವಿಭೂತ ಲಲಿತಾನೇಕಾನ್ನಮಪ್ಪರ್ಥಸಂ॥
ತತಿಗಳ್ ಪುಷ್ಪಫಲಂಗಳಾಗೆ ಸೊಗಯಿ[2]ಪ್ಪುತ್ತುಂಗವುಣ್ಯಾಂಕುರ ।
ಶ್ರುತವೃಕ್ಷಾಗ್ರದೊಳಿರ್ದು ನೀಂ ನಲಿಯವೇಕಿರ್ಪಯ್ [3]ಮನಃಕೋಕಿಲಾ ॥ ೮ ॥

ವೆ|| ಸೊಗಯಿ[4]ಪ ಪಣ್ತು (ಕೊನರ್ತ?) ಮರನನೇಱು [5]ಕೋಕಿಲಂ ನಲಿವಂತೆ ಭವ್ಯಮನ ಮೆಂಬ [6]ಕೋಕಿಲಂ ಪುಣ್ಯಕ್ಕಾಗರಮಪ್ಪ ಶ್ರುತವೃಕ್ಷದೊಳ್ ನಲಿಯದೇಕಿರ್ಪುದೋ — ಶ್ರುತ ದಿಂದ ಮಱುವಿನ ಸಾಮರ್ಥ್ಯಮೇಂ ಕಿಱುದೇ ?—

ಕಂ|| ಒಡಲ ಪರಿಗ್ರಹ[7]ದಿರವಂ ।
ಕಿಡೆ ನೆಗಲ್ದುಂ ತಿಣ್ಣಮಱು[8]ವ ನಂತಪ್ಪಾತಂ ॥
ತೊಡಗರ್ಗುಮೆ ಪಾಪದ ಬಲೆಯೊಳ್ ।
ತೊಡರಂ ತೊಡಗರ್ಗುಂ ವಿನೂತಮುಕ್ತ್ಯಂಗನೆಯೊಳ್ ॥ ೯ ॥

ವ|| [9]ಮಣ್ಣೊಳ್ ಮೆತ್ತಿದ ತುಂಬೀಫಲಂ ನೀರೊಳಿಕ್ಕಿದಾಗಳಲ್ತು ಅಡಿಯೊಳಿರ್ದ ಮಣ್ ಕರಗೆ ಮೇಗಲ್ಲದೆ ಕೆಳಗೆನಿಲ್ಲದಂತೆ ಕರ್ಮಬಂಧಸ್ಥನಪ್ಪ ಜೀವಂ ಬಂಧಕಾರಣಂಗಳ್ ಪೋಗೆ ಮೋಕ್ಷದೊಳಲ್ಲದಿರದು ಕರ್ಮಪ್ರಚ್ಛಾದನದಿಂದಱುಯ[10]ದುದರಿದೆ ?—

ಮ|| [11]ಅಱುಗುಂ ಕಾಣ್ಗುಮಮೂರ್ತನಾದಿರಹಿತಂ ಸೌಖ್ಯಾಕರಂ ಕರ್ಮಮಂ ।
ಪಱುದಂದೂರ್ಧ್ವಗತಿಸ್ವಭಾವಸಹಿತಂ ದೇಹಪ್ರಮಾಣಂ ದಲೆಂ ॥
ದಱು ನೀಂ ನಿನ್ನಳವಂ ತಗುಳ್ದು ಮಳಮಂ [12]ನೀಗೆಂತುಮಿಂ ಮಾಣದಿರ್ ।
ತಱುಸಂದೊಪ್ಪುವ ಚಿತ್ತದಿಂ ಗುಣಗಣಪ್ರಖ್ಯಾತಸದ್ವೃತ್ತದಿಂ ॥ ೧೦ ॥

ವ|| [13]ಇಂತು ನಿನ್ನಿಂದಮಂ ನೀಂ ಬಗೆದು ನೋಡಿ ಲೋಹದೊಳ್ ಬೆರೆಸಿದ ಪೊನ್ನಂ [14]ಶೋಧಿಸಿಕೊಳ್ವಂತೆ ಕರ್ಮದೊಳ್ ಬೆರಸಿದ ನಿನ್ನಂ ಶು[15]ದ್ಧಮಾಡಿಕೊಳ್ಳದೇಕಿರ್ಪಯ್—

---

(1) ಯಾಗುವ (ಕ,ಚ) (2) ಪ್ಪತ್ಯಂತ (ಳ,ಖ) (3) ಮನೋಮರ್ಕಟಾ (ಖ,ಳ) (4) ಯಪ್ಪಮರನ (ಕ,ಚ) (5) ಕೋಡಗಂ (ಖ,ಳ) (6) ಮರ್ಕಟಂ (ಖ,ಳ) (7) ಭರಮಂ (ಖ,ಗ) (8) ವುತನಗುಳ್ಳಾತಂ (ಕ,ಚ) (9) ವ.ಣ್ಣಿತ್ತಿದ (ಕ,ಚ) (10) ಯದುಂತಱುಯದೊ (ಳ,ಖ) (11) ಅಱುವಂ (ಳ,ಗ) (12) ನೀನೆಂತುಮಾ (ಳ,ಖ,ಗ) (13) ಇಂತಪ್ಪ(ಕ,ಚ) (14) ಸೋದಿಸಿ (ಕ,ಚ) (15) ಶುದ್ಧನೆಂಮಾಡಿ (ಳ)

ಕಂ॥ ನಾನಾಪ್ರಕಾರಮ[1]ಪ್ಪೆನಿ।
ತಾನುಂ ಘಾತುಗಳೊಳೇನೊ [2]ಬಿಸುಟಾ ತೊಡರ್ಪಂ ॥
ಜ್ಞಾನಮನೆ ಭಾವಿಸುತ್ತಿರೆ।
ನೀನೆಂತುಂ ಪಡೆವಯಲ್ತೆ ಮುಕ್ತಿಸ್ತ್ರಿ(ಶ್ರಿ)ಯಂ ॥ ೧೧ ॥

ವ॥ ಬೇಸಗೆಯೊಳೊಣಗಿದ ಪುಲ್ಲಂ ಕಿರ್ಚು ತಗು[3]ಳ್ದೊಡೊಂದುಗಳಿಗೆಯೊಳಾ ಪುಲ್ಲು ಬೇಯದಿರ್ಕುಮೆ? ಕಾಲಲಬ್ಧಿಯೊಳ್ ಸಮ್ಯಗ್ಜ್ಞಾನಭಾವನೆ ತಗುಳ್ದೊಡಾತನ ಕರ್ಮಂ[4]ಕಿಡದಿರ್ಕುಮೆ ?— ಅದಱಿಂ ನೀಂ ಮಾಣದೆ—

ಮ॥ ಮುಳಿಸಂ ಮಾಟ್ಪುದು ಕರ್ಮಬಂಧದೆಡೆಯೊಳ್ ವಿಕ್ರಾಂತದಿಂದಾಗಳುಂ।
ವಿಳಸದ್ಧರ್ಮದ ವೃತ್ತಿಯಲ್ಲಿ ಸತತಂ ಮಾಡಾ[5]ರ್ಪಿನಂ ರಾಗಮಂ ॥
ಮುಳಿಸುಂ ರಾಗಮುಮಿನ್ನವಪ್ಪೆಡೆಗಳೊಳ್ ತಾಮೊಳ್ಕಿಕೆಯ್ಗುಂ ಕರಂ।
[6]ಮುಳಿಸಂತಲ್ಲದೊಡಾರ್ಗಮಾವೆಡೆಯೊಳಂ [7]ದುಷ್ಕರ್ಮಮಂ ಕೂಡುಗುಂ ॥ ೧೨ ॥

ವ॥ ಕೆಯ್ದು ಪಗೆಯನಿಱಿಯಲೊಳ್ಕಿತ್ತು, ತನ್ನನಿಱಿಯಲೊಳ್ಕಿತ್ತೆ? ; ಮುಳಿಸುಂ [8]ಕರ್ಮಕ್ಕೆ ಮುಳಿಯಲೊಳ್ಕಿತ್ತು, ಧರ್ಮಕ್ಕೆ ಮುಳಿಯಲೊಳ್ಕಿತ್ತೆ ? ; ಖಂಡಶರ್ಕರೆ [9]ಪಾಲ್ಗುಡಿಯಲೊಳ್ಕಿತ್ತು, ವಿಷದೊಳ್ ಕುಡಿಯಲೊಳ್ಕಿತ್ತೆ ? ; ರಾಗಂ ಧರ್ಮದೊಳ್ ಕೂಡಿದೊಡೊಳ್ಕಿತ್ತು, ಪಾಪದೊಳ್ ಕೊಡಿದೊಡೊಳ್ಕಿತ್ತೆ ? ; ರಾಗದ್ವೇಷಂಗಳಂ[10]ತು ಧರ್ಮಕರ್ಮಂಗೆಳೆಡೆಯೊಳಲ್ಲದುಱಿದಾವೆಡೆಯೊಳಂ ಪೊಲ್ಲವೆಂದದರ್ಕಂಜುವುದು—

ಕಂ॥ ಕುತ್ತಂ ಗುಣಮುಳ್ಪ[11]ರ್ಗಳ।
ನೊತ್ತಿದೊಡವರಂಜರಶುಚಿಯ[12]ಪ್ಪಱಿಯೊಡಲಂ ॥
ಪತ್ತಿರ್ಪಿರವಂ [13]ತೊಱೆಯಲು।
[14]ದಾತ್ತತೆಯಂ ಮೆಱೆಯಲಾದುದೆಂಬುದಱಿಂದಂ ॥ ೧೩ ॥

---

(1) ಪ್ಪೆನಿಸಾನುಂ (ಳ,ಱ) (2) ಬಿಸುಟು (ಕ,ಚ) ಬಿಸುಡು (ಳ,ಱ) (3) ಕ್ಕೊಡಾಪುಲ್ಲು (ಕ,ಚ) (4) ಕಿಡದೇಕಿರ್ಕುಂ (ಕ,ಚ) (5) ಡಾರ್ಪಿನಂ (ಳ,ಱ) ಅಂತು ನೀಂರಾಗ (ಕ,ಚ) (6) ತಿಳಿವುಳ್ಳಂಗುಱಿದಾರ್ಗ (ಕ,ಚ) (7) ದುಃಖಂಗಳಂ (ಳ,ಱ) (8) ಕರ್ಮಕ್ಕಲ್ಲದೆ (ಳ) (9) ಪಾಲೊಲ್ಕುಡಿದೊಡೊಳ್ಕಿತ್ತು ವಿಷದೊಳ್ಕುಡಿದೊ (ಕ,ಚ) (10) ಧರ್ಮಪಾಪಂಗಳೊ (ಕ,ಚ) (11) ವರಂಪತ್ತಿದೊ (ಳ,ಱ) (12) ಪ್ಪೊಡಲಂನೀಂ (ಳ,ಱ) (13) ಬಗೆಯಲ್ (ಳ,ಱ) (14) ದತ್ತಾಯಂ ಮರೆಯಲಾದುದೆಡೆಯೆಂಬುದಱಿಂ (ಕ,ಚ) ಮೆರೆಯಲಾಗದೆಳೆಯೆಂಬುದಱಿ (ಳ,ಚ)

ವ|| [1]ಸೆಱೆಯೊಳಿರ್ದಾತಂ ಕಾಪಿನವರಗಲ್ಕೆಯಂ ಮಚ್ಚಬಿರ್ಪನೆ ? ಗುಣದೊ[2]ಳ್ ನೆಗಲ್ದುರ್ದಂ ಮೆಯ್ಯಗಲ್ಕೆಯಂ ಮಚ್ಚಬಿರ್ಪನೆ ?—

ಮ|| ಅಱುವುಳ್ಳಂ ರುಜೆ ಪೆರ್ಚಿ ತೀರ್ಚು[3]ವೊಡದಂ ಮರ್ದಿಂದ(ಗ)ಡಂಗೊತ್ತಿ(ತ್ತ)ದಂ ।
ದುಱಿ[3] ಬೇಗಂ ತೊಱಿ[3] ಯೆಂಬು[4]ದಿಂತು ಮನೆಯೊಳ್ ಕಿರ್ಚಿಲಿಕ್ಕೊಡಾ ಕಿರ್ಚನೇ ॥
ತೆಱಿದಿಂ ಬೇಗನುಡಂಗಿ[5]ಸಿರ್ಪೊಡದು ತಾಂ ಕೆಯ್ಯಿಕ್ಕೊಡಾ ಗೇಹದಿಂ ।
ಪೊಱಮಟ್ಟಾಗಳೆ [6]ಪೋಗದಲ್ಲಿ ಬಱಿಯಂ ಮಾಣ್ಪಿರ್ಪುದೇ ಜೀವನೇ ॥ ೧೪ ॥

ವ|| ಅಱುವುಳ್ಳಂ ಕುತ್ತಂ ಕೆಯ್ಯಿಕ್ಕೊಡಾಮೆಯ್ಯಂ ತೊಱಿ[37]ಯದೊಡಂ, ಬುದ್ಧಿಯುಳ್ಳಂ ಮನೆಯೊಳ್ ತಗುಳ್ದ ಕಿರ್ಚು ಕೆಯ್ಯಿಕ್ಕೊಡಾ ಮನೆಯಂ ಪೊಱಮಡದೆ ಮಾಣ್ಕೊ[8]ಡಂ ಅದೆಲ್ಲಿಯಱುವು ? ಆದಱಿನಱುವುಮಣ್ಮುಂ ನೆಗಲ್ತ್ತಿ[9]ಯ ನೇಱಿಸುವಂತದೇನಿಱುದೇ ?—

ಕಂ|| [10]ತಡೆಯದೆ ಜಗತ್ತ್ರಯಂಗಳ ।
[11]ನೊಡನೊರ್ಮೊದಲಱುವ ವಸ್ತು ನೆರೆ(ಱಿ)ಯದಡರ್ಪಿಂ ॥
[12]ತೊಡರ್ದತ್ತ ಬಳ್ಕಿ ದಾಂಗುಡಿ ।
ವಿಡಿ(ಡು)ವಂತಿರೆ ಮಿಗುವ ಸಕಳ[13]ಬೋಧಿಯನೊಲ್ಲಾ ! ॥ ೧೫ ॥

ವ|| ಒಂದು ವರುಷ ಮುದ್ಯೋಗಂಗೆಯ್ಯೆ ಮಱುವರುಷಕ್ಕೆ ಪಟ್ಟಬಂಧಂ ದೊರೆಕೊಳ್ವಿಡಂ, ಒಂದು ಭವದೊಳ್ ರತ್ನತ್ರಯಂಗಳಖಂಡನಾಗೆ ಮಱುಭವಕ್ಕೆ ಕೇವಲಜ್ಞಾನಂ ದೊರೆಕೊಳ್ವಿ[14]ಡಂ ಮತ್ತೆ ಕೆಲವು ವರುಷಕ್ಕೆ ಪಟ್ಟಮಿಲ್ಲದುದಕ್ಕುಂ. ಈತಂಗಾಸನ್ನಭವ್ಯತೆಯಿಲ್ಲದುದಕ್ಕುಂ. (ಇನಿತಱಿಂದಮೆ) ಆಯಿರ್ವರುಮಾಯೆರಡುಮನಿಲ್ಲೆಂದು ಕುಸಿದು ಮಾಣದುಂಟೆಂದುದ್ಯೋಗಂ[15]ಗೆಯ್ವೊಡಂ ಮತ್ತೆ ಕೆಲವುವರ್ಷದಿಂ ಪಟ್ಟಬಂಧಮಪ್ಪೊಡಂ ಕೆಲವುಭವದಿಂ ಮೋಕ್ಷಮು[16]ಪ್ಪೊಡ ಮೆಂತುಂ ಪೊಲ್ಲದೆ ?

---

(1) ತಗಪಿರ್ದುಂ (ಳ,ಖ,ಗ) (2) ಗುಣಂಗಳೊಳ್ ನೆಗಟ್ಟಿರ್ದಾತಂ (ಕ,ಚ) ಗಟ್ಟಿರ್ದಂ (ಳ,ಖ) (3) ಪೊಡಲಂ (ಳ,ಜ) ತಿರ್ದುವುದದಂ (ಜ) (4) ದೆಂತು (ಕ,ಚ) ದಂತು (ಳ,ಖ) (5) ಸಿರ್ಪುದದುತಾಂ (ಕ,ಚ) (6) ಪೋಪುದಲ್ಲಿ ಬಱಿಯಂ ಮಾಣ್ದಿರ್ಪುದೇ ನೊಳ್ಕಿತೇ (ಕ,ಚ) ಮಾಣದಂತು ಬಱಿಯಂ ತಾನಿರ್ಪುದೇಂ (ಳ,ಜ) (7) ಯದೆ ಮಾಣ್ಕುಮಪ್ಪೊಡಂ (ಕ,ಚ) (8) ಮಾಣ್ದಿರ್ಪೊಡವೆಲ್ಲಿಯಱಿವವೆಲ್ಲಿಯ ಬುದ್ಧಿಯೆನಿಸದಿರವು ಮಣ್ಮು ನೆಗಳ್ತೆ (ಕ,ಚ) ಬುದ್ದಿಯೆ ತಿಳಿಯೆನಿಪಂದಱುವುಂಕೇಳ್ (ಳ,ಜ) (9) ಯುಮನೇ (ನ) ಳಿಸುವಂತು (ಕ,ಚ) ನಳಿಸುವಂತೆ (ಳ) (10) ಪಡೆಯದೆ (ಳ,ಗ) (11) ನೊಡಬೊಳ್ ಮೊದಲಱಿದುವಸ್ತು ನೆರೆಯದೊಡಾರ್ಪಿಂ (ಳ,ಗ,ಖ) (12) ಪೊದಟ್ಟತ್ತ (ತ್ತ) ಬೆಳೆದುದಾಂಗುಡಿ (ಳ,ಜ) (13) ಬೋಧೆ (ಜ) (14) ಡಾವೊಲ್ಲದಿರ್ದೊಡಾತಂಗೆ ಪುಣ್ಯಮಿಲ್ಲದುದಕ್ಕುಮಾತಂಗಾಸನ್ನ (ಕ,ಚ) (15) ಗೆಯ್ಮೆಮತ್ತೆ (ಕ,ಖ) (16) ಪ್ಪೊಡಂ ಪೊಲ್ಲದೇ (ಜ) ಡೆಂತುಂಪೊಲ್ಲಾ ? (ಳ,ಜ) ಮಪ್ಪೊಡದುಪೊಲ್ಲಾ (ಕ)

ಮ|| ಅಱುವಂ [1]ತಾಳ್ದಿ ಪರಿಗ್ರಹದ್ವಿತಯಮಂ ನೀಗಿ [2]ತೂಳ್ದಿ ಚಾರಿತ್ರದೊಳ್ ।
ನೆಱಿದಂತೀ ತೆನು ಮುಕ್ತಿಹೇತು ಗುಣದಿಂ ಗೆಂಟಾಗಿ ಸಂಸಾರದ ॥
ತ್ರೈಅಗಿರ್ದಂದದು ಬಂಧಹೇತು ವದಱಿಂದೀ ಮೆಯ್ಯೊಳೆಂತಾಗಿಯುಂ ।
ನಿಱುಸೊಳ್ಪಂ ಕೆಡಿಸುಗ್ರ[3]ಕರ್ಮರಿಪುವಂ ಮಾಣ್ದೆರ್ದುದೇ ಜೀವನೇ ॥ ೧೬ ॥

ವ|| ಸೆಂಡಾ[4]ಡುವವರ ಗೆಲ್ಲ ಸೋಲಕ್ಕೆ ತೋರಣಂ ಗುಱಿಯಪ್ಪಂತೆ [5]ಅಱುವಂ ಕೊಂಡವರ ಗೆಲ್ಲ ಸೋಲಕ್ಕೆ ಮನುಷ್ಯಭವಂ ಗುಱಿಯಪ್ಪುದದಱಿಂದವರ್ ತೋರಣಮಂ ಪೊರ್ದಿದಾಗ ಳುಱುದು ನೇಱುವುದು. ಈ ಮನುಷ್ಯಂಭವಮಂ ಪೊರ್ದಿದಾಗಳಱುದು ತೊಱಿ(ವು)ದು ನೆಗಲ್ವುದು—

ಕಂ|| [6]ಮುನ್ನೆಂದುಂ ಭಾವಿಸದುದ ।
ನಿನ್ನಾಂ ಭಾವಿಸುವೆ[7]ನೆನ್ನ ಭಾವನೆಯೊಳ್ ತಾಂ ॥
ಮುನ್ನಂ ನಿಂದುದ ಭಾವಿಸೆನೆಂ ।
ಬುನ್ನತ ಭಾವನೆಯೆ ಮುಕ್ತಿಯಂ ಸಾಧಿಸುಗುಂ ॥ ೧೭ ॥

ವ|| ಸಮ್ಯಗ್ದರ್ಶನ ಜ್ಞಾನ ಚಾರಿತ್ರಂಗಳಂ ಮುನ್ನೆಂದುಂ ಭಾವಿ[8]ಸದುದಱಿಂ ಸಂಸಾರ ದೊಳ[9]ಗಿರ್ಪುದೆ ಪೇಳ್ಗುಂ. ಅವನಿಂ ಭಾವಿಸು. ಮಿಥ್ಯಾ[10]ತ್ವ ಕಷಾಯಯೋಗಂ[11]ಗಳಂ ಭಾವಿಸುತಿರ್ಪುದು ನಿನಗೆ ಮೋಕ್ಷಮಾಗದಿ[12]ರವಂ ಪೇಳ್ಗುಂ. ಅವನಿಂ ಭಾವಿಸದಿರು. ನಿನಗಿಂತಪ್ಪ [13]ಸಾಧನೆಯುಳ್ಳೊಡೆ ಮುಕ್ತಿಯಂ [14]ಸಾಧಿಸುವುದರಿದೆ ?

ಮ|| ನೆರೆಪಲ್ವೇಱುಗಮೆ ತಿಣ್ಣಮರ್ಥಚಯಮಂ ತೀಕ್ಷ್ಣಾಯುಧಂ ಬೇಱುಗುಮೇ ।
ಕರಿಗಳ್ ಬೇಱುಗುಮೆ ವಾಜಿ ಬೇಱುಗುಮೆ ಪದಾತಿವ್ಯೂಹಮೇಂ ಬೇಱುಗುಮೇ ॥
ಮುರುಳೇ ಕೆಮ್ಮನಿದೇಕೆ ಬೆರ್ಚಿ ತಡೆವೈ ನಿನ್ನಿಂದಮೇಂ ತೀರದೇ ।
ಪರಿಣಾಮಂ ಶುಭಮಾದೊಡೊಂದೆ ಮಳಮಂ ಕೇಡೆಯ್ದಿಸಲ್ ಸಾಲದೇ ॥ ೧೮ ॥

ವ|| ಮಹಾರಾಜಪುರುಷಂಗೆ ಚಕ್ರಂ ಪುಟ್ಟದೊಡೆ ಅಱುವುಳ್ಳಂಗೆ ಬೋಧಿ ಪುಟ್ಟದೊಡೆ ಅತಂಗೆ ಪಗೆಯಂ ಗೆಲ್ವುದುಮಿತಂಗೆ ಕರ್ಮಮಂ ಗೆಲ್ವುದುಮರಿದೇ ?—

---

(1) ತಾಳ್ದು (ಕ,ಚ) (2) ತೊಳ್ದು (ಕ,ಚ) (3) ಕರ್ಮದ ತಗುಳ್ಪಂ ಮಾಣದಿರ್ ಜೀವನೇ (ಕ,ಚ) (4) ಡುವಂಗೆ (ಕ) (5) ತನುವಂ ಕೊಂಡವರ್ಗೆ ಜ್ಞಾನಮೇ ಗುಱಿಯಪ್ಪುದು ಸೆಂಡಾಡುವವರ್ ತೋರಣಮಂ ಪೊರ್ದಿದಾಗಳ್‌ಗೆಲ್ದರ್ (ಕ, ಚ) ತನುವಿಡಿದವರೀಗೆಲಱಿವಂ ಮುಟ್ಟದಂದುಗೆಲ್ದರದಱಿಂ ಮನುಷ್ಯಭವಂ (6) ಮುನ್ನಂ ಭಾವಿಸದಿರ್ದುದನಿನ್ನುಂ(ಳು,ಱು) (7) ನನ್ನಭಾನಿಸಿದುದ ನಿನ್ನೊಳಗಂ ಭಾವಿಸುವೆನೆಂಬುನ್ನತ (ಕ,ಚ) ವೆನೆಂಬ ಭಾವನೆಯುಮನಾ ನಿನ್ನೊಳುನಾಂ (ಳು,ಱು) ನಿನ್ನುಮಣಂ ಭಾವಿ (ಳ) ಭಾವನೆಯೊಳ್‌ತಾಂ ಮುನ್ನಂ ನಿಂದುದ (ಗ,ಜ) (8) ಸದುದಂ (ವಂ) (ಕ,ಚ) (9) ಳಿರ್ದುದೆ (ಕ) (10) ತ್ವಾಸಂಯಮ ಕಷಾಯ (ಳ,ಜ) (11) ಗಳನಾವಗಂ (ಕ,ಚ) (12) ರವೆ (ಕ,ಱು) (13) ಭಾವನೆ (ಕ) (14) ಭಾವಿಸುವು (ಚ)

ಕಂ॥ ಎನ್ನೆವರಂ ಬಿಸುಡು[1]ವುದೊಳ ।
ವನ್ನೆವರಂ ಬಿಸುಡದಿರ್ದು ತವೆ ಬಿಸುಟೀ ೞ ॥
ಪ್ಪನ್ನ [2]ನಿವೃತ್ತಿಗೆ ನೆಲಸಿದೊ ।
ಡಿನ್ನವು ತಪಮಾಗೆ ನಿನ್ನ ಬಯಸುವ ಮೋಕ್ಷಂ ॥ ೧೯ ॥

ವ॥ ಮುನ್ನಮ[3]ಶುಭಕರ್ಮಬಂಧ[4]ಕಾರಣಂಗಳುಮಂ ಬಿಡುತ್ತುಂ ಬಂದು ಬಱಯಂ ಶುಭಕರ್ಮಬಂಧಕಾರಣಂಗಳುಮಂ ಬಿಸುಡುತ್ತುಂ ಬಂದಿನ್ನುಂ ನಿವೃತ್ತಿಯು[5]ಮಿಲ್ಲದಂದು ಮೋಕ್ಷಮಿಲ್ಲ. ಮತ್ತಮಿನಿಸಾನುಮೇಕಚಿತ್ತದಿಂ [6]ಕೇಳೆಲೆ ಜೀವಾ,

ಉ॥ ಪೊಲ್ಲ[7]ಮಿದೊಳ್ಳಿತೆಂಬೆರಡಱುಂ ದುರಿತಂ ಸುಕೃತಂ [8]ತಗುಳ್ಗುಮಂ ।
ತಲ್ಲಿಯೆ ದುಃಖಮುಂ ಸುಖಮುಮಪ್ಪುದಱುಂದವು ಮೂಱುಭಾಗ[9]ಮುಂ ॥
ತೆಲ್ಲವಱಾಗಿ ನಿ[10]ಶ್ಚಯಿಸಿದಂತದೊ[11]ಳಟ್ಟುಗ ನಪ್ಪುದಾಗಿಯುಂ ।
ಮೆಲ್ಲನೆ ತದ್ವಿಭಾಗಮುಮನೊಪ್ಪಿರೆ ಪಿಂಗಿಸು ಮುಕ್ತಿ ಕೂಡುಗುಂ ॥ ೨೦ ॥

ವ ॥ ಅಧಿಕಾರಸೂತ್ರದಂತಾ[12]ಗಿರ್ದೀವೃತ್ತದರ್ಥಮುಂ ವ್ಯಾಖ್ಯಾನ[13]ವಿಶೇಷದಿಂದಲ್ಲದಱಯಲಾಗದೆಂತೆನೆ :—[14]ಪೊಲ್ಲವಪ್ಪ ನೆಗಟ್ಟಿಯಿಂ ದುಷ್ಕರ್ಮ ಬಂಧಮಕ್ಕುಂ, ಆಕರ್ಮ ಬಂಧದಿಂ ದುಃಖಮಕ್ಕುಂ. ಅಂತಾ ಮೊದಲಭಾಗಂ ಮೂಱುಂ[15]ತೆಱಂ, ಇನ್ನೊಳ್ಳಿತಪ್ಪ ನೆಗಟ್ಟಿಯಿಂ ಪುಣ್ಯಬಂಧ[16]ಮಕ್ಕುಂ. ಆ ಪುಣ್ಯಬಂಧದಿಂ ಸುಖಮಕ್ಕುಂ. ಅಂತೆರಡನೆಯ ಭಾಗಮುಂ ಮೂಱುಂತೆಱಂ. ಆ ಮೊದಲ ಮೂಱುಭಾಗಮುಮಂ ತನ್ನೊಳಾಗಲೀಯದೆರಡನೆಯ ಮೂಱು ಭಾಗಕ್ಕೆಚ್ಚೈಸಿ ನೆಗಟ್ಟು ತುದಿ[17]ಯೊಳಿಪ್ಪಾಗಳ್ ಕಾಲೊಳ್ ಕರ್ಬೊನ್ನ ಸಂಕಲೆಯನಿಕ್ಕಿ[18]ದೊಡಂ, ಪೊನ್ನ ಸಂಕಲೆಯನಿಕ್ಕಿದೊಡಂ ಸೆಱ[19]ಯಿರ್ಪುದುಂಟಪ್ಪೊಡೆ – (ಶುಭಾಶುಭರೂಪಮಪ್ಪ ದುಷ್ಕೃತಸುಕೃತಂಗಳೆರಡುಂ ಬಂಧಮಿರ್ಪುದುಂಟಪ್ಪೊಡೆ) ಈ ಎರಡರ [20]ತೊಡರ್ಪುಮಂ ಕಳೆವುದದು ಮೋಕ್ಷಂ—

---

(1) ವುದೊಳ್....ಬಿಸುಡುತಿರ್ದು ತವೆ ಬಿಸುಡದೊಡಂ (ಕ,ಚ) (2) ನಿವೃತ್ತನಿವೃತ್ತಿಗಳಿಂ ನೆನಸಿದೊಡ ದುವೆನಿನ್ನ (ಕ,ಚ) ನಿರ್ವೃತಿಗೆನೆಲಸಿದೊ (ಛ,ಶ) (3) ಮಶುಭ ಪರಿಣಾಮಕರ್ಮ (ಕ,ಚ) (4) ಹೇತು ಕಾರಣ ಮಪ್ಪಂತಾಗಿ (ಛ,ಛ) ಬಿಸುಟು ತಪಂಬಡುತುಂಬಂದೀಬಱು (ಕ,ಜ) (5) ಮಿಲ್ಲ ನಿವೃತ್ತಿಯುಮಿಲ್ಲೆನಿಸಿದೊಡ ದುವೆ ಮೋಕ್ಷಮಕ್ಕುಮಿನಿ (ಕ, ಚ) ಮೋಕ್ಷಮಲ್ತು (ಛ) ಮೋಕ್ಷಮಿಲ್ಲ (ಖ, ಗ) (6) ಕೇಳಿಂ (ಖ, ಗ) (7) ದಿದೊಳ್ಳಿ (ಛ) (8) ತಂಗಳುಮಂ (ಚ) (9) ಮಂತೆಲ್ಲವರಾದಿ (ಗಿ) (ಖ,ಗ) (10) ಶ್ಚಯಿಸದಂತ್ಯ (ಚ) (11) ಳರ್ತ್ತಿಗಿ (ಕ,ಚ) (12) ಗಿರ್ದುದೀ (ಛ) (13) ವಿಷಯದಿಂ (ಛ) (14) ಪೊಲ್ಲದುವಪ್ಪ (ಕ) (15) ತೆರ ನಿನ್ನೊಳ್ಳಿಂತಪ್ಪ (ಕ,ಚ) (16) ಮಕ್ಕುಮದಱಿಂ (ಖ,ಗ) (17) ಯೊಳಿರ್ಪಾಗಳ್ (ಕ,ಚ) (18) ದೊಡೇ೦ (ಕ,ಚ) (19) ಸೆಱೆಯೊಳಿರ್ಪು (ಕ,ಚ) (20) ತೊಡರಂ (ಖ,ಗ)

ಕಂ॥ [1]ತನ್ನಂ ತನ್ನಿಂದಳಿಮ್ಮಿ |
ಭಿನ್ನಂ [2]ಮಾಡುವುದು ನೋಲ್ಪು [3]ದಾತ್ಮನ ತೆಱನಂ ॥
ತನ್ನೊಳ್ ಭಾವಿಸಿ [4]ತಿಳಿದುಱಿ[5] |
ತನ್ನಂದಮ[6]ನೆಯ್ದಿದಲ್ಲಿ ತೊಡರ್ಗುಮೆ ಜೀವಾ ॥ ೨೧ ॥

ವ॥ [6]ಅಂತು ಸಕಲಕರ್ಮ್ಮಕ್ಷಯಮಂ ಮಾಡ[7]ಲುಂ ಮುಕ್ತಿಯೊಳ್ ಕೂಡಲುಂ ನೆರೆದಬೋಧಿಯೆಂಬನರ್ಘ್ಯಮಹಾರತ್ನಂ[8]ಸಂಸಾರಿಜೀವಕ್ಕೆ ಕರಂ ದುರ್ಲಭಂ. ಸ್ಥಾಣುಸ್ಖಲನ (ಸ್ಥೂಣಾನಿಖನನ?) ಅಂಧನಿಧಿಲಾಭ ದೃಷ್ಟಾಂತ[9]ನ್ಯಾಯದಿಂ ಕರಮುರಿದದಱಿಂದಮಲ್ಲದೆ ತಡೆಯಲಾಗ[10]ದದೆಂತೆಂದೊಡೆ :—

ಉ॥ ಸ್ಥಾವರದಿಂ ತ್ರಸಪ್ರಕರಮಾ ತ್ರಸದಿಂ ಸ(ವಿ)ಕಳೇಂದ್ರಿಯತ್ವದಿಂ |
ಭಾವಿಸಿ ನೋಡೆ ಮತ್ತೆ ಸಕಳೇಂದ್ರಿಯ[11]ದಿಂ ಬಲಿಂ ಸಂಜ್ಞಿ ಸಂಜ್ಞಿಯಿಂ ॥
ದೀ ನರಮಾನುಷತ್ವಮದಱಿಂದೊಳ್ [12]ಕುಲ ದೇಶ ಸುರೂಪ ಸತ್ವ ಸ |
ತ್ಸೇವನೆ ಸೇವೆಯಿಂ ವಿಮಳಬೋಧಿಯೆ ದುರ್ಲಭಮೆಂತು ಜೀವನೆ ॥ ೨೨ ॥

ವ॥ [13]ಈ ಸಂಸಾರಮೆಂಬ ಮಹಾಸಮುದ್ರದೊಳಗೆ ಕರಮುಗಾಧಮಪ್ಪೆಡೆ[14]ಯೊಳಲ್ಬರ್ದನನ್ತಾನನ್ತಮಪ್ಪ ಸ್ಥಾವರ ಜಾತಿಯೊಳ[15]ಗಣಿಂ (ಭವಂ ಪಡೆವುದರಿದು). ಪೊಱಮಟ್ಟು ತ್ರಸಮಾಗಿ ಪುಟ್ಟುವುದು ಕರಮರಿದು. ಆ ತ್ರಸಜಾತಿಯೊಳಗಣಿಂ [16]ಸಮವಾಯದಿಂ ಪೊಱಮಟ್ಟು (ವಿಕಳೇಂದ್ರಿಯಮಾಗಿ ಪುಟ್ಟುವುದು ಕರಮರಿದು ಆ ವಿಕಳೇಂದ್ರಿಯದಿಂ) [17]ಸಕಳೇಂದ್ರಿಯಮಾಗಿ ಪುಟ್ಟುವುದು ಕರಮಾಶ್ಚರ್ಯಂ. ಆಸಕಳೇಂದ್ರಿಯದೊಳಂ ಸಂಜ್ಞಿ ಜೀವಿಗಳಾಗಿ ಪುಟ್ಟುವುದು ಕರಮರಿದು. ಆ ಸಂಜ್ಞಿ ಜೀವಿಗಳೊಳಗಣಿಂ ಬಂದು ಮನುಷ್ಯಭವಮಂ ಪಡೆವುದರಿದು. ಮನುಷ್ಯಭವಂ ಬಡೆದುಂ ಧರ್ಮ್ಮಕ್ಷೇತ್ರಂಬಡೆವೊಡರಿದು, ಧರ್ಮ್ಮಕ್ಷೇತ್ರಂ ಬಡೆದುಂ ಕುಲಂಬಡೆವುದರಿದು. [ಕುಲಂಬಡೆದೊಡಂ ಸದ್ದೇಶಮಂ ಪಡೆವುದರಿದು ಸದ್ದೇಶಮಂ ಪಡೆದೊಡಂ] ರೂಪಂಬಡೆವುದರಿದು ; ರೂಪುವಡೆದುಂ ಸತ್ತ್ವಂಬಡೆವುದರಿದು, ಸತ್ವಂಬಡೆದುಂ ಕರಂ ಬುಧಸೇವೆವಡೆವುದರಿದು, ಬುಧಸೇವೆವಡೆದುಂ ಬೋಧಿಯೆಂಬನರ್ಘ್ಯಮಹಾರತ್ನಮಂ ಪಡೆವುದರಿದು. [18]ಇಂತಪ್ಪುದನೆಂತಾನುಂ ಪಡೆದುಂ ಕೆಡಿಸುವರಾರಂ [19]ಪೋಲ್ವರೆಂಬಾ :—

---

(1) ತನ್ನಿಂ (ಕ,ಚ) (2) ಮಾಡೂದು (ಳ) (3) ದಾಪ್ತನ (ಖ,ಗ) ನೊಪ್ಪುವಾತ್ಮನ (ಗ) (4) ತಿಳಿದಿರೆ (ಕ,ಚ) (5) ನೆಯ್ದುದಲ್ಲಿ (ಘ) ನೆಯ್ದದಲಸಿ (ಖ,ಗ) (6) ಇನ್ನು (ಕ,ಚ) (7) ಲುಂ ನೆರೆದ ಬೋಧಿ (ಘ,ಳ) (8) ಸಂಸಾರ (ಕ,ಚ) (9) ಜ್ಞಾನದಿಂ (ಘ) (10) ದ ದೆಂತೆನೆ (ಕ,ಚ) (11) ದಿಂದಮೆ ಸಂಜ್ಞಿಯಿಂ ದೀ (ಕ, ಚ) ಸಂಜ್ಞಿಯೆಂಬೀವರ (ಳ, ಜ) (12) ಕುಲಮೊಳ್ಮಲ ದೋಷದ ರೂಪುಸತ್ವತತ್ಸೇವನೆ (ಳ, ಝು) (13) ಈ ಸಂಭವದ(ಖ,ಝು) (14) ಯೊಳಿರ್ದ(ಖ,ಗ) (15) ಗಣಿಂ ಪೊಱಮಟ್ಟು(ಕ,ಚ) (16)ಮರಿದಾಸಂಜ್ಞಿ ಜೀವಂತ್ರಸ (ಳ,ಝು) (17) ವಿಕಳೇಂದ್ರಿಯ ಜೀವಿಯಾಗಿ ಪುಟ್ಟುವುದುಕರಮರಿದು ವಿಕಳೇಂದ್ರಿಯಮೊಳಂ ಸಕಳೇಂದ್ರಿಯಮಾಗಿ ಪುಟ್ಟುವುದುಕರಮರಿದು (ಕ, ಚ) ಸಂಜ್ಞಿಜೀವಿಯಾಗಿ (ಘ, ಝು) (18) ಇಂತಪ್ಪ ಬೋಧಿಯನೆಂತಾನುಂ ಪಡೆದುಮದಂ ಕೆಡಿಸು (ಕ,ಚ) (19) ಪೋಲ್ವರೆಂದೊಡೆ

ಕಂ॥ ಪಲ[1]ಕಾಲಮಾಗರಂಗಳೊ ।
ಳಲಸದೆ ನಮೆ[2]ದಗುಲ್ದು ಪಡೆದ ಮ್ಲಾಽಽಽಽಽಽಽಽ ॥
[3]ಜಲನಿಧಿಯೊಳಕ್ಕಿ ಕಿಡಿಸುವ ।
ವೊಲಲಘುಗುಣ ಪ್ರಣುತ ಬೋಧಿಯಂ ಕಿಡಿಸುವವರ್ ॥ ೨೩ ॥

ವ॥ ಎಂತಾನುಂ ಪಡೆದ [4]ಬೋಧಿರತ್ನಮಂ ಅರಾನುಂ ಕಿಡಿಸಿದರಪ್ಪೊಡೆ ಮಗುಲ್ದು ಪಡೆ[5]ಯಲಾಗದು ಗಡಿಂ—

ಚಂ॥ ಪಡುವಣ ವಾರ್ಧಿಯಲ್ಲಿ ನೊಗ[6]ನಂ ಕಲಿಯಂ ಗಡ ಮೂಡಣಬ್ಧಿಯ ।
ಲ್ಲಿಡಿಕಿದೊಡೊಯ್ಯನಾ ನೊಗದೊಳಾ ಕಲಿ ಮುನ್ನೆ [7]ತಗುಳ್ದು ಛಿದ್ರದೊಂ ॥
ದೆಡೆಯೊಳೆ ಮತ್ತೆ ಬಂದು ಫಲಿಯಿಪ್ಪೊಡೆ ತಾಂ ಫಲಿಯಿಕ್ಕುಮೊರ್ಮೆ ಕೆ ।
ಟ್ಟೊಡೆ ಬಲಿಕೆಲ್ಲಿಯುಂ ಪಡೆಯಬಾರದು [8]ನೆಟ್ಟನೆ ಬೋಧಿರತ್ನಮಂ ॥ ೨೪ ॥

ವ॥ ಪಿರಿದಪ್ಪಡವಿಯಂ ಕಳೆದುಪೋಗಲ್ ಬಗೆವಾತಂ ಬ[9]ಲ್ನೆರೆವು ದೊರೆಕೊಂಡೊಡೆ ಕೂಡಿಪೋಗ (ಲೊಲ್ಲ) ದಿರ್ದೊಡಂ, ಸಂಸಾರಮಂ [10]ಕಳೆವಾತಂ ಬೋಧಿ ದೊರೆ[11]ಕೊಂಡೊಡ ಘಮಂ ಕಿಡೆ ನೆಗಲದೊಡಂ[12] ಆತನಾ ಪೇರಡವಿಯುಮಂ ಈತನೀ ಸಂಸಾರಮಂ ಕಳೆಯಲಾಱಂ—

ಕಂ॥ ಅದಱಂ [13]ತಪಮಂ ಗೆಯ್ವುದು ।
ವಿದಿತ ಮಹಾಬೋಧಿ ರತ್ನಮಂ ಪಡೆದು ಬಲಿ ॥
ಕ್ಕದು ಮುಕ್ತಿ ಶ್ರೀ[14]ವಧುವೊಳ್ ।
ಪುದುವಾಲಲ್ ತಾನೆ [15]ಕೂಡಲಾರ್ಕುಮೊಳಂ ॥ ೨೫ ॥

ವ॥ ಇಂತಪ್ಪ [16]ಬೋಧಿರತ್ನಮಂ ಪಡೆದು ಬೇಗಂ ತಱಿಸಂದ ಮಹಾಪುರುಷರ [17]ಕಥೆಯನವ್ವೊಡಂ ಮುಂ ಕೇಳದೊಡಮಿಂ ಕೇಳಿಂ—ಅದೆಂತೆನೆ—

---

(1) ದೆವಸ (ಕ,ಚ) (2) ದಗಲ್ದು (ಕ,ಚ) (3) ಜಲಧಿಯೊಳಗಿಕ್ಕಿ ಕಿಡಿಸದ (ಖ,ಗ) ವವೋಽಲಂಘ್ಯ ನಿಬೋಧಭೋಧಿಯಂ ಕಿಡಿಸುವವರ್ (4) ಬೋಧಿಯಂ (ಘ) (5) ಯಲ್ಬಾರದದಂತೆನೆ (ಜ) ಪಡೆಯಲಾಗದೆಂತೆನೆ (ಕ,ಚ) ಲಾಗದುಗಡಾ (ಖ) (6) ನುಂಕಳೆಯುಂ (ಚ) (7) ತಗುಳ್ದದಿ ನಿಂದೊಂದೆಡೆಯೊಳೆ (ಕ,ಚ) ತಗುಳ್ದ ಚಿನ್ನಿಂದೊಂದೆಡೆ (ಚ) (8) ನಿರ್ಮಳ (ಖ) (9) ನೆರಂ (ಕ) (10) ಕಳೆವೆನೆಂಬ ಬಗೆಯುಳ್ಳಾತಂ (ಕ) (11) ಕೊಂಡೊಡದಂ ಕಿಡಿಸಿದೊಡಂ ಆತ (ಖ,ಘ) (12) ಈತನೀಸಂ ಬೋಧಿಯಂ ಕಡೆಯಲಾಱಂ (ಘ) (13) ಪಯ್ತುಂಗೆಯ್ವುದು (ಕ,ಚ) ಪಯ್ಮಂಗೆಯ್ವುದು (ಛ) ತಪಮಂ ಕೈಕೊಂಡುದಿತ (ಘ,ಖ) (14) ವಧು ವಿನ (ಕ,ಘ) ರಮೆಯೊಳ್ (ಚ) (15) ಮಾಡಲಾರ್ಕು (ಕ,ಚ) (16) ಬೋಧಿಯೆಂ (ಖ,ಗ) (17) ಕಥೆಯಂ ಕೇಳ ದೊಡಿಂ ಕೇಳಿಂ (ಕ,ಚ)

— ನಿದರ್ಶನ ಕಥೆ —

(ಧನ್ಯಕುಮಾರ ಚರಿತೆ)

ಕಂ॥ ಶ್ರೀನಾರೀಯುತಮಪ್ಪು ।
ಜ್ಜೈನಿಯೊಳಭಿನೂತವೈಶ್ಯಕುಲದೊಳಗೆ ಮಹಾ ॥
ಸ್ನಾನದಿನಭಿಮಾನದಿ [1]ನತಿ ।
ದಾನದಿನೆಸೆದಂ ಪ್ರಸಿದ್ಧಗುಣಿ(ಣ)ಧನಪಾಳಂ ॥ ೨೬ ॥

ವ॥ [2]ಆತನ [3]ಸೆಟ್ಟಿತಿ ಪ್ರಭಾವತಿಯೆಂಬೊಳ್. ಆಯಿರ್ವರ್ಗರ್ಮೆಂಬರ್ ಗಂಡುಗೂಸುಗಳಾದೊ[4]ಡವರ್ಗುತ್ಸಾಹ ಕಾರ್ಯಂಗಳ್ಗಂ [5]ದಾನ ಸನ್ಮಾನಾದಿಗಳಿನರ್ಥಂ ತವಿಪ್ಪೊಡಂ ಮನಮಿಕ್ಕದೆ ಮಕ್ಕಳಂ ದಾರಿದ್ರ್ಯಂಗೆಯ್ಸಿ ಬಾಲುತ್ತುಮಿರೆ ಪ್ರಭಾವತಿಯೊಂದುದಿವಸಂ [6]ತಲೆನೀರ್ಮಿಂದು ಧನಪಾಲಸೆಟ್ಟಿಯೊಡನೆ [6]ನಿದ್ರಾವಶಗತೆಯಾಗಿ ಮಲಂಗಿರ್ದು ಶುಭಸ್ವಪ್ನಂಗಳಂ [7]ಕಂಡೊಸೆದಱುವುಳ್ಳರಂ ಬೆಸಗೊಂಡೊಡೆ ನಿನಗೆ ಸ್ವರ್ಗದಿಂ ಬಂದು ಪುಟ್ಟುವನೊರ್ವಂ ಸುಪುತ್ರನಂ ಪಡೆವೆಯೆಂ[8]ದೊಡೊಸೆದಿರ್ದು ಕೆಲವುದಿವಸದಿಂ ಗರ್ಭಮಾಗಿ ನವಮಾಸಂ ನೆಱೆಯೆ ಮಗನಂ ಪೆತ್ತಾಗಳಾ ಕೂಸಿಂಗೆ ಜಾತಕರ್ಮನಾಮಕರ್ಮಂಗಳೊಸಗೆಗಳಂ ಮಾಡಿ—

ಉ॥ ಈತನ ಗರ್ಭ[9]ದಿಂ ಬಲಿಯಮೆಯ್ದೆ ಧನೋದ್ಭವಮಾದುದೆಂಬ(ದ)ತಿ ।
ಪ್ರೀತಿಯೆ ಧನ್ಯ(ಧಾನ್ಯ)ನೆಂಬ ಪೆಸರಾಗೆ ಸುಖಂ ಬಳೆದಕ್ಷರಾದಿ ವಿ ॥
ಖ್ಯಾತ ಕಳಾಗಮಂಗಳನಚಿಂತಿತಸಂಚಿತ [10]ಪುಣ್ಯರಾಶಿ ಸ ।
ನ್ನೂತನರೇಂದ್ರಪುತ್ರ [11]ರೊಡಗಲ್ತತಿಗರ್ವಿತನಾದನುನ್ನತಂ ॥ ೨೭ ॥

ವ॥ ಅಂತು ಸಕಳವಿದ್ಯಾವಿರಾಜಿತನುಂ, ರಾಜಪೂಜಿತನು[12]ಮಾಗೆ ತಾಯ್ಗೆ ಧನ್ಯಕುಮಾರನ ಮೇಗತಿಸ್ನೇಹಮುಂ ಮೋಹಮುಂ ತಿಣ್ಣಮಾಗೆ ನಿತ್ಯ(ಚ್ಚ)ಮಾತನ [13]ಬೀಯಮಂ ಸಲಿಸಿಕೊಂಡಾಡುವುದರ್ಕಣ್ಣಂಗಳ್ ಎಮ್ಮುಳ್ಳುದೆಲ್ಲಮುಂ ನಿನ್ನ ಕಿಱಿಯ ಮಗನ ಬೀಯಕ್ಕೆ ಕೊಟ್ಪೆಮ್ಮಂ [14]ಕಿಡಿಸಿದಪ್ಪೆ ಯೆಂದಬ್ಬೆಯಂ ನಿಚ್ಚ[15]ನಿಚ್ಚಮನಿವಂಗೆಯ್ಯೆ ಧನ್ಯಕುಮಾರನಂ ತಾಯ್ ಕರೆದಿಂತೆಂದಳ್.

---

(1) ನುತ (ಕ,ಚ) (2) ಪೆಂಡಿತಿ (ಕ,ಚ) (3) ಡವರುತ್ಸಾಹ ಕಾರ್ಯಕ್ಕಂ (ಕ,ಚ) (4) ದಾನಧರ್ಮಂಗಳಂ ಬೀಯಂಗೆಯ್ದರ್ಥಮೆಲ್ಲಂ ತಪ್ಪೊಡೆ (ಕ,ಚ) (5) ರಜಸ್ವಲೆಯಾಗಿ ಮಿಂದು ಬಂದು (ಕ, ಚ) ಚತುರ್ಥ ಸ್ನಾನಂಮಾಡಿ ಮಿಂದು ಬಂದು (ಖ,ಗ) (6) ಭೋಗಾಸಕ್ತ ಚಿತ್ತೆಯಾಗಿ ಸುರತಾವಸಾನದೊಳ್ ನಿದ್ರಾ (ಕ,ಚ) (7) ಕಂಡೊಸೆದೆಟ್ಟು ತನ್ನ ಸೆಟ್ಟಿಗೆ ಪೇಳ್ದೊಡೆ ಸೆಟ್ಟಿಯೆಂದಂ ನಿನಗೆ ಸ್ವರ್ಗದಿಂ (ಕ,ಚ) (8) ದೊಡೆರಾಗಿಸಿರ್ದು (ಕ,ಚ) ಸಂತೋಷದಿರ್ದು (ಛ,ಝು) (9) ದಿಂದಮೆಧಾನ್ಯೋದ್ಭವ ಮಾಗುತೆ ಬಂದು (ಕ) ದಿಂಬಳಿಯಮುತ್ಸವ ಮಾಗುತೆ ಬಂದುದೆಂಬ (ಛ,ಝು) ದಿಂಬಟ್ಟುಕೆ ಪೆರ್ಚಿಧನೋದ್ಭವಮಾಗುತೆ (ಖ,ಗ) (10) ಪುಣ್ಯಭಾಗಿ (ಕ,ಚ) ಪುಣ್ಯವಿನೂತನಾಗಿ ಸ ನ್ನೂತ (ಛ,ಖ) (11) ರೊಡನಿರ್ದತಿ (ಛ,ಖ) (12) ಮಾಗಿ ಬಳೆಯುತ್ತುಮಿರೆ ಧಾನ್ಯ (ಕ,ಚ) (13) ಬೀಯಂಗಳಂ ಸಲಿಸಿಕೊಂಡಾಡುವುದು ಮಾತನುಂಡಾಡುವುದಮಂ ಕಂಡಿಣ್ಬರಣ್ಣಂಗಳುಮೆಮ್ಮಂ ಪಡೆದುದೆಲ್ಲಮುಂ ನಿನ್ನಕಿಱಿಯ (ಕ,ಚ) (14) ಕಿಡಿಸಿದಿರೆಂ (ಕ,ಚ) (15) ನಿಚ್ಚಮುಳಿವಂಗೆಯ್ಯುತ್ತುಮಿರೆ (ಕ,ಚ) ಮನಿವರಂಗೆಯುತ್ತು (ಛ) ಮನಿಪ್ಪಂಗೆಯ್ಯು (ಖ,ಗ)

ಕಂ|| ಪರದರ ಮೆಗನತಿ[1]ಮದದಿಂ |
ಪರದುಟ್ಟಿದರಿ ಧನದ ಬರವುಮೊಲ್ದಿಪ್ಪನುನೋ ||
ಹರಮುಂ [2]ಸುಖಕರಮುಂ ಕುಲ |
ಭರಮ್ಮುಂ[3] ತಾವಿಂತಿವೆಲ್ಲಮೆಂತುಟು ಬರ್ಕುಂ ||೨೮||

ವ|| "ಕೆಮ್ಮಗಿರಲಾ[4]ಗದು, ಪಿಡಿ ಪರದುಗೆಯ್" ಎಂದು ನೂಱು[5]ಗದ್ಯಾಣಂ ಪೊನ್ನಂ ಕೊಟ್ಪೊಡೆ ಕೊಂಡು [6]"ಪರದುಗೆಯ್ವುದೆಂತು?" ಎಡೊಡೆ "ಒಂದಂಕೊಟ್ಪೊಂದಂ ಕೊಳ್ವುದು" ಎಂದೊಡೆ "ಅಂತೆಗೆಯ್ವೆಂ" ಎಂದಂ[7]ಗಡಿಯ ಬೀದಿಯತ್ತಲ್ ಬಂದು ಸವಿ(ಮಿ)ದೆಯ ಭಂಡಿಯಂ ಮಾಱುವುದಂ ಕಂಡಾ ಪೊನ್ನೆಲ್ಲಮಂ ಕೊಟ್ಪಾ ಸವಿದೆಯ ಭಂಡಿಯಂ ಕೊಂಡಾ ಭಂಡಿಯಂ ಕೊಟ್ಪೊಂದು ತಗರಂ ಕೊಂಡದಂ ಪಿಡಿ[8]ದಿರ್ಪಿನಂ ಒರ್ವಪೊಲೆ[9]ಯನೊಂದು ಮಂಚದೆಕ್ಕೆ[10]ಯಂ ಕೊಂಡು ಬರುತ್ತಿರೆ ಕಂಡಾ ತಗರಂ ಕೊಟ್ಪಾಮಂಚದೆಕ್ಕೆಯಂ ಕೊಂಡು ಪಗಲಾದಾಗಳ್ ಪಸಿದು ಮನೆಗೆ ವರೆ ಪೊಸತು ಪರದುಗೆಯ್ದು[11]ಮಗಂ ಬಂದನೆಂದನನಬ್ಬೆ—

ಕಂ|| ರಂಗವಲಿಯಿಕ್ಕಿ ತೋರಣ |
ಮುಂಗುಡಿಯುಮನೊಪ್ಪೆ ಕಟ್ಟಿ ಪಸೆವಾಸಿ ಮಹಾ ||
ಮಂಗಳಕಳಶದಿನಿದಿರ್ಗೊಂ |
ಡಂಗಡಿಯಿಂ ಬರ್ಪ ಸುತನನೊಸೆದಭಿನುತನಂ ||೨೯||

ವ|| ಪಸೆಯ ಮೇಲೆ ಕುಳ್ಳಿರಿಸಿ [12]ಪರಸಿ ಸೇಸೆಯನಿಕ್ಕಿ ಮನ್ನಿಸಿ ಕುಳ್ಳಿರಿಸುವುದಂ ಕಂಡ ಣ್ಣಂಗಳೆಣ್ಬರಾವುಮೊಂದಕ್ಕೆ ನೂಱು[13]ಪಡೆದೊಡಂ ಬಗೆನಳಲ್ಲೀತಂ ನೂಱುಗದ್ಯಾಣಮಂ ಕೊಟ್ಪು ಒಂದು [14]ಕೋಳದ ಮಂಚದೆಕ್ಕೆಯಂ ಕೊಂಡು ಬಂದೊಡಿನಿತೊಸಗೆಯಂ ಮಾಡಿದಳ್ "ತಾಯ್ ಕೂರ್ತೊಡೇಗೆಯ್ಯೆಳ್" ಎಂದು ತಮ್ಮೊಳನಿಬರುಂ ನುಡಿಯುತ್ತಿರೆ ತಾಯಾತನ ತಂದ ಮುಂಚ ದೆಕ್ಕೆಯಂ ಮಣ್ ಪತ್ತಿತ್ತೆಂದದನೊಸಸಿ [15]ಕರ್ಚಿದೊಡಲ್ಲಿಯಮರ್ಚಿದ [16]ಬಂಧಂ ಸಡಿಲ್ದು ಬಿಲ್ದುಗಳ್—

---

(1) ಮುದದಿಂ (ಳ,ಜ) (2) ಶುಭಕರಮುಂ (ಕ,ಚ) (3) ಸುಖದಿರವುಮೆಂತು ಬರ್ಕುಂಮಗನೇ (ಕ,ಚ) (4) ಗದುಪರದುಗೆಯ್ ಪಿಡಿ (ಕ,ಚ) (5) ಪೊನ್ನಂ (ಳ,ಳ) (6) ಎಂತುಪರದುಗೆಯ್ವೆನಬ್ಬಾ (ಕ,ಚ) (7) ಗಡಿ ಯತ್ತಲ್ (ಕ,ಚ) (8) ದಿರ್ಪನ್ನೆಗಂ (ಕ,ಚ) (9) ಯಂಮಂಚ (ಕ,ಚ) (10) ಯಂ ಪಿಡಿದು ಬರುತ್ತಿರೆ (ಕ) (11) ಮಗಂ ಪಡೆದು ಬಂದಪ್ಪನೆಂದು (ಕ,ಚ) (12) ಪರಸಿಸೇಸೆಯಾನಿಕ್ಕಿ ಮನ್ನಿಸುವುದಂ (ಕ) (13) ಪಡೆದು ಬಂದೊಡಮೆಂದುಂ ಬಾಟ್ತಿ (ತೆ) ಗೆಯ್ಯೀತಂ (ಕ) (14) ಒಂದು ಮಂಚದ ಕೋಳದ ಎಕ್ಕೆಯಂ ಕೊಂಡು ಬಂದೊಡಿನಿತೊಸಗೆಯಂ (ಕ, ಚ) ಕೊಟ್ಟುಹುಳ್ಳಿಯ ಬಂತಿಯಂ ಕೊಂಡದಂಕೊಟ್ಪು ತಗರಂಕೊಂಡದಂ ಕೊಟ್ಪೊ ರ್ವಂಪೊಲೆಯಸ ಕೆಯ್ಯಲಿರ್ದ ಕೋಳದ ಮಂಚದೆಕ್ಕೆಯಂ (ಳ,ಳ) (15) ತೊಳೆದೊಡೆ (ಖ,ಗ) (16) ಬಂಳ ಮಳಿಯಲ್‌ಕೀಲ್‌ಸಡಿಲ್ದುರ್ಚಿ ಕಳಲ್ವಾಗಳ್ (ಕ,ಚ)

ಮ॥ ಬೆಲೆಯಿಲ್ಲೆಂಬನಿತಗ್ಗಳಿಕ್ಕೆಯ ಮಹಾರತ್ನಂಗಳಾ[1]ಗಳ್ ಕರಂ[2]
ಪಲವುಂ ತೊಟ್ಪನೆ ಕೂಚಿಪತ್ರಸಹಿತಂ ಬಂದೊಕ್ಕುವಂ ಕಂಡು ನಿ ॥
ರ್ಮಲಚಿತ್ತಂಗೆ ಮಗಂಗೆ ತೋಱುದೊಡವಂ ಕಂಡೆಂಗು ಮಾ ! ಬುದ್ಧಿ[3]ಯೋ |
[3]ಬಲಮೋ! ಕ್ಲೇಶಮನೂನಪುಣ್ಯಮೆ ಗಡೀ ದ್ರವ್ಯಂಗಳಂ ಮಾಡುಗುಂ ॥ ೩೦ ॥

ವ॥ ಎಂದು ಮತ್ತ ಮಿಂತೆಂದಂ—

ಕಂ॥ ಆನೆತ್ತಲ್ ಮಾ[4]ಱು[5]ತ್ತೆನ |
ಗೀ ನುತಸದ್ವಸ್ತುವೆಂತು ಸಮನಿಸಿದುವು [6]ಮ ॥
ತ್ತೀನೋ ಪೆಱನಾವಂ ತಾಂ |
ಮಾನಿತಪುಣ್ಯೋದಯಂ ಪ್ರಧಾನು ನಿಯತಂ ॥ ೩೧ ॥

ವ॥ ಎಂದಾ ಕೂಚಿಪತ್ರಮಂ ಬಾಚಿಸಿ[8]ದೊಡೆ "ಇಂತಪ್ಪ ಮನೆಯಾತ ನಿಂತಪ್ಪ ಕುಲದಾತ [7]ನಿಂತಪ್ಪ ಪೆಸರಾತನಿನಿತುರತ್ನಂಗಳಿವು ಮನೆಯೊ[8]ಳಿಂತಪ್ಪ ವಸ್ತುಗಳಿರ್ದುವು" ಎಂದು ಬರೆದಿ [9]ರ್ದುದಱಿಂದದೆಂತಪ್ಪೊಡಾ ಮನೆಯೊಳೆಲ್ಲಂ ಮಾರಿ ಪೊಕ್ಕು ಸತ್ತರ್. ಈ ಮಂಚದೊಳಾತನ ಪೆಣನನೊಯ್ದು [10]ದಹಿಸುವಲ್ಲಿ ಬಿಸುಟುದಂ ಪೊಲೆಯರದಂ ಪರ್ಚಿಕೊಂಡಲ್ಲಿ ಯವಂಗಿದು ಬಂದುದು. ಅಂತು ನಮಗೆ ಸಮನಿಸಿದ ಪುಣ್ಯಂ ಎಂದು ಒಸೆದಿರ್ದಂ. ನಾಮಂತಪ್ಪೊಡಾ ಮನೆಯನರಸರ ದೆಸೆಯಿಂ ಮಾಱುಗೊಳ್ವಮೆಂದು ಕೆಲವಾನುಂದಿವಸದಿನರಮನೆಗೆ ಪೋಗಿಯರಸಂಗೆ ಬಿನ್ನಪಂಗೆಯ್ದಾ ಮನೆಯ ಬೇಡಿದೊಡೆ "ಮಾರೀ ಪೊಕ್ಕು ಸಾಯೆ ಪಾಱಾದ ಮನೆ ಬೇಡ [11]ಪೆಱ ತಂ ಬೇಡಿಕೊಳ್ಳಿ"ಮೆಂದೊಡಾ ಧನ್ಯಕುಮಾರನಿಂತೆಂದು ಪೇಳ್ದುಂ—

---

(1) ಗಳ್ ತೆಱಂ। ಬೊಳೆದುಂತೊಟ್ಪನೆ (ಖ,ಗ) (2) ಯಿಂಬಲದಿಂ। ಕ್ಲೇಶದಿನಿಲ್ಲ ಪುಣ್ಯಮೆ (ಖ,ಘ) (3) ಚಲಮೋ (ಘ,ಜ) (4) ರೇನೆನಗೀನೂತನ ಸುವಸ್ತುಗಳಿವೆಂತುಸವನಿಪುದಿದು (ಕ, ಚ) ಪೀವಸ್ತುಗಳು ಮಿಂತು। ತಾನದುಪೆಱುತಾವುದೊ ಪೇಟ್। ಮಾನಿತ (ಘ,ಜ) (5) ಮತ್ತೇನಿಂಪೆಱುದಾವೊಂಗಂ (ಘ) (6) ನೋಡಿ ಯಿಂತಪ್ಪ (ಘ) (7) ನಿಂತೆಂಬನಾತನ (ಕ,ಚ) (8) ಳಿಂತಪ್ಪೆಡೆಯೊಳಿಂತಪ್ಪವಸ್ತು (ಕ,ಚ) (9) ರ್ದುದಂಕಂಡು ನೋಡಿ ಯಱಿದನಪ್ಪಡಾಪರದನ ಮನೆಯೊಳ್ ಮಾರಿವೊಕ್ಕೆಲ್ಲರ್ ಸತ್ತೊಡೆ ಮಂಚಮೊಳಾತನ (ಕ, ಚ) (10) ಸಂಸ್ಕರಿಸುವಲ್ಲಿ (ಘ) ದಹಿಸುವಲ್ಲಿ ಯಾಮಂಚಮನೀಡಾಡಿದೊಡೆ ಪೊಲೆಯರದಂ ಪರ್ಚುಗೊಂಡಲ್ಲಿ ಯವಂಗೆ ಮಂಚದೆಕ್ಕೆ ಬಂದುದನ್ತು ನಮಗೆ ಸಮನಿಸಿತೆಂದೊಸೆದಿರ್ದು (ಕ,ಚ) (11) ಪೆರತೊಂದುಮನೆಯಂ ಬೇಡಿಕೊಳ್ಳಿಮೆಂದೊಡಾ ಧಾನ್ಯಕುಮಾರನಿಂತೆಂದಂ (ಕ,ಚ)

ಕಂ॥ ಮಾರಿ ಪೆಱದಲ್ತು ಮೃತ್ಯುವೆ ।
ಬಾರಿ[1] ಪರಾರ್ ಮೃತ್ಯು[2]ವಡಸುವಂದೇತಱಿಂಗಳಂ ॥
ಮಾರಿಗಮಿದಿರ್ಚ್ಚನಿಂದು ।
ಗ್ರಾರಿಗಮೆಱ್[3] ಕಂಜುವರ್ ನರರ್ ಧರಣಿಪತೀ ॥ ೩೨ ॥

ವ॥ಎನೆ "ಮಹಾಪುರುಷನೀತ" ನೆಂದರಸಂ ಮುಚ್ಚಿಯಾ ಮನೆಯಂ ಕೊಟ್ಟೊಡೆ ಮನೆಯಂ ಪಡೆದು ಶುಭದಿನದೊಳಾ ಮನೆಯಂ ಪೊಕ್ಕು ಧನ್ಯಕುಮಾರಂ ಧನಕನಕಸಮೃದ್ಧನಾಗಿ [4]ಪೊಲ್ಲ ಮರಮನೆಗಂ ಪ್ರಭುವಾ[5]ಗಿರ್ದಂ—

ಉ॥ ಆ ಪೊಲದೊಳ್ ವ[6]ಣಿಗ್ವನ ಮಹಾಪ್ರಭುವೊರ್ವ[7]ನುದಾತ್ತಚಿತ್ತಕಂ ॥
ಶ್ರೀ ಪದನಾಗಿ ಮಿಕ್ಕ ಜನಮಾನ್ಯದ [8]ಧನ್ಯನ ಪುಣ್ಯದೊಳ್ಪನುಂ ॥
ರೂಪಿನ ಚೆಲ್ವನುಂ ಮನದ ಪೆಂಪುಮನೊಳ್ಕಿತು [9]ಮುಚ್ಚಿ ನೋಡಿ ವಿ ।
ಖ್ಯಾಪಿತೆಯಪ್ಪ ತನ್ನ ಸುತೆಯಂ ನುತೆಯಂ ಕುಡವೊಂದು ಬು[10]ದ್ಧಿಯಂ ॥ ೩೩ ॥

ವ॥ ಬಗೆದು ಧನ್ಯಕುಮಾರನ ತಂದೆಯಲ್ಲಿಗಟ್ಟಿದೊ[11]ಡೊಡಗೊಂಡುಯ್ದು ತನ್ನಿಂ ಪಿರಿಯರಿರ್ದಂತೆ ಕಿಱಿಯರ್ಗೆ ಮುನ್ನೆ ಮದುವೆಯಂ ಮಾಡಲಾಗದು, ಪಿರಿಯಂಗೀವುದೆಂದಟ್ಟದೊಡೆ ಎಂದಿರ್ದೊಡಮಾತಂಗಲ್ಲದೆ ಕುಡೆನೆಂದಿರ್ದಂ. ಪ್ರಭುಗಳುಮರಸರುಂ ಮನದೆ ಕೊಂಡಾಡುವು[12]ದುನುಂ ಕಂಡಣ್ಣಂಗಳೆಲ್ಲಂ ಮುಳಿದು (ಆತನಂ) ಕೊಲಲ್ ಬಗೆದು ಪುಸಿಗೂ[13]ರ್ವೆಯೊಳಿರ್ದೊಂದುದಿವಸಂ ಎಂದರ್. " ಬಾ ನಾಮಿಂ[14]ಬಾವಿಯೊಳ್ ಜಲಕ್ರೀಡೆಯಾಡುವಂ " ಎಂದೊಡಗೊಂಡೊಯ್ದಾತನಂ ಬೊಡ್ಡಣದ ಬಾವಿ[15]ಯೊಳಗೆ ಪುಗುವಂತೆಗೆಯ್ದು ದರಿಯಂ ಮೆಟ್ಟರ್ದು ಆತನ ಪೆಱಗಣಿಂ ಬಂದು ತೊಟ್ಟನೆ ನೂಂಕೆ ಕಲ್ಲೊಳ್ಳಮದಂ [16]ಮುರದೊಳಂ ಪೂಱಲ್ ಬಗೆವನ್ನೆಗಂ—

---

(1) ಪರಾಮೃತ್ಯು (ಕ) (2) ವಡಸಿದಂದದಱಿಂದಂ (ಕ, ಚ) ವಡಸಿಬಂದುದಱಿಂದಂ (ಖ, ಗ) (3) ಕಂಜುವನ್ನರಾರ್ (ಖ,ಗ) ಗ್ರಾರಿಕಮೇಕಂಜು (ಕ) (4) ಪೊಱಲ್ಲಂಮನೆಗಂ (ಕ) (5) ಗಿರ್ಪನ್ನೆಗಂ (ಕ) (6) ವಣಿಗ್ವರ (ಛ,ಜ) ವಣಿಕ್ಪತಿ (ಛ) (7) ನುದಾರವೃತ್ತಿಯಿಂ (ಕ,ಚ) ಸುದಾರಧೀಯಶಶ್ರೀಪತಿ (ಛ,ಜ) (8) ಧಾನ್ಯನ (ಕ,ಚ) (9) ಮಾಡಿಮಚ್ಚಿ (ಛ) (10) ಯಿಂ (ಕ, ಗ) (11) ದೊಡಾತನಿಂಪಿರಿ....ರಿಯಾತಂಗೆ ....ರಿಯಾತಂಗೆಕುಡುವುದೆಂದಟ್ಟ.....ಮಾಕಿರಿಯಾತಂಗಲ್ಲದೆ (ಕ, ಚ) (12) ವುದಕ್ಕಮಣ್ಣಂಗ (ಕ, ಚ) (13) ಗೂರ್ವೆಯೊಳ್ಕೆಲವುದಿವಸಂ ಮೇಳಿಸಿರ್ದೊಂದು (ಕ,ಚ) (14) ಬನದೊಳಗಣಕೊಳದೊಳ್....ವಂಬಾ ಎಂದೊಡಗೊಂಡುಪೋಗಿ (ಕ,ಚ) (15) ಯೊಳೆಲ್ಲಂ ಪಾಯ್ವಂತೆ ಪಾಯ್ದುದರಿಯ ಹೊಟ್ಟರ್ದಾತನಂ ಪೊಱಗಣಿಂ ಬಂದೊರ್ವಂ ತೊಟ್ಟನೆ (16) ಮರದೊಳಂ ಪೂಱಲ್ ಬಗೆದಾಗಳಾ ಕುಮಾರಂ (ಕ,ಚ)

ಕಂ॥ ತುಂಬಿದ ಬೊಡ್ಡಣವಾವಿಯು।
ತೂಂಬಂ ತಡವರಿಸಿ ಕಂಡದಂ [1]ಕಳೆದಲ್ಲಿಂ ॥
ದಂ ಬೇಗಂ ಪೊಱಮಡೆ ಕಂ।
ಡೇಂ ಬಲ್ಲಿತ್ತೊ ಪುಣ್ಯಮೆಂದು ವನದೇವತೆಗಳ್ ॥ ೩೪ ॥

ವ॥ ಅಂತು[2] ಪೊಗಲ್[3] ತಮ್ಮಂಣಂಗ[3]ಳಿಂತು ನೆಗಲ್[3] ತನ್ನೊಳ್ ಬಗೆದು [4]ನೋಡುತ್ತಿರ್ದ್ದು, ಮೆಲ್ಪಟ್ಟಾನಿಲ್ಲಿರ್ದೊಡಿ(ಡ)ವರೆನ್ನನೆಂತುಂ ಕೊಲ್ಲುದುಮಾಂ ದುರ್ಗತಿಗೆ ಸಲ್ಲುದುಮಮೋಘ ಮಕ್ಕು ವಿನಿತಂ ಮಾಡೆನೆಂದಾಗಳ್ ಕಪ್ಪಡಮು ನೀಲ್ದುಟ್ಟು [5]ಪೊಲಲನಂದಗಲ್ದೊರ್ವನೆ ಪಯಣಂ ಬೋಗು[6]ತ್ತುಂ ಪಸಿದು ಬಲಲ್ದು ನಿಂದು ಬಟ್ಟಿಯ ಕೆಲದೊಳುಲುತ್ತಿರ್ದೊಕ್ಕಲಿಗನಂ [7]ಕಂಡೆಲ್ಲಮುಂ ಬಲ್ಲೆ ನೀ ವಿದ್ಯೆಯನಱಯೆನೆಂದು ನಿಂದು ನೋಡುತ್ತಿರೆ ಕುಮಾರನ[8]ನೊಕ್ಕಲಿಗಂ ನೋಡಿ ಕಂ[9]ಡಿನಿತು ತೇಜಮಾರ್ಗಮಿಲ್ಲೀತಂ ಪ್ರಭುವಿನ [10]ಮಗನಾಗಲೆವೇಲ್ಕುಂ. [11]ಪಸಿದು ಬಲಲ್ದು ಪೋದಪ್ಪನೆಂದು ನೇ[12]ಗಿಲಂ ನಿಲಿಸಿ ಬಂದು "ನೀಮಿಂದೆನಗೆ ಬಿರ್ದಿನರಾಗಿ"ಮೆಂದು ಭರಂಗೆಯ್ದೊಡ ಗೊಂಡೊ[13]ಯ್ದು ನೇಗಿಲ ಸಾರೆ ವರ್ಪುದುಂ ಪಾಸಿಯುಣಲೆಲೆಯಂ ತಂದಪ್ಪೆನೆಂದಲ್ಲಿರಿಸಿ ಪೋದನ್ನೆಗಂ ಧನ್ಯಕುಮಾರಂ ಉಲ್ತು ನೋಲ್ಪೆನೆಂದು ಮೇಲುಯಂ ಪಿಡಿದು—

ಕಂ॥ ಪಿಡಿ[14]ದೊತ್ತಿ ಪೊಡೆಯೆ ನೇಗಿಲ್।
ನಡೆ ಮೊನೆಯೊಳ್ ನೆಗೆದ ಕಳಶಮುಂ ಕಂಡಿಂತ ॥
ಪ್ಪೊಡಮೆ[15]ಯುಮನೊಲ್ಲದಾಂ ಬಿಸು।
ಟಡವಿಗೆ ಬರೆ ಬರ್ಕುಮೆನ್ನ ಬಲುಯನೆ ಮತ್ತಂ ॥ ೩೫ ॥

ವ॥ ಇದು ಪುಣ್ಯದೇವತೆಯ [16]ಗೊಡ್ಡಾಟಮಕ್ಕುಂ. ಆದೊಡೇನಿದನೀ ಯೊಕ್ಕಲಿಗಂಗೆ ಮಾಡುವೆಂ ನಾಂ ಕೊ(ಕ್)ಂಡು ಕೊಟ್ಟೊಡೆ ಶಂಕಿಸುಗುಮೆಂದದನಱಯದಂತುಲುತ್ತಿರೆ "ಬನ್ನಿ ಮೆಲೆಯಂ ತಂದೆಂ" [17]ಎಂದು ಕರೆಯುತ್ತಿರೆ ಬಂದು ಕುಳ್ಳಿರೆ ಪೂಲ್ದ ಕರಗದ ನೀರಂ [18]ತಂದು ಕಾಲ್ಗಂ ಕೆಯ್ಗಮೆಱೆದು ಎಲೆಯಂ ಪಾಸಿ ಕಲಸುಗೂಱಂ ಬಡಿ[19]ಸಿದೊಡುಂಡು ರಾಜಗೃಹದ ಬಟ್ಟೆ[20]ಯಂ ಬೆಸಗೊಂಡಾ ಧನ್ಯಕುಮಾರಂ ಪೋಪಾಗಳೊಕ್ಕಲಿಗಂ ಮಿಕ್ಕಿರ್ದುದಂ ತಾನುಂಡು ಮತ್ತಮುಲುತ್ತಿರ್ದಾಗಳಾ ಕಲಶಮಂ ಕಂಡು ಬೆಕ್ಕಸಂ[21] ಬಟ್ಟಗುಮಪ್ಪೊಡಾತನುಲುವಲ್ಲಿ ನೆಗೆದುದಾತಂಗಪ್ಪುದೆಂದೆಲ್ತಂ ನಿಲಿಸಿ ಬೇಗನಾತನ ಪಿಂದನೆ ಪರಿದೆಯ್ದಿ ಪೋಗಿ[22] "ನಿಲ್ಲಿ"ಮೆಂದು ಇಂತೆಂದಂ—

---

(1) ತಳದಲ್ಲಿಂ (ಘ,ಖ) (2) ಪೊಗಳುತ್ತುಮಿರೆ (ಕ,ಚ) (3) ಳಂತು (ಘ) (4) ನೋಡಿ (ಕ,ಚ) (5) ಬಲಿಂದಗಲ್ದು (ಘ) ಬಲಿಂದಂ ಪೊಜಮಟ್ಟು ಬೇಗಮೊರ್ವನೆ (ಳ) (6) ಗುತುಂಬಬಲ್ದುನಿಂದು (ಕ,ಚ). (7) ಕಂಡೆಲ್ಲಾ ವಿದ್ಯೆಗಳುಮಂ (ಕ,ಚ) (8) ನೊಕ್ಕಲಮಗಂ ಕಂಡಿಂತಪ್ಪ (ಳ) (9) ಡಿನ್ನವುತೇಜ (ಳ) ಅಂತಪ್ಪತೇಜ ಖ) (10) ಮಗನಕ್ಕುಂ(ಖ,ಗ) (11) ಪಯಣಂ ಬೋಗುತ್ತುಂ ಪಸಿದು ಬಳಲ್ದುನಿಂದನೆಂದು (ಕ, ಚ) (12) ಗಿಲನಂತೆನಿರಿಸಿ (ಕ,ಚ) (13) ಯ್ದು ನೇಗಿಲಸಾಲಿ (ರಿ) ರ್ಪುದುಂಪಾಸಿಯುಣ (ಕ,ಚ) ನೇಗಲಸಾರೆಯಿರ್ಪುದುಂ (ಖ, ಗ) (14) ದೆತ್ತಿ (ಕ, ಚ) (15) ಮೆಗಳನೊಲ್ಲ (ಳ) (16) ಗೊಡ್ಡಮಕ್ಕುಂ (ಘ,ಖ) (17) ಎಂದು ಕುಳ್ಳಿರಿಸಿ ಪೂಲ್ದಿರ್ದಕರಗದ (ಕ,ಚ) (18) ತೆಗೆದು (19) ಸಿದೊಡಪೂರ್ವಮಾದುದೆಂದರ್ಥಿ (ಬ್ಲಿ) ಯೊಳುಂಡು (ಕ,ಚ) (20) ಯಾವುದೆಮಂ (ಕ,ಚ) (21) ಬಟ್ಟೀಕಲಶಮಪ್ಪೊಡಾತನುಳ್ತಸಾಯೊಳ್ ನೆಗೆದು ತೋರಿದುದಾತನ ಪುಣ್ಯದಿಂದಾದುದಾತಂಗಪ್ಪುದೆಂದೆತ್ತಂ ನಿಲಿಸಿ (ಕ,ಚ) ಬಿಗಡುಗೊಂಡು ತನ್ನೊಳಂದನೀತನುಳ್ತ (ಳ,ಖ) (22) ನಿಲಿಸಿ ಮತ್ತಿಂತೆಂದಂ (ಳ,ಖ)

ಕಂ॥ [1]ನಿನ್ನಲ್ತ ಸಾಲೊಳ್ಗೊಗೆದುದು |
ಪೊನ್ನೊಳ್ ತೀವಿರ್ದ ಕಳಶಮುದನಾಂ ಕೊಂಡಂ ॥
[2]ದೆನ್ನೊಳ್ಪ ಕಿಡುಗುಮೊಲ್ಲೆಂ |
ನಿನ್ನೊಡಮೆಯನೇಕೆ ಕೊಂಡು ಪೋಗದೆ ಪೋಪೈ ॥ ೩೬ ॥

ವ॥ ಎಂಬುದುಂ ಧನ್ಯಕುಮಾರಂ ಕೇ"ಳ್ದಿದೇಂ ಜೋದ್ಯಮೋ ಪೇಲಿ[3]ಂ"ದು ತಲೆಯಂ [3]ತೂಗುತ್ತುಂ ತಕ್ಕನು[4]ಮಿಂತೊಳ್ಪಿನೊಳ್ ಮಿಕ್ಕನುಮಾವನುಮಿಲ್ಲೆಂದಿಂ ತೆಂದಂ—

ಉ॥ ನಿನ್ನದು ನೇಗಿಲೆಲ್ತುಗಳುಮಪ್ಪೊಡೆ ನಿನ್ನವು ನಿನ್ನ ಕೆಯ್ ಬೆಸಂ |
ನಿನ್ನದು ಬಟ್ಟಿವೋಪೆನಗೆ ಬರ್ಕುಮೊ [5]ಮಾಱುನೊಳಾದುದಲ್ತು ಮ ॥
ತ್ತೆನ್ನ ಕುಲಕ್ರಮಾಗತಮುಮಲ್ತು ನರೇಶ್ವರನಿತ್ತುದೆಲ್ತು ಪೇ |
ಳ್ನಿನ್ನದನೆಂತುಕೊಳ್ವ ರಭಿಮಾನ ಮಹೋನ್ನತ ಚಿತ್ತವೃತ್ತಿಗಳ್ ॥ ೩೭ ॥

ವ ॥ ಎಂದೊಡೊಕ್ಕಲಿಗಂ ಮಹಾ[6]ಪುರುಷನಂತಾಗಲೇನೇಱ್ಕು[7]ಮೆಂದು ಮತ್ತಮಿಂ ತೆಂದಂ—

ಕಂ॥ ಎಲ್ಲಾ ಕಾಲಮುಮೆಮ್ಮವ |
ರೆಲ್ಲರುಮಾ ಕೆಯ್ಯನಾಳ್ವರಾನೆಂದುಂ ಮ ॥
ತ್ತಿಲ್ಲಿಯೆ ಬೆಸಕೆಯ್ವೆಂ ಸೈ |
ಪಿಲ್ಲದುದಱು [8]ನೆಮಗೆ ತೋಱದಿನಿತುಂ ಕಾಲಂ ॥ ೩೮ ॥

ವ॥ "ನೀಂ ಮಹಾ[9]ಪುರುಷನಯ್, ನೀಂ ಬಂದು ನೇಗಿಲಂ ಪಿಡಿದಾಗಳೆ ಪೊನ್ನ ಕಲಶಂ ತೋಱುದುದು. ನಿನ್ನ ಸೈಪಿನೊಳ್ ಕಂಡುದು ನಿನ್ನೊಡಮೆ"ಯೆನೆ ಧನ್ಯಕುಮಾರಂ ಒಕ್ಕ ಲಿಗನ ಮನದ ಪೆಂಪಂ ಮಚ್ಚಿ ತಾನದನೆಂತುಮಾತಂಗೆ ಮಾಡುವ [10]ಬಗೆಯೊಳಿಂ ತೆಂದಂ—

ಚಂ॥ ಎನಗೊದವಿರ್ದ ಪುಣ್ಯದ ಮಹತ್ತ್ವ(ಹಾತ್ಮ್ಯ)ದಿ ನೆಲ್ಲಿಗೆ ಪೋದೆನಪ್ಪೆಂಡ |
ಧನಮದು ತಾನೆ[11] ಬರ್ಕುಮದಱಿಂದರಿ[12]ದಲ್ತೆನಗೊಲ್ಲೆ[13]ನೆನ್ನ ಕಂ ॥
ಡನಿತಱಿನೆನ್ನ ದೆಂಬ ಬಗೆಯಿಂ ನುಡಿದಪ್ಪೆಯವೆ[14]ನ್ನ ದಾದೊಡಂ |
ನಿನಗಿದಸಿತ್ತೆ ನೀಂ ನುಡಿಯದಿರ್ ಪೆಱಿನಂ ಸುಖದಿಂದನೂಳದಂ ॥ ೩೯ ॥

---

(1) ನೀನುಳ್ತ (ಕ,ಚ) (2) ದೆನ್ನೊಪ್ಪು (ಚ) (3) ತೂಗಿ ಸಂತೋಷಮಾಗಿ....ಮಾವನೆಂದಿಂತೆಂದಂ (ಕ,ಚ) (4) ಮಿಂತನಿಂದೊಳ್ಪಿನಿಂ (ಕ,ಚ) (5) ನೂರಿ (ಕ) ನೂತಿನೊ (ಚ) (6) ಪುರುಷನವಚನಮಿಂತಾ (ಕ,ಚ) (7) ಮೆಂದು ಮನದೊಳ್ ಬಗೆದು (ಕ, ಚ) (8) ನೆನಗೆ (9) ಪುಣ್ಯವಂತನೆಯಿಂದು ನೇಗಿಲಂ (ಕ,ಚ) (10) ಮನಮೊಳಿಂತೆಂದಂ (ಳ,ಖ) (11) ಬರ್ಪುದವೆ (ಕ,ಚ) (12) ದಿಲ್ಲಿನ (ಳ,ಖ) (13) ನಾಕಂಡನೀಡನಿ (ಳ,ಖ) (14) ದೆನ್ನರಾದಡಂ (ಕ)

ವ|| [1]ಎಂದಿತ್ತೆನೆಂದು ನುಡಿದುದಱಂ 'ನಿಂತಾದೊಡಕ್ಕುಮೆನ್ನಂ ಬೆಸಕೆಯ್ಸಿಕೊಳ್ವುದಂ ಮಱಿಯದಿರಿ' ಮೆಂದೊಕ್ಕಲಿಗಂ ಮಗುಱುದ್ದ ಬಂದಾ ಕಲಶಮಂ ಕೊಂಡು ಮನೆಗೆ ಪೋದ ನಿತ್ತಲ್ ಧನ್ಯಕುಮಾರನು[2]ಮಂತೆ ಬರುತ್ತುಂ ಒಂದೆಡೆಯೊಳ್ ದಿವ್ಯಜ್ಞಾನಿಗಳಪ್ಪ ಮಹರ್ಷಿಯರಂ ಕಂಡು[3]ಪೊಡೆವಟ್ಟು ಮುಂದೆ ಕುಳ್ಳಿರ್ದು "ಭಟ್ಟಾರಾ, ಬೆಸಸಿಂ, ಎನಗೆಮ್ಮುಂಣಗಳೇಕೆಮುಳಿದು ಕೊಲ್ವನಿತಂ ಬಗೆದರೆ" ನೆ ಭಟ್ಟಾರರೆಂದರ್ "ಮುನ್ನಂ ಪೋದ ಭವಾಂತರದ ಮುಳಿಸಿ"ಂದೊಡೆ ಅದೆಂತಾಯ್ತೆನೆ ಪೇೞ್ದರ್—

ಭೋಗವತಿಯೆಂಬೂರೊಳ್ ಕಾಮವೃಷ್ಟಿಯೆಂಬಗಾವುಂಡಂಗಂ ಇಷ್ಟದಾನಿಯೆಂಬ ಗಾವುಂಡಿಗಂ [4]ಅಕೃತಪುಣ್ಯನೆಂಬ ಮಗಂ ಪುಟ್ಟಲೊಡಂ—

ಕಂ|| ತಂದೆ ಮೊ[5]ದಲಾದ ಪಲಬರು |
ಮೊಂದಿದ [6]ನಂಟರ್ಕಳಱಿಯೆ [7]ಸೈಪಱಿದರ್ಥಂ ||
ನಿಂದು ಕುಡುವನಿತುಮಿಲ್ಲಂ |
ಬೊಂಬೆಡೆಱಡಸಿದೊಡೆ ಮಗನುಮಬ್ಬೆಯುಮುಱಿದರ್ ॥ ೪೦ ॥

ವ|| ಅಂತವರಿರ್ವರುಮುಱಿಯೆ ತಮ್ಮವರೆಲ್ಲರುಂ [8]ಕಱಿದಲ್ಲಿಯ ಸೈಪಱಿಯಲುಮಾದ ದುಃಖದುಂ. ತಿಣ್ಣಮಾದ ಬಡತನದುಮೊಂದೊಂದಂ ಕೆಯ್ಮಿಕ್ಕಡಸೆ ಮಗನಂ ಕೆಲಸಂಗೆಯ್ಸಿ ಬಸಿರಂ ಪೊರೆದು ಬಾಱುತ್ತಿರೆ ಒಂದುದೆವಸಂ ಮಗಂ ತಡೆದನೆಂದು ತಾಯಱುತ್ತಿರೆ ಮಗಂ ಬಂದು 'ಏಕಱುತ್ತಿಪಿರೆ'ನೆ "ನಿನ್ನ. ಕಾಣದಱ್ತಪೆನೇಕೆ ತಡದೆ" ಯೆನೆ "ಅ(ಸು)ಕೃತಪುಣ್ಯಂ ಬನದೊಳ್ ಬೆಸಕೆಯ್ಯುತ್ತಿರ್ದು ತಡೆದೆನೆಂದೊಡೆ ಯಬ್ಬೆಎಂದಳ್ "ಎಮ್ಮ ಭಂಟಂಗೆ ನಾಮೆ ಬೆಸ[9]ಕೆಯ್ವನಿತಾಯ್ತು. ಇಲ್ಲಿರ್ಪುದು ಪರಿಭವಂ" ಎಂದು(ನೆ)ಮಗನನೊಡಗೊಂಡು ಪೋಗಿ [10]ಸೀಸವಾಕಮೆಂಬೂರೊಳ್ ಬಲಭದ್ರನೆಂಬ ಗಾವುಂಡನ ಕೀಱುಲೊಳ್ ಸಾರ್ದೊಡವರ್ ಕರು[11]ಣದಿನೊಂದುಗುಡಿಸಿಲನೆಡೆಗೊಟ್ಟೊಡಲ್ಲಿರ್ದು ತಾಯುಮಾಗಾವುಂಡನ ಮನೆಯೊಳ್ ಬೆಸಕೆ[12]ಯ್ದುಣ್ಗುಂ.ಮಗಂ ಕಱುವಂ ಕಾದುಣುತ್ತುಮಿರ್ದೊಂದು ದೆವಸಂ [13]ತಾಯ್ಗಿಂತೆಂದಂ—

---

(1) ಎಂದೊಡಿಂತೆಂದು ನಿಂತಾದೊಡಕ್ಕು(ಕ,ಚ) (2) ರನುಂ ಮುನ್ನಿನಂತೊರ್ವನೆ ಪಯಣಂ ಬೋಗುತ್ತುಮೊಂದೆಡೆ (ಕ,ಚ) (3) ಬಂದಿಸಿ (ಕ) ತಾಯ್ತೆಂದೊಡಿಂತೆಂದು (ಕ) ಏಕಾರಣದಿನಾಯ್ತೆನೆ (ಛ) (4) ಸುಕೃತ (ಝು) (5) ಮೊದಲಾಗಿ (ಛ) (6) ಬಂಧುಗಳು (ಕ,ಚ) (7) ಬಾಯಳಿದ (ಕ, ಚ) (8) ಕೀನಾಶನಿವಾಸಮಂ ಪುಗೆ (ಛ, ಜ) (9) ಕೆಯ್ವಂತುಟಾದುದು(ಕ) ಕೆಯ್ವಂತಾದುದು (ಛ) (10) ಸೀಸವಾಕ (ಛ) ಸಿಸವಾಕ (ಚ) ಸಸಿವಾಕ(ಖ) (11) ಣಿಸಿ ತಮ್ಮ ಮನೆಯ ಮುಂದೊಂದು ಗುಡಿಸಂ (ಸಲನೆಡೆಮಾಡಿ) ಕೊಟ್ಟೊಡಲ್ಲಿರ್ದು(ಕ,ಚ) (12) ಕೆಯ್ಗುಂ (ಛ) ಬೇಸಂಗೆಯ್ಗುಣ್ಣು (ಕ) (13) ದೆವಸಂಮಗಂ (ಕ,ಚ)

ಶಾ|| ನಾಮುಂ ಮಾನಿಸರೆಂ ದಲೀ ಮನೆಯವರ್ ನ[1]ಮ್ಮಂತೆ ದಲ್ ಮಾನಿಸರ್ |
ನಾಮಿಂತೀಕಿವರ್ಗಲಕ್ಕಿ ಬಲುಕ್ಕಿ ಬೆಸ[2]ಕೆಯ್ವುಂತುಂಡು [3]ಕಣ್ಬಟ್ಟಪಂ ||
ನೀಮು(ಮಿ)ಂ ಪೇಱುಮಮೋಘಮೆಂದೊಡವರ್ಗಳ್ ಸೈಪುಳ್ಳರೀ ಕಾಲದೊಳ್ |
ನಾಮುಂ ಮನ್ನಿವರಿಂದಮಗ್ಗಳಿಕೆಯೊಳ್ ಮಿಕ್ಕಿರ್ದೆ(ರ್ಪೆ)ವಾ ಕಾಲದೊಳ್ || ೪೧ ||

ವ||. ಮತ್ತಂ—

ಕಂ|| ಕಡುವಿಸಿಲಾದೊಡೆ ಮಂಜಿನ |
[4]ಪಡೆಯುಂ ಕಿಡುವಂತೆ ಬಱಿದೆ ನೀಂ ಪುಟ್ಟಲೊಡಂ ||
ತಡೆಯದೆ ಕೆಟ್ಟುದು ಸೈಪೊಂ |
ದೆಡಱಿಡ[5]ಸಿಂತಾಯ್ತು ನಮಗಮಿಾಗಳ್ ಮಗನೇ || ೪೨ ||

ಪ|| ಎಂದು ತಮ್ಮ ಮುನ್ನಿನ ಸಂಪತ್ತುಮಮಿಾಗಳಿನಾಪತ್ತುಮುಸುಂ ನೆನೆದುಬ್ಬಿಗದೊಳ್ [6]ಕೆಲಕಾಲಂ ಪೋಗೆ ಮತ್ತವಱ ಮೇಗೆ ಗಾವುಂಡನೆಂಬ್ಪರ್ [7]ಮಗಂದಿರುಂ ತನ್ನನಲೆದೆ ಬೆಸಕೆಯ್ಯೆ ಕಱುಕುಚಿ[8]ಗನವರ್ಗೆ ಪಲ್ಮೊಱೆದು ಕನಲ್ದೊನಲ್ದು ಬಡವಾಗಿರ್ದು ಆ ಮನೆಯವರುಣ್ಬುದಂ ಕಂಡು ಕಣ್ಬಾತುದಂ [9]ತಾಯ್ ಕಂಡಱಿದಲುತ್ತಿರೆ ಗಾವುಂಡಂ ಕಂ"ಡಿತೇರ್ಕಲ್ತ್ತಪೆ"[10]ಯೆಂದು ಕೀಱಿ ಬೆಸಗೊಳೆ ಕಿಱಿಯಾತಂ "ತುಯ್ಯಲಂ ಬಯಸಿ ಕ[11]ಣ್ಬಾತುದದು ಕೂಡದುದಱಿನಲ್ತ್ತಪೆ" ನೆಂದೊ[12]ಡಾಗಳ್ ಕರುಣಿಸಿ ಪಾಲನಕ್ಕೆಯುಮುಂ ಕುಡವೇಱೆ ತಂದು ತುಯ್ಯಲನಟ್ಟು ಮಗನಂ [13]ಕಾದಿರಿಸಿ ತಾಯ್ ನೀರ್ಗೆ ಪೋದಳನ್ನೆಗಮಿತ್ತಲ್—

ಕಂ|| ಪರಮತಪೋಧನರೊರ್ವರ್ |
ಚರಿಗೆಗೆ ವರೆ ಕಂಡು ನೆಟ್ಟನೆನ್ನಿಂದೀತಂ ||
ಕರಮೆ ಬಡವಂ ದಲೆಂದಾ |
ದರದಿಂ ಕಱು[14]ಕುಚಿಗನವರ ಕೆಯ್ಯಂ ಪಿಡಿದಂ || ೪೩ ||

ವ|| [15]ಪಿಡಿದು "ನೀಂ ಬನ್ನಿಂ ನಿಮಗುಣಲಿಕ್ಕಿದಪ್ಪೆಂ" ಎಂದಾ ತುಯ್ಯಲಂ ತಂದಿರಿಸಿ ದನ್ನೆಗಂ ಅವನಬ್ಪೆ ಬಂದು ಕೊಡನನಿಱಿಸಿ ಪೊಡೆನಟ್ಟು "ಭಟಾರಾ ನಿಲ್ಲಿ"ಮೆಂದು ನಿಲಿಸೆ "ಕರಮೊಳ್ಳಿಕೆಯೆ"ಯೆಂದು ಮಗನಂ ಪೊಗಲ್ದು ಮನೆಯೊಳುಚಿತಮಪ್ಪೆಡೆಯೊಳ್ ಕುಳ್ಳಿರಿಸಿ ಕಾಲಂ ಕರ್ಚಿ "ಶ್ರದ್ಧಾ ಶಕ್ತಿ ಭಕ್ತಿ ರ್ವಿಜ್ಞಾನ ಮಲುಬ್ಧತಾ [16]ಕ್ಷಮಾಶೌಚ"ಮೆಂಬೇೞುಂ ತೆಱಿದ ಗುಣಂಗಳೊಳ್ ಕೂಡಿ ತುಯ್ಯಲಂ [17]ಬಡಿಸಿದೊಡೆ ಉಂಡು "ಅಕ್ಷಯದಾನಮಕ್ಕೆ" ಎಂದು ಪರಸಿ ಭಟಾರರ್ ಪೋದಿಂ ಬಲಿಕ್ಕಂ ತುಯ್ಯಲಂ ಮಗನುಂ ತಾನುಮುಂಡೊಡಂ ತವೆಯದಾಯ್ತು.

---

(1) ಮ್ಮಂತೆ ವೋಲ್ (ಕ) (2) ಗೆಯ್ವಿಂತೀಕೆ (ಛ,ಖ) (3) ಬರ್ದಿರ್ದಪಂ (ಛ,ಝ) (4) ಪಡೆ ಪರಿ(ವ)ಪಡೆ ಕಿಡುವತೆಱಿವೆ ನೀಂ (ಕ,ಚ) (5) ಸಿದೊಡಿಂತಾಯ್ತುನಮೆವ (ಪು) ಮಿಾಗಳ್ (ಕ) ಸೈಪೆಡಿ ರಡಸಿ ದೊಡಿಂ (ಚ) (6) ಕೆಲವೆವಸಂ (ಕ,ಚ) (7) ಮಕ್ಕಳುಂ (ಕ,ಚ) (8) ಗಂತಾನವರ್ಗೆ (ಕ,ಚ) (9) ತಾಯ ಱಿದಳು (ಕ,ಚ) (10) ಯನೆ ಕಿಱಿಯಾಶಂ (ಕ,ಚ) (11) ಣ್ಬಾತೊಡದು ಕೂಡಿಬಾರದುದಱಿನ (ಕ,ಚ) (12) ಡಾಗಗಾವುಂಡಂ ಪಾಲನುಕ್ಕೆ ಯಮಂತರಿಸಿಕೊಟ್ಪೊಡೆ (ಕ,ಚ) (13) ಪಕ್ಕದಿನಿರಿಸಿ (ಕ) (14) ಕುದುಗಿ ಚಿಗ (ಕ) (15) ಪಿಡಿದುನಿಮಗುಣ (ಕ) (16) ದಯಾಕ್ಷಾಂತಿ (ಕ,ಚ) (17) ಬಡಿಸಿ ಕೈಯೊಳಿಕ್ಕಿದೊಡೆ

ಭಟಾರರಾಹಾರಾಕ್ಷೀಣರ್ಧಿಸಾಮರ್ಥ್ಯದಿನಂತಾ [1]ಕೇರಿಯೆಲ್ಲಕ್ಕಂ ನೇಸಱ್ ಪಡುವಿನೆಗಂ ಬಡಿ [2]ಸುತ್ತಿರೆಯುಂ ಮತ್ತಮುಂಟಾಗಿರ್ದತ್ತು. ಮಱುದೆನಸಮಾ ಕಱುಕುಚಿಗಂ ಕಱುವಂ ಕಾಯಲ್ ಪೋಗಿ [3]ಕಱುವಂ ಕಿಡಿಸಿ ಮನೆಗೆವಾರದಿರೆ ಗಾವುಂಡನೆಲ್ದು 'ಕಱುಗಳ್ ಬಂದುವು ಕಿಱಿಯವನೇಕೆ ಬಾರನೊ!'. ಎಂದಾ [4]ತನನಱಿಸಿ ಪೋಗಿ ಕಂಡು ಜಡಿದು ಬಗ್ಗಿಸಿದೊಡೆ [5]ಯಂಜಿಯೋಡಿ ಪಱು ವಮಂ ಪೊಕ್ಕು ಬೆಟ್ಟದ ಗುಹೆಯಂ ಸಾರ್ದಾಗಳಾ ಗುಹೆಯೊಳಗಿರ್ದ ಮಹರ್ಷಿಯರಂಸಾರ್ದು—

ಉ॥ ಕೊಲ್ಲದ ಕಳ್ಕದಿರ್ಪ ಪುಸಿವೇೞ್ದಣು [6]ವ್ರತದಿಂದಮಿಂತು ತ |
[7]ಳ್ವಿಲ್ಲದಿವಂ ಮನೋಮುದದೆ ತಾಳ್ದದರ್ಗಿಂತು ಫಳಂಗಳಾದುವೆಂ ॥
ದೆಲ್ಲ [8]ಮನಂದು ಪೇೞುತಿರೆ ಕೇೞ್ದ ಭಿಲಾಷದೆ ವತ್ಸಪಾಲಕಂ |
ಮೆಲ್ಲನೆ(ಗೆ) ಸಾರ್ದು ಕೆಯ್ಮುಗಿದು [9]ಕೊಂಡ ನಳುರ್ಕೆಯಿನಾ ವ್ರತಂಗಳಂ ॥ ೪೪ ॥

ವ॥ [10]ಅಂತಣುವ್ರತಮಂ ಕೊಂಡು ಗುಹೆಯ ಬಾಗಿಲ ಪೊಱಗಿರ್ದವನಂ ಪುಲಿ ಪಾಯೆ ಸತ್ತಾ ವ್ರತದ ಫಲ [11]ದಿಂ ಸ್ವರ್ಗದೊಳ್ ಪುಟ್ಟಿದಂ. ಇತ್ತಲ್ ಮಗಂ ಬಾರದುದರ್ಕೆ [12]ತಾಯ್ ಮಱುಗಿ ಪೋದ ದೆಸೆಯನಱಿಸಿ ಬಂದು [13]ಪುಲಿಕೊಂಡರೆದಿಂದ ಪೆಣನಂ ಕಂಡು ಪುಲಿ ಕೊಂಡು ದೆಂದಱಿದು ಮಹಾಶೋಕದಿಂ ಪಳಯಿಸುತ್ತಿರ್ಪನ್ನೆಗಂ ಆ [14]ಕಱುಕುಚಿಗಂ ಸ್ವರ್ಗದೊಳ್ ಪುಟ್ಟಿರ್ದವಧಿ ಜ್ಞಾನದಿಂ ತನ್ನ ಭವದಂದಮುಮನಱಿದು [15]ತಾಯದುಃಖಮನಾಱಿಸುವೆನೆಂದು ಮುನ್ನಿನ ರೂಪುಗೊಂಡು ಬಂದೊಡೆ ತಾಯ್ ಕಂಡೆಲ್ದಪ್ಪಿಕೊಳಲ್ ಬಗೆದೊಡೆ ದಿವ್ಯಶರೀರಮಂ ಮಾನಸರ್ ಮುಟ್ಟಲಾಗದ ಕಾರಣ [16]ದಿಂದಾಕಾಶಕ್ಕೆ ನೆಗೆದು ದೇವನಪ್ಪ ರೂಪಂ ತೋಱಿ "ಸಂಸಾರ ಸ್ಥಿತಿಯಿಂತುಟು"ಎಂದಱಿಪಿ "ನೀನುಬ್ಬೆಗಂ ಬಡದಿರಿಮಾ ವ್ರತದ ಫಲದಿಂದಾನಿಂತಾದೆಂ ನೀಮುಂ ವ್ರತಮುಂ ಕೆಯ್ಕೊಳ್ವುದು" ಎಂದು ತಿಳಿಯೆ ಪೇೞ್ದಾ ದೇವಂ ದೇವಲೋಕಕ್ಕೆ [17] ಪೋಗಿ ಪಲವುಕಾಲಂ ದಿವ್ಯಸುಖಮನನುಭವಿಸಿ ಬಂದು—

ಕಂ॥ ಧನಪಾಳಂ [18]ಗಾ ದೇವಂ |
ತನಯಂ ನೀನಾದೆ ಯಿಂತು ಸುತ್ತಾ ಗಾವುಂ ॥
ಡನ ಸುತ [19]ರೆಣ್ಬರು ಮಣ್ಣರ್ |
ನಿನಗಾಗಿ ವಿರೋಧಮುನ್ನೆನೆದು ನಿನಗಿನ್ನುಂ ॥ ೪೫ ॥

---

(1) ಕೇರಿಗೆಲ್ಲಂ (ಕ) (2) ಸುತ್ತಿರ್ದೊಡಂ ಮತ್ತಮುಂಟಾಗಿರ್ದುದು (ಕ,ಚ) ಸಮೆಯದುಂಟಾಗಿರ್ದುದು (ಛ,ಖ) ಬಡಿಸಿಕುಡುತಿರ್ದೊಡಂ (ಘ) (3) ಕರುಗಳಂ ಕಿಡಿಸಿ ಮನೆಗೆ ಬರಲಣ್ಮ (ಮ್ಮ) ದಿರೆ (ಕ, ಚ) (4) ಜಡಿ (ಜು) ದು (ಕ, ಚ) ಗಾವುಂಡನಾತನದಱಿಸಿ ಜಡಿದು ಬನ್ನಿಸಿ (ಛ) (5) ಪೆಱಱುಪೋಡಿಪೋಗಿ (6) ವ್ರತವಂದಮೆಂತು (ಖ) (7) ಳ್ವಿಲ್ಲದೆ ಧರ್ಮಮಂ ನೆಱಿಯೆತಾಳ್ದಿ (ಖ,ಗ) (8) ಮನಿಂತು ಮನೋದೆ(ಚ) ಕೊಂಡನಣುವ್ರತಂಗಳಂ (9) ನೆಟ್ಟನೆ (ಛ) ರಾಗದೆ ಕೊಂಡನಣುವ್ರತಂಗಳಂ (ಖ,ಛ) (10) ಕೊಂಡಾಗುಹೆಯ ಪೊಱಗಣಲಿರ್ದವನಂ (ಕ) ಯಂ ಪೊಱಮಟ್ಟರ್ದನಂ (ಚ) (11) ದಿಂ ಸದ್ವನದಫಲದಿಂ (ಕ, ಚ) (12) ತಾಯ್ ಮನ್ಮಱನುಱುಗಿ (ಛ) (13) ಪುಲಿಪಾಯ್ದೊಂದು ಭಾಗಮುಂತಿಂದು (ಕ,ಚ) ಪೋಗಿಚಿತ್ರಕಾಯಂ ಪಿಡಿದೊಂದು ಭಾಗಮಂತಿಂದ ಮೃತಕಮಂ(ಛ) ಪೋಗಿಮಹಾರಣ್ಯಮಂ ಪೊಕ್ಕುಗುಹೆಯ ಪೆಱಗಿರ್ದನಂಪುಲಿ ಪಾಯ್ದರೆದಿಂದಪೆಣನಂ (ಖ, ಗ) (14) ವತ್ಸಪಾಲಕಂ (ಛ) (15) ಜನನಿಯ (ಛ) (16) ದಿಂಗಗನಕ್ಕೆ (ಚ) ನಭಕ್ಕೆ (ಖ) (17) ಪೋದನಲ್ಲಿ (ಘ) (18) ಗಾತ್ಮಜನಾವೆ ನೀನುಮಾಗೌಂಡನಾತ್ಮಸುತರೆಣ್ಬರುಮಂದಿನ ಮುನಿಸಿಂದಣ್ಣಂಗಳಾಗಿ ನಿನ್ನನಿನ್ನುಂ ಕೊಲಲ್ಕೆ ಮುನಿಯುತ್ತಿರ್ಪರ್(ಛ,ಖ) (19) ರೆಣ್ಬರ್ ಮುಂದಿನ ಮುನಿಸಿಂ ದಣ್ಣಂಗಳಾಗಿಯುಂ ನಿನಗಿನ್ನುಂ (ದೆಂತುಂ) (ಕ)

ವ|| ಅದಱಿಂ ಮುನಿಯುತ್ತಿರ್ದರ್ ಎಂದಿಂತು ತನ್ನ ಮುನ್ನಿನ ಭವಾಂತರಮುಂ ತಿಳಿಯೆ ಪೇೞ್ದ ಕೇಳ್ದು, ಆ ಭಟಾರರಂ ಬಂದಿಸಿ ಮತ್ತಮಂತೆ ಪಯಣಂಬೋಗಿ ರಾಜಗೃಹಪುರಮನೆಯ್ದಿ ವಂದು ಪೊಱಗಣುದ್ಯಾನದೊಳ್ ವಿಶ್ರಮಿಸಿರ್ದನನ್ನೆಗಮಲ್ಲಿಯ ಮಹತ್ತರನಪ್ಪ ಮಾಲೆಗಾಱಿಂ ಬಂದು ನೋೞ್ಪಾಗಳ್—

ತರಳ|| ದಿವಸಮಿ(ಮ)ಲ್ಲದೆಯುಂ ಕೊನರ್ತು ತಳಿರ್ತು ಪೂತು ಫಲಂಗಳಾ |
ದುವು ತರುಪ್ರಕರಂ[1]ಗಳಿಂಚರಮಾಯೆ ಕೋಗಿಲೆ ತೆಂಕಣಿಂ ||
ಪವನನೊಯ್ಯಗೆ ಕಂಪನೀೞ್ಕುಗೊಂಡು ಬಂದಪುದೇಕೆಯೋ |
ಪ್ರವರಪುಣ್ಯ ಸಮೇತನತ್ಯಭಿನೂತನಿಲ್ಲಿಗೆ [2]ಬಂದನೋ ||೪೬||

ವ|| ತೊಟ್ಟನಿಂತತಿಶಯ[3]ಮಪ್ಪುದೆಂಬುದು ಮುನ್ನ ಪೇೞ್ದಾ ದೇಶಪುರುಷಂ ಬಂದನಕ್ಕುಮೆ[4]ನುತ್ತುಂ ಬರ್ಪ ಮಾಲೆಗಾಱಿಂ ಕುಮಾರನಂ ಕಂಡು ಸಾರೆವಂದು ನೋಡಿ "ನೀಮಾರ್ಗ? [5]ಎತ್ತಣಿಂದೆ ಬಂದಿರಿ" ಎನೆ [6]"ವೇಶಾನ್ತರಿಗನೆಂ ಬಟ್ಟಿವೋಗುತ್ತುಂ ಬಂದೆ"ನೆಂದೊಡೆ [7]"ಅಕ್ಕುಂ, ನೀಮೆನಗಿಂದಭ್ಯಾಗತರಾಗಿಂ" ಎಂದು ಭರಂಗೆಯ್ದು ನುಡಿದು ಮನೆಗೊಡಗೊಂಡು ಪೋಗಿ ಪೂಗಟ್ಟುವ ಮನೆಯೊಳ್ ಕುಳ್ಳಿರಿಸಿದಾಗಳ್ ಆಮನೆಯವರ್ ಪೂಗಟ್ಟುವಂದಮಂ ನೋಡಿ ತಾನುಮೊಂದುನೂಲಂಕೊಂಡು ನಾನಾವಿಧಚಿತ್ರಮಾಲೆಗಳಂ ಸಮೆವ ಹಸ್ತಕೌಶಲ್ಯಮಂ ಕಂಡಾತ್ಮಜಾತಿವಿದ್ಯಾನಿಪುಣನೀತನೆಂದಾ ಮಹತ್ತರಂ ಮಚ್ಚಿ "ಇತ್ತೆೞ್ತನ್ನಿಂ" ಎಂದು ಪಿರಿಯ [8]ಮನೆಗೊಯ್ದು "ಎನ್ನ ತಂಗೆಯ ಮಗಂ, ನಿನ್ನಳಿಯಂ" ಬಂದನೆಂದು ಪೆಂಡಿತಿಗೆ ಪೇೞ್ದತಿ[9]ಪ್ರೀತಿಯಿಂ ಸ್ನಾನಾನ್ನಪಾನಾದಿಗಳಿಂ ತಣಿಪಿ "ನೀಮೆತ್ತಲುಂ ಪೋಗ[10]ದಿಲ್ಲಿರ್ಪುದು, ಕಾರಣಮುಂಟು" ಎಂದು ಪೇೞ್ದು ಇರಿಸಿದೊಡಾಮಾಲೆಗಾರನ ಮಗಳ್ ಪುಷ್ಪಾವತಿಯೆಂಬಳ್—

ಕಂ|| ಧನ್ಯಂಗೆ ಕುಸುಮಶರಸಾ |
ಮಾನ್ಯಂಗೆ ನರೇಂದ್ರವರ್ಗಮಾನ್ಯಂಗೆ ಲಸ ||
ತ್ಕನ್ಯೆ [11]ಸುರೂಪಾತಿಶಯಾ |
ಮಾನ್ಯೆ ಕರಂ ಕೂರ್ತು ಕೂಟಮಂ ಒಯಸಿರ್ಕುಂ ||೪೭||

ವ|| ಇರ್ದೊಡೊಂದು ದಿವಸಮಾತಂ ಕಟ್ಟಿದ [12]ಪೂವನರಸರ ಮಗಳ್ಗೆ ಕೊಂಡು ಪೋಗಿ ಕೊಟ್ಟೊಡೆ "ಇನ್ನೆಗಮೇಕೆ [13]ಬಾರೆ"ಯೆಂದು ನುಡಿದು ಮುಳಿದು ಆ ಪೂಮಾಲೆಯ [14]ಚೆಲ್ವಂ ನೋಡಿ "ಪೇೞ್ದನಾರ್ ಸಮೆದರ್?" [15]ಎಂದೊಡೆ ''ಎಮ್ಮತ್ತೆಯ ಮಗಂ ಬಂದಿರ್ದನಾತನಿವಂ ಸಮೆದ''ನೆಂದೊಡೆ ''ಇಂತಪ್ಪ ಕುಶಲಂಗೆ ನಿನ್ನಂ [16]ಕೊಟ್ಟೊಡೊಳ್ಳಿತ್ತೆಂದಾಮುಮೆಲ್ಲಂ

---

(1) ಗಳೊಳ್ಗಿಳಿ(ಣಿ)ವಿಂಡು ಕೋಗಿಲೆ (ಕ,ಚ) (2) ವಂದನೇಂ (ಛ,ಜ) ವಂದನ್ಯೆ (ಖ,ಗ) (3) ಮಪ್ಪು ದೆಲ್ಲಮುಂ (ಕ) ಮೆಂಬುವೆಲ್ಲಂ (ಖ) (4) ನುತ್ತಂತೆ ಬರುತ್ತುಂ ಕುಮಾರನಂ (ಕ, ಚ) (5) ಎಲ್ಲಿಂದೆ (ಛ) (6) ದೇಸಿಗನೆಂಬಟ್ಟೆ (ಕ,ಚ) (7) ಅಕ್ಕುಂ ನಿಮ್ಮಂ ನೀಮುಂ ಪೇೞಿದೆರ್ದೊಡಮೇಮೆಮ್ಮ ಮನೆಗಿಂದಭ್ಯಾಗತ (ಕ,ಚ) (8) ಮನೆಯೊಳಗಣ್ಮೊಯ್ದು (ಕ,ಚ) (9) ಪ್ರಿಯದಿಂ (ಕ) (10) ದಿರಿಯಿಲ್ಲಿರ್ಪುದೆಂದು (ಕ,ಚ) (11) ನಿಜರೂಪದಿಂ ಸ್ಪಾಧಾನ್ಯೆಕರಂ (ಕ,ಚ) ಕ್ಕನ್ಯಾಸತಿರತಿ (ಸ) ನ್ನಿಭೆ ಮಾನ್ಯೆ (ಛ,ಝ) (12) ಪುಷ್ಪ (ಜ) ಮಾಲೆಯಂ ಕೊಂಡೊಯ್ದರಸನ (ಕ, ಚ) (13) ಇಂತೇಕೆ ತಡೆದೆ (ಕ,ಚ) (14) ಚೆಲ್ವಿಕೆಯಂ ಕಂಡುಮಚ್ಚಿ (ಛ,ಜ) (15) ಎಂದು ಬಿಸಗೊಂಡೊಡೆ (ಕ,ಚ) (16) ಕುಡುವುದೊಳ್ಳಿತ್ತಾಮೆಲ್ಲಂ (ಕ,ಚ)

ಬಯಸಿದಪ್ಪೆಂ'' ಎಂದೊಡೆ ಆಕೆಗೆ ಕೂರ್ಮೆಯಿಸ್ಮ್ಕಡಿಸಿ ಮಗಲ್ದು ಬಂದು ವಿರಹ ಪರಿತಾಪದಿಂದಿರ್ದೊಡೆ ಅವರಯ್ಯನುಂ ಈಕೆಯನಾತಂಗೆ ಕುಡುವ ಬಗೆಯೊಳಿರ್ದಂ. ಮತ್ತಮಾ[1] ಪೊಲಲ ಪ್ರಧಾನ ಶ್ರೇಷ್ಠಿ—

ಕಂ॥ ಒಂದು ಪಣವಿನ ಮೊದಲ್ಗೊಂ |
ಡಂದಿನ [2]ದಿನದೊಳೆ ಸಹಸ್ರಪಣಮುಂ ಪಡೆನಂ ॥
ಗಿಂದು[3] ನಿಭಾಸ್ಯೆಯನಭಿನುತ |
ಸೌಂದರಿ ಕನ್ನಿಕೆಯನೆನ್ನ ಮಗಳಂ ಕುಡುವೆಂ ॥ ೪೮ ॥

ವ॥ ಎಂಬ ಪ್ರತಿಜ್ಞೆಯಂ ಕೇಳ್ದು ಆತನಲ್ಲಿಗೆ (ಧನ್ಯಕುಮಾರಂ) ಪೋಗಿ ''ನಿಮ್ಮ[4] ಕೂಸ ನಿತ್ತೊಡಮಕ್ಕುಮಿಾಯದೊಡಮಕ್ಕುಂ. ಎನ್ನ ಬುದ್ಧಿಯಂನೋಡಿಂ''. ಎಂದೊಂದುಪಣಮ[5] ನಧ್ಯಕ್ಷ ಸಹಿತಂ ಕೊಂಡುಪೋಗಿ ಪೂಗಟ್ಟುವ ನಾರನಾಪಣವಿಂಗೆ ಮಾಱುಗೊಂಡು ತೋಂಟದ ಬಟ್ಟಿಗೊಯ್ದು ಒಂದುನಾರನೊರ್ಪಿಡಿಪೂವಿಂಗೆ ಕೊ[6]ಟ್ಟು ಪೂವಂ ಮಾಱುಗೊಂಡು, ಆಪೂವಂ ಚಿತ್ರ ಮಾಲೆಗಟ್ಟಿ ವನಕ್ರೀಡೋತ್ಸವಕ್ಕೆ ಪೋಪ ರಾಜಕುಮಾರನ(ರ) ನೆರವಿಗೆ ತೋಱಿ ಮಾಱಿ ಸಾವಿರಪಣಮುಂ ನೇಣ್ ಮೊದಲೊಂದು ಪಣಮುಮ[7]ನೊಯ್ದೊಡಾತನಂ ರಾಜಶ್ರೇಷ್ಠಿ ಮಚ್ಚಿ ತನ್ನ ಮಗಳನಾತಂಗೆ ಕುಡುವೆನೆಂದು ಕೊಂಡಾಡುತಿರ್ದಂ. ಮತ್ತಮಲ್ಲಿಯೊರ್ವಂ [8]ಸಾವನಿಗನ ಚಿತ್ರನುಂ ಬರೆದಂಗಡಿಗೆಪೋಗಿ ಕುಳ್ಳಿರ್ದೊಡಂದಾ ವಣಿಕ್ಪತಿಗೆ ಲಾಭಮಾದೊಡೀತಂ ಬಂದಲ್ಲಿ ಪಡೆದೆನೆಂದಾತನ ತೇಜಕ್ಕಂ ಬುದ್ಧಿಗಂ ಮಚ್ಚಿ [9]ಕೂಸಂ ಕುಡಲೆಂದಿರ್ದಂ ಮತ್ತಂ ರಾಜ ಪ್ರ[10]ಧಾನಮಂತ್ರಿಗೆ [11]ಚಂದ್ರಕವೇಧ್ಯಮೆಂಬ ವಿದ್ಯೆಯಂ ಬೆಸಂದೋಱಿ[12] ದೊಡೆ ಆತನೊಸೆದು ತನ್ನ ಮಗಳಂ ಕುಡಲಿರ್ದಂ. ಇಂತಾತನ ವಿದ್ಯಾಪರಿಣತಿಗಂ, [13]ರೂಪಿನೊಳ್ಪಿಂಗಂ, ಸೌಭಾಗ್ಯಕ್ಕ [14]ಮರಸಂ ಪುರುಡಿಸಿ[15] ಕಾಯ್ದು ಕೋಪದಿಂ ಕೊಲಲ್ ಬಗೆದು—

ಕಂ॥ [16]ರಕ್ಕಸನ ಮಾಡದೊಳಗಂ |
ವೊಕ್ಕಾವಂ ಸುಖ[17]ದಿನಿರ್ದನಾತಂಗೆ ಕರಂ ॥
[18]ತಕ್ಕಪ್ಪೆನ್ನಾತ್ಮಜೆಯಂ |
[19]ಮಿಕ್ಕಿರ್ದಾ [20]ನಾಡುಮಂ ನಿತಾಂತಂ ಕುಡುವೆಂ ॥ ೪೯ ॥

---

(1) ಪೊಳಲೊಳಿರ್ದನೊರ್ವ ಪ್ರಧಾನಶ್ರೇಷ್ಠಿ (ಕ,ಚ) (2) ದಿವಸದೊಳೆ ಸಾವಿರಪಣವಡೆದಂ॥ (ಕ) ದಿವಸದೊಳೆನೂಱುಪೊನ್ನಂ ಪಡೆದಂ (ಭ) ನೂಱುಪಣಂ ಬಡೆದಂಗಂ (ಖ,ಗ) (3) ನಿಭಾನನೆ (ಕ) (4) ಮಗಳ ಕೊಟ್ಪೊಡಮಕ್ಕುಂ ಕುಡಡೊಡ (ಭ) (5) ನಧ್ಯಕ್ಷನುಮಂ (ಬೇಡಿ) ಕೊಂಡು ಪೋಗಿ ಪೂಗಂ ಪೂಗಟ್ಟುವನಾರ್ಗೆ (ರ್ಗಂ)ಪಣಮಂ ಕೊಟ್ಟುತೋಂಟದ (ಕ,ಚ) (6) ಟ್ಟಂತೆಪೂವೆಲ್ಲನುಂಕೊಂಡು (ಭ) (7) ನೊಯ್ದು ಕೊಟ್ಪೊಡಾ (ಕ,ಚ) (8) ಸೋವನಿಗಳ (ವಿ) ಚಿತ್ರಂ (ಕ, ಚ) ಸೌವರ್ಣಿಕನಾ (ಭ) ಸೊವನಿಗಂ (ಚ) (9) ತನ್ನಮಗಳಂ (ಚ,ಜ) (10) ಧಾನನೆಂಬಮಂತ್ರಿ (ಕ,ಚ) (11) ಚಂದ್ರಕವಿದ್ಯೆಯಂ ಬೆಸಂದೋಱಿ (ಕ,ಚ) ಚಂದ್ರಿಕವೈದ್ಯ ಮೆಂಬ (ಭ,ಖ) (12) ದ್ದೊಡೊಸೆದಾತಂ (ಕ) (13) ರೂಪಿಂಗಮೊಳ್ಪಿಂಗ (ಭ,ಜ) (14) ಕ್ಕಮರಸರಮಗಂ ಪುರು (ಕ,ಚ) (15) ಕಾಯ್ದುಸಾಯದಿಂ (ಕ, ಚ) (16) ರಕ್ಕಸಿಯಮಾಡ (ಜ) (17) ನಿರ್ಪ (ಭ) (18) ತಕ್ಕಿಪಮತ್ಪ್ರಿಯಸುತೆಯ (ಭ, ಚ) (19) ಮಿಕ್ಕಿರ್ದೆನ್ನರ್ಧರಾಜ್ಯಮಂ ನೆರೆಕುಡುವೆಂ (ಕ, ಚ) (20) ಮಾಡಮಂ (ಭ)

ವ|| ಎಂದು ಗೋಸಣೆವಿಡಿಸಿದೊಡೆ ಆ ಗೋಸಣೆಯಂ ಧನ್ಯಕುಮಾರಂ ಕಂಡು (ಕೇಳ್ದು) ಪಿಡಿದೊಡೆ ಅರಸಂ ಅಱಿ[೧]ದೆನ್ನ ಬಗೆದಂತಾ[೧]ಯ್ತೆಂ[೨]ದೊಸೆದು "ಪೋ, ಬರವೇೞ್ಕುಮಾತನಂ ಮನೆಯಂ [೩]ಪುಗುವಂದಮಂ ನೋೞ್ಪಿನೆಂದಟ್ಟಿ [೪]ತಾನುಂ ತನ್ನರಸಿಯರ್ಕ್ಕಳುಂ ತನ್ನ ಮಕ್ಕಳಪ್ಪ ಕ[೪]ನ್ಯಾಸಮೂಹಮುಂ, ಪುರಪ್ರಧಾನರುಂ ಕೆಯ್ಗೊಯ್ದು ಬಂದು ಮತ್ತಂ ಪುರಜನಂಗಳೆಲ್ಲಂ ತಂತಮ್ಮ ವಿಳಾಸಂಗಳಂ ಮೆಱೆದು ಬಂದಾ ಮನೆಯಂ ಬಳಸಿದ್ದು ನೋಡುತ್ತಿರೆ — ಧನ್ಯ ಕುಮಾರಂ ಕರಂ ಕೆಯ್ಗೊಯ್ದು ಪೊಲ[೫]ಲೊಳಗೆ ಬರ್ಪಾಗಳ್—

ಉ|| [೬]ಈ ನೆವದಿಂ ಕೊಲಲ್ ಬಗೆದನೀತನ ನೀನೃಪನೆಂದಪರ್ ಕೆಲರ್ |
ದಾನವನಂ ಗೆಲಲ್ ನೆಱೆಗುಮಿಾತನ ಪೌರುಷಮೆಂದಪರ್ ಕೆಲರ್ ||
ಮಾನಿತ ಪುಣ್ಯದೇವತೆಗಳುಳ್ಕೊಡೆ [೭]ಗೆಲ್ದಪನೆಂದಪರ್ ಕೆಲರ್ |
[೮]ತಾನುಱುಗುಂ ಪುರಾಕೃತಮದೇಕೆ ಪ[೯]ಲುಂಬುವಿರೆಂದಪರ್ ಕೆಲರ್ ॥ ೫೦ ॥

ವ|| ಎಂದಚ್ಚರಿವಟ್ಟು [೧೦]ಪೊೞಲೆಲ್ಲಂ ನೋಡುತ್ತಿರೆ (ಧನ್ಯಕುಮಾರಂ) ರಕ್ಕಸನ ಮಾಡ ಮನೆಯೆದ್ದಿವಂದು ಪಂಚನಮಸ್ಕಾರಮಂ ಮನ[೧೧]ದೊಳವಧಾರಿಸಿ ನಿಶ್ಶಂಕೆಯಿಂ ತನ್ನ ಮನೆಯಂ ಪುಗುವಂತೆ ಪುಗುವಾಗಳ್ ರಕ್ಕಸಂ ಮಾಡದಿಂ ಪೊೞಲುಬ್ಬಟ್ಟು ಭಯಂಕರಾಕಾರಮಂ ತೋಱುದೊಡೆ ಮುಗುಳ್ನಗೆ ನ"ಕ್ಕೆಮ್ಮಂ ನೀಂ ಮಚ್ಚಿಸಲಕ್ಕುಂ [೧೨]ಬೆರ್ಚಿಸಲಕ್ಕುಮೆ ?" ಎಂದಿದಿರ್ಚಿದೊಡೆ ರಕ್ಕಸನುಗ್ರಭಾವಂಗೆಟ್ಟು ಕುಮಾರನ ಮನದ ಪೆಂಪಿಂಗಚ್ಚರಿವಟ್ಟು [೧೩]ಸೌಮ್ಯನಾಗಿ ಬೆಳ್ಳಿಯ ಕಳಶಮಂ ಕನ್ನಡಿಯುಮಂ [೧೪]ಪಿಡಿದಿರ್ದಿಗೊಂಡು '[೧೫]ಇತ್ತೆೞ್ತಿನ್ನಿ' ಮೆಂದು ಕುಮಾರನಂ ಮಾಡ ದೊಳಗಣ್ಗೊಯ್ದು ಸಿಂಹಾಸನದ ಮೇಲಿರಿಸಿ ಪರಸಿ ಸೇಸೆಯನಿಕ್ಕಿ "ನೀನೀನಿಧಿಗಳಂ ಮನೆಯುಮುಂ ಕೆಯ್ಕೊಂಡು ಸುಖಮಿರ್ಪುದು, ನಾಂ ಪೆಱತೊಂ[೧೬]ದಾಶ್ರಯಕ್ಕೆ ಪೋದಪ್ಪೆಂ" ಎಂದು ರಕ್ಕ[೧೭]ಸಂ ಪೊೞಲುಬ್ಬಟ್ಟು ಪೋಪುದುಂ ಪೊೞಗೆ ನೋಡುತ್ತಿರ್ದರಸ[೧೮]ನುಂ, ಮಂತ್ರಿಯುಂ, ಪ್ರಧಾನರುಂ, ಸಾರೆವಂದು ರಕ್ಕಸನುಗ್ರಭಾವಂಗೆಟ್ಟು ನಿಧಿಗಳುಮಂ, ಮನೆಯುಮನಾತಂಗೊಪ್ಪುಗೊಟ್ಟು ಪೋದುದುಮಂ ಕಂಡೆನಿತಾನುಂ[೧೯]ಮುದದಿಂ ಪೊ[೨೦]ಗೞ್ದರಸನಾ ಮಚ್ಚಿನೊಳಾಗಳ್—

---

(1) ಯ್ತೆಂದು ಸಂತಸಂಬಟ್ಟಾತನಂ ಪೋಗಿಬರ (ಕ,ಳ) (2) ಪುಗುವುದಂ (ಕ,ಚ) (3) ತಾನು ಮರಸಿಯರುಂ (ಕ,ಚ) ಕನ್ಯಾರತ್ನಮು ಮಂತಃಪುರಮುಂ (ಳ) (4) ಮೆರೆಯಲೆಂದು (ಕ,ಚ) (5) ಲೊಳ್ (ಕ,ಚ) (6) ಈ ತೆಱದಿಂ (ಳ,ಱು) (7) ಗೆಲ್ಲಿವ (ಕ,ಚ) (8) ತಾನಱುವಂ (ಕ,ಚ) (9) ಪಲುಂಬದಿರೆಂದಪರ್ (ಚ) (10) ಪೊಳಲ ಜನಮೆಲ್ಲಂ (ಚ) (11) ದೊಳು ನಿಶ್ಶಂ (ಕ,ಚ) (12) ಬೆರ್ಚಿಸಲಾಗದೆಂದು (ಳ) ಬೆರ್ಚಿಸಲಾರೆಯೆಂದಿದಿರ್ಚಿದೊಡೆ (ಕ) ಬೆರ್ಚಿನಲ್ಲಾರವೆಂದು (ಚ) (13) ಸೌಮ್ಯರೂಪನಾಗಿ (ಕ,ಚ) (14) ಬೆರಸಿದಿ (ಕ,ಚ) (15) ಱನ್ನಿಮೆಂದು ಗಸೆಯಮೇ (ಕ,ಚ) (16) ದಾವಾಸಕ್ಕೆ (ಕ,ಚ) (17) ಸಂಪೋಪುದುಂ (ಕ,ಚ) (18) ರಸನುಂ ಪ್ರಭುಗಳುಂ ಸಾರೆ (ಕ,ಚ) (19) ತೆಱದಿಂ ಕುಮಾರನಂ (ಕ,ಚ) (20) ಪೊಗೞುತಿರ್ದರಸನಾ ಮೆಚ್ಚಿನೊಳಾಗಳ್ (ಕ,ಚ)

ಕಂ|| ತನ್ನ ನೆಗಲ್ದುರ್ದ ಸುತೆಯರ್ |
ಸನ್ನು(ನ್ನ)ತೆಯುಂ [1]ರೂಪವತಿಯನತ್ಯುತ್ಸವಂ ||
[2]ಪನ್ನತೆಯಂ ಕೊಟ್ಟೊಡೆ ಕೊಂ |
ಡುನ್ನತನಾಗಿರ್ದನಂದು ಧನ್ಯಕುಮಾರಂ ||೫೧||

ವ|| ಅತಿಶಯಮಪ್ಪ ಪುಣ್ಯಫಲಮುಮಂ, ಮನದ ಬಳಮುಮಂ, ಶಾಳಿಭದ್ರಂ ಮಚ್ಚಿ ಮಾವನ ಮಗನೆಂದಱಿದು ತನ್ನ [3]ತಂಗಿಯಪ್ಪ ಸುಭದ್ರೆಯಂ ಮಹಾ[4]ವಿಭವದಿಂದಾತಂಗೆ ಕೊಟ್ಟಂ. ಅಂತಂತೆ ಮುನ್ನೆ ಕುಡುವೆನೆಂದಿರ್ದವರೆಲ್ಲರುಂ ತಂತಮ್ಮ ಕೂಸುಗಳಂ ವಿವಾಹವಿಧಿಯಿಂ ತಂದುಕೊಟ್ಟರ್. ಅಂತು ಪುಷ್ಪವತಿವೆರಸು ಪದಿನಱುವರ್[5]ರುಮಂ ಮದುವೆನಿಂದವರ್ಗೆ ಪದಿನಾಱು ಮಾಡಂಗಳಂ ತನ್ನ ಮಾಡದ ಬಳಸಿಯುಂ ಮಾಡಿಸಿಕೊಟ್ಟು ಶುದ್ಧಚಂದ್ರೋದಯದೊಳ್ ಸಮುದ್ರಂ ಪೆರ್ಚುವಂತೆ ಪುಣ್ಯೋದಯದೊಳ್ ಶ್ರೀ ಪೆರ್ಚೆ ಧನ್ಯಕುಮಾರನಿಂತು ಸುಖದಿ ನಿರ್ಪನ್ನೆಗಂ – ಅತ್ತಲುಜ್ಜೈನಿಯೊಳವರಯ್ಯನುಮಬ್ಬೆಯುಂ ಪೋದಮಗನನೆಲ್ಲಿಯುಮಱಿಸಿ ಕಾಣದೆ—

ಕಂ|| ಎತ್ತಾನುಂ ಪೋಗಿ ಮಗಂ |
ಸತ್ತಂ ಹಾ! ಕೆಟ್ಟಿವೆಂದು ದುಃಖಾಗ್ನಿ ಕರಂ ||
ಪೊತ್ತಿ ಸುಡೆ ಬೆಂದು ನೊಂದಾ |
ಪತ್ತಿಂದಿರೆ [6]ಬಲ್ಕಿಕಲ್ಲಿ ಸೈಪು ತೊಲಗಿತ್ತವರೊಳ್ ||೫೨||

ವ || ಅಂತಲಲುಮುಬ್ಬೆಗಮುಮೆಡೆಯುಮತಿಸಿದೊಡೆ ಧನಪಾಳಸೆಟ್ಟಿಯರ್ ಕಣ್ಗೆಟ್ಟು [7]ಮುಂದುಗೆಟ್ಟು ಬಾಲು[8]ತ್ತಿರಲಾಜುಬೆ "ರಾಜಗೃಹದೊಳಿರ್ದ(ರ್ಪ) ತಂಗಿಯಮಗಂ ಶಾಲಿಭದ್ರನಂ [9]ಕಂಡು ಬರ್ಪೆ" ನೆಂದು ಕಪ್ಪರ(ಡ) ಮನುಟ್ಟು ಪೊಱಮಟ್ಟು ಒಂದು ರಾಜಗೃಹ[10]ಮಂ ಪೊಕ್ಕು ಧನ್ಯಕುಮಾರನ ಮಾಡದ ಮುಂದಣ [11]ಬೀದಿಯನೆಯ್ದಿ ಮೆಲ್ಲಮೆಲ್ಲನೆ ಮುಪ್ಪುಂ, ಬಡತನಮುಂ ಪಯಣಮು[12]ಮೆಂಬ ಮೂಱುಂತೆಱಿದಿನಾದ [13]ಪರಿಶ್ರಮಮಡಸೆ ಬಲ್ಲುದ್ದು ಬರ್ಪನಂ—

---

(1) ರೂಪಯುತೆಯ (ಕ,ಚ) (2) ಪನ್ನತೆಯ (ಕ,ಚ) (3) ತಂಗಿಯಂ (ಛ,ಜ) (4) ಮಹಾ ವಿಭೂತಿಯಿಂ (ಛ,ಝು) (5) ರುಮಂ ಸತಿಯರಂ ಮದುವೆ (ಛ,ಝು) (6) ಬಳಿಕೆ ಸೈಪು ತೊಲಗಿತ್ತವರಂ (ಕ,ಚ) (7) ಮುಟ್ಟುಗೆಟ್ಟು (ಕ,ಜ) (8) ತ್ತಿರ್ದಮತ್ತ ಮಿರ (ಕ,ಚ) (9) ಕಂಡು (ಕ,ಚ) (10) ಮನೆಯ್ದಿ (ಛ,ಜ) (11) ಬೀದಿಯಲ್ಲಿ ಪೊಯ್ಯನೆಮೆಲ್ಲಮೆಲ್ಲನೆ (ಕ,ಚ) (12) ಮೆಂದಿಂತು (ಕ,ಚ) (13) ಪರಿಶ್ರಮಮಡಿಸಿದೊಡೆ ಕರಂ ಬಟಲ್ದು (ಛ,ಝು)

ಕಂ॥ [1]ತೆರೆದ ಮೊಗಂ ಬಾಗಿದ ಬೆ[2]।
[3]ನರೆತ ಸಿರಂ ಕವಿದ ಪುರ್ವುಗಳ್ ಸಂಸ್ಕೃತಿಯೆಂ ॥
ಬುರುಜಲಧಿಯ ನೆಲೆ ನೋಲ್ಪವೊ ।
ಲಿರದೊಱುವ [3]ದಂಡುವೆರಸು ಬರ್ಪನನಾಗಳ್ ॥ ೪೩ ॥

ವ॥ ಮಾಡದ [4]ಮೇಗಣ ನೆಲೆಯಲ್ಲಿ ವಿನೋದಿಗಳುಂ, ವಿದ್ಯಾವಂತರುಂ, ಶ್ರೀಮಂತರುಂ, ರಸಿಕರ್ಕಳುಂ ತನ್ನನೋಲಗಿಸೆ [5]ಮಹೈಶ್ವರ್ಯದಿನಿರ್ಪು ತೊಟ್ಟನೆ ಬೀದಿಯತ್ತಲ್ ನೋಡಿ ಕಂಡು ತಂದೆಯಪ್ಪುದನಱಿದು [6]ಬೇಗಮೆಲ್ದು ಮೇಲುದನಪ್ಪೊಡಂ ಕೊಳ್ಳದೆ ಅಲ್ಲಿ ನೆರೆದಿರ್ದ ಸಭೆಯೆಲ್ಲಮಚ್ಚರಿವಡೆ—

ಕಂ॥ ಸುರಪತಿಯಾನುಂ ವಿದ್ಯಾ ।
ಧರಪತಿಯಾನುಂ ನಭೋವಿಭಾಗದಿನಿಱಿದೀ ॥
ಧರೆಗತಿರಾಗದೆ [7]ಬರ್ಪಂ ।
ತಿರೆ ಮಾಡದಿನಿಱಿದು ಬಂದು ಧನ್ಯಕುಮಾರಂ ॥ ೫೪ ॥

ವ॥ ತಂದೆ[8]ಗಿದಿರಂ ನಡೆದು ಮೆಯ್ಯಿಕ್ಕೆ ಪೊಡೆನಟ್ಟು "ಬನ್ನಿಂ, ಇತ್ತೆೞ್ತಿನ್ನಿ"ಮೆಂದು ಕೆಯ್ಯಂ ಪಿಡಿದು ಮಾಡದೊಳಗಣ್ಗೊಯ್ದು [9]ಚಿತಾಸನದೊಳ್ ಕುಳ್ಳಿರಿಸಿ ಕಾಲಂ ಕರ್ಚಿ [10]ತಾನೆ ಕಾಲ್ಗಳನೊತ್ತುವಾಗಳ್ ಬೆಕ್ಕಸಂಬಟ್ಟಯ್ಯನಿಂತೆಂಗುಂ—

ಉ॥ ರಾಜಕುಮಾರ ಕೇಳ್ ನಿನಗೆ ಭಕ್ತಿಯೊಳಾಮೆಱಗುತ್ತುಮಿರ್ಪುದೊಂ ।
[11]ದೋಜೆಯೆ ಪಾಱು [12]ನೀನೆಱಗೆ ಬೆರ್ಚಿದೆನೆಂದೊಡೆ ಬೆರ್ಚವೇಡ ವಿ ॥
ಭ್ರಾಜಿತನೆಂ ಭವತ್ತ[13]ನಯನೆಂ ಸುತಧನ್ಯಕುಮಾರನೆಂ ಧರಾ ।
ಪೂಜಿತಮಪ್ಪ ಪುಣ್ಯಮೆನಗಾದುದು ನಿಮ್ಮ ಪ್ರಸಾದದಿಂ ॥ ೫೫ ॥

ವ॥ ಎಂದಾಗಳ್ [14]ಮನಮಿಕ್ಕು ಕಂಡು ಸಂತಸದಿಂ ತೆಗೆದಪ್ಪಿಕೊಂಡು ಪರಸಿದಾಗಳ್ "ಎಮ್ಮಬ್ಬೆಯು ಪುಣ್ಣಂಗ[15]ಳುಂ ಸುಖಮಿರ್ದ(ರ್ಪ)ರೆ ಪೇೞಿ"ಮೆಂ[16]ದೊಡೆ "ಎಲ್ಲರುಂ ಪ್ರಾಣದೊಳೊಳರೆಂಬ[17]ನಿತೆ, ನೀಂ ಪೋದಿಂ ಬೞಿಯಂ ಆಸುನೆಯ ದೇವತೆ ಎಮ್ಮ ಪುಣ್ಯದೇವತೆಯನೆಲ್ಬಟ್ಟ ಕಳೆಯೆ [18]ಕಡುನಿರ್ಧನರಾಗಿ ಬಾೞ್ತಿರ್ದು ಅಲ್ಲಿ ಎನ್ನ ತಂಗೆಯ ಮಗಂ

---

(1) ತೆರಳ್ದ (ಳ,ಜ) (2) ನರೆವಲೆಯುಂ (ಳ,ಱು) (3) ಡಾಂಗೆ (ಕ,ಚ) ದಾಂಟು (ಳ,ಳ,ಖ) ಡಂಗೆ(ಗ) (4) ವೇಗೆವಿದ್ಯಾವಂತರುಂ ಶ್ರೀಮಂತರಯ ತನ್ನ (ಳ) (5) ಮಹಪ್ಯೆಶ್ವರ್ಯದೊಳ್ ಕೂಡಿರ್ದು (ಕ, ಚ) (6) ದೊಳ್ಮೆಯ್ಯ್ಮರೆದುಮೇಲುದ (ಕ,ಚ) (7) ಬಂದಂತಿರೆ ಮಾಗಳೆ ಮಿಳಿದು (ಳ, ಖ) (8) ಗಿದಿರಂ ಬಂದಾ ಶ್ಚರ್ಯಂಬಟ್ಟು ಬನ್ನಿಮಿತ್ತ ಬನ್ನ (ಳ,ಖ) (9) ಪಿರಿಯೊಂದು ಸಿಂಹಾಸನದೊಳ್ ಕುಳ್ಳಿರಿಸಿ (ಕ,ಚ) (10) ಕರ್ಚಿ ತಲೆಯೊಳ್ ತಳಿ(ಳೆ)ಮಕೊಂಡು (ಕ,ಚ) (11) ದೋಜೆಯು (ಕ,ಚ) (12) ನೀನೆರಗೆ (ಳ,ಱು) (13) ತನಯ ಸನ್ನುತ (ಳ, ಱು) (14) ಮನ್ನುಮಿಕ್ಕಿರ್ದು (ಳ,ಜ) ಮನಮೊಸೆದಿರ್ದು (ಖ) ಮನಮಿಕ್ಕಿರ್ದು (ಕ,ಚ) ಸಂತೋಷಂಬಟ್ಟು (ಗ) (15) ಳುಂಬಲ್ಲಿವರೇ ? ಸುಖ (ಕ,ಚ) (16) ದೊಡವರೆಲ್ಲರುಂ (ಕ,ಚ) (17) ನಿಲ್ಲ ಲ್ಲದೆ (ಕ,ಚ) ತಲ್ಲದಿಂ ಪೆಜಿತಿಲ್ಲ ನಿನ್ನಪೋದಿಂ (ಳ) (18) ಕೆಟ್ಟೆಳಿದು ದಾರಿದ್ರ್ಯಾಭಿಭೂತರಾಗಿ ಬಾೞ್ತು (ಕ, ಚ)

ಶಾಲಿಭದ್ರನೆಂಬನಿಲ್ಲಿರ್ದ(ರ್ಪ)ನಾತನನಾಸೆವಟ್ಟು ಬಂದೆ''ನೆನೆ "ಶಾಲಿಭದ್ರನ ತಂಗೆ ಮೊದಲಾಗೆ ನಿಮ್ಮ ಸೊಸೆವಿರ್ ಪದಿನಱುವರಾದ"ರೆಂದವರಂ [1]ಕರೆಯಿಸಿ ಪೊಡೆನಡಿಸಿ ತಮ್ಮಣ್ಣಂಗಳ್ ಮಾಡಿದ[2]ಪಾಯಂ ಮೊದಲಾಗಿಂದುವರಮಾದ ವೃತ್ತಾಂತಮೆಲ್ಲಮುಂ ತಿಳಿಯೆ ಪೇಳ್ದು ಆಬ್ಬೆಗ ಮಣ್ಣಂ[3]ಗಳ್ಗಸುಂದಳಮುಮನಟ್ಟಿ ಬರಿಸಿ, ಬರ್ಪಾಗಳ್ ತಾನಿದಿರಾಗಿ ಪೋಗಿ ಪೊಡೆನಟ್ಟೊಡಣ್ಣಂಗಳ್ಗೆ ಪರಸು[4]ವನಿತರ್ಕಂ ನಾಲಗೆ ಪೊರಳದೆ ತಲೆಯಂ ಬಾಗಿರೆ [5]ತಾಯೆಂದಳ್ "ಇವರ್ ತಮ್ಮ ಮಾಡಿದ ದೋಷಕ್ಕೆ ಸಿಗ್ಗಾಗಿರ್ಪರ್, ಪಾಪಕರ್ಮ"ರೆಂದೊಡೆ [6]''ಅಂತೇಕೆಂಬಿರಿಂತಪ್ಪೈಶ್ವರ್ಯಮವರ ನಿಮ್ಮ ಪ್ರಸಾದದಿಂ ನೆಗಲ್ದುದು'' ಎಂದವರಂ ವಿನಯದಿಂ ಮನ್ನಿಸಿರ್ದು ಮಱುದಿವಸ ಮೆಣ್ಬ[7]ರ್ಗಂ ಮಾಡಂಗಳಂ ಮಾಡಿಸಿಕೊಟ್ಟುಸುಹಾದ್ರವ್ಯಪತಿಗಳಂ ಮಾಡಿ ತಾಯ್ಗಂ ತಂದೆಗಂ ಬೆಸಕೆಯ್ವುತ್ತುಮಿರ್ದು ಪೊಬಲೊಳಾರ್ಗಮಗ್ಗಳಮಪ್ಪ ಪುಣ್ಯದಿಂ ಮಹಾಶ್ರೀಮಂತನುಂ ಗುಣವಂತನುಮಾಗಿ—

ಚಂ॥ [8]ಪರದಿನ ದಾನಧರ್ಮದ ನಿಯೋಗದ [9]ಚಾಗದ [10]ನಿಟ್ಟೆಯಿಂ ನಿರಂ।
ತರಮೆಸೆ[11]ದಿರ್ದು ವೃತ್ತಿಯ ವಿಭೂತಿಯ ರಂಜನೆ ಶಬ್ದಶಾಸ್ತ್ರದಂ ॥
ತಿರೆ ಬುಧರಪ್ಪವರ್ ಬಳಸಿ [12]ಬಂದಿರೆ ಸಂದಿರೆ ಪೆಂಪು ಧಾತ್ರಿಯೊಳ್ ।
ನಿರತಿಶಯಂ [13]ಸಮಸ್ತಸುಯಸಾಯ್ತನೆ ಧನ್ಯಕುಮಾರನೊಪ್ಪಿದಂ ॥ ೫೬ ॥

ವ॥ಆಂತು ಪಲವುಕಾಲಂ ಧರ್ಮಾರ್ಥಕಾಮ ಭೋಗ[14]ಮೆಂಬ ತ್ರಿವರ್ಗಮನುತ್ತರೋತ್ತರಂ ನೆಗಲ್ಪು ನಡೆಯಿಸುತ್ತಿರ್ಪನಂ ತನ್ನ ಮೆಯ್ದುನಂ ಶಾಲಿಭದ್ರಂ ತಪಂಬಡುವೆನೆಂದು ಮೆಯ್ಯನೊಡಂಬಡಿಸಲ್ ಮನೆಯೊಳಿರ್ದು ಭಾವಿಸಿದಪ್ಪನೆಂಬುದಂ ಧನ್ಯಕುಮಾರಂ ಕೇಳ್ದು ಸುಭದ್ರೆಗಾಮಾತಂ ಪೇಳ್ದು ''ಬಾ, ನಿಮ್ಮಣ್ಣನಂದಮುಂ [15]ನೋಲ್ಪಿ''ಮೆಂದಿರ್ವರುಂ ಶಾಲಿಭದ್ರನ ಮನೆಗೆ ಪೋಗಿ [16]ಸತ್ಕ್ರಿಯದಿಂ ಸಂತೋಷಂಬಟ್ಟು, ಕುಳ್ಳಿ"ರ್ದಿಂತೇಕೆ ಬಡವಾದಿರೆ''ನೆ ಶಾಳಿಭದ್ರನೆಂಗುಂ— ಈ [17]ಶರೀರದಂದಮುಂ ನೀಂ ಬಗೆಯಿರೆ !

ಕಂ॥ ಪೂರಿಸುವುದೊರ್ಮೆ ವಿಗತಾ।
ಹಾರದೆ ಗಳಿಯಿಸುವುದೊರ್ಮೆ ತಾನೀ[18]ಮೆಯ್ಯೊಳ್ ॥
ಸಾರದ ಬಾರದ ದುಃಖಾ।
ಕಾರದ ಮೊದಲಪ್ಪ ತೆಱನ[19]ನಿತಂ ಬಗೆಯಾ ॥ ೫೭ ॥

---

(1) ಬರಿಸಿ (ಕ,ಚ) (2) ಯಮಾದಿಯಾಗಿಯಿಂದುವರಮಾವ ಪ್ರಪಂಚ (ಛ) ಪಾಯಮುಂದುವರಮಾವ ಪ್ರಪಂಚ (ಕ,ಚ) (3) ಗಳ್ಗಂಸಿವಿಗೆಗಳನ (ಕ,ಚ) (4) ವನಿತರ್ಕಿ (ಕ,ಚ) (5) ತಾಯರಿದೆಂದಳವರ್ (ಕ, ಚ) (6) ಇಂತೇಕಪ್ಪಿರಿ (ಛ) ಅಂತೆಂಬಿರದಂ ನುಡಿಯದಿರಿಮಿಗಳಿಂತಪ್ಪೈಶ್ವರ್ಯ (ಕ, ಚ) (7) ರ್ಗಮೆಣ್ಮಾದಂಗಳಂ (ಛ, ಖ) (8) ಪರಹಿತ ದಾನ (ಛ, ಖ) (9) ಭೋಗವ (ಕ,ಚ) (10) ವಿಮ್ಮೆಯಿಂ (ಛ, ಝ) (11) ದಿಪ್ಪ (ಛ) (12) ಬಂದಿದೆ ಪೆಂಪ (ಕ) ಪೆಂಪು (ಚ) ಪೆಂಪುಕರಂಧರಿತ್ರಿಯೊಳ್ (ಛ,ಜ) (13) ನಿರಸ್ತಮಯಮಾಯ್ತನೆ (ಕ,ಚ) ನಿರಂತರಮುಮಾಯ್ತನೆ (ಛ) (14) ಮೆಂಬೀಶ್ರಾವಕಮಾರ್ಗಂಗಳನುತ್ತರೋತ್ತರ (ಕ,ಚ) (15) ನೋಡಿಬರ್ಪಂ (ಕ,ಚ) (16) ಸಂಪ್ರೀತಿಯಿಂ (ಛ,ಜ) (17) ಶರೀರಧರ್ಮದಂದ (ಕ) (18) ಮೆಯ್ ಸಂಸಾರದ ದುಃಖವಿಕಾರದ (ಕ) ಸಾರದದುಃಖಾಕಾರದ (ಛ)

ವ|| ಎಂದ ಮಾತು [1]ತನ್ನಂ ಮೂದಲಿಸಿದಂತಾಗೆ—ಧನ್ಯಕುಮಾರನಿಂತೆಂದಂ :—

ಚಂ|| ತನು·ಮಳ[2]ಧಾರಿ ನಿರ್ಗುಣ ವಿಕಾರಿ ಬಹುಕ್ರಿಮಿಧಾರಿ ಪೊರ್ದಿದೀ |
[3]ಧನಮವಿಶೇಷಿ ಸರ್ವಜನ[4]ರೋಷಿ ಸಮುದ್ಭವದೋಷಿ ಪತ್ತಿದೀ ||
ಮ(ಜ)ನಮವಿಶುದ್ಧಿ ದುಃಖಚಯವೃದ್ಧಿ ಕಳಂಕಿ ನಿಬದ್ಧಿಯೆಂಬುದೊಂ |
ದನುಪಮಬೋಧಿ ಪುಟ್ಟದೊಡೆ ಪೇೞ್ ಮನೆಯೊಳ್ [5]ತೊಡರ್ದಿಂತು ನಿಲ್ವುದೇ
|| ೫೮ ||

ವ|| ಎಂಬ ಮಾತಂ ಶಾಳಿಭದ್ರಂ ಕೇಳ್ದು ಮತ್ತಮಿಂತೆಂದಂ—

ಕಂ|| [6]ಅಱುದೊಡಮೇಂ ಬಂಧಂ ಮೇಣ್ |
ಪಱುಪಡುಗುಮೆ ಕಾಲಲಬ್ಧಿ [7]ದೊರೆಕೊಳ್ವಿನೆಗಂ ||
ತೊಱೆಯಲ್ ತಪದನುಭವಣೆಗೆ |
ನೆಱೆಯಲೊಡಂಬಡಿಪುದೊಳ್ಪು ಮನೆಯೊಳ್ ಮೆಯ್ಯಂ || ೫೯ ||

ವ|| ಎಂದಾಗಳ್ ಧನ್ಯಕುಮಾರಂ ಮುಗುಳ್ನಗೆ ನಕ್ಕು ಅಱುವುಳ್ಕಂ ಮನೆಯೊಳಿರ್ದಾಗಳ್ ಮುಳ್ಕ ಮೊನೆಯೊಳಿರ್ದಂತೆ ನೋವುಮಿಲ್ಲದ ಸಾವುಮಕ್ಕುಮೆಂದಿಂತೆಂದಂ—

ರಗಳೆ—ತನು ನಿಲ್ಲದು [7]ಪೊಲ್ಲದು ತಾನೆಂತುಂ—[8]ಧನಮೋ ತೊಡವಾರದು ಕೇಳೆಂತುಂ ||೧||
ಮನೆ[9]ಯೆಂಬುದು ತಾಂ ಸೆಱೆವನೆಯಂದಂ—ತನಯರ್ ಸೆಱೆವಿಡಿದಿರ್ದವರಂದಂ ||೨||
ಬಲೆಯಂದಂ ಪೆಂಡಿರ [10]ತೊಡರ್ಪಂದಂ—ಕೊಲೆಯಂದಂ ಬಂಧುಗಳೊಂದಂದಂ ||೩||
ಭೋಗಂಗಳೆ(ಳ್)ವಿಷಧರಭೋಗನಿಭಂ—ರಾಗಂ ಬಗೆವಂದದು ಮೇಗಶುಭಂ ||೪||
ಮೋಹಂ ಸಂಸಾರದ ಬೇರ ತೆಱಂ—ಸ್ನೇಹಂ ಭವಜಲಧಿಯ ನೀರ ತೆಱಂ ||೫||
ಎಸೆದೊಪ್ಪುವ ಸಿರಿ ಪೆರ್ಮುಗಿಲ ತೆಱಂ—ಪೊಸ ಜವ್ವ[11]ನಮುಂ ಗಿರಿನದಿಯ ತೆಱಂ ||೬||

---

(1) ತನ್ನನೂಜ್ಯಯುಂ ತೋಜ್ಯಯುಂ ನುಡಿದಂತಾಗೆ (ಕ,ಚ) (2) ಭಾರಿ (ಕ,ಚ) (3) ಜನದಮಶೇಷಿ (ಛ,ಖ) (4) ದೋಷಿ (ಜ) (5) ತಡ (ಡೆ) ದಿಂತುಮಿರ್ಪರೇ (ಕ, ಚ) ತೊಡರ್ದಿಂದುನಿಲ್ವರ್ಕೆ (ಛ, ಝ) (6) ಅರಿವಾದದೊಡಮೇಂಬಂಧಂ (ಕ) ದೊಡಮೆಬಂಧಂ (ಚ) ಅರಿವಾದೊಡೆಗಳಬಂಧಂ (ಛ,ಜ) (7) ಸಲ್ಲದು (ಛ) ಕೇಳೆಂತು (ಕ,ಚ) (8) ಧನಮಾದೊಡವೋಗದು ಕೇಳೆಂತುಂ (ಛ) ತಾನೆಂತುಂ (ಕ,ಚ) (9) ಯನ್ತದು (ಕ,ಚ) (10) ತೊಡರಂದಂ (ಛ) (11) ನತುಂಬಿದನದಿಯ (ಛ,ಜ)

[1]ಇಂತೆಂತುಂ ಪೊಲ್ಲದು ನರರ ಭವಂ–ಸಂತಸಮಂ ಪುಟ್ಪಿಸ[2]ದೀ ವಿಭವಂ ||೭||
[3]ಅದಱಿಂ ಮೆಯ್ಯಱಿಯದೆ[4] ನಡೆದು ಕರಂ–[5]ಮದದಿಂದಿರೆ ಪೊರ್ದುವುದಘನಿಕರಂ ||೮||
[6]ಅಱಿವವರಿಂತೆಂತುಂ [7]ಮೆಲ್ಪಡಲಿಂ–ತೊಱೆಯಿಂ ಮೋಹಂಗಳ [8]ನೀ ಕಡಲಿಂ ||೯||
ನೆಱೆದೊಪ್ಪಿರೆ ಪುಟ್ಟದ ಬೋಧಿಫಳಂ–ತಱಸಂದು ಮಹಾತಪದಿಂ ಸಫಳಂ ||೧೦||
|| ೬೦ ||

ಕಂ|| ಬಡವಂ ನಿಧಾನಮಂ ಮು ।
ಪ್ಪಡಸಿದನಮರ್ದಂ ಸರೋಗಿ ಮರ್ದಂ ಭವದೊಳ್ ||
ತೊಡರ್ದಂ ಬೋಧಿಯನೊಪ್ಪಿರೆ ।
ಪಡೆದೊಡೆ ಕಡೆಗಣಿಸಿ ತಡೆಯೆ [9]ಸುಖಮೆಂತಕ್ಕುಂ || ೬೧ ||

ವ|| ಎನೆ ಶಾಲಿಭದ್ರನಿಂತೆಂದಂ. ''ಮನಮನೊಡಂ ಬಡಿಸದೆ ವೇಳೆಗೊಂಡೊಡಂ ತನುವ ನೊಡಂಬಡಿಸದೆ ತಪಂಗೊಂಡೊಡಂ ದೋಷಂ ಪುಟ್ಟದೊಡೇಗೆಯ್ಯಲಕ್ಕು'' ಮೆನೆ ಧನ್ಯಕುಮಾರ ನಿಂತೆಂದಂ—

ಚಂ|| ಮಡುವಿನೊಳಬ್ದವಂ ಪೊಱಡಲೊಲ್ಲದೆ ಮೆಲ್ಪಡನುಂಟುಮಾಡಿ[10]ಕೊಂ ।
ಡೊಡೆ ಪುಗುಗುಂ ಜಳಂ ತನುವಿನೊಳ್ ಪಿಡಿಗುಂ ನೆಗಲಲ್ಲಿ ಬಂಧದೊಳ್ ||
ತೊಡರ್ದವರಿಲ್ಲಿ [11]ಮಾಣೆ ಮನಮುಂ ಪುಗುಗುಂ ಕಡುಮೋಹಮಂತೆ ಬಂ ।
ದಡಸು[12]ಗುಮಂತಕಂ ಬಲಿಯಮೆಂತು ತಪೋವನದತ್ತ [13]ಪೋದಪಂ || ೬೨ ||

ವ|| ಎಂಬ ಭಾಷೆಯಂದಮನಱಿದು ಸುಭದ್ರೆ ಸೈರಿಸಲಾಱದಿಂತೆಂದಳ್—

ಕಂ|| ಎಮ್ಮಣ್ಣನಱಿದು [14]ಮನೆಯೊಳ್ ।
ತಾಮ್ಮುನ್ನಂ ಭಾವಿಸುತ್ತುಮಿರ್ದುದೆ ಪೇಳ್ಗುಂ ||
[15]ತಮ್ಮಿರ್ದಿರವಂ ಬಗೆಯದೆ ।
ಕೆಮ್ಮನೆ ಭಾಷೆಯೊಳೆ [16]ತೆಗಲಲಕ್ಕುಮೆ ಪೆಱರಂ || ೬೩ ||

---

(1) ಯೆಂದಿಂತುಂ (ಳ) (2) ದಿಂತು (ಳ) (3) ಅರಿದಿಂ (ಕ) ಅಱಿದಿಂ (ಚ) (4) ತಡೆದು (ಚ) (5) ಮುದದಿಂ (ಕ,ಚ) (6) ಅರಿವುಳ್ಳವರೆಂತುಂ (ಕ) (7) ಮೆಲ್ಪಡದಿರಿಂ (ಳ) (8) ನೀವದಱಿಂ (ಳ) (9) ಸುಖಿಯೆಂತಪ್ಪಯ್ (ಪ್ಪೆ) (ಳ) ಸುಖಿಯೆಂತಪ್ಪರ್ (ಕ) (10) ಮಾ ಜ್ವೊಡೆ (ಕ,ಳ) ಮಾಣ್ಬನೆ (ಚ) (11) ರಿಲ್ಲಮಾಣ್ದೆರೆಮನಂ (ಕ,ಚ) (12) ಗುಗುಮೃತ್ಯುತಾಂ ಬಳಿಯಮೆಂತು (ಕ,ಚ) (13) ಪೋಪರಾರ್ (ಳ) ಧನದತ್ತ ವೋಪಿರೇ (ಖ,ಗ)(14) ಮುನ್ನಮೆ ತಾಂ॥ ಮನೆಯೊಳ್ ಸಾಧಿಸುತ್ತುಮಿರ್ದಪನಳಿಪೇಂ (ಕ) ರ್ದಪುದ ಳಿಪೇ (ಚ) ಭಾವಿಸುತ್ತುಮಿರ್ದಪನುಱಿ ನೀಂ (ಖ) (15) ನಿಮ್ಮಿರ್ದಿರ (ಕ, ಚ) (16) ತಗುಳಲಕ್ಕುಮೆ(ಳ) ನುಡಿಯಲಕ್ಕುಮೆ ಕೆಲರಂ (ಜ)

ವ|| ಎಂಬ ಮಾತಂ ಕೇಳ್ದು 'ಧನ್ಯಕುಮಾರಂ [1]ನೀನೆಂದಂತು ಪೆಱರ[2]ನೇನೆಂಬುದೊ ! ಕೇಳ್, ತುೞಲ್[3] ಸಂದಂಗನುವರಂ ಮುಟ್ಟದೊಡಂ, ಶ್ರಾವಕಂಗೆ ಬೋಧಿ ಪುಟ್ಟದೊಡಂ, ಅತಂ [4]ತೊಂಗಲನೇಱಿಸಿಕೊಂಡು ನಡೆವುದು. ಈತಂ ಮಹಾವ್ರತಂಗಳನೇಱಿಸಿಕೊಂಡು ತಪೋವನಕ್ಕೆ ನಡೆವುದುಂತಿರ್ವರುಂ ಮನೆಯಂ ಪೊಕ್ಕಿರಲಾಗದು ಎಂಬುದಕ್ಕೆ!. ಅಂತೆ ಯಾನಾರುಮಂ ನುಡಿವುದ ಱಿಯೊಳೀನೀಮಾತಂ ಎನಗೆ ನುಡಿದೆಂ' ಎಂದಾಗಳೆ ತನ್ನ ಮನೆಗೆ ವಂದು ಜ್ಯೇಷ್ಠಪುತ್ರನಂ ಕರೆದು ತನ್ನ ಪದವಿಯನೆಲ್ಲಮಂ ಕೊಟ್ಟುಳ್ಳುದಂ ಮಹಾದಾನಂಗೆಯ್ದು ಪೊಱಮಟ್ಟು ದೀಕ್ಷೆಯಂ ಕೆಯ್ಕೊಂಡುತ್ತರೋತ್ತರಂ ನೆಗೞ್ದು ತಪಮಂ ಚಾರಿತ್ರಮುಮಂ ಸಂಪೂರ್ಣಮಾಡಿ ವೊಂಬತ್ತು ತಿಂಗಳಿಂಗೆ ಸಲ್ಲೇಖನಾಕಾಲದೊಳುತ್ತಮಸ್ಥಾನಪ್ರಾಪ್ತ್ಯಭಿಪ್ರಾಯದಿಂ ಪ್ರಾಯೋಪಗಮನಂಗೆ[5]ಯ್ದು ಪರೀಷಹಂಗಳಂ ಸೈರಿಸಿ ಧರ್ಮಧ್ಯಾನದೊಳ್ ಮುಡಿಪಿ ಸರ್ವಾರ್ಥಸಿದ್ಧಿಯನೆಯ್ದಿದ ನೆಂಬ ಕಥೆಯಂ ಬಗೆದು ತಱಸಲ್ಪುದು. *ಮುಕ್ತಿಶ್ರೀಯಂ [6]ಕೂಡಲಾರ್ಪ ಬೋಧಿರತ್ನಮ ನೆಂತಪ್ಪ ಭಾವನೆಯಿಂ ಪಡೆಯಲಕ್ಕುಮೆಂದೊಡೆ — ಅಧ್ರುವಾದ್ಯನುಪ್ರೇಕ್ಷಾನ್ಯೈರಂತರ್ಯ ಭಾವನೆಯಂ ಭಾವಿಸೆ ಬೋಧಿ ನಿಲ್ಕುಂ. ಅದಱಂ ತಡೆಯದೆ ಮುಕ್ತಿಯಕ್ಕುಂ.

— ಗದ್ಯಂ —

ಇದು ಜಿನಶಾಸನ ಪ್ರಭಾಸನ ಶೀಲೋದಿತ ವಿದಿತ

ಬಂಧುವರ್ಮ ನಿರ್ಮಿತಮಪ್ಪ

ಜೀವಸಂಬೋಧನಾ ಗ್ರಂಥಾವತಾರದೊಳ್

ಬೋಧಿದುರ್ಲಭಾ (ತತ್ತ್ವಾ) ಭಿಧಾನಂ

ಏ ಕಾ ದ ಶಾ ಧಿ ಕಾ ರಂ.

———:೦:———

ಇದು ಕ,ಚ,ಜ ಪ್ರತಿಗಳಲ್ಲಿದೆ—

ರಾಜ್ಯೇ ಮತಿಂ ಯಃ ಪ್ರವಿಹಾಯ ಮೋಕ್ಷೇ– ಸ್ಥಿತಿಂ ಚಕಾರಾಪುನರಾಗಮಾಯ ॥
ಜೀವೇಷು ಸರ್ವೇಷು ದಯಾಂ ದಧಾನಃ – ತಂ ನೇಮಿನಾಥಂ ಪ್ರಣಮಾಮಿ ನಿತ್ಯಂ ॥

(1) ನೀನೆಂಬಂತೆ (ಕ,ಚ) (2) ನೇಕೆಂಬುದು (ಕ,ಚ) (3) ಸಾಧನಂಗನು (ಕ, ಚ) (4) ತೊವಲ ನೇಱಿಸಿ (ಛ) ತಿಗುರುಗುರ್ವೆರಸಿಕೊಂಡು (ಖ,ಗ) ತೊಲಗದಛಲಮನೇ (ಝ) (5) ಯ್ದುಪಸರ್ಗಂಗಳಂ ಸೈರಿಸಿ (ಛ,ಜ) (6) ಮಾಡಲಾರ್ಪ (ಕ,ಚ)

* ಶ್ರವಣಬೆಳ್ಗುಳದ ಮಠದ ಪ್ರತಿಯಲ್ಲಿ (ಕ) ಇಲ್ಲಿ "ನುತವೈಶ್ಯೋತ್ತಮ" ಎಂಬ ಗ್ರಂಥೋಪಸಂಹಾರ ಪದ್ಯ, ಬೋಧಾಭಿಧಾನಂದ್ಯಾದಶಾಶ್ವಾಸಂ ಎಂಬಆಶ್ವಾಸಾಂತ್ಯಗದ್ಯ, ಗ್ರಂಥವನ್ನು ಬರೆದವನ ವಿಷಯ,ಗ್ರಂಥವನ್ನು ಬರೆದ ಕಾಲ ಇವನ್ನು ಬರೆದಿದೆ. (ಈ ಅಧಿಕಾರ ಆ ಪ್ರತಿಯಲ್ಲಿ ಕೊನೆಯದಾಗಿದೆ)

॥ ದ್ವಾದಶಾಧಿಕಾರಂ ॥

— ಧರ್ಮಾನುಪ್ರೇಕ್ಷೆ —

ಕಂ॥ ಧರ್ಮವನಾದಿ[1] ಯಿನೊದವಿದ ।
ಕರ್ಮದ ಕೇಡಿಂಗೆ ಮೂಲವುದಱಿಂ ಜೀವ ॥
ಕ್ಕಾರ್ಯಂ ಪೆರದಾವುದೊ ಸಾ ।
ಸಿರ್ಮಡಿ ಯಾಗೊದವಿ ಸುಖಮನೀಗುಂ ಕಾಗುಂ ॥ ೧ ॥

ವ ॥ [2]ಬೆಳಸನಾಸೆವಡುವಂಗಾರಂಬನೆ ಮೂಲಂ, ಸುಖಮನಾಸೆವಡುವಂಗೆ ಧರ್ಮಮೆ ಮೂಲಂ,[3] ಅದು ತಾಂ—

ಈ ಸಂಸ್ಕೃತ ಪದ್ಯ ಟೀಕೆಗಳು (ಕ, ಜ, ಚ) ಪ್ರತಿಗಳಲ್ಲಿ ಮಾತ್ರ ಇವೆ—

ಸರ್ವಾರ್ಥಿರಾಜಃಕಮಠ[4]ರ್ದಿ(ತೋಯೋ)ತಸ್ಯ-ಧ್ಯಾನೇ(ನಂ)ಸ್ಥಿತಸ್ಯೈವ
ಫಣಾವಿತಾನೈಃ ।
ಯಸ್ಯೋಪಸರ್ಗಂ ನಿರವರ್ತಯತ್ತಂ-ನಮಾಮಿ ಪಾರ್ಶ್ವಂ ಮಹತಾದರೇಣ ॥ ೧ ॥

ದಾತಾಭೀಷ್ಟವಿಶಿಷ್ಟವಸ್ತು ನಿಚಯಸ್ಯಾಕಾಂಕ್ಷಿ ತೊ(ಣೋ)ಪಿ ಕ್ಷಣಾತ್ ।
ಹರ್ತ್ತಾSSರ್ತೇರ್ನರನಾರಕಾದಿಭವಸಂಭೂತೇಃ ಸ್ಮೃತೇ ರ್ಭೀಕೃತೇಃ ॥
ಹನ್ತಾSSಕ್ರಾಂತ ಜಗತ್ತ್ರಯಾಂತಕರಿಪೋಃ ಸ್ವಾಂತಂ ಗತಸ್ಯ ತತಃ ।
ತ್ರಾತಾSತ್ರಾಣಶರೀರಿಣಾಂ ನ ಹಿ ಪರೋ ಧರ್ಮಾತ್ ಸುಶರ್ಮಪ್ರದಾತ್ ॥ ೨ ॥

ಟೀಕೆ॥ ಕ್ಷಣಾತ್-ಒಂದು ಕ್ಷಣದತ್ತಣಿಂದಮುಂ(ವುಂ?) ಅಕಾಂಕ್ಷಿತೋSಪಿ(ಣೋ)-ಬಯಸ ದಂಗಂ,ಅಭೀಷ್ಟವಿಶಿಷ್ಟವಸ್ತುನಿಚಯಸ್ಯ-ಬಯಸಿದೊಳ್ಪಿತಪ್ಪವಸ್ತುಗಳ(ವಿನ)ಸಮೂಹಮಂ,ದಾತಾ ಕುಡುವುದು, ನರನಾರಕಾದಿಭವಸಂಭೂತೇಃ-ಮನುಷ್ಯನಾರಕ ಮೊದಲಾದ (ಗತಿ)ಗಳೊಳಾದ, ಸ್ಮೃತೇಃ-ನೆನೆವಿನತ್ತಣಿಂ, ಭೀಕೃತೇಃ-ಭಯಮಂ ಮಾಟ್ಪ, ಆರ್ತೇಃ-ದುಃಖಮಂ, ಹರ್ತಾ (ಹನ್ತಾ) ಕಿಡಿಸುವುದು, ಆಕ್ರಾನ್ತ ಜಗತ್ತ್ರಯಾಂತಕರಿಪೋಃ-ಮೂಱುಲೋಕಮಂಗೆಲ್ದ ಮೃತ್ಯು ವೆಂಬ ಪಗೆವನಂ, ಹನ್ತಾ-ಕಿಡಿಸುವುದು, ಯಃಯಾವುದೊಂದು, ಸ್ವಾಂತಂಗತಸ್ಯ-ಮನದೊಳಿರ್ದು ದಾಗಿ, ತತಃ-ಅದು ಕಾರಣದಿಂ, ಅತ್ರಾಣ ಶರೀರಿಣಾಂ-ಕಾಪಿಲ್ಲದ ಪ್ರಾಣಿಗಳಂ. ತ್ರಾತಾ-ಕಾವಂ(ವುದು?) ಪರಃ-ಪೆಱದು, ನ ಹಿ-ಇಲ್ಲಂ, ಸುಶರ್ಮಪ್ರದಾತ್-ಉತ್ತಮಸುಪ್ಪ ಸುಖಮುಂ ಕುಡುವ, ಧರ್ಮಾತ್-ಧರ್ಮದತ್ತಣಿಂ, (ಜೀವಂಗಳ ಕ್ಲೇಶಂಗಳಿಂದೆತ್ತುವ [5]ಧರ್ಮಮಂ ಪೇೞ್ವ ಧರ್ಮಾನುಪ್ರೇಕ್ಷೆ) (ಈ ಟೀಕೆ ಕ ಪ್ರತಿಯಲ್ಲಿಲ್ಲ)

---

(1) ಯು (ಗ,ಗ) (2) ಳಮಂ (ಕ,ಗ) (3) ಇಲ್ಲ (ಕ,ಗ,ಚ) (4) ರಿತೋಯೆ (ಕ,ಗ) ದಿತೋ (ಚ) (5) ಧರ್ಮಸ್ವರೂಪಮಂ (ಕ)

ಮ|| ಎರಡುಂ ಮಾಲ್ಕೆಯ ಧರ್ಮಮಕ್ಕು ಮದಱೊಳ್ ಮ[1]ತ್ತಾರುಮಂತಾವುದಂ ।
ಭರದಿಂ ಕೆಯ್ಕೊಳಲಾರ್ಕು[2]ಮಂತದನೆ ತಾಂ ಕೆಯ್ಕೊಂಡು ಪೂಣ್ದೆಯ್ದಿ [3]ಬಿ ॥
ತ್ತರಿಸುತ್ತಿರ್ಪುದು [4]ಕೆಮ್ಮನಿರ್ಪುದು ಕರಂ ಜೆ[5]ಲ್ವಲ್ತು ಕರ್ಮಾರಿಯಂ ।
ನಿ(ಪ)ರಿವುದ್ಯೋಗ ಮ[6]ದೀ ನಿಯೋಗಮೆನೆಯುಂ [7]ಕೆಯ್ಕೊಳ್ಳದೇಕಿರ್ಪಿರೋ ॥ ೨ ॥

ವ|| ಎರಡುಂ ಮಾಲ್ಕೆಯ ಧ[8]ರ್ಮಮಾವುವೆಂದೊಡೆ :—ದಾನಂ ಪೂಜೆ ಶೀಲಂ ಉಪವಾಸ ಮೆಂಬೀ ನಾಲ್ಕುಂತೆಱದ (ಧರ್ಮಂ) ಶ್ರಾವಕಧರ್ಮಂ, ಪತ್ತಮುತ್ತಮಕ್ಷಮಾಮಾರ್ದವಾರ್ಜವ ಸತ್ಯಶೌಚ ಸಂಯಮ ತಪಸ್ತ್ಯಾಗಾಕಿಂಚಿನ್ಯ ಬಹ್ಮಚರ್ಯಮೆಂದಿಂತು [9]ದಶಲಕ್ಷಣಂ ಯತಿ ಧರ್ಮಂ. [10]ಅಂತೆರಡುಂ ಧರ್ಮಂಗಳೊಳ್ [11]ಆವುದನಾರ್ಪನಿತು ಕೆಯ್ಗೊಂಡು ನೆಗಟ್ಟಿದ್ದೊಡಲ್ಲದೆ [12]ಕರ್ಮಕ್ಷಯಂಗೆಯ್ಯಲುಂ, ಸುಖದೊಳ್ ನಿಲಲುಂ ಕೂಡದು. ಮಾಣ್ದಿರ್ಪ ಕಾರಣ [13]ಮೇನೊ !

ಕಂ|| ಕಿಡುಸ ಕಸವರಮನೆಂತುಂ ।
ಕಿಡುವೊಡಲಂ ಧರ್ಮದೊಳ್ ತಗುಳ್ಚಿದೊಡೆಂತುಂ ॥
ಕಿಡದ ಗತಿಯಕ್ಕು ಮೆಂದೊಡೆ ।
ಕಡೆಗಣಿಪುದೆ ಕುಡದೆ ಕೊಂಡ ಲೆಕ್ಕಂ ಕಾಣಾ ॥ ೩ ॥

ವ|| ತೊಡಿನ ಮಾ[14]ಱೊಳ್ ಸಾಣಿಕಂ ದೊರೆಕೊಂಡೊಡಂ ಕೆಮ್ಮಗೆ ಸಾರ್ದು ಬಂದ ನಿಧಿಯೆನ್ನದೆ ಮಾಱಿಂದು ಬಗೆವಾ(ವುದೇ)!

ಶಾ|| ಪತ್ತಿರ್ದೀಗಡಿನುಳ್ಳ [15]ಸೈಪನಱೋ ಮುಂ ಗೆಯ್ದ ಸದ್ಧರ್ಮದಿಂ ।
ಪೆತ್ತೈ ಮತ್ತೆ ಬಿಸುಟ್ಪಿ ಧರ್ಮಪನದೇಂ [16]ಮೇಗಣ್ಗೆ ಕೇಡಲ್ತ್ತಿಯೋ ॥
ಬಿತ್ತಿಂದಂ ಬೆಳೆವೊಕ್ಕಲೆಂತು ಮಗುಟ್ಟುಂ ಮುಂದಣ್ಗೆ ಧಾನ್ಯಂ[17]ಗೊಳಲ್ ।
ಬಿತ್ತಂ ಬಯ್ತಿಡುವಂತೆ ಧರ್ಮಮನೆ ನೀಂ ಕೆಯ್ಕಾವುದಿಂ ಜೀವನೇ ॥ ೪ ॥

ಇದು ಫ ಪ್ರತಿಯಲ್ಲಿಲ್ಲ—
ಜಿನಧರ್ಮೋSಯಮತ್ಯನ್ತಂ ದುರ್ಲಭೋ ಭವಿನಾಂ ಮತಃ ॥
ತಥಾ ಗ್ರಾಹ್ಯೋ ಯಥಾ ಸಾಕ್ಷಾತ್ ಆಮೋಕ್ಷಂ ಸಹಗಚ್ಛತಿ ॥ ೩ ॥

ತಾ|| ಎಲೆ ಜೀವನೇ ಜಿನಧರ್ಮಮಿದತ್ಯಂತ ದುರ್ಲಭಮಾಗಿರ್ಪುದು. ಅದು ಪ್ರಾಣಿಗಳ್ಗೆ

---

(1) ತ್ತಾವನೊಲ್ದಾವುದಂ (ಕ, ಚ) ತ್ತಾವನೋತಾವು(ಜ) (2) ವುತ್ತದನೆ(ಚ) ಮಪ್ಪುದ(ಗ) (3) ನಿತ್ತ (ಚ) (4) ನೆಟ್ಟನೆಂಬುದು(ಚ) (5) ಲ್ವಲ್ತೆ(ಚ) (6) ದೀನ(ಕ) (7) ಮಾಣ್ಪಿರ್ಪುದೇ ಜೀವನೇ (ಕ, ಚ) ಮನೆನೀಂ(ಖ) (8) ರ್ಮಮೆಂಬುವವಾ (ಚ,ಜ) (9) ದಶವಿಧಾ (ಕ, ಚ) (10) ಮಿಂತೀಯೆ (ಕ, ಚ) (11) ಗಾವಳೊಳ ನಾವುದಕ್ಕಾರ್ಪಮಾರ್ಪುದಂ (ಕ, ಚ) ಕ್ಕಾರ್ಪ (ಜ) (12) ಕರ್ಮಮಂಗೆಲಲುಂ (ಕ್ಷ) ಗೆಯ್ಯಲುಂ (ಚ) ಕಿಡಿಸಲುಂ (ಗ) (13)ಮಾವುದೊ(ಚ) (14) ಱಂಗೆ (ಚ) (15) ಗೆಯ್ಯುಗಳಿಪಾಂ (ಚ) ಯ್ವನಱುದುಂ (ಗ) (16) ಮುಂದಣ್ಗೆ (ಕ) (17) ಗಳೊಳ್ (ಚ) ಗಳಂ (ಛ)

ವ|| [1]ಅಂತೆ ಆರಂಬಂಗೆಯ್ವಾತಂ ಬಿತ್ತಿಸ ಫಲಮನುಣುತಿರ್ದು ಮುಂದಣ್ಗೆ ಬಿತ್ತಂ [2]ಬಯ್ತುಂ ಗೆಯ್ಯದೊಡಂ ಪರತ್ರೆಯಂ ಬಯಸುವಾತಂ ಧರ್ಮವ ಫಲಮನುಣುತಿರ್ದು ಮತ್ತಂ ಧರ್ಮಂಗೆಯ್ಯದೊಡಮಾತಂಗೆ ಬೆಳಸನಾಸೆವಡಲುಂ ಮಿಾತಂಗೆ ಗತಿಯನಾಸೆವಡಲುಂ ಬಾರದುದಱಿಂ ಧರ್ಮಮನೆಂತುಮುದಾಸೀನಂಗೆಯ್ಯದಿರು—

ಕಂ|| ಧರ್ಮಮನೆ ಕಿಡಿಸಿ [3]ಮೇಗಿನಿ |
ಸಾರ್ಮಮಿದೆಂದ(ಬ)ಱಿಸುಖಕ್ಕೆ [4]ನೀಂ ಮೋಹಿಸುವೈ ||
ಪೆರ್ಮರನಂ ಕಡಿದೋವದೆ |
ನಿರ್ಮೂಲಂ[5]ಮಾಡಿ ಪಣ್ಡಿನಲ್ ಬಯಸುವ ವೋಲ್ ॥ ೫ ॥

ವ|| ಪಿರಿದಪ್ಪ ಮರನಂ ಕಡಿದು ಪ[6]ಣ್ಡಿಂಬನಂತೆ ಧರ್ಮಮನಱಿದು ಮೆಯ್ಗಿಂಬಂ ಮಾಡುವವನಂ ಮರು[7]ಳನಲ್ಲದೇನೆಂಬುದು. ಅಂತೇಱಿಸಿ ನೆಗಲ್ವಂತು ಧರ್ಮಮೇಂ ಕೇವಳಮೆ? ಲೋಕದೊ[8]ಳೀವ ವಸ್ತುಗಳೊಳಂ [9]ಕಲ್ಪವೃಕ್ಷಮುಂ ಚಿಂತಾಮಣಿಯುಂ ಅಗ್ಗಳಮೆಂಬಿವುಂ ಧರ್ಮದೊಳ್ ಸಮನೆ?—

ಉ|| ಆಮಹನೀಯ ಕಲ್ಪತರು ಬೇಡಿದೊಡಲ್ಲದೀಯದಂತೆ ಚಿಂ |
ತಾಮಣಿ ಚಿಂತೆಯಂ ಬ[10]ರಿಸದೀಯದಿನರ್ಕವು ದೋಷಮಲ್ಲವೇ ॥
ಪ್ರೇಮದೆ ಬಂದು ಬೇಡಿಸದೆ ಚಿಂತಿಸಲೀಯದೆ[11] ತಾನೆನೊಕ್ಕಳಂ |
ಕಾಮಿತವಸ್ತುವಂ ಕುಡುವ ಧರ್ಮದಿನಗ್ಗಳಮುಂಟೆ ಲೋಕದೊಳ್ ॥ ೬ ॥

ವ|| ತನ್ನನಾಸೆವಟ್ಟು ವೊರ್ದಿದರಂ ಕರ್ಮರಾಜನಿಂ ಕಾಡಲೀಯದೆ ಕಾವ ಪೆಂಪುಂ, ಸುಖಮುಮಂ ಬೇಡಲೀಯದೀವ ಚಾಗದಳವುಂ ಧರ್ಮದೊಳಲ್ಲದೆ ಪೆಱ[12]ತಱಿಕೊಳ್ ಕಾಣಲಕ್ಕುಮೆ? ನಿಮಗಿಂತಪ್ಪಗ್ಗಳಮಪ್ಪ ಧರ್ಮಮೆಂಬ ಸದ್ವಸ್ತು ದೊರೆಕೊಂಡೊಡದನೇಱಿಸುವಿರೆಂ[13]ಬುದೇಕೆ?—

ನಿತ್ಯನಿರ್ಮಳ ನಿಶ್ರೇಯಸ ಪ್ರಾಪ್ತಿಯಪ್ಪನ್ನಿಗಂ ಬರ್ಪಂತು ನೆಗಲ್ವುದು ಧರ್ಮಮೆಂಬುದು. ಆ ಧರ್ಮಾನುಪ್ರೇಕ್ಷೆಯಂ ಮೋಕ್ಷಾರ್ಥಮಾಗೆ ನೀನಿಂ ನೆಗಲಲ್ವೇಱ್ಕುಮೆಂಬೀ ಸೂತ್ರಾನುಸಾರಮಾದ ದೃಷ್ಟಾಂತ ಕಥಾನಿರೂಪಣಂಗೆಯ್ವೆನದೆಂತೆನೆ:—

---

(1) ಇಲ್ಲ (ಕ,ಗ) (2) ಬಯ್ತಿಡುವಂತೆ (ಕ) ಯ್ತಿಡದೊಡಂ (ಝು) (3) ಮೆಯ್ಗಿನಿಸಾರ್ಮ (ಕ, ಗ) (4) ಮೋಹಿಸುವುದೇ ಕೇಳ್ (ಕ) ಪೇಱ್ (ಚ) ಮೋಹಿಸುವುದೆ ನೀಂ (ಝು) (5) ಗೆಯ್ದು(ಝು) (6) ಣ್ಡಿಂಬನುಮಂ (ಕ)ಮಣ್ಡಿಂಬನಂತೆ (ಝು) (7) ಳಲ್ಲದೆ ಬುದ್ಧಿವಂತರಲ್ಲರ್ (ಕ) (8) ಳಗ್ಗಳಮಪ್ಪವಸ್ತು (ಚ,ಕ) (9) ಚೂತವೃಕ್ಷಮಂ (ಕ) (10) ರಿಸಿಯಿವುದ (11) ತಂದು (ಚ) ಮತ್ತೆ(ಗ) (12) ವಱಿಕೊಳೇಂಕಾಣ (ಚ,ಝು) (13) ಬುದೇ (ಝು,ಚ)

ಕಂ॥ ನಿರತಿಶಯಮಪ್ಪ ಧರ್ಮಂ।
ಕರಮಿಱಿದಱಿನೊದವಿ ಬಂದು ನಿನಗೀ ಮೆಯ್ಯೊಳ್ ॥
ದೊರೆಕೊಳ್ವೊಡೆ ನಿಧಿ ಮನೆಯೊಳ್ ।
ದೊರೆ[1]ಕೊಂಡೊಡೆ ನೆಗಲ[2]ದಗುಱದಿರ್ವುದೆ ಮರುಳೇ ॥ ೭ ॥

ವ॥ ಪೆಱರೆನ್ನಂ ಮರುಳೆಂದೊಡೆ ಮೇಗಾನದಱಿ ಬೇವಸಕ್ಕಾಱಿನೆಂ[3]ದು ಬಱಿಲ್ದಿರ್ಪಂತು ಧರ್ಮಮೇನರಿದೇ ?

ಮ॥ ಒಡೆಯಂಗಪ್ಪುಬು ಕೇಳ ತನ್ನೊಡಮೆಯಂ ಕೂರ್ತೀವೊಡಂ।
ಬಡವಂಗಪ್ಪುದು ಮೆಯ್ಯನೊಕ್ಕು ಗುಣಮಂ ತಕ್ಕೈಸುವಂಗೊಳ್ಳಿತಂ ॥
ನುಡಿವಂಗಪ್ಪುದಿನಿತ್ತು ಮಿಲ್ಲದೊಡೆ [4]ಮೇಣಾ ಚಿತ್ತಸಂಶುದ್ಧಿ ಯ(ಯಿ)ಂ।
ಪಡೆಯಲ್ಕಪ್ಪುದು ಕಾಣ ಧರ್ಮಮರಿದಲ್ತೇಕಂಜುವೈ ಜೀವನೇ ॥ ೮ ॥

ವ॥ ಈ ವೃತ್ತದರ್ಥಮೆಂತೆಂದೊಡೆ–ತಕ್ಕೆಡೆ[5]ಯನಱಿದೀಯಲಾರ್ವೊಡೊಡೆಯಂಗಪ್ಪುದು–ಒಡಮೆಯಿಲ್ಲದೊಡಂ ಗುಣಂಗಳ್ಗೆ ಮೆಯ್ಯನೊಡಂಬಡಿಸಿ ನೆಗಱಲಾರ್ವೊಡೆ [6]ಬಡವಂಗಪ್ಪುದು. ಇನಿತಿಲ್ಲದೊಡಂ ಮನಮುಂ ಶುದ್ಧಿಮಾಡಿ ಶ್ರೀಭಗವದರ್ಹತ್ಪರಮೇಶ್ವರನ ಶ್ರೀಪಾದಪದ್ಮಂಗಳ ನಾಗಳುಂ ನೆನೆಯುತ್ತಿರ್ಪುದು. ಧರ್ಮಮರಿದೆಂದು ಬೆದರದಿರ್ ?

ಕಂ॥ ಎನಿತಾನುಂ ಕಾಲಂ ಪೆಱ।
ರ್ಗನುವಶನಾಗಿರ್ದು ನಮೆದು [7]ನಡುಗಿದೊಡಮೇಂ ॥
ನಿನಗೆ ಸುಖಮುಂಟೆ ಧರ್ಮದೊ ।
ಳಿನಿಸೊಳಪೊಕ್ಕನಿತಱಿಂದೆ ಸುಖ[8]ಮಿರಲಾಗಾ ॥ ೯ ॥

ವ॥ ಪೆಱರನೋಲಗಿಸಿ ಸುಖಮಂ ಪಡೆನೆಯಪ್ಪೊಡೆ ನಿನ್ನನೀಗಳಾಳ್ವರ[9] ಸರ್ಕಳೂನರು ಮುದಾರಶಕ್ತಿಹೀನರುಮಲ್ಲದಿಲ್ಲ. ಬೆಸನಪ್ಪೊಡೇಱದಿಕೆಯುಂ ಪಾಪ[10]ಮುಮಲ್ಲದಿಲ್ಲ. ಅಂತಾಗಿಯು[11] ಮಾಕ್ಲೇಶದೊಳೆ ಮುನ್ನಳ್ಕುದುಮಂ ಮೆಯ್ಯುಮುಂ ತವೆ ಪಲಕಾಲಂ ನಮೆದೊಡಲ್ಲದಿಲ್ಲ. [12]ಎತ್ತಾನುಂ ಪಡೆದೊಡಂ[13] ಸ್ವಲ್ಪಮುಮಲ್ಲದಿಲ್ಲ. ಕೇಳಿಮಿಂ ಧರ್ಮಾರ್ಥಿಯಪ್ಪಾತನೋಲಗದಳವಂ.

---

(1) ಕೊಳ್ವುದು (ಝ) (2) ದೀಗಳಿರ್ಪರೆ (ಕ,ಚ) (3) ದುಬ್ಬಿಗಂ ಬಟ್ಟಿರ್ಪಂತು ಧರ್ಮದೊಳ್ ಸೈರಿಸದೆ(ಝ) ಪಂತಿರದೆ (ಕ) (4) ವೇಣ್ಟೆತ್ತಕ್ಕೆಸಂಶುದ್ಧಿ (ಚ,ಝ) (5) ಡೆಗೀಯಲಾ (ಕ,ಚ) (6) ಬಡವನಾಗಿಯುಂ ಮಶಕ್ತನಾಗಿ ಮೆಯ್ಯೊಡಂಬಡದಿರ್ದೊಡೆ ಕರ್ಮಕ್ಷಯೋಪಶೇಮಂವೇಟ್ಟಾಗಮಮನಾರ್ಪನಿತನೋದುವುದು ಓದಿಸೂದು, ವೋದಿ ದೇವರಂ ಗುರುಗಳಂ ಸ್ತುತಿಯಿಸುವುದೊಳ್ಳಿತ್ತು, ಒಳ್ಳಿತ್ತಂ ನುಡಿಯುವುದಿಂತು ನಾಲಗೆಯ ಸಾಮರ್ಥ್ಯದಿನಪ್ಪುದುದಿನಿತುಮಿಲ್ಲದೊಡೆ— (7) ನಿಂತುಗಿದೊಡ (ಕ, ಚ) (8) ಮಿದುಪೊಲ್ಲಾ (ಕ) ಮಿದುಮಕ್ಕುಂ (ಝ) (9) ಸರ್ಗೆಕರಮಭಿ ಮಾನಹೀನರುಮುದ್ಧತರು (ಕ) (10) ಮಂತರ್ಪಬೆಸನಲ್ಲ (ಕ) ಪಾಪ ಹೇತುವಪ್ಪ (ಕ,ಚ) (11) ಮಾಕ್ಲೇಶಂ ಸಂಕ್ಲೇಶಮುಂ ಮಾಡಿ ತನುಮೆಯ್ಯುಂ (ಚ) (12) ನಮೆದೆತ್ತಾನುಂ (ಕ,ಚ) (13) ಅದುಂ ಸ್ಥಿರಮಲ್ಲ (ಕ)

[1]ತನ್ನಾರ್ಜ್ಜನಾವನೆಂದೊಡೆ ಸಕಳ ಜಗತ್ಸ್ವಾಮಿಯಪ್ಪ ಸರ್ವಜ್ಞಂ. ಆವನ ಬೆಸದ ನಿಯೋಗ ಮಾವುದೆಂಬಾ ! ಪೆಂಪಿನೊಳ್ ಕೂಡಿದ ಧರ್ಮದ ನೆಗಲ್ತಿ. ಕ್ಲೇಶದಾಪತ್ತು ಆವುದೆಂದೊಡೆ [2](ಆತನ) ತ್ರಿಭುವನಸ್ವಾಮಿಯ ಶ್ರೀಪಾದಂಗಳಂ ನೆನೆ(ಯದ)ನಿತೆ. ಅಷ್ಟವಿಧಕರ್ಮಂಗಳಿನಿತು ಕಾಲದಿಂ ಫಲಮಕ್ಕುಮೆಂದೊಡೆ ಶುಕ್ಲಧ್ಯಾನಂ ನಿಶ್ಚಲಮಾದನಿತುಪೊಲ್ತಿ. ಪಡೆವುದಾವುದೆಂದೊಡೆ ಶಾಶ್ವತಮ[3]ಪ್ಪ ಸಿದ್ಧಸುಖಂ. [4]ಇಂತೆರಡಱೊಳಾವುದುಱುಗುಮೆಂಬುದಂ ನೀಮಱಿದು ನೆಗಱಂ—

ಮ|| ಕುಲಮುಂ ರೂಪಮು ಮಾಯು[5]ವಾರ್ವು ಗುಣಮುಂ ಸೌಭಾಗ್ಯಮುಂ ಭಾಗ್ಯಮುಂ |
ಬಲಮುಂ ತೇಜಮುಮಾಜ್ಞೆಯುಂ ವಿನಯಮುಂ ಚಾತುರ್ಯಮುಂ ಶೌರ್ಯಮುಂ ||
ನೆಲೆಯುಂ ವಿದ್ವೆಗಳುಂ ಪ್ರಭುತ್ವಗುಣಮುಂ ಸೌಂದರ್ಯಮುಂ ಧೈರ್ಯಮುಂ |
ವಿಲಸದ್ಧರ್ಮದಿನಕ್ಕು[6]ಮೆಂದು ಬಗೆ ನೀಂ ಧರ್ಮಕ್ಕೆ ಗೆಂಟಪ್ಪುದೇ ! ॥ ೧೦ ॥

ವ|| [7]ಇಂತು ನಿನ್ನ ಮಚ್ಚಾದುವೆಲ್ಲಂ ಧರ್ಮದಿಂದಕ್ಕುಮೆಂದೊಡೆ [8]ಅದರ್ಕೊಲ್ಲದನುಂ, ರಸಾಯನಂ ದೊರೆಕೊಂಡೊಡದನೊಲ್ಲ[9]ದನುಂ ಇರ್ವರುಂ ಅಱಿವರಲ್ಲಂ. ಎಂತಪ್ಪ ಸುಖಮುಂ ಬಯಸುವರ್ ಅಂತ[10]ಪ್ಪ ಸುಖಮೆಲ್ಲಂ ಧರ್ಮದಿನಕ್ಕುಮಲ್ತೆ !—

ಕಂ|| ಕಡು[11] ವೇಟದ ಪೆಂಡಿರೊಳೋ |
ತೊಡನಿರವುಂ ರಸರಸಾಯನಂಗಳ ಪಡೆವುಂ ||
ತಡೆಯದೆ ಧರ್ಮದಿ[12]ನಪ್ಪುದು |
ಗಡಮಲ್ಲದೆ ಬಯಸಿದಂ[13]ದವೇಂ ಕೂಡುಗುಮೇ ॥ ೧೧ ॥

ವ|| ಪೆಯಣಂಬೋಪಾತಂ ಸಂಬಳಮಿಲ್ಲದೆ ಉಣಲ್ ಬಯಸಿದೊಡಂ, ಕಾಮಿಯಪ್ಪಾತಂ ತನ್ನಗೆಯ್ದ ಧ[14]ರ್ಮಮಿಲ್ಲದೆ ಸುಖನುಂ ಬಯಸಿದೊಡಂ ಅಂತಿರ್ಪರ ಬಯಕೆಯುಮೇಕೆ [15]ಕೂಡುಗುಂ !—

---

(1) ಪೊರೆವಾಳ್ದ (ಚ,ಝು) (2) ಮನವಚನಕಾಯ ವಿಶುದ್ಧನಾಗಿರ್ದೇಕಚಿತ್ತ ದಿಂ ತನ್ನಾರ್ಜನಂ ತ್ರಿಭುವನ (ಝು,ಗ)ನೆನೆವನಿತೆ(ಕ) (3)ಪ್ಪನಂತಸುಖಂ(ಕ,ಚ) (4)ಇಂತೀಯೆರಡೋಲಗದೊಳಾವೋಲಗಮುಱುಗುಮೆಂಬು (ಕ,ಝು,ಚ) (5) ವೊಳ್ಪು (ಝು) (6) ಮೆಂದಱಿಪೆಯುಂ ಮಾಣ್ದೆರ್ದುದೇಂಜೀವನೆ (ಕ,ಝು) (7) ಇಂತಿನಿತು (ಕ,ಚ) ನೀಂನಚ್ಚುವೊಪ್ಪಾದುವೆಲ್ಲಂ (ಕ,ಚ,ಝು) (8) ಆದನರ್ಥಿ (ಱಿತ್ತ) ಯೊಳ್ಕಿಯ್ಕೊಂಡು ನೆಗಳದೆಯುಂ ರಸರಸಾಯನ (ಕ,ಚ,ಝು) (9) ದೆಯುಮಿರ್ಪರ್ ತಾಮಱಿವ(ಯ)ರ್ ಮತ್ತಮೋರೊರ್ವರೆಂತಪ್ಪ(ಕ,ಚ,ಝು) (10) ಪ್ಪುವೆಲ್ಲಂ (ಕ,ಚ,ಝು) ನಿಮ್ಮಮಚ್ಚುವೊಪ್ಪಾದುವೆಲ್ಲಂ (ಚ) (11) ವೇಡದ (ಝು,ಚ) (12) ನಕ್ಕುಂ (13) ದಮೇ (ಕ,ಝು,ಚ) (14) ವ ಫಲಮಿಲ್ಲದೆ ಸುಖಮಿರಲ್ (ಚ) (15) ಕೂಡಿಬರ್ಕುಂ (ಕ,ಝು)

ಶಾ॥ ಇಂದ್ರತ್ವಂ ಬಲ[1] ದೇವತಾದಿ ಖಚರೇಂದ್ರೋತ್ಪತ್ತಿ ಷಟ್ಖಂಡಭೂ ।
ಫೇಂದ್ರತ್ವಂ ನಿರುಜತ್ವಮಂತೆ [2]ವಿಜಿಗೀಷುತ್ವಂ ತಪೋ[3]ಯೋಗ ಯೋ ॥
ಗೀಂದ್ರತ್ವಂ ಬಹುಶಾಸ್ತ್ರ[4]ಪಾರಗಗುಣಂ ತ್ರೈಲೋಕ್ಯಸಂಪೂಜ್ಯ ಜೈ ।
ನೇಂದ್ರಶ್ರೀಪದಮೆಂಬಿನಿತ್ತುಮೊಗೆಗುಂ ಸದ್ಧರ್ಮದಿಂ ಜೀವನೇ ॥ ೧೨ ॥

ವ॥ ಇಂತಪ್ಪ ಪದ[5]ವಿಯು ಮಾಲ್ಪ [6]ಧರ್ಮಮನೆಂತುಂ ಕೆಯ್ಕೊ[7]ಳ್ವುದು, ಅದೆಂತೆನೆ:— [8]ಪಯನಪ್ಪ ಪಸುವಂ ತಣಿಪಿ ನಯದಿಂ ಕಱಿದು ಪಾಲಂ ಕೊಳ್ವಂತೆ ಭವ್ಯನುಂ ಗುಣವಂತರಪ್ಪಾ ಚಾರ್ಯರಂ ವಿನಯದಿಂ ಪೊರ್ದಿ ಕೇಳ್ದು ಧರ್ಮಮಂ ಬ್ರತಮಂ ಕೆಯ್ಕೊಳ್ವುದು. ಅಂತು [9]ಕೊಂಡ ಪಾಲನೊಲೆಯ ಮೇ[10]ಲಿಟ್ಟು ಕಿಡಲೀಯದೆ ಕಾಸಿಯಾಱಿಸುವಂತೆ ಶ್ರಾವಕ[11]ಧರ್ಮಮಂ ಕೆಯ್ಕೊಂಡ ಬಱಿಕ್ಕೆ ದೀಕ್ಷೆಯೊಳ್ ಮೆಯ್ಯಂ ತಗುಳ್ಚಿ ವಿಷಯ ಕಷಾಯಂ[12]ಗಳಡಗುವಂತು ತಪಂಗೆಯ್ದು ಚಿತ್ತಮನಾಱಿಸುವುದು. [13]ಆಕಾಯ್ದಾಱಿದ ಪಾಲೊ[14]ಳೆ ತುಪ್ಪಮಾಗದೆಂದು [15]ಪೆಪ್ಪನೆಱಿದು ಬಯ್ತಿಟ್ಟು ಮಱುದೆಸಸಂ ಕಡೆವ ಮಡಕೆಯೊಳ್ ಸುರಿವಂತೆ ಸಂಯತನು ವಿಭವದೊಳ್ ಮುಕ್ತಿಯಾಗದೆಂದು ಮನಮಿಕ್ಕಿರದೆ ಶುಭಪರಿಣಾಮದೊಳ್ ಮುಡಿಪಿ ದೇವ ಲೋಕದೊಳ್ ಪುಟ್ಟ ಮಗುಳ್ದು ಬಂದೀ ಮನುಷ್ಯರೊಳುತ್ತಮನಾಗಿ ಪುಟ್ಟುಗುಂ. ಅಂತಾ ಮಡಕೆಯೊಳ್ ಸುರಿದ [16]ಮೊಸರೊಳ್ ಕಡೆಗೋಲನಿಕ್ಕಿ ಸುತ್ತಿರ್ದ ನೇಣಿನೆರಡುಂ ಕಡೆಯಂ ಪಿಡಿದು ಕಡೆಯೆ ಬೆಣ್ಣೆಯಪ್ಪಂತೆ ಮನುಷ್ಯೋತ್ತಮನಾಗಿ ಪುಟ್ಟಿ ವಾತಂ ಮಹಾವ್ರತಮಂ ಕೆಯ್ಕೊಂಡು ತಪಮುಂ ಚಾರಿತ್ರಮುಮೆಂಬೆರಡರೊಳಮುತ್ತರೋತ್ತರಂ ನೆಗಲ್ದು ಋದ್ಧಿಪ್ರಾಪ್ತ ನಪ್ಪುದಾ ಬೆಣ್ಣೆಯಂ ಪದದೊಳ್ ಕಾಸಿದಾಗಳ್ ನೊರೆಯುಂ ಗಸಟುಂ ಪತ್ತವಿಟ್ಟು [17]ಪೋಗೆ ತಿಳಿದು ಕಂಪುಮಿಂಪುಮುಳ್ಳ ತುಪ್ಪಮಪ್ಪಂತೆ ಋದ್ಧಿಪ್ರಾಪ್ತನಾದ ಮುನಿಯುಂ ತನ್ನ ಶುಕ್ಲಧ್ಯಾನ [18]ದೊಳ್ ಶುಭಾಶುಭಕರ್ಮಂಗಳುಂ ಪಱುಪಟ್ಟು ಪೋಗಿರೆ ಜ್ಞಾ[19]ನಾದಿಗುಣಂಗಳೊಳ್ ಕೂಡಿ ಪರಮಾತ್ಮನಕ್ಕುಮಿಂತು—

ಕಂ॥ ಪಡೆ[20]ವರ್ ಸುಖಮಂ ಧರ್ಮಮು ।
ನೊಡರಿಸೆ ಪಾಪದೊಳೆ ದುಃಖಮೆಂಬುದ[21]ನಿದನಿಂ ॥
ತೆಡೆವಿಡದೆ ಲೋಕಮಱಿವುದು ।
ಬಿಡದದನಾ(ಮಾ)ಮಱಿಪೆ ಕೇಳಿರೆಮ್ಮೊಳ್ ಛಲಮೇ ॥ ೧೩ ॥

---

(1) ದೇವತಾದಿ (ಕ,ಜ) (2) ಗಿಜನಿಷುತ್ವಂ (ಖ,ಳ) (3) ಯೋಗಿಯೂ। ಫೇಂದ್ರತ್ವಂ (ಕ,ಝ,ಜ) ಯೋಗಯುತೇಂದ್ರತ್ವ (ಚ,ಖ) (4) ಸಾಗರಗುಣಂ (ಝ,ಳ) (5) ವಿಗಳಂ (ಕ,ಝ,ಚ) (6) ಸದ್ಧರ್ಮ (ಕ,ಚ) (7) ಳ್ವುದೆಂಮೊಡೆ (ಕ.ಝ) (8) ಪಯನಪ್ಪಾವಂ (ಝ) (9) ಕೊಂಡಾ (ಕ,ಚ) (10) ಲಿಟ್ಟರೆಕಾಸಿ (ಕ,ಝ,ಚ) (11) ವ್ರತಮಂ (ಕ,ಚ,ಳ) (12) ಗಳುಡುಗು (ಝ, ಳ) (13) ಆಂತಾಕಾ (ಕ, ಚ) (14) ಳೀಗಳ್ (ಳ) ಳಂತೆ (ಕ,ಚ) (15) ಮನಮಿಕ್ಕಿ ಹೆಪ್ಪನಿಟ್ಟು ನಿಲವಿನೊಳ್ ಬಯ್ತಿಟ್ಟು (ಕ, ಝ, ಚ, ಳ) (16) ಪೂಲೊಳ್ (ಳ) ಮಡಕೆಯೊಳ್ ಕಡೆಗೋಲ (ಕ,ಚ) (17) ಪೋಗೆ ನಿರ್ಮಲಮಪ್ಪ ತುಪ್ಪಮಪ್ಪಂತೆ ಜ್ಞಾನಾದಿ (ಕ,ಚ) (18) ದೊಳ್ ಕೂಡಿದಾಗಳ್ (ಝ) ಪತ್ತುವಿಟ್ಟುಪೋಗೆ (ಝ) (19) ನಾದ್ಯನಂತಗುಣ (ಳ) (20) ಪಂ (ಕ,ಝ) ವಸುಖಂ ಧರ್ಮದಿ ನೀ (ಝ) (21) ನಿರದಿಂ (ಕ,ಝ,ಚ)

ವ|| ಪಿತ್ತವ್ಯಾಧಿಯುಳ್ಳಾತಂ ಪಾಲೊಳ್ ಸವಿಯುಳ್ಳುದನಱಿಂದು ಮರ್ದಿಂದು ಕುಡಿಸುವಾಗಳ್ [1]ರುಚಿಗೆಟ್ಟೊಲ್ಲದೆ ಮಾಣ್ಬಂ. ನೀಮುಂ ಧರ್ಮದೊಳ್ ಸುಖಮಪ್ಪುದನಱಿದು ಮಱವರ್ ಕಲ್ಪಿಸುವಾಗಳ್ ಮನಂಗೆಟ್ಟೊಲ್ಲದೆ ಮಾಣ್ಬಿರಿ. ಆ ಪಿತ್ತವ್ಯಾಧಿಯುಳ್ಳಾತಂಗೆ [2]ಬೆಜ್ಜರೊಳ್ ಛಲಮೋ ? ನಿಮಗಮಱಿವುಳ್ಳರೊಳ್ ಛಲಮೋ ? ಬೇಡ ! ನೀಮೆಂತುಂ ಧರ್ಮದೊಳ್ ನೆಗಟ್ಪುದು—

ಚಂ|| ನೆರೆಪುವು[3]ದೊಪ್ಪೆ ಪುಣ್ಯನುನದುಳ್ಕೊಡೆ ಬರ್ಪುಪಸರ್ಗ[4]ಮೆಲ್ಲಮುಂ |
ಬರಲಣಮಿಾಗುಮೇ ಬಿಡದೆ [5]ಪೋಗು ಮನಂಗೊಳೆ ಕಾಗು ಚಿಲ್ವಿನಿಂ ||
ದಿರಿಸುಗುಮೊಳ್ಳಿತಂ ಬರಿಸುಗುಂ [6]ರವಿ ಬೆಟ್ಟದನಾರ್ಗಮೇಕೆ ! ತಾ |
ವರೆಯನಲರ್ಚುಗುಂ ಸುಕೃತಮುಳ್ಳರನಾರ್ ಕೆಡಿಸಲ್ ಸಮರ್ಥರೋ ||೧೪||

ವ|| ಈ ಜಗದೊಳುಳ್ಳ ಸಚರಾಚರ ಜೀವಂಗಳೆಲ್ಲಮಂ ನೋಯಿಸುವಾದಿತ್ಯನ ಕಿರಣಂ[7]ಗಳ ಬೆಂಕೆ ತಾವರೆಯಂ ನೋಯಿಸಲಾರ್ತುದಿಲ್ಲ. ಅಂತುಟಪಱ ಪುಣ್ಯಸಾಮ[8]ರ್ಥ್ಯಮಿಪ್ಪು (ಪಪ್ಪು) ದಱಿಂ. ಸುಕೃತಮುಳ್ಳರನಾರುಂ ಕೆಡಿಸಲ್ಬಾರದೆಂಬುದನಱಿದು ಧರ್ಮದೊಳ್ ನೆಗಟ್ಪುದು—

ಕಂ|| ಭ್ರಾಂತೇಂ ಸುಖಿಗಂ ದುಃಖಿಗ |
ಮೆಂತುಂ ಧರ್ಮದೊಳೆ ನೆಗಟಲೆವೇಱ್ಪುದು ಸುಖಮು ||
ತ್ಯಂತಂ [9]ಪೆರ್ಚಲ್ ಕಡುಮದುಃ |
ಖಂ[10]ತನಗಂ ಪೊರ್ದ[11]ದಿರಲೆ ವೇಱ್ಪುದಱಿಂದಂ ||೧೫||

ವ|| ಒಡೆಯಂ ದ್ರವ್ಯಮುಂ ಕಾಯಲೆವೇಱ್ಪುದು. ಬಡವಂ ತನ್ನೆಡಱಿಂ [12]ನೀಗಲೆವೇಱ್ಪುದು. ಅದಱಿಂ [13]ನೀವಿರ್ವರುಂ ಬುದ್ಧಿಯೊಡೆಯರಾಗಲೆವೇಱ್ಪುದು. ಅಂತೆ ಸುಖಿ[14]ಯು ಮನನ್ನ ಸುಖಮನೆ ಪೆರ್ಚಿಸಲ್ವೇಱ್ಪುದು. ದುಃಖಿಯುಂ ಮೇಗೆ ದುಃಖಮು[15]ನಾಗಲೀಯದಿರವೇಱ್ಪುದು. [16]ಅಂತಿರ್ವರುಂ ಧರ್ಮಮಂ ನೆ[17]ಗಲವೇಱ್ಪುದು. ಏಕೆ ತಡೆದಿಪಿ(ಪ)ರ್—

---

(1) ರುಜಿಗೆ (ಛ,ಝು) (2) ಬೆಜ್ಜಿನೊಳ್ (ಝು,ಚ) (3) ದೊಪ್ಪಿ (ಕ,ಚ) (4) ಮೇನುಮಂ (ಕ,ಚ,ಛ) ಮೊಂದುಮಂ (ಝು) (5) ಸೋಗು (ಸೋಗುಂ ಎಂದಿರಬಹುದು) (ಛ,ಝು) (6) ಕರ (ಝು) (7) ಗಳಿಂಬ ಬೆಂಕೆನೀರತಾವ (ಕ,ಝು) (8) ರ್ಥ್ಯದಿಂ (ಕ,ಛ) ರ್ಥ್ಯಮೆಂತಂತೆ (ಝು) (9) ಪೆರ್ಚಮೊಡಂ (ಕ) ಪೆರ್ಚಿನಲ ಮದು (ಚ) ಪೆರ್ಚಲುಕಡು (ಝು) (10) ತನ್ನಂ (ಕ) (11) ದಮವೆ (ಕ) ದಿಸವೆ (ಛ) ದಿರಲು (ಝು) (12) ನೀಗಲೆವೇ (ಕ,ಚ) (13) ದಿರ್ವರುಂ(ಕ,ಚ) (14) ಯುಂ ಮತ್ತೆಂ ಸುಖಮನೆ (ಕ) (15) ನಾಗದಿರ(ಕ) ನಾಗಲರಿಯ(ಚ) (16) ಅಂತೆರಡು ತಂಡಮುಂ (ಕ,ಝು,ಚ) (17) ಗೆಯ್ಯಲ್ವೇಱ್ಪುವೇಕೆ ತಡೆ(ಯ)ದಿರ್ಪಿರ್ಕೈ(ಕ)

ಚಂ॥ ಎನಿತೆನಿತಗ್ಗಳಂ ನೆಗ[1]ಲ್ಗುಮುತ್ತಮಧರ್ಮದೊಳಾತ್ಮಶುದ್ಧಿಯಿರೆ ।
ದನಿತನಿತೀ ಜಗತ್ತ್ರಯದೊಳಗ್ಗಳಮಕ್ಕು[2]ಮನೂನ ಭಾವದಿಂ ॥
ದೆಮತಿರೆ[3]ನಂಬದಿರ್ಪರವು ಕಾಣದ ಶಂಕೆಯಿನಾದುದಪ್ಪೊಡೀ ।
[5]ವಿನುತಗುಣಾಢ್ಯರಂ ವಿನಯ[6]ದಿಲ್ಲಿಯೆ ಪೂಜಿಸಿ [7]ಕಂಡು ನಂಬರೇ ॥ ೧೬ ॥

ವ॥ ಧರ್ಮದೊಳ್ ಫಲಮುಳ್ಳುದಂ ಕಾಣಲಾಗದೆಂಬಾಶಂಕೆಯು[8]ಳ್ಕೊ(ಡಪ್ಪೊ)ಡೆಂತುಂ ಮಲಿಯ ಬರವಂ [9]ತೆಂಗಾಳಿ ಬೀಸಲಱಿವಂತೆ ಧರ್ಮದ ಫಲಮನಿಲ್ಲಿಯೆ ಧರ್ಮಾರ್ಥಿಗಳಂ ಲೋಕಂ ಪೂಜಿಸುವುದ[10]ಱಿನನುಮಾನದೊಳಂ ಪ್ರತ್ಯಕ್ಷಫಲಮುಂಟೆಂಬುದಂ[11] ನಿಶ್ಚೈಸುವುದು—

ಕಂ॥ ಒಡಮೆ ಪುರಾಕೃತಪುಣ್ಯದಿ ।
ನೆಡಱುಂ ದುಷ್ಕೃತದಿನಕ್ಕು [12]ಮದಱಿಂದೆಡಱಿಂ ॥
ಕಿಡಿಸುವ [13]ಪುಣ್ಯದ ಪೆರ್ಚಂ ।
ಪಡೆವ[14]ರ್ಗುಪದೇಶಮಲ್ತೆ ಸೈ[15]ಪುಂ ಕೇಡುಂ ॥ ೧೭ ॥

ವ॥ ಆರಂಬದ ಫಲಮುಂಟೆಂಬುದಂ ಪಡೆದ ಧಾನ್ಯರಾಶಿ ಪೇೞ್ವಂತೆ ಧರ್ಮದ ಫಲಮನೆ[16]ಯ್ದಿದೀ ಸುಪತ್ತೆ ಪೇೞ್ದಪ್ಪು[17]ದದಱಿಂಗೊಳ್ ನೀಂ ಬಗೆದು ನೋಡಿ ನೆಗೞ್ವುದೆಂಬೀ ಯೋಜೆಯ ನೀನೆಗೞ್ತ್ತಿಯುಂ [18]ಪೆಱಱುಱಿಯ(ನು)ಕ್ಕು ಮೆಂದು[19]ಭ್ರಾಂತಿಸದಿರು—

ಚಂ॥ ಪರಮತದತ್ತ ಪೊಕ್ಕಱಿವನೊಕ್ಕು [20]ವಿಶುದ್ಧತಪೋಗ್ನಿಯಿಂದೆ ಬೆಂ ।
ದರೆಗರಿ[21]ದಿರ್ದಲಾಗಿ ಕಡುವೆಂದೊಡೆ ಬೂದಿಯುಮಾಗಿ ಮಾದು(ಣ್ದು)ದೇ ॥
ವಿರಿದೊ ಜಿನೋಪದೇಶಸುಚರಿತ್ರಮಹಾಗ್ನಿಯೊಳೊಂದಿದೊಂದು(ದಿ) ಭಾ ।
ಸುರತರಮಾಗಿ ಕೆರ್ಚಿಱಿದ ಮಾಣಕದಂತಿರೆ ಶುದ್ಧಮಾಗಿರೇ ॥ ೧೮ ॥

ವ ॥ ಮಾಣಿಕಚಟ್ಟಂ ಮಾಣಿಕಮನಗ್ನಿಕಾರ್ಯದಿಂ ಶುದ್ಧಂ[22]ಮಾಡುಗುಂ [23]ಪೆಱವು ಮಾಡುಗುಮೆ ? ಜಿನೇಂದ್ರ ಧರ್ಮಮೆ ಕರ್ಮಬಂಧನಮಪ್ಪ ಜೀವನಂ ಶುದ್ಧಮಂ ಮಾಡುಗುಂ. ಪೆಱವು ಧರ್ಮಂಗಳ್ ಮಾ[24]ಡಲಕ್ಕುಮೆ ?

---

(1) ಗಜಲುತ್ತಮ (ಕ,ಚ) (2) ಮುದಾತ್ಮಚಿಂತೆಯಿಂ (ಚ) (3) ಕೇಳದಿ (ಝ, ಛ) (4) ವಪ್ಪೊಡಂ (ಕ,ಝ) (5) ನಿನತು (ಜ,ಛ) (6) ದಿಂದಮೆ (ಝ,ಛ) (7) ನೀಮೆಕಾಣರೇ (ಕ,ಝ) (8) ಯುಂಟಕ್ಕುಮ ಪ್ಪೊಡೆಂತುಂ ತಿಂಗಳಮಱಿ (ಕ) ಡಂತೀಗಳ್‌ಮಱಿ (ಜ,ಜ) (9) ತಣ್ಣಾಳಿ ಬೀಸಿದಾಗಳಱಿ (ಕ,ಖ,ಗ) ಳನೀ (ಛ,ಜ) (10) ದಱಿನಿಲ್ಲಿಯೆ ಕಾಣಲ್ಬಂದುದಿಂತನುಮಾನದೊಳಂ ಪ್ರತ್ಯಕ್ಷದೊಳಂ (ಕ,ಖ,ಝ) (11) ನಿಶ್ಚೈಸಿ ನಂಬುವು(ಬೂ)ದು (ಕ,ಚ) (12) ಮೆಂದಿಂತೊಡಱಿಂ (ಝ) (13) ಯಲ್ಕುಪ (ಜ,ಛ) (14) ಗಡ ರಕ್ಷಿಸುವ ಧರ್ಮದ (ಛ) (15) ಸೈರಿಸು ಕೇಡಂ (ಝ) (16) ನೀಗಳಿನ (17) ದೆಂದು ಪೇೞ್ವನಿತಱಿಂಗೊಳೆಂತು (ಗ,ಛ) (18) ಪೆರನುಳಿಯಕ್ಕು (ಕ,ಚ) (19) ನೀಮೆತ್ತಾನುಂ (ಕ, ಚ) (20) ವಿರುದ್ಧ (ತ) (21) ದಿರ್ದುಪೋಗಿ (ಕ) 2) ಮಾಡುವಂತೆ (ಚ) (23) ಪೆಱರ್ ಮಾಡಲಱಿವರೆ ? (ಚ) (24) ಲಾರ್ಕುಮೆ (ಚ)

ಕಂ॥ ಪುಟ್ಟುಂ [1]ಸ್ಥಿತಿಯುಂ ಕೇಡುಂ |
ನೆಟ್ಟನೆ [2]ವೊಡನೊಂದೆ ವಸ್ತು ನೆಗಲ್ವ ಪುದೆಂ ॥
[3]ದಟ್ಟುಂಬರಿಗೊಳೆ [4]ನಂಬಿಯೆ |
ಕೆಟ್ಟು[5]ದದಿ(ಱಿ)ಂ ಸಾಲ್ಗುಮುಱಿಯಿಮನ್ಯರ ಮತಮಂ ॥ ೧೯ ॥

ವ॥ ಒಂದೆ ವಸ್ತುವಿನೊಳೊಂದು ಪರ್ಯಾಯಮುತ್ಪತ್ತಿಯಾದಾಗಳೊಂದು ಪರ್ಯಾಯಂ ನಾಶಮಕ್ಕುಂ. ಆಪುಟ್ಟಿದ ಪರ್ಯಾ[6]ಯಂ ನಿಲ್ವ ಕಾಲಂ ಸ್ಥಿತಿಯಕ್ಕುಂ. ಇತೊಂದಱೊಳುತ್ಪತ್ತಿ ಸ್ಥಿತಿ ಪ್ರಳಯಂಗಳ್ ನೆಗಲ್ಗುಮೆಂದಿಂತು [7]ವಿಚಾರಾಸಹಮಪ್ಪ ಧರ್ಮಮುಂ ಕೇಳ್ದಿ ಕೆಟ್ಟ ಕೇಡಿನ್ನುಂ ಸಾಲದೆ ?—

ಉ॥ ಅನ್ಯಮತಂಗಳೇವುವವು ಪೊಲ್ಲವು ಸಲ್ಲವು ನಿಲ್ಲವೆಂದು ನೀಂ |
ಮಾನ್ಯಲಸಜ್ಜನೇಂದ್ರ ಮತದೊಳ್ ಸುತದೊಳ್ ಹಿತದೊಳ್ ತಗುಳ್ದು ಸಾ ॥
ಮಾನ್ಯ ದಯಾ[8]ಪಯಪ್ರಸರದೊಳ್ ಜನಧರ್ಮ[9]ದೊಳಲ್ತ್ತಿವಟ್ಟು ದು |
ರ್ಮಾನ್ಯ[10]ಗತಿಪ್ರಕಾರಿಯನಘಾರಿಯನೋಡಿಸು ಭವ್ಯಜೀವನೇ ॥ ೨೦ ॥

ವ॥ ಆನೆ[11]ಗಂಡಡಿಯನಱಿಸುವಂತೆ [12]ದಯಾಮೂಲಮಪ್ಪ ಜಿನೇಂದ್ರಧರ್ಮಮಂ ಕಂಡು [13]ಪೆಱಿದಂ ನೀನಱಿಸದಿರು. [14]ಮತ್ತಮೆಂತಾನುಮಿಾಗಡಿನ ಸುಖಮಿರ್ಪುದಂ ಧರ್ಮಂ [15]ಬರಿಸುವುದೆಂದು ನಂಬುವುದು [16]ಬೆರ್ಚಲ್‌ವೇಡಾ !—

ಕಂ॥ ಅನುಭವಿಪ ಸುಖದಿನಾಗದು |
ಘನದುರಿತಂ ಧರ್ಮಮುಱಿದೊಡಕ್ಕುಂ ಪೆಱಿತೇ ॥
ನಿನಿದು(ತು)ಣ[17]ಲಲ್ಕಮೆಯಕ್ಕುಮೆ |
[18]ತನುವಿಂಗೆ ವಿರುದ್ಧಮುಂಡೊಡಲ್ಕುಮೆ ಯಕ್ಕುಂ ॥ ೨೧ ॥

ವ॥ ಇನಿ[19]ದು(ತು)ಂಡೊಡಲ್ಕುಮೆಯಕ್ಕುಮೆ ?. ವಿರುದ್ಧಾಹಾರಮನಧಿಕ [20]ಮುಂಡೊಡಲ್ಕುಮೆಯಕ್ಕುಂ(ಮೆಂಬುದುಂಟೆ ?) ಪೆಱಿವು ಜೀವಂಗಳಂನೋಯಿಸದೆ ಸುಖಮನನುಭವಿಸೆ ಪಾಪಮಕ್ಕುಮೆಂಬುದುಂಟೆ ? ಧರ್ಮಮಸಲುಂದೊಡಕ್ಕುಂ. ಎಂದಲ್ಲದೆ ಧರ್ಮಧರನಪ್ಪುದು. ಧರ್ಮದಿನಲ್ಲದೆ ಪುಣ್ಯಮಾಗದು. ಪುಣ್ಯ[21]ಮಿಲ್ಲದಂಗೆನಿತುದ್ಯೋಗಂಗಯ್ದೊಡಂ ಏವುದೊ ?—

---

(1) ಸಾವುಂ (ಳ) (2) ವೊಂದೊಂದೆ ವಸ್ತುಗಳ್ (ಚ,ಝು) ನೆಟ್ಟನಿರ್ದೊಡಲೊಳಗೆ ವಸ್ತುಗಳು ನೆಗಟ್ಟಿ ಪುವೆಂ ದಟ್ಟುಂಬಿ (ಜ) (3) ದುಟ್ಟುಂಬರಿ (ಕ) (4) ನಂಬದೆ (ಕ,ಚ) (5) ದಂದೆ (ಚ,ಳ) ದೊಂದೆ (ಜ) ದಱಿಂ (ಝು) (6) ಯದ ನಿರೆಕಾಯಸ್ಥಿತಿಯಕ್ಕುಮಿನ್ನೊಂದಱೊಳುತ್ಪತ್ತಿ (ಝು) ಮಾಯೆರಡು ಪರ್ಯಾಯಂಗಳಾಧಾರಮಪ್ಪ ವಸ್ತುವಿನಿರವುಮಾ ಪುಟ್ಟಿನಿಲ್ವಕಾಲಂ (ಚ) (7) ವಿಚಾರಪರರಪ್ಪರ್ (ಕ) (8) ದಮ (ಕ,ಚ) (9) ದೊಳರ್ಥಿವಟ್ಟು (ಕ,ಚ) ನಿಜಧರ್ಮದೊಳಾರ್ಮದೊಳಲ್ತ್ತಿ (ಝು) (10) ಮತಿವ್ರತಕಾರಿಯ (ಕ,ಚ) ಮತಿ ಪ್ರಕಾರಿ (ಚ) ಕಾರ್ಯನನಘಾರ್ಯನ (ಝು) (11) ಡಂಗಡಿಯನಱಿ (ಝು) (12) ಸತ್ಯಾಧಿಷ್ಠಿತಮುಂದಯಾ (ಕ,ಜ) ದೃಢತ್ವದಯಾ (ಝು) (13) ಪೆರಗಂ (ಕ, ಚ) ಪೆಱಿತಂ (ಝು) (14) ಮತ್ತಂಮತ್ತೇನು ಮಾಗ (ಚ) ಮತ್ತೆ ಮೆತ್ತಾನುಂ (ಕ,ಚ) (15) ಬಾರಿಸುಗುಮೆಂಬುದಂ (ಕ,ಚ) (16) ಬೆರ್ಚುವೈಗಡಾ (ಕ,ಚ) ಬೆರ್ಚಲ್ ಬೇಡ ಗಡಾ (ಝು) ಬೆರ್ಚದಿರು (ಜ). (17) ಲಕ್ಕುಮೆಯಕ್ಕುಮೆ (ಕ,ಚ) ಪೆಱಿನಿನ್ನು ನಕ್ಕಮಮಾಟ್ಟುಮೆ (ಜ) ಣಲಡಕ ಮೆಯಕ್ಕುಮೆ (ಝು) (18) ತೆನು (ನ) ಗೆ ವಿರುದ್ಧಾನ್ನಮುಂ (ಚ) (19) ದನುಂಡೊ....ಯಕ್ಕು (ಝು) (20) ಮಾಗುಂಡೊಡ (ಝು) (21) ಮಿಲ್ಲದತೆಂತುದ್ಯೋಗಂ....ಫಲಮಿಲ್ಲ (ಕ,ಚ) ಮಿಲ್ಲದನೆನಿತು (ಝು)

ಮ॥ ಕುಡಿಯಲ್ ನೀರ್ಗಗುಲುತ್ತುಮೊರ್ವನಡಿಯೊಳ್ [1]ಪರ್ವಿರ್ದ ಕಲ್ಗಂಡೊಡಂ(ಡದಂ) ।
ಬಿಡದೆಲ್ಲಿಂದದೊಳಂ ತಗುಳ್ದೊಡೆದು ಪಾತಾಳಂಬರಂ ತೋಡಿದಂ ॥
ಗಡಿಯೊಳ್ ಪುಟ್ಟದುದುಪ್ಪುನೀರ್ ಕಿಱಿದದುಂ ಪೂತಿಕ್ರಿಮಿಚ್ಛನ್ನ[2]ಮಾ ।
ಗಡೆ ಬತ್ತಿತ್ತದು ಪುಣ್ಯಮಿಲ್ಲದ ನರಂಗುದ್ಯೋಗದಿಂ[3]ದಕ್ಕುಮೇ ॥ ೨೨ ॥

ವ॥ ಆಯುವಿಲ್ಲದವಂಗೆ ಬೆಜ್ಜುಗೆಯ್ದೊಡಂ, ಪುಣ್ಯಮಿಲ್ಲ[4]ದವನುದ್ಯೋಗಂಗೆಯ್ದೊಡಂ ಆತನ ಬೆಜ್ಜನೊಳಮಾತನುದ್ಯೋಗದೊಳಂ ಫಲಮಿಲ್ಲಂ—

ಕಂ॥ ಎನ್ನೀ ಬೆಸನದ ಮೋಹಂ ।
ಸಾನಂದದೆ ಧರ್ಮಮೆಂಬುದೊಂದಾರವೆಯಂ ॥
ನೀನಿಟ್ಟು ಕಾದು ಸುಖಸಂ ।
ತಾನಫಲಂಗಳನೆ [5]ಪಡೆದು ಸೇವಿಸಲಾಗಾ ॥ ೨೩ ॥

ವ॥ ಒಂದು ಪಣ್ಣ ಸವಿಯಂ ಕಂಡಾತಂ ಪಿರಿದಪ್ಪಾರವೆಯನಿಟ್ಟು ಕಾದು [6]ಪಣ್ಗಳಂ ಸೇವಿಸುವಂತೆ ಕಿಱಿದಪ್ಪ ಬೆಸಕ್ಕಾಸೆಗಡುವರ್ ಪಿರಿದಪ್ಪ ಧರ್ಮದೊಳ್ ನೆಗೞ್ದು ಮೇಗ[7]ತ್ಯಂತ ಸುಖಮನನುಭವಿಸು[8]ವುದೀ ಕಜ್ಜಮನೆ ಬಗೆದು ಮನುಜಂ ಮೆಯ್ಯಂ ದ್ರವ್ಯಮುಮಂ ಧರ್ಮದೊಳ್ ತವಿಸುವುದು—

ಮ॥ ಮಿಡಿಯಂ ಮಾಡಿ ಬಱಿಕ್ಕೆ ಪೂವಿನ ಕಬಲ್ವೊಂದಂದಮುಂ [9]ಕಾಯಲಿ ।
ಟ್ಟಿಡೆಯೊಳ್ ಪಾಲಿರೆ(ಡೆ)ನೀರ ತಪ್ಪ ತವಿಲುಂ ಸಂಶುದ್ಧ ಸುಕ್ಷೇತ್ರಮ ॥
ಪ್ಪೆಡೆಯೊಳ್ ಬಿತ್ತಿದ ಬೀಜದೊಂದು ತವಿಲುಂ ಪುಣ್ಯಾಸ್ರವಂ ಮಾಡಿ ತ ।
ಪ್ಪೊಡಲುಂ ತಕ್ಕೆಡೆ[10]ಗೀಯೆ ತಪ್ಪ ಧನಮುಂ ಪೇೞ್ ತಪ್ಪುವೇ ಜೀವನೇ ॥ ೨೪ ॥

ವ॥ ಪ್ರಿಯದೊಳ್ ಮಾಱುವ [11]ಭಂಡವ ತವಿಲಿಂಗೆ ಪರವನಾಱಿದೊಡಂ ಧರ್ಮದೊಳ್ ಕುಡುವ ಸ್ವಲ್ಪದ್ರವ್ಯವ ತವಿಲ್ಗೆ ಆವುದ್ಗನಾಱಿದೊಡಂ ಪಿರಿದಪ್ಪ ಸುಖಮನೀವ ಧರ್ಮಕ್ಕೆ ತವುಂ [12]ಮೆಯ್ಗಂ ಅಱುವುಳ್ಳತನಾಱಿದೊಡಮಾತಂಗೆ ಲಾಭಮಾಗದೀತಂಗೆ ಪುಣ್ಯಮಾಗದು— ಆದಱಿಂ[13] ಧರ್ಮಕ್ಕೆ [14]ತಪ್ಪುದರ್ಕೆ ಅಬ್ಬಿರು(ರಿಂ)—

---

(1) ಬಿಬ್ಬಿರ್ದ (ಜ) (2) ಮಾದೆಮದು ಬೀತಿತ್ತುದು (ಚ) (3) ಬರ್ಕುಮೇ (ಕ,ಚ) (4) ದಂಗುಜ್ಜುಗಂಗೆ ಯ್ದೊಡಂ (ಕ,ಚ) (5) ಕೊಯ್ದು (ಕ,ಚ) (6) ಪಣ್ವಲಂಗಳಂ (ಕ,ಚ) (7) ತ್ಯಂತಮಪ್ಪನಂತಸುಖ (ಕ,ಚ) (8) ಪೆ(ವ) ನೆಂಬೀ (ಕ) ಪೆನೆಂಬೀ (ಜ) (9) ಕಾಸಲಿರ್ದೆಡೆ (ಕ,ಚ) (10) ಗಿತ್ತು (ಕ,ಚ) (11) ಭಂಡಮಂ ಕೊಳ್ವ ಸ್ವಲ್ಪ ದ್ರವ್ಯದತವಿ (ಕ,ಚ) (12) ಕುಡುವ ಸ್ವಲ್ಪದ್ರವ್ಯಕಂ ತಪಕ್ಕೆ ತವುವಮೆಯ್ಯುಂ (ಝ) ಮೆಯ್ಯುಂ ಧನಕ್ಕುಂ (ಕ,ಚ) (13) ಅಱುವುಳ್ಳಂ ಧರ್ಮ (ಕ,ಚ) (14) ತವುವುದರ್ಕಬ್ಬಿರಿಂ(ಕ,ಚ)

ಕಂ॥ ಈಗಡಿನ ಸುಖಂ ಧರ್ಮದಿ |
ನೋಗಡಿಸುಗುಮೆಂದು ಬೆರ್ಚಿ ಮೊಗಮಂ ತಿರಿಪ ||
ಲ್ಯಾಗದು ಧರ್ಮಮೆ ಸುಖದೊಂ |
ದಾಗರಮಾಗಿರ್ದುದದ[1] ಱಿನಂಜಲ್ ಜೀವಾ ॥ ೨೫ ॥

ಗ॥ ಖಂಡಶರ್ಕರೆ ಮರ್ದಾದಂತೆ ಧರ್ಮಮಿಾಗಳುಮೊಳ್ಕಿತ್ತು [2]ಮೇಗೆಯುಮೊಳ್ಕಿತ್ತು ನಿಷ್ಕಾರಣಂ ಕುಸಿಯ[3]ದಿರು—

ಶಾ॥ ದಾನಂಗೆಯ್ಯೆ ಸುಪಾತ್ರದಲ್ಲಿಗೆ ಧನಂ ಪೋ[4]ದುದೇಂ ಪೋದುದೇ |
ಜ್ಞಾನಂ ತಳ್ತೆರೆ ಯೌಪನಂ [5]ತಪದೊಳಂ ಪೋದಂದದೇಂ ಪೋದುದೇ ||
ಧ್ಯಾನಂ ನಿಶ್ಚಳನಾಗೆ ಜೀವನೊಡಲಂ ಪೋದಂದದೇಂ ಪೋದುದೇ |
ನೀನಿಂತಪ್ಪವನಿಂತಗಲ್ಚುವೆಡೆಯೊಳ್ ಮಾಣ್ದಿರ್ಪುದೇ ಜೀವನೇ ॥ ೨೬ ॥

ವ॥ ನಿಧಾನಂ[6]ಕೊಳ್ವೊಡೆಯೊಳ್ ಬಲಿಗೆಯ್ವ ಬೀಯಕ್ಕುಱಿದೊಡಂ ದಯಾಮೂಲಮಪ್ಪ ಧರ್ಮಂ ದೊರೆಕೊಳ್ವೆಡೆಯೊಳ್ ಮೆಯ್ಯ ಕಸವರದ ತವಿಲಿಂಗಮಾಱಿದೊಡಂ ಆತಂಗೆ ನಿಧಾನಮು ಮಿಾತಂಗೆ ಪುಣ ಸಾರ್ಗುಂ ?—

ಕಂ॥ ವರಧರ್ಮಮೆಂಬ ಕೆಱಿಯೊಳ್ |
ನಿರುಪಮ ಗುಣರತ್ನಮೆಂಬ ನೀರುಳ್ಳುದ[8]ನೋ ||
ತಿರಪೊಡೆದು ಪಾಱಿಗೆಟ್ಟೊಡೆ |
ಮರುಳೇ ಸುಖಮೆಂಬ ಬೆಳಸ[9]ನಱಿಸಲ್ ಬಗೆವಾ ॥ ೨೭ ॥

ವ॥ ಗಱಿದ್ದಿಯ ಪಾಱಿಯನಱಿದು ಬೆಳೆವೆನೆಂಬನುಂ, [10]ಧರ್ಮದ ಪಾಱಿಯನಱಿದು ಸುಖಮಂ ಪಡೆವೆನೆಂಬನುಂ ಬೇಳಪ್ಪರ್. ಬುದ್ಧಿಯೊಡೆಯನಾಗನದಱಿನೆಡೆಯುಡುಗದೆ [11]ಧರ್ಮ ಧರನಪ್ಪುದು—

---

(1) ಱಿ ನೀಂ ತಿಳಿಜೀವಾ (ಕ,ಚ) ಱಿನಂಜವೆ ಜೀವಾ (ಝ) (2) ಮೇಗಣ್ಗಂ (ಕ,ಚ) (3) ದಿರಿಂ (ಕ,ಚ) (4) ದಂದು ಪೋಯ್ತೇಶ್ರುತಂ (ಕ,ಚ) (5) ತಪದಿ (ದಿ) ನೊಳ್ ವೋದಂದು ವೋಯ್ತೇಶುಭ (ಕ,ಚ) (6) ಗೆಯ್ವೆಡೆ (ಚ) (7) ಮೇಕೆ (ಕ,ಚ) (8) ರೊ। ಳ್ಪರಿದೊಡೆದು (ಕ,ಚ) ಳ್ಪರಿಯದೆ ಪಾಳ್ಗೆಟ್ಟೊಡೆನೀಂ (ಚ) ಱೊಳ್ ಸೈ।ತಿತದೊ (ಳ) (9) ನಱಿಸಿನೊಡುಂಟೇ (ಚ) (10) ಧರ್ಮಧರಪ್ಪುದು (ಚ) (ಗ್ರಂಥಪಾತಂ ಗ್ರಂಥನಿಂರಂತರ) (11) ಧರ್ಮಜರಪ್ಪುದು (ಚ)

ಮ॥ ವರಧರ್ಮಾನ್ವಿತನಕ್ಕುಮೊರ್ಮೆ ಬಲು[1]ಕ(ಯ)ಂ ಮತ್ತೊರ್ಮೆ ಪಾಪಕ್ರಿಯಾ ।
ಪರನಾಗಿರ್ಕುಮದೆಂತುಟೆಂಬ ! ಮದಹಸ್ತಿಸ್ನಾನಮೆಂತು[2]ತೆ ದಲ್ ॥
ಕುರುಡಂ ನೇಣ್ಪೊಸೆ[3]ದಂತೆ ದಲ್ ಕಿಡುಗುಮುಂದೊಂದೊಳ್ಪ ಧರ್ಮಂ ನಿರಂ ।
ತರಮಂ[4]ತೆಯ್ದೊಡೊಳ್ಪನೀಗುಮೆ ಮದೋನ್ಮತ್ತಂಗೆ ಗೇಹಾ[5]ಶ್ರಮಂ ॥ ೨೮ ॥

ವ॥ ಪರ[6]ದಂ ಕೊಟ್ಟುಕೊಂಡ ಭಂಡಮುಂ ಮೊದಲ್ಗೆ ಸಮನಪ್ಪೊ[7]ಡಾವುದು ಲಾಭಂ ?. ಗೃಹಸ್ಥಂ [7]ನೆಗಲ್ದ ಧರ್ಮಮುಂ ಪಾಪಮುಂ ಸಮನ[8]ಪ್ಪುದಱಿನಾವುದಗ್ಗಳಿಕೆ ? ಪಾಪಮ[9]ನೆ ವುಗಲೀಯದೆ ಧರ್ಮಮನೆ ಪೆರ್ಚಿಸುವುವೆ ಬುದ್ಧಿ—

ಕಂ॥ ಬಗೆಯೊಳಗೆ [10]ಪುಟ್ಟ ಧರ್ಮದ ।
ನೆಗ[11]ಲ್ತ್ತಿವಿಡಿದಂತನೆಯ್ದೆ ಬಗೆವಂತಾದಂ ॥
ದಗಲದೆ [12]ಶುದ್ಧ(ಕ್ಲ)ಧ್ಯಾನದೊ ।
ಳೊಗೆದೊಪ್ಪಿರೆ ಸಫಲಮಕ್ಕುಮಂತಿರೆ ನೆಗಲಂ ॥ ೨೯ ॥

ವ॥ ಅವಾವುವೆಂದೊಡೆ :—ಆಜ್ಞಾವಿಚಯಮಪಾಕವಿಚಯಂ ವಿಪಾಕವಿಚಯಂ ಸಂಸ್ಥಾನ ವಿಚಯಂ ಎಂಬ ಧರ್ಮಧ್ಯಾನದ [13]ನಾಲ್ಕುಂತೆಱನಂ ನಿಶ್ಚಳಮಾಗಿ [14]ನಿನ್ನೊಳೆ ನಿಱಿಸುವುದು. ನಿಱಿಸಿದೊಡೆಂತುಂ ತುದಿಯೊಳ್ ಪರಮಸುಖಿಯಾಗಿರ್ಪೆ, ಜೀವಾ ನಿನಗೆ ಯತಿಧರ್ಮದಗ್ಗಳಿಕೆಯ [15]ನೇವೇಱ್ಪುದೋ ?—ದಾನಂ ಪೂಜೆ ಶೀಲ ಮುಪವಾಸಮೆಂಬ ನಾಲ್ಕುಂತೆಱದ ಶ್ರಾವಕಧರ್ಮ ದೊಳ್ ಸ್ವಲ್ಪಮಪ್ಪ ನೆಗಲ್ತ್ತಿಯಿಂ ಪಿರಿದಪ್ಪ ಫಲಗಳಂ ಪಡೆದವರ [16]ಕತೆಯಂ [17]ಕೇಳ ! ಅದೆಂತೆಂಬಾ !—

---

(1) ತವೋಲ್ (ಕ,ಚ) ತೆನಲ್ (ಜ) (2) ವಂತೆವೋ (ವ) ಲ್ (ಕ,ಚ) (3) ತೆಯ್ದುದೊ (ಕ,ಚ) (4) ಸ್ರ(ಶ್ರ)ಯಂ (ಚ) (5) ದನ (ಕ,ಚ) (6) ನಪ್ಪುದಾವ (ಕ,ಚ) (7) ಮಾಡುವ (ಚ) (8) ಪ್ಪೊಡಾವುದ ಱಿವಿನಗ್ಗಳಿತ (ಕ,ಚ) (9) ನೆನಸುಂ (ಕ,ಚ) ನಿನಿಸುಂ (ಚ) (10) ಪುಟ್ಟೆ (ಚ) (11) ಯಬಿಡದಂತ (ಕ,ಚ) (12) ಶುದ್ಧದಾನಧರ್ಮಮುಂ ಪಾಪಮುಂ ಸಮನಸ್ರಧಾನದೊ (ಚ) (13) ನಾಲ್ಕುಂ ತೆಱದ (ಕ,ಚ) (14) ತನ್ನೊಳೆ (ಕ,ಚ) (15) ನೇನೆಗಚ್ಚುದು (ಝು) ನೇಗೆಯ್ವುದು (ಚ) (16) ಕಥೆಯನಪ್ಪೊಡಂ (ಕ,ಚ) (17) ಕೇಳಿವುದೆಂತೆನೆ (ಕ,ಚ)

— ನಿದರ್ಶನ ಕಥೆ —

ಸೋಮಿಲನ ಕಥೆ — (ದಾನದ ಫಲಂ) [೧]

ಕಂ॥ ವರಸಿಂಧುನಗರದೊಳ್ ವ್ರತ।
ನಿರತಂ ತಾಪಸತಪಸ್ವಿ [1]ಸೋಮಿಲನೆಂಬಂ॥
ಸ್ಥಿರಧೈರ್ಯಂ ಭೈಕ್ಷಾ[2]ರ್ಥದೆ।
ತಿರಿದು ಯಥಾಲಾಭದಿಂದೆ ಪುಗುಟ್ಟಿಂ ನಿಚ್ಚಂ ॥ ೩೦ ॥

ವ॥ ಒಂದು ದೆಸಂ ಭೈಕ್ಷಕ್ಕೆ ಪೋ(ಪ)ದಲ್ಲಿ [3]ಬಜ್ಜಿಯ ತವುಡಂ ಪಡೆದು ಬಂದದಂ [4]ಪುರಿದು ಸಣ್ಣಮಾಗಿ ಪಿಟ್ಟುಗುಟ್ಟ ತನಗಂ ತನ್ನ ಗೃಹಚಾರಿಣಿಗಮಭ್ಯಾಗತಂ[5]ಗಂ ಮೂಱುಂಡೆಯಂ ಮಾಡಿಟ್ಟು ಶುಚೀಭೂತನಾಗಿರ್ದು ಮಧ್ಯಾಹ್ನಕಾಲದೊಳತಿಥಿಯ ಬರವಂ ಪಾರುತ್ತಿರ್ಪನ್ನೆಗಂ ಒರ್ವ [6]ಋಷಿಯರ್ ಚರಿಗೆವಂದೊಡೆ ಕಂಡು—

ಶ್ಲೋಕ॥ ಶತಂಬ್ರಾಹ್ಮಣಮೂರ್ಧೇಭ್ಯಃ ಪರಮೇ[7]ಕೋಽಗ್ನಿಹೋತ್ರಿಕಃ।
ಅಗ್ನಿಹೋತ್ರಿ (ಕ) ಸಹಸ್ರೇಭ್ಯೋ ಪರಮೇಕೋ [8]ಜಿತೇಂದ್ರಿಯಃ।
ಜಿತೇಂದ್ರಿಯಸಮಂ ಪಾತ್ರಂ ನ ಭೂತೋ ನ ಭವಿಷ್ಯತಿ ॥ ೩೧ ॥

ವ॥ [9]ಎಂಬ ಸೂತ್ರಮುಂ ನೆನೆದು ಆತಿಥಿಯ[10]ನತಿಪ್ರೀತಿಯಿಂ ನಿಲಿಸಿ ಪೆಂಡಿತಿಯಿಂ [11]ಕಾಲಂ ಕರ್ಚಿಸಿ, ಮನೆ[12]ಯೊಳಿರಿಸಿ ವಿಶಿಷ್ಟಕ್ರಿಯಾಭಾವದಿಂದಭ್ಯಾಗತಂಗೆಂದಿರ್ದುಂಡೆಯಂ [13]ತಂದಿಕ್ಕಿದಾಗಳ್ [14]ಮೆದ್ದಾಗಳದು ನೆಜ್ಜಿ[15]ದೆನೆ ಮತ್ತೊಂದುಂಡೆಯಂ ತಂದಿಕ್ಕೆ ಭಕ್ತಿಯುಂ ಶ್ರದ್ಧೆಯುಂ ತಿಣ್ಣಮಾಗೆ ರಾಗದಿಂದಾ ತಾಪಸನ ಕ್ಷುಧಾಶ್ರಮಮಿಂತಲ್ಲದೆ ಪೋಗದೆಂದು [16]ಮೂಱನೆಯುಂಡೆಯುಮುಂ ತಂದಿಕ್ಕೆ ತಣಿಪಿ [17]ವಿನಯದಿಂ ಕೆಯ್ಗೞು[3]ದು ಕಳಿಸಿದಾಗಳ್ "ಅಕ್ಷಯಂ ದಾನಮುಕ್ಕೆ" ಎಂದು [18]ಭಟಾರರ್ ಪರಸಿ [19]ಪೋದಾಗಳಾತನ ಮನೆಯೊಳ್ ಪಂಚಾಶ್ಚರ್ಯ ಸಮೇತಂ ಸುವರ್ಣವೃಷ್ಟಿಯುಂ ಕಱು[3]ದತ್ತಾ ತಾಪಸಂ ತವುಡಿ[20]ನುಂಡೆಯ ದಾನದ ಫಲದಿಂ [21]ದಂತಪ್ಪೈಶ್ವರ್ಯಮನೆಯ್ದಿದನೆಂಬುದಂ ಬಗೆವುದು ಮತ್ತಂ.

---

(1) ಸೋಯಿಲ (ಚ) ಸೋವಿಲ (ಕ,ಚ) (2) ರ್ಥದಿ (ಕ,ಚ) (3) ಬಜ್ಜುದವುಡಂ(ಝು) ಖರಿದೌಡಂ(ಚ) (4) ಪಿರಿದು (ಕ) (5) ಗಮೆಂದು (ಚ) ಮೆಂದಿಂತು (ಝು) (6) ಮಹಾರುಷಿಯರ್ (ಕ,ಚ) (7) ಕೋವೇದ ಪಾರಗಃ॥ವೇದಪಾರಗ (ಕ,ಚ) (8) ಗ್ನಿಹೋತ್ರಿಯಃ (ಝು) ಯಜ್ಞಹೋತ್ರಿಯಃ (ಚ) ಅಗ್ನಿಹೋತ್ರಿಯ ಸಹಸ್ರೇ ಭ್ಯೋವರಮೇಕೋಜಿತೇಂದ್ರಿಯಃ। ಜಿತೇಂದ್ರಿಯಸಮಂ ಪಾತ್ರಂ (ಕ, ಚ) (9) ಎಂಬೀಶ್ಲೋಕಾರ್ಥಮಂ (ಕ,ಚ) (10) ನಜ್ಜುದತಿ (ಝು) (11) ಪಾದಮಂ ತೊಳೆದು (ಜ) (12) ಯೊಳ್ಕುಳ್ಳಿರಿಸಿ (ಜ) (13) ತಂದು ಕೈಯೊಳಿಕ್ಕಿದಾಗಳ್ (ಕ) (14) ಕೈಕೊಂಡಾಗಳ್ (ಕ,ಚ) (15) ದೆಂಬುದಂ ತಾನೆ ಬಗೆದು (ಕ,ಚ) ದೆಂಬುದ ನಜ್ಜುದು (ಝು) (16) ತನಗೆಂದಿರ್ದುಂಡೆಯುಮುಂ (ಜ) (17) ಕಾಯ್ದಾಜ್ಜುದನೀರಂತಂದು ಕುಡಿಯಲೆಂದೆ ಜ್ಜಿದು (ಕ,ಚ) (18) ಯತಿಗಳ್ (ಝು) (19) ಪೋದರಾಗಳಾ (ಕ,ಚ) (20) ನುಂಡಲಿಗೆಯಂ (ಕ,ಚ) (21) ಪಿರಿದಪ್ಪೈ (ಕ,ಚ)

ಧನಪತಿಯ ಕಥೆ — (ಪೂಜೆಯ ಫಲಂ) [೨]

ಕಂ॥ ಅನುಪಮನುತಕರ್ಮ್ಯಮತಿಶಯ ।
ಮನಿಂದಿತಂ [1]ತಗರೆಯೆಂಬ ಪುರಮಾ ಪುರದೊಳ್ ॥
ಜನವಿನುತ ವಣಿಗ್ಜನಪತಿ ।
ಧನಪತಿಯೆಂಬೊಂ ಧನಾಢ್ಯನಮಿತಗುಣಾಢ್ಯಂ ॥ ೩೨ ॥

ವ॥ಆ ಪರದನೆರ್ಮೆಯ ಕಾವ ಗೋವನೊಂದುದೆವಸ[2]ಮೊಂದೆಡೆಯೊಳೆರ್ಮ್ಮೆಯಂಮೇಯಿಸಲ್ ಪೋದಲ್ಲಿ ಒಂದು ಪಿರಿಯಕೊಳನಂ ಕಂಡಲ್ಲಿ ಎರ್ಮೆಗಳಂ ನೀರೂಡುತಿರ್ದು ಕೊಳನ ನಡವೆ ಸಹಸ್ರ ದಲಪದ್ಮ[3]ದೊಂದುಪೂವಿರ್ದುದನಾ ಗೋವಂ ಕಂಡು ಕೊಳದ ನಡುವಣ್ಗೀಸಿ ಪೋಗಿ ಯಾ ಪೂವಂ ಕೊಯ್ದುಕೊಂಡು ಬರ್ಪಾಗಳಲ್ಲಿಯ ಜಲದೇವತೆ[4]ಯೆಂದಳ್ ''ನೀನೀ ಪೂವನಗ್ಗಳ ನುಪ್ಪ[5]ವಂಗೆ ಕುಡುವುದೆಂ''ದೊಡಾ ಧ್ವನಿಯನಾಲಿಸಿ ಕೇಳ್ದಿಲ್ಲಾ ದೆ[6]ಸೆಯೊಳಾರುಮಂ ಕಾಣ[7]ದೆ "ಅಂತೆ ಗೆಯ್ವೆ" ನೆಂದೆರ್ಮೆಯ[8]ನೂರ್ಗಟ್ಟಿಕೊಂಡು ಬಂದಿರ್ದು ಮನೆಯಂ ಪುಗಿಸಿ—

ಕಂ॥ ಎನ[9]ಗೆಮ್ಮ ಸೆಟ್ಟ ವೆಗ್ಗಳ ।
ನನುನಯದಾತಂಗೆ ಕುಡುವೆನೆಂಬಾ ಬಗೆಯಿಂ ॥
ಮನೆಯಂ ಪೊಕ್ಕೊಯ್ಯನೆ ನೋ ।
[10]ಟ್ಪಿನಮಾತನುನುರಸುಗಾಣಲೆಂದೊಸೆದಾಗಳ್ ॥ ೩೩ ॥

ವ॥ ಪುಟ್ಟಗೆಯುಮಂ, ಪೂವುಮಂ [11]ತಳಿಗೆಯೊಳಿಟ್ಟುಕೊಂಡು ಪೋಪುದಂ ಕಂ[12]ಡೀತ ನಿಂದರಸು ವೆಗ್ಗಳನೆಂದು ಸೆಟ್ಟಯ [13]ಬಲಿಯನೆ ಪೋಗಿ ನೋಲ್ಪಿನ್ನೆಗಂ ಸೆಟ್ಟ ತನ್ನ ತಂದ [14]ದರುಶನಮನರಸಂಗೆ [15]ಕೊಟ್ಟು ಪೊಡೆವಟ್ಟು ಕುಳ್ಳಿರ್ದುದುಂ—

ಮ॥ ಅರಸಂ [16]ಬಾ ಮುನಿನಾಥರೊರ್ವರಮಳಾನುಷ್ಠಾನಿಗಳ್ ಜ್ಞಾನಿಗಳ್ ।
ಪರಮಾತ್ಮಾಲಯದೊಳ್ ಕಳಂಕರಹಿತರ್ ಬಂದಿರ್ದ[17]ರೆಂದಾ ಮುನೀ ॥
ಶ್ವರರಂ ಬಂದಿಸಿ [18]ಬರ್ಪಮೆಂದು ಮುದದಿಂ ಪೋಗುತ್ತು[19]ಮಿರ್ದಾಗಳೀ ।
ಧರಣೀಶಂಗವರಗ್ಗಳಿಕ್ಕೆ ಪಿರಿದಾಯ್ತೆಂ[20]ದಿಂತು ಗೋಪಾಲಕಂ ॥ ೩೪ ॥

ವ॥ ಎಂದು ತನ್ನೊಳೆ ಬಗೆದವರೊಡನೆ ಪೋಗಿ ನೋಲ್ಪಾಗಳರಸಂ ಬಸದಿಯಂ ಬಲ ಗೊಂಡು ದೇವರ್ಗೆ ಪೊಡೆವಟ್ಟು ಬಂದಾ[21]ಸುಸಿನರ್ಗೆಱಗಿ ಪೊಡೆವಟ್ಟಿರ್ಪಿನಮಾ ಋಷಿಯರ್ ದೇವರ್ಗೆ ಪೊಡೆವಡುತಿರ್ದುದುನುನಂತೆ ನೋ[22]ಡುತ್ತಿರ್ದೆಲ್ಲರ್ಗಮೊಳಗಿರ್ದಾತನಗ್ಗಳನೆಂದು ನಿಶ್ಚೈಸಿ ಸಾರೆ ಪೋಗಿ 'ಪೂವಂ ನಿನಗಿತ್ತೆಂ, ಕೊಳ್, ದೇವಾ' ಎಂದು ದೇವರ ಮುಂದೆ ಪೂವ ನೀಡಾಡಿ ಪೋದನಂತಾ ಗೋವನೊಂದು ಪೂವಂ ದೇವರ ಮುಂ[23]ದಿಕ್ಕಿಪೋದ ಪೂಜೆಯ ಪಲದಿಂದಾ ಪೊಲಲನಾಳ್ವರಸಂಗೆ [24]ಕಱುತಿಕಂಠ ನೆಂಬ ಮಗನಾಗಿ ಪುಟ್ಟಿ ಮಹಾಮಂಡಲಿಕನಾಗಿ ರಾಜ್ಯಂಗೆಯ್ದನೆಂಬುದನಪ್ಪೊಡಂ ನಂಬಿ ಪೂಜಾಧರ್ಮದೊಳಬ್ತಿಗನಪ್ಪುದು—

---

(1) ಮಗಧೆ (ತಮಿಱಿನಲ್ಲಿ — ತೀಂಗಿಲ್ಲತಗರೈನಗರ್ ಎಂದಿವೆ) (2) ಮಡವಿಯೊಳೆಮ್ಮೆಯಂ ಕಾಯಲ್ (ಝ) (3) ದೊಂದು ತಾವರೆಯ (ಕ,ಚ) (4) ಇಮ ಇಲ್ಲ (ಕ,ಚ) (5) ವರ್ಗೆ (ಝ) (6) ಸೆಯಂನೋಡಿ ಯಾರುಮಂ (ಕ, ಚ) (7) ಇದು ದೇವರ ವಚನಮಾಗಲೆನೇಜ್ಕುಮಂತೆಗೆಯ್ವೆ (ಝ) ಕರಮೊಳ್ಳಿತ್ತಂತೆಗೆಯ್ವೆ (ಕ,ಚ) (8) ನೂರ್ಗತಂದುಮನೆಯಂ ಪುಗಿಸಿ(ಕ,ಚ) (9) ಗೆನ್ನ ಸೆಟ್ಟಯಗ್ಗಳ (ಕ,ಚ) (10) ಟ್ಪಿನಸೆಟ್ಟೆ (ಕ,ಚ) (11) ಪರ್ಯಾಣಮೊಳಿಟ್ಟು (ಜ) (12) ಡೀತಂಗರಸನಗ್ಗಳ (ಕ, ಜ) (13) ಬಚ್ಚುವಚ್ಚುಯನೆ (ಕ, ಜ) (14) ಕಾಣಿಕೆಯಂ (15) ಮುಂದಿಟ್ಟು (ಝ) (16) ತಾಂ (17) ರಂತಾಂ (ಜ) (18) ಬರ್ಪೆವೆ (ಕ) (19) ಮಿಂತೀಗ (ಝ) (20) ಸಂದು (ಝ) (21) ಋಷಿಯರ್ಗೆ (ಕ,ಚ) (22) ದಂಕಂಡವರ್ಗೆಲ್ಲ (ಜ) (23) ಮುಂದೆ ತಂದಿಕ್ಕಿ (ಕ, ಚ, ಳ) (24) ಕರೆಕಂದುವೆಂಬ (ಜ)

ಉದ್ದಾಯನನ (ಪ್ರಭಾವತಿ) ಕಥೆ — (ಶೀಲದ ಫಲಂ) [4]

ಕಂ॥ [1]ರೋರುಗಪುರಪತಿ ರಿಪುಸಂ ।
ಹಾರಕ[2]ನುದ್ದಾಯನಾಂಕನೃಪನಖಿಳಗುಣಾ ॥
ಧಾರನುದಾರಸನಂಗಾ ।
ಕಾರಂ [3]ದುಶ್ಚರಿತದೂರ ನಚಳಿತಧೀರಂ ॥ ೩೫ ॥

ವ॥ ಆತನರಸಿ ಪ್ರಭಾವತಿಯೆಂಬೊಳಾಕೆ[4]ಯನಾ ಪೊಲಲೊಳಿರಿಸಿ ರಿಪುವರ್ಗಸಾಧನೆಯೆಸಿ ಕಾರಣಮಾಗೆ ಪರದೇಶಕ್ಕುದ್ದಾಯನನುಹಾರಾಜಂ ಪೋದಿಂ ಬಱಿಯಂ ಆಕೆಯ ರೂಪಲಾವಣ್ಯ ಹಾವಭಾವವಿಳಾಸವಿಭ್ರಮಂಗಳೊಳ್ಪಂ ಕೇಳ್ದು ಚಂಡಪ್ರದ್ಯೋತನೆಂಬರಸಂ ಆಕೆಯನೆಲೆಸಿದು ಕೊಳ್ವೆನೆಂದು ಮಹಾಬಳಪರಾಕ್ರಮನಾಗಿ ಮೇಲೆತ್ತಿವಂದು ಪೊಲಲಂ ಮೂವಳಸಾಗಿ ಮುತ್ತಿ ಕೊಂಡಿರ್ದು ತನ್ನ ಪೆರ್ಗಡೆಗಳಂ[5]ಡಾಳೆಯರಪ್ಪ ಸಬ್ಬವದ ಪೆಂಡಿರುಮಂ ಪ್ರಭಾವತಿಯಲ್ಲಿಗಟ್ಟಿ [6]"ತನ್ನನೆಂತುಂ ಕೊಂಡು ಪೋದಪೆಂ ಸನುಕಟ್ಟನೊಳಿರ್ಪುದೆಂದು ಪೇಲ್ದು ಬನ್ನಿಂ" ಎಂದಟ್ಟ ದೊಡವರ್ ಬಂದು ಭಯಸ್ಫರಾಗಿ ಕಾಪಿನನರುಮಂ, ಪ್ರಭುಗಳುಮನೊಡಂಬಡಿಸಿ ಪೊಲಲಂ ಪೊಕ್ಕು ಪ್ರಭಾವತೀನುಹಾದೇವಿಯಂ ಕಂಡು ತನ್ಮುರಸನ ರೂಪಂ ಶ್ರೀಯುನುಂ ಕಲಿತನನು[7]ಮು ಮೆನಿತಾನುಂ ತೆಱದಿಂ ಪೊಗಲ್ವುಮಿಂ ಪೆಱತಂ ಬಗೆಯಲ್ವೇಡೆಮ್ಮೊಡನೆ ಬರ್ಪ ಸನುಕಟ್ಟ[8]ನೆ ಬಗೆವುದೆಂದೊಡಾಕೆ ಯಿಂತೆಂದಳ್—

ಕಂ॥ ಎನ್ನಾಣ್ಮನ[9]ಲ್ಲದಂ ಪೆಱ ।
[10]ನೆನ್ನಂ ಕೊಂಡುಯ್ವನಾದೊಡೆಂತುಂ ಪೋಗೆಂ ॥
ಸನ್ನುತಶೀಲಮನಱಿವೆನೆ ।
[11]ಪೊನ್ನಂ ಬೆನ್ನೀರೊಳೆಚ್ಚಿ ಕೆಡಿಸುವ ತೆಱದಿಂ ॥ ೩೬ ॥

ವ॥ ಎಂದೊಡಾ ಪೆರ್ಗಡೆಗಳಿಂತೆಂದರ್—

ಕಂ॥ ಶೀಲದ [12]ಫಲಮೇಂ ಶ್ರೀಯೊಳ್ ।
ಮೇಲಪ್ಪನಿತೆ ಪಲಮುದುವು [13]ಮಿಂ ಮಱುಭವದೊಳ್ ॥
ಕಾಲಕ್ಷೇಪಮು[14]ದಾವುದೊ ।
ಲೀಲೆಯಿನೀ ಭವದೊ[15]ಳಪ್ಪ ಸಿರಿಯುದು ಪೊಲ್ಲಾ ॥ ೩೭ ॥

---

(1) ತಮಿಳಿನಲ್ಲಿ ಶಾಕಪುರಮೆನ್ನುಂನಗರತ್ತು ಎಂದಿದೆ (2) ನೋದ್ದಾಯ (ಕ,ಚ) (3) ಸಚ್ಚರಿತದಾರನ ಚಳಿತ ಧೈರ್ಯಂ (ಕ,ಚ) (4) ಯ ರೂಪನಾಪೊಱೆ (ಚ) (5) ತಾಳೆಯರಪ್ಪ (ಱು) ಬುದ್ಧಿವಂತರಪ್ಪ ಸಾಕಾಳಂ ಕಾರನಂ (ಕ,ಚ) (6) ತನ್ನನೆಂತುಂ ಕೊಂಡಲ್ಲದೆ ಮಾಣೆಂ (ಕ, ಚ) (7) ಬುದ್ಧಿಯುಮಂ ಚಮರುಮಂ (8) ನೊಳಿರ್ಪುದೆಂದಟ್ಟಿದ (ಱು) (9) ಲ್ಲದೇಂ(ಚ) ದೊಂ (ಱು) (10) ನೆನಗಂ ಬಸನಾಗೆ ಮುಯ್ವುಡೆಂತುಂ(ಱು) (11) ಪೊನ್ನಂಬಂ ನೀರೊ (ಕ,ಚ) (12) ಫಲದಿಂ (ಕ,ಚ) (13) ಮುಂ (ಮುಂ) (ಕ,ಚ) (14) ದೇವುದೊ (ಱು) (15) ಳಿರ್ಪ (ಕ,ಚ)

ವ|| ಎಂಬುದಂ ಕೇಳ್ದು ಪ್ರಭಾವತಿ[1] ಯಿಂತೆಂಗುಂ—

ಶಾ|| ಆಯುಂಗೆಟ್ಟು ಪ್ರತಿವ್ರತಿಕ್ಕೆ ಯಳವಂ ತಾಂ ಸುಟ್ಟು ದುರ್ಮೋಹದಿಂ |
ಬಾಯಂ ಬಿಟ್ಟು ಪರತ್ರೆಗೆಟ್ಟು ಪಲಱಯಂ ಮುಂದಿಟ್ಟು ತನ್ನಿಂ [3]ಗುಣಾ ||
ಮ್ನಾಯಂ ಪೋಗೆ ಕಳಂಕಮಾಗೆ [3]ಕುಲಮುಂ [4]ಪೋದಂದದೇನೊಳ್ಳಿತೇ |
ಶ್ರೀಯುಂ ರೂಪುಮದೇವುದಯ್ಯ ! ಸಿರಿಗಂ ಶೀಲಕ್ಕಮೇನಂತರಂ || ೩೮ ||

ವ|| ಮತ್ತಂ—

ಕಂ|| ಮರಣಕ್ಕಂಜದೆ ಗುಣ[5]ಮುಂ |
ಪರಿಹರಿಸದೆ ಶೀಲರತ್ನಮುಂ ರಕ್ಷಿಸಿ ಸ ||
ತ್ತರೆ ಸಾವೇ ಕೇಳ್ ಶೀಲವು |
ನುರವಣೆಯಂ ಬಿಟ್ಟ ಖಳರ ಬಾಲುಂ ಬಾಲು[3]ೇ || ೩೯ ||

ವ|| ಎಂದೊಡಾ ಪೆರ್ಗಡೆಗಳಿಂತೆಂದರ್—

*ಕಂ|| ಆರ್ಕಾವೊಡುಯ್ಯ[6]ದೇಂ ಮಾ |
ಣ್ದೆರ್ಕುಮೆ ಕೊಂಡುಯ್ಗುಮುದಱಿ [7]ನಱಿಮಿರವುಸುದ ||
"ಕ್ಕೆರ್ಕುಳಿಗೊಳ್ವಂಗೆರವಂ |
ಮಾರ್ಕೊಳ್ಳದಿರೆಂ"ಬ ಲೋಕವಾದವನಱಿಯಾ || ೪೦ ||

ವ|| ಎನೆ ಪ್ರಭಾವತಿಯೆಂಗುಂ — ಎಱ[3][8]ದುಯ್ಯೆ ಗೆಲ್ಲಂ ಸೆಂಡಿನೊ[9]ಳಕ್ಕುಂ ಪೆಂಡಿರೊಳಕ್ಕುಮೆ ? ಮತ್ತಂ—

ಮ|| ಕುಲವೆಣ್ಗೊರ್ವನೆ ಗಂಡನೊಂದುಭವದೊಳ್ ಮುತ್ತೊರ್ವನಂ ಸೋಲ್ತು ನೋ |
ಡಲುಮಾಗೆಂದೊಡೆ ಕೂಡಲಕ್ಕುಮೆ ? ಬಿಗುರ್ತೆ[1][0]ಯ್ತುಂದೊಡಂ ಕೋಪದಿಂ ||
ಕೊಲಲಕ್ಕುಂ ಗೆಲಲಕ್ಕುಮಿಾಧರಣಿಯಂ ತಾನಾಳಲಕ್ಕುಂ ಕರಂ |
ಬಲಮುಂ ನಚ್ಚಿದೊಡೆನ್ನ ಶೀಲದಳವಂ ಕೇಡಿಯ್ದಿಸಲ್ ಬರ್ಕುಮೇ || ೪೧ ||

ವ|| ಎನೆ ಪೆರ್ಗಡೆಗಳ್ ಮತ್ತಮಿಂತೆಂದರ್—

---

*ಆವರ್ಕಾವೊಡಮಿರವೆಳೆದು। ಯ್ಗೋವದೆ ಪುರಜನಮನುಜಿದೆ ತಱಿ(ದುಂ) ಕಳೆಗುಂ ಪೊಱಲಂ ॥
ಪಾವಕನಿಂದಂ ಸುಡುಗುಂ। ನೀವುಱಿವುದು ಮರುಳ್ತನದ ಬಹುಮಾತುಗಳಂ ॥ (ಕ, ಚ)

---

(1) ಮಹಾದೇವಿಯೆಂಗುಂ (ಱು) (2) ಗುಣಂ। ಮಾಯಂ (ಕ,ಚ) (3) ಕುಲದಿಂ (ಕ,ಚ) ಕುಲವೆಣ್ (ಱು) (4) ಪೋಗಲ್ಕುದೇ (ಚ) ಪೋದಂದೊಡೇ (ಕ) (5) ಯಂದಾಗಳ್ (ಕ,ಚ) (6) ದಂ (ಕ,ಚ) (7) ನಱಿವಂದೇತಱಿ ರ್ಕರ್ಕುಱು (ಱು) (8) ದುಯ್ವ (ಕ,ಚ) (9) ಳಕ್ಕಲ್ಲವೆ (ಱು) (10) ಯ್ತುಂದು ತತ್ಕೋಪದಿಂ(ಱು)

ಕಂ|| ಎಂತುಮೆಱಿದೊಯ್ಯಪ(ಪೆ)ಂ ನೀ |
[1]ನಿಂತೇನಂ ಬಗೆವೆ ಯೇನನೆಂಪಪೆ[2] ಯದು ತಾ ||
ನೆಂತುಂ ಕೂಡದು ಕೆಮ್ಮನೆ |
ಸಂತಮೊಡಂಬಡುವು[3] ದುಱುವುದಱಿವಾತುಗಳಂ || ೪೨ ||

ವ|| ನೀಮೆಮ್ಮರಸನನೊಲ್ಲದೊಡೆ ಪಲಂ[4]ಬರಂ ಕೊಲ್ಲದೆ ಸೈರಿಸಂ. ಆತನತ್ತ ನಿನ್ನ ಮನಂ ಪರಿಯದೊಡೆ ಯಿಲ್ಲಿ ನೆತ್ತರ ಪೊನಲ್ ಪರಿ[5]ಗುಂ. ಆದಱಿಂ ನಿನಗಾದ ಶೀಲಂ ಪಲರ್ಗಂತ್ಯ ಕಾಲಮಂ ಮಾಡುಗುಂ. ಇನ್ನುಂ ನಿಮ್ಮಲ್ಲಿ ಬುದ್ಧಿಯೊಡೆಯರನಾಳ್ವೋಚಿಸಿ ನೆಗಱಂ. [6]ಇಂದಿಂ ಗೆಡೆಯನಿತ್ತೆವು. ಎಂದು ಪೆರ್ಗಡೆಗಳ್ ಪೋದಾಗಳ್ ಪ್ರಭಾವತಿ [7]"ಇದರ್ಕಾನೆ ಬಲ್ಲೆಂ" ಈಯುಪಸರ್ಗಂ ಪಿಂಗುವಿನಂ ಆಹಾರಶರೀರನಿವೃತ್ತಿಯೆಂದು ಕಾಯೋತ್ಸರ್ಗದೊಳಿರ್ದಳ್. ಅನ್ನೆಗ[8]ಮೊರ್ವಂ ವ್ಯಂತರದೇವಂ ಆಕಾಶದೊಳ್ ಪೋಗಲಾ ವಿಮಾನವಾ ಪೊಲಿಲ ಮೇಲೆ [9]ಬರ್ಪಾಗಳ್ [10]ತೊಟ್ಟನೆ ಕೀಲಿಸಿದಂತೆ ನಿಂದೊಡಾ ದೇವನವಧಿಜ್ಞಾನದೊಳಱಿ[11]ದು—

ಚಂ|| ಅತಿಶಯಶೀಲವಂತೆಯನನಿಂದಿತಕಾಂತೆಯನೊರ್ವನಿಂತು ದು |
ಷ್ಕೃತಮತಿ ತನ್ನದೊಂದು ಬಲಗರ್ವದಿಸುಯ್ಯಲೆ ಬಂದೋಡೀ ಪತಿ ||
ವ್ರತೆ ಗುಪಸರ್ಗಮಾ[12]ಯ್ತುದೆನಗಾಗದುಪೇಕ್ಷಿಸಲೆಂದು ನಿಂದುದ |
ಪ್ರತಿಮವಿಮಾನಮೆಂದು ಮುನಿಸಿಂ ಕರಮಾಸುರನಾದನಾ ಸುರಂ || ೪೩ ||

ವ|| [13]ಆಂತು ಮುಸಗಿ ವಿಮಾನಮನಿಱಿದು ಬಂದು ಚಂಡಪ್ರದ್ಯೋತನ ಒಡೆಯೆಲ್ಲಮನೊರ್ಮೊದಲೆ ನೆಗೆಪಿಕೊಂಡು ಸಮುದ್ರದೊಳಿಕ್ಕಲ್ ಒಗದು ನೋಡಿ ಪಾಪ [14]ಚಿಂತೆಯನುಱಿದವನ ಪಡೆಯೆಲ್ಲಮನವನ ನಾಡತ್ತ ಲೀಡಾಡಿ ಬಂದಾ ಪ್ರಭಾವತಿ ಮಹಾಸತಿಯಂ ಕಂಡು ಪೂಜಿಸಿ "ನಿಮ್ಮುಪಸರ್ಗಂ ಪಿಂಗಿದುದು ಕೆಯ್ಯನೆತ್ತಿಕೊಳ್ಳಿಂ" ಎಂದಾ ದೇವಂ ಪೇಳ್ದು ಪೋದಂ. ಆಕೆಯ ಶೀಲಮಾ ಭವದೊಳೆ [15]ಸಫಲಮುಮಾದೊಡೆ ಕೆಯ್ಯನೆತ್ತಿಕೊಂಡು ಮಹೋತ್ಸಾಹದಿಂ [16]ಶಾಂತಿ ಪೂಜೆಗಳಂ ಮಾಡಿಸುತ್ತುಮಿರ್ದು ಕೆಲವುದೆವಸದಿಂ ತನ್ನ ಭರ್ತಾರಂ ಬಂದೊಡೆ ಕೂಡಿ ಸುಖಮಿರ್ದಳೆಂಬುದಂ ಕೇಳ್ದು ಅಱಿದು ಶೀಲವಂತ[17]ರಾಗಿಂ. ವ್ರತಪರೀಕ್ಷಣ[18]ಮಪ್ಪ ಶೀಲಮುಂಕಾದೊರ್ಗರಿದುಂಟೆ?—

---

(1) ನಿನ್ನೆಂತುಂ (ಝು) ನೀನೆಂತೆಮ್ಮ (ಜ) (2) ನದು ತಾನೀಗೆಂತುಂ (ಕ,ಚ) (3) ದುಱುಯಿನಟು (ಕ,ಚ) ಪೊಡುಱುಯಿನಟು (ಝು) (4) ಬರನಾಶಂ (ಚ) (5) ಯದಿರದದಱಿಂ (6) ಇಂದಿನೊಂದು ದಿವಸಮಂ ನಿಮಗೆಡೆ (ಕ,ಚ) (7) ಇದರ್ಕು ಪಾಯಮನಾನೆ (ಝು) (8) ಮೊರ್ವವಾಸುದೇವನೆಂಬ (ಕ,ಚ) (9) ಪೋಪಾಗಳ್ (ಕ,ಚ) (10) ತೊಟ್ಟನೆವಿಮಾನಂ (ಕ,ಚ) (11) ದುನಿಂತು (ಝು) (12) ಯ್ತೆನಗದಾಗದು (ಕ,ಚ) (13) ಆಗಿಮಸಗಿ (ಕ,ಚ) (14) ಪಾಪಚಿಂತೆಯಾಯ್ತು ಮುನಿಸೇಗೆಯ್ಸುದೆಂದಾಬಗೆಯನುಱಿದ ವನಪಡೆ (ಝು) ಭೀರುತ್ವದಿನವಸಪಡೆಯೆಲ್ಲಮನವನನಾ (ಕ,ಚ) (15) ಫಲಮನಿತ್ತೊಡೆ (ಕ,ಚ) (16) ಜಿನ ಚೈತ್ಯಾಲಯಂಗಳ್ಗೆ ಶಾಂತಿ (ಕ,ಚ) (17) ರಪ್ಪುದು (ಕ,ಚ) (18) ಮುಂಶೀಲಮಂತಪ್ಪ ಶೀಲಮಂ (ಕ,ಚ)

ಧನದತ್ತನ ಕಥೆ — (ವ್ರತದ ಫಲಂ) [೪]

ಕಂ॥ ವರವೀತಶೋಕೆಯೆಂಬುದು ।
ಪುರಮುದಱೊಳ್ ಕೀರ್ತಿವ[1]ಡೆದ ಪರದಂ ತ್ರಿಜಗ ॥
ದ್ಗುರುಪದಯುಗಚಿತ್ತಂ ಭಾ ।
ಸುರವಿತ್ತಂ ಪೆಸರೊಳೊಪ್ಪೆ ತಾಂ ಧನದತ್ತಂ ॥ ೪೪ ॥

ವ॥ ಆತನ [2]ಸೆಟ್ಟಿತಿ ಪ್ರಭಾವತಿಯೆಂಬೊಳ್, ಆಯಿರ್ವರ್ಗರ್ಂ ಪುಟ್ಟಿ[3]ದ ಮಗಂ ನಾಗದತ್ತನೆಂಬಂ, [4]ತನ ಪೆಂಡಿತಿ ನಾಗವಸು ಎಂಬಳ್. [4]ಅಯಿರ್ವರುಮನ್ಯೋನ್ಯಾಸಕ್ತ ಚಿತ್ತರಾಗಿ [5]ಸುಖಂ ಬಾೞುತ್ತುಮಿರೆ—

ಚಂ॥ ಧನಮಿನಿತುಂ[6]ಟವುಂ ತವುಗುಮೆಂಬಭಿಮಂಕೆಯು ಚಿಂತೆ ಚಿತ್ತದ ।
ತ್ತಿಸಿಸು[7]ಮದೆಯ್ದುದಪ್ರತಿಮ [8]ಚಾಗದ ಭೋಗದಳರ್ಕ ಪೆಂಪುವೆ ॥
ತ್ತನವರತಂ ಪ್ರಭಾವಿಸುತುಮಿರ್ಪನವದ್ಯ[9]ಮಹೋದ್ಯನೆಂಬುದೊಂ ।
ದನಿತುಪೊಗೞ್ತಿ ತನ್ನೊಳೊಡ[10]ಗೂಡಿರೆ ವೈಶ್ಯಕುಮಾರನೊಪ್ಪಿದಂ ॥ ೪೫ ॥

ವ॥ ಅಂತು ನಾಗದತ್ತನುದಾತ್ತಗುಣಸಂಪನ್ನ[11]ನಾಗಿರ್ಪಿನಮಾ ಪೊೞಲ್ಗೆ ಮುನಿ[12]ಗುಪ್ತಾಚಾರ್ಯರೆಂಬಾರ್ಯರ್ ಬಂದಿರ್ದೊಡೆ ವಂದನಾಭಕ್ತಿಗರಸನುಂ [13]ಪುರಜನಮುಂ [14]ಪೋಗೆ ನಾಗದತ್ತ[15]ನುಮೊಡನೆ ಪೋಗಿ ಬಂದಿಸಿ ಮುಂದೆ ಕುಳ್ಳಿರ್ದು ಧರ್ಮಶ್ರವಣಮಂ ಕೇಳ್ದೆಲ್ಲರುಂ ಶ್ರೀಪಂಚಮಿಯ ನೋಂಪಿಯಂ ಕೆಯ್ಕೊಳ್ವಾಗಳ್ ತಾನು[16]ಮೊಡನೆ ಕೆಯ್ಕೊಂಡೆನೆಂದು ಭಟ್ಟಾರರಂ ಬಂದಿಸಿ ಮನೆಗೆ ಬಂದಿರ್ದು ಫಾಲ್ಗುಣಮಾಸದ ಶುಕ್ಲಪಕ್ಷದ ಪಂಚಮಿಯಂದುಪವಾಸಂಗೆಯ್ದು ಮುನ್ನೆಂದುಂ ಪಸಿದೊಂದುಗಱಿಗೆಯುಮಿರ್ದಱಿಯದಾ ಗರ್ಭಸುಖಿ[17] ಪಗಲೆಲ್ಲಂ ದೇವತಾರ್ಚನಾಸ್ತವನಕ್ರಿಯೆಯಿಂದೆನಸುಂ ಸೈರಿಸಿರ್ದು ನೇಸಱಿರ್ ಪಟ್ಟಾಗಳ್ ಪ್ರಾಣಸಂಕಟಮಾಗೆ—

---

(1) ನೆಗೞ್ದ (ಕ,ಚ) ಪರೆಯೆ (ಝ) (2) ಪೆಂಡಿತಿ ಧನಶ್ರೀಯೆಂಬಳ್ (ಕ,ಚ) (3) ದಂ ನಾಗದತ್ತನೆಂಬ ಪುತ್ರನಾತನ (ಕ,ಚ) (4) ಅಂತವರಿರ್ವರು (ಕ,ಚ) (5) ಸುಖದಿಂದಮಿರೆ (ಕ,ಚ) (6) ಟದುಂ (ಕ,ಚ) (7) ಮನೆಯ್ದಿ (ಝ) (8) ರಾಗದ (ಕ,ಚ) (9) ಮಭೀಷ್ಮ (ಕ,ಚ) (10) ನೊಂದಿದವೈಶ್ಯ (ಕ,ಚ) ನೊಂದಿದ ನಿಂದಿತವೈಶ್ಯನೊ (ಝ) ನೊಂದಿರೆ ನಂದಿರೆ (ಜ) (11) ನುಂ ಜಗನ್ಮಾನ್ಯನುಮಾಗಿ (ಕ,ಚ) (12) ಗುಪ್ತಾಚಾರ್ಯರ್ (ಕ,ಚ) (13) ಪ್ರಧಾನರುಂ ಪುರ (ಕ,ಚ) (14) ಪೋಗಿಪೊಡೆವಟ್ಟರ್ (ಕ,ಚ) (15) ನುಮವರೊಡನೆ (ಕ,ಚ) ಪೋಗಿ ಬಸದಿಯಂ ಬಲಗೊಂಡು ದೇವರ್ಗೆ ದರ್ಶನಸ್ತುತಿಯಂ ಪೇೞ್ದಿ ಭಟ್ಟಾರರಂ (ಕ,ಚ) (16) ನುಮನರೊಡನೆಕೆಯ್ಯುಗಿದಾನುಂ (ಕ,ಚ) (17) ಯಪ್ಪುದಱಿಂ (ಕ,ಚ)

ಕಂ|| ತಂದೆವಿರುಂ ತಾಯುಂ ಕರ|
ಮೊಂದಿದ ಬಂಧುಗಳುಮಿಷ್ಟವನಿತೆಯುಮೋವೋ ! ||
ಎಂದು ಪರಿತಂದು ಕೆಲದೊಳ್ |
[1]ನಿಂದು ಕರಂ ನೊಂದು ಬೆಂದು ಮಱುಗುತ್ತಿರ್ದರ್ ||೪೬||

ವ || [2]ಇರ್ದಿದರ್ಕೇಗೆಯ್ವ್ಪನೂವುದುಪಾಯಂ ? ಪೇೞಮೆನುತ್ತಿರೆ ತಂದೆ ಸಾರೆ ವಂದಿಂತೆಂದಂ—

ತ್ರಿಪದಿ|| ಎನಿತಾನುಕೋಟಿಯುಂ [3]ಮನೆದೀವಿ ಧನಮಿರ್ದು |
ದನಿತುಮುಂ ದಾನಂಗುಡು ನೋಂಪಿ[4]ಯೊಂದಱಿಂ |
ಳೆನಿತಕ್ಕುಂ ಮಗನೆ ಬಿಸುಡಿದಂ ||೪೭||

ಧರೆಗೆಲ್ಲಂ ಚೋದ್ಯಮಾಗಿರೆ ಜಿನ ಮಹಿಮೆಯಂ |
ಪಿರಿದನಾಂ ಮಾಡಿ ನಿನಗೀ[5]ವೆ(ನಾ)ನಿದೇ |
ವಿರಿದುಪವಾಸ ಬಿಸುಡಿದಂ ||೪೮||

ಕನಕದಿಂ ರತ್ನದಿಂ ಜಿನಭವನಂಗಳಂ |
ನಿನಗೆಮಾಡಿಸುವೆ ನುಪವಾಸಮೊಂದಱಿಂ |
ಳೆನಿತನೇಕಱಿವೆ [6]ಬಿಸುಡಿದಂ ||೪೯||

ವ|| ಎನೆ ನಾಗದತ್ತ ನಿಂತೆಂದಂ—

ತ್ರಿಪದಿ|| ಅತಿಶಯ ದಾನ[7]ಮುಂ (ಮೇಣ್) ನುತಪೂಜೆಯುಂ |
ಪ್ರತಿಯಿಲ್ಲದರ್ಹದ್ಭವನಮು [8]ಮೇವುದೋ |
ವ್ರತಭಂಗಂಗೆಯ್ದ ಮನುಜಂಗೆ ||೫೦||

ವ|| ಎಂದೊಡಾ ಸೂತಿಂಗೆ ತಂದೆ ಮಾಣ್ದುಸಿರದಿರೆ ತಾಯ್ ಪುಱುಗಿ ಬಂದಿಂತೆಂದಳ್—

ತ್ರಿಪದಿ|| [9]ಪಲವಪ್ಪ ನೋಂಪಿಯಂ ಸಲೆ ಮಹಾತಿಥಿ[10]ಗಳಂ |
ಪಲಕಾಲನೋಂತು ನಿನಗೀವೆನೊಂದಱಿಂ |
[11]ಫಲಮೆನಿಸುಂಟು ಬಿಸುಡಿದಂ ||೫೧||

---

(1) ನಿಂದಾಗಳ್ ಬಂದು ನೋಡಿ (ಕ,ಚ) (2) ಇರ್ದಿಲ್ಲಿಗಿನ್ನೇಗೆಯ್ವುಂ (ಕ,ಚ) (3) ಮನೆಯ (ಕ,ಚ) (4) ಯೆಂದಾರೊಳೆನಿ (5) ವೆಂಮಗನಿದೇವಿರಿದೊಂದು (ಕ,ಚ) ದೇವಿರಿದುಪವಾಸ ನೋಂಪಿಯಂಬಿಸು (ಱು) (6) ಮಗನೆ ನೀಂಬಿಸು (ಕ,ಚ) ಮೊಂದರಿಂದೆನಿತಕ್ಕು ಮಗನೇ (ಱು) (7) ಮುಮತಿಶಯ ಪೂಜೆ (ಕ,ಚ) ಮುಮತಿನುತಪೂ (ಜ) (8) ಮೇಗೆಯ್ದುಂ ಬ್ರತಮಿಲ್ಲದಿರ್ದಮನುಜಂಗೆ (ಕ, ಚ) ಭಂಗಮಾದ (ಱು) (9) ಪಲವುಪೆನೋಂಪಿ (ಱು) ಫಲವು ಪೆಱ್ ನೋಂಪಿ (ಕ, ಚ) (10) ಗಳೊಳ್ಪಲವುಮಂ (ಕ, ಚ) ಫಲಮೇನೊ (ಜ)

ತ್ರಿಪದಿ॥ ಅಹ್ಯೋಪವಾಸ[1]ಮರ್ಥಾಪ್ಟಮಾಯೆಂಬಿನ ।
ನಷ್ಟಮಿ[2]ಬಾವು ದಿವಸಮಂ ನೋಂತೀವೆ ।
ಜ್ಯೇಷ್ಠಪುತ್ರಕನೆ ಬಿಸುಡಿದಂ ॥ ೫೨ ॥

ಸರ್ವಾನುಕೂಲಮಂ ಸರ್ವತೋಭದ್ರಮ ।
ನೊರ್ವಳೆ ನೋಂತು ನಿನಗೀವೆನಿದುವೇನ ।
ಪೂ[3]ರ್ವಮೇ ಮಗನೆ ಬಿಸುಡಿದಂ ॥ ೫೩ ॥

ಪರಮ ಚಾಂದ್ರಾಯಣಮುರಜಮಧ್ಯಾದಿಮಂ ।
ದರಪಜ್ಜುಯೆಂದು ನೆಗಟ್ಟು[4]ವಂ ನೋಂತೀವೆ ।
ನಿರವೇಡ ಮಗನೆ ಬಿಸುಡಿದಂ ॥ ೫೪ ॥

ವ॥ ಎಂದೊಡಬ್ಬಾ ಕೇಳಿಮೆಂದು ನಾಗದತ್ತನಿಂತೆಂದಂ–

ತ್ರಿಪದಿ॥ ಎನಿತಾನುಂ ನೋಂಪಿಯುಂ ನಿನಗೀವೆನೆಂ[5]ದೊಡೀ ।
ಮುನಿಯಿತ್ತ ವ್ರತಮನಲ್ಲದೊಡೆ ನೀಮಿತ್ತು ।
[6]ದೆನಗೇಕೆ ಮತ್ತೆ ಫಲಮಕ್ಕುಂ ॥ ೫೫ ॥

ವ॥ ಎಂದೊಡಬ್ಬೆಯುಂ[7]ವೋಗೆ ಬಲ್ಲಳ್ಕೆ ನಾಗವಸು ಬಂದಿಂತೆದಳ್ ॥

ತ್ರಿಪದಿ॥ ಏಂ ಪೇಳ್ವಮಲ್ಲಿಯಿರೇ ನೋಂಪುದು(ರು)ಋಷಿಯರ ।
ನಾಂಪುದುಮೆಸಗ ಬೆಸನೆಂದುಮದಲ್ಲಿ ನೀ ।
ನೋಂಪಿಯುಂ ನಾನೆ ಸಲಿಸುವೆಂ ॥ ೫೬ ॥

ಊನಮಿಲ್ಲ[8]ದ ನಿಮ್ಮ ದಾನಕ್ಕೆ ಧರ್ಮಕ್ಕೆ ।
ಯಾನಲ್ತಪಟ್ಟು ಬೆಸಕೆಯ್ವ [9]ನೆನ್ನ ನಿ ।
ನ್ನೀ ನೋಂಪಿವಿಡಿದು ಕೆಡಿಪಿರೇ ॥ ೫೭ ॥

---

(1) ವನುಯಿಷ್ಟಾರ್ಥಸಿದ್ಧಿಯ (ಕ,ಚ) (2) ಮಿನಾವು (ಕ,ಚ) (3) ಪೂರ್ವಮಗನೆ (ಕ,ಚ) (4) ಟ್ಟುವೆ ಲ್ಲವನೀವೆ (5) ನೆಂದಪರ್ (ಝ) ನೆಂದಪೆ(ಪ್ಪೆ) (ಕ,ಚ) (6) ದೆನಗೆ ಮತ್ತೇಕೆ (ಕ,ಚ) (7) ಯುಸಿರದಿರೆ (ಝ) ಯುಂಮಾಣ್ದಬಲ್ಲಳ್ಕೆ (ಕ,ಚ) ಯಾಮಾಣ್ದುಸಿರದಿರೆ (ಜ) (8) ದಾನಿಮ್ಮದಾನಕ್ಕಂ....ಕ್ಕಂ (ಕ,ಚ) (9) ನೆನಗಿಂ ನೋಂಪಿ (ಕ,ಚ)

ತ್ರಿಪದಿ|| ಒಂದುಮಂ ಕಡೆ[1] ಗಣಿಯಿಸದೊಂದು ಚಿತ್ತದೊ ।
[2]ಳ್ಕೊಂದಿದಂತಱಿದು ಬೆಸಕೆಯ್ವೆ ನೀನೋಂಪಿ ।
ಯೊಂದಱಿಂದೆನ್ನ [3]ನಲಿವಿರೇ ॥ ೫೮ ॥

ಇನ್ನೆಗಂ ಕೂರ್ಮೆಯಿಂ ನಿನ್ನ ಮಚ್ಚನೆ ಮಚ್ಚಿ ।
ದೆನ್ನ [4]ನಿಂತಱಿಯೆ ಬಿಸುಟೊಂದುಪಾಪಮಂ ।
[5]ನೀನ್ನೋಂತ ನೋಂಪಿ ಕೆಡಿಕುಮೇ ॥ ೫೯ ॥

ವ|| ಎನೆ ನಾಗದತ್ತ[6]ನಾ ಮಾತಂ ಕೇಳ್ದಿಂತೆಂದಂ—

ತ್ರಿಪದಿ|| ನಿನ್ನ ಕೇಡಿಂಗಱಲ್ದೆನ್ನ[7] ನಿಂತೆಂದಪೆ ।
ಸನ್ನುತನ್ರತಮನಱಿದೊ[8]ಡೆ ಕಿಡುವೆ [9]ನಿಂ ।
ತೆನ್ನ ಕೇಡಿಂಗೆ ಬಯಸುವೋ ॥ ೬೦ ॥

ವ|| ಎಂಬುದಂ ಕೇಳ್ದು ಮಱುಮಾತಿಂಗಾಸೆಗಾಣದೆ ಮುಚ್ಚೆವೋಗಿ ಬಿಲ್ವಾ ಗಳಾಕೆ[10]ಯಂ ಪಿಡಿದೊಂದುದೆಸೆಗುಯ್ದು[11] ತಣ್ಪುಗೆಯ್ಯುತ್ತಿರೆ ಬಂಧುಗ[12]ಳಪ್ಪವರೊಳಗೊರ್ವಂ ಕುಶಲನಪ್ಪಾತ ನಾಮನೆಯ ಮೇಲ(ಗ)ಂ ಛಿದ್ರಂಮಾಡಿ ಕನ್ನಡಿಯ[13]ನಮರ್ಚಿ ಬೆಳಗುವ ಪಾಣಿಕಂಗಳಂ ಬಳಸಿಯುಂ ಪತ್ತಿಸಿಟ್ಟು "ನೇಸಱೂಡಿತಿನ್ನೇ[14] ಕೆರ್ಪಿರ್, ಪಾಲ್ಗಂಜಿಯಂ ಕುಡಿವಿರೇಱಂ" ಮೆನೆ[15] ಪೊಱ್ತಿನಳವಿಯನಱಿದು "ಕೃತಕಮಿದುಮಿಾಗಳೆನ್ನ ಪ್ರಾಣಂ ಪೋದೊಡಂ ಪೋಕೆ ಆನಳಿಪುವೆನಲ್ಲೆಂ, ನೀಮೆ[16]ಲ್ಲಂ ಮಗುಳ್ದುಸಿರದಿರಿಂ, ಆರಾನುಂ ಸೈರಣೆಯುಳ್ಳವರ್ ವಂದೆನ್ನ ಕೆಲದೊಳಿರ್ದು ಅವಸಾಂತರಮನಱಿದು ಪಂಚನಮಸ್ಕಾರ[17]ಮನೋದುತ್ತುಮಿರಿಂ" ಎಂದು ಪೇಳ್ದು ತಾನುಂ ಪರಮಾತ್ಮ[18]ಧ್ಯಾನದೊಳ್ ಮುಡಿಪಿ ಸೌಧರ್ಮಕಲ್ಪದೊಳ್ ರತ್ನಮಯಮಪ್ಪ ವಿಮಾನದೊಳಗೆ ಪಾಸಿನ ಪೊರೆಯೊಳ್ ಪುಟ್ಟಿದೆರಡುಘಱಿಗೆಯೊಳ್ ನವಯೌವನನುಂ ಷೋಡಶಾಭರಣಭೂಷಿತನುಮಾಗಿ ದಿವ್ಯವಿಳಾಸದಿನಿರ್ದ[19]ನಲ್ಲಿ—

---

(1) ಗಣ್ಬದೊಂದು (ಕ,ಚ) ಗಾಣ್ಬುದೆಂದುದುಮಂ (ಜ) (2) ವೊಂದಿತಂದಿರಿದು (ಕ,ಚ) (3) ಕಿಡಿಪಿರೇ (ಱು) (4) ನಿಂತಳಲೆ ಬಿಸುಟೊಂದು(ಕ,ಚ) ನಿಂತಱಲೆ ಬಿಸುಟೊಂದು (ಱು) (5) ನಿನ್ನೊಂದುನೋಂಪಿ (ಕ,ಚ) (6) ನಾಕೆಗಿಂತೆಂದಂ (ಕ,ಚ) ನಾಕೆಯಮಾತಂ (ಱು) (7) ನ್ನನೇಕೆಂದಪ್ಪೆ (ಕ,ಚ) (8) ಡಾಂ ಕಿಡು (ಱು) (9) ನೆಂತೆನ್ನ (ಕ,ಚ) ನಂತೆನ್ನ(ಱು) (10) ಯನಲ್ಲಿಂದಗಲೆ ಕಳೆದುಯ್ದು(ಱು) (11) ಶೀತಳದ್ರವ್ಯಂಗಳಿಂ ತಣ್ಪು (ಕ,ಚ) (12) ಳೆಲ್ಲಂ ನೆರೆದಿರ್ದಲ್ಲಿಯೊರ್ವಂ (ಕ,ಚ) ಗಳೊಳೊರ್ವಂ (ಜ) (13) ನಡಗಿಸಿ ಬೆಳಗುಮಾಡುವ (ಕ,ಚ) (14) ಕಿರ್ಪೆ (ಕ,ಚ) (15) ನಾಗದತ್ತನೆಂದಂ ಪೊಱ್ತಿನಳವಿಯನಱಿಯೆನೇ ನಿಮ್ಮ ಕೃತಕಮಿದು (ಕ,ಚ) ಕೃತ್ರಿಮಮಿದು (ಚ) (16) ಲ್ಲಮಗಲ್ದು (ಜ) (17) ಮನವಧಾರಿಸುತ್ತಿರ್ಪು (ಕ,ಚ) ವೇಟುತ್ತಿರ್ಪು (ಱು) (18) ಧ್ಯಾನಿಸುತ್ತುಂ ಪಂಚನಮಸ್ಕಾರಂಗಳನವಧಾರಿಸುತ್ತುಮರ್ಧರಾತ್ರಿಯೊಳ್ (ಕ,ಜ) (19) ದಿವ್ಯಗಂಧ ದಿವ್ಯಸ್ರಕ್‌ದಿವ್ಯವಸ್ತ್ರದಿವ್ಯಭೂಷಣನುಮಾಗಿ (ಱು)

ರಗಳೆ– ಎತ್ತಲುಂ ಜಯಜಯ ನಿನಾದಮೆ – ಎತ್ತಲುಂ ಚಿತ್ತ[1]ಕ್ಕೆ ಸಂಹ್ಲಾದಮೆ ॥ ೧ ॥
ಎತ್ತ ನೋಡುವೊಡಮೊಸೆದಾಟಮೆ – ಎತ್ತ ಕೇಳ್ವೊಡಮೆಸೆವ [2]ಪಾಟಮೆ ॥ ೨ ॥
ಎತ್ತಲುಂ ತೀಡುವೊಡಮೊಳ್ಗಂದಮೆ – ಎತ್ತಲುಂ ಮಣಿಮಯ ಸುಬಂದಮೆ ॥ ೩ ॥
ಎಲ್ಲದೆಸೆಯುಂ ಕರಮೆ[3]ರಮ್ಯಮೆ –* (ಎಲ್ಲನೆಲನುಂ ಮನಕ್ಕೆ ರಮ್ಯಮೆ) ॥ ೪ ॥
ಎಲ್ಲಕಾಲಮುಮವರ್ಗೆ ಭೋಗಮೆ – ಎಲ್ಲ ಮಾಬಿಳ್ಕೆಯೊಳಮನುರಾಗಮೆ ॥ ೫ ॥
ಎಲ್ಲ[4]ರೋರೊರ್ವರೊಳ್ ಕೂರ್ಪರೇ – ಎಲ್ಲರುಂ ಸುಖದಿಂದಮಿರ್ಪರೇ ॥ ೬ ॥
ಆಗಳುಂ ವಿಪುಳಸಂಪ್ರೀತಿಯೆ – ಆಗಳುಂ ಬಹುವಿಧದ ಭೂತಿಯೆ ॥ ೭ ॥
ಆಗಳುಂ ಚಿತ್ತಸಂತೋಷಮೆ – ಆಗಳುಂ ಶೋಭನವಿಶೇಷನೆ ॥ ೮ ॥
ಆಗಳುಂ ಮಣಿಮಯ ವಿಳಾಸಮೆ – † ..... ॥ ೯ ॥
ಆಗಳುಂ ಮಿತ್ರಸಂಯೋಗಮೆ – ಆಗಳುಂ ಕ್ರೀಡನೋದ್ಯೋಗಮೆ ॥ ೧೦ ॥
ಆಯುಮಿಕ್ಕಿರ್ದ ಕಲ್ಪಾಯುವೆ – ಶ್ರೀಯಾಯುಮುಳ್ಳಿನಂ ಸ್ಥಾ[5]ಯುವೆ ॥ ೧೧ ॥
॥೬೧॥

ಕಂ॥ ಅನವರತ ಭೋಗದಿಂದಂ |
ತನುಪಮಮಾಗಿರ್ದ ಸಗ್ಗದೊಳ್ ಸುಖಮಂ ತಾ ॥
ನನುಭವಿಸಿ ಬಂದು ಬಳಿಯಿಂ |
ಮನುಷ್ಯ[6]ಗತಿಯೊಳ್ ಪ್ರಸಿದ್ಧರಾಜಾನ್ವಯದೊಳ್ ॥ ೬೨ ॥ ‡

ವ॥ ಅಂತು ಬಂದು ಜಯಂಧರಮಹಾರಾಜಂಗಂ ಶ್ರೀಪೃಥ್ವೀಪತಿಮಹಾದೇವಿಗಂ ನಾಗ ಕುಮಾರನೆಂಬ ಮಗನಾಗಿ ಪುಟ್ಟಿ ಮಹಾಮಂಡಳಿಕ ಶ್ರೀಯಂ ತಾಳ್ದಿ ರಾಜ್ಯಂಗೆಯ್ದು ತುದಿಯೊಳ್ ದೀಕ್ಷೆಯಂ ಕೊಂಡು ಕರ್ಮಕ್ಷಯಂಗೆಯ್ದು ನಿಂತು—

---

(1) ತದಾಹ್ಲಾದನೇ(ಜ) ಚಿತ್ತಸಂಹ್ಲಾಮಮೆ(ಕ,ಚ) (2) ಗೀತಮೇ(ಕ,ಚ) ಪಾಡನೆ(ಜ) ಪಾಡಮೇ(ಝು) (3) ಸೌಖ್ಯಮೇ (4) ಲ್ಲನೊಂದೊರ್ವರೊಳ್ (ಕ,ಚ) ಮೋರೊಂದರೊಳ್ (ಜ) (5) ಸ್ಥಾಯಿಯೆ (ಕ,ಚ) ಗತಿಯ ವಿಶಿಷ್ಟಮೆನಿಪರಾಜಾ (ಝು)

‡ ಇಲ್ಲಿಂದ ಮುಂದೆ (ಕ,ಚ) ಪ್ರತಿಗಳಲ್ಲಿ ನಾಗಕುಮಾರನ ಕಥೆಯಿದೆ. ಉಳಿದುವುಗಳಲ್ಲಿಲ್ಲ-ಆದರೆ ಈ ಪ್ರತಿಗಳಲ್ಲಿ ಕೊನೆಯ ಉಪಸಂಹಾರ ಪದ್ಯಗಳೂಕೂಡ ಈಕಥೆಯು ಮುಗಿದ ಬಳಿಕವೇ ಇರುವುದರಿಂದಲೂ, ನಿದರ್ಶನ ಕಥೆಯು ಸಂಪೂರ್ಣವಾಗಿಲ್ಲವಾದುದರಿಂದಲೂ ಈ ಕಥೆಯು ಗ್ರಂಥಶರೀರಕ್ಕೆ ಸೇರಿದುದೆಂದೇ ಊಹಿಸಬಹುದು, ಕೆಲವು ಪ್ರತಿಗಳಲ್ಲಿಲ್ಲದುದರಿಂದ ಕೊನೆಯಲ್ಲಿ ಪರಿಶಿಷ್ಟವಾಗಿ ಕೊಟ್ಟಿದೆ—"ನಾಗಕುಮಾರಚರಿತೆ" ಎಂಬ ಈ ಕಥೆಯು ಜೈನರಲ್ಲಿ ತುಂಬಾ ಬಳಕೆಯಲ್ಲಿದೆ "ಸಾಂಗತ್ಯ" ಛಂದಸ್ಸಿನಲ್ಲಿ ಈ ಕಥೆಯು ಪ್ರಸಿದ್ಧವಾಗಿದೆ. ಮಿಕ್ಕ ಪ್ರತಿಗಳಲ್ಲಿ ಈ ಕಥೆಯು—ಈ ಕಂದದ ಮುಂದಣ ಸಣ್ಣಗದ್ಯದಲ್ಲಿ ಅಡಕಮಾಡಲ್ಪಟ್ಟಿದೆ—

---

* ಇಲ್ಲಿ ಒಂದು ಪಾದವಿರಬೇಕು (ಗ್ರಂ.ನಿ.)

† ಇಲ್ಲಿ ಒಂದು ಪಾದವಿರಬೇಕು — ಗ್ರಂಥನಿರಂತರವಾಗಿದೆ ಸೂಚನೆಯೂ ಇಲ್ಲ (ಜ,ಝು)

ಚಂ॥ ಪರಮಸುಖಂ ಮಲಕ್ಷಯದಿನುಗ್ರನುಲಕ್ಷಯಮಾತ್ಮಶುದ್ಧಿಯಿಂ ।
ನಿರುಪಮಿತಾತ್ಮಶುದ್ಧಿ ಸುಚರಿತ್ರದಿ[1] ನಿರ್ದ ಚರಿತ್ರದೋಜೆ ಭಾ ॥
ಸುರತರ ಧರ್ಮದಿಂ ಮೊಗಗುಮೆಂದೊಡೆ ಧರ್ಮಮೆ ಮೂಲಮುತ್ತಮಾ ।
ಚರಣೆಗಮಾತ್ಮಶುದ್ಧಿಗೆ(ಗ) ಮಲ(ಳ)ಕ್ಷಯಕಂ ವ(ಸ್ಥಿ)ರಸೌಖ್ಯರಾಶಿಗಂ ॥ ೬೩ ॥

(ಕವಿ ವಿಷಯ) ಮತ್ತು (ಉಪಸಂಹಾರ)

ಮ॥ [2]ನುತವೈಶ್ಯೋತ್ತಮ **ಬಂಧುವರ್ಮರಚಿತಂ** ಶ್ರೀ ಜೀವಸಂಬೋಧನೋ ।
ನ್ನತನಾಮಪ್ರವಿರಾ[3]ಜಿತಂ ನೆಗಲ್ದನುಪ್ರೇಕ್ಷಾಧಿ[4]ಕಾರಾಭ್ಯುಪಾ ॥
ಶ್ರಿತಮಂ ಭಾವಿಸೆ [5]ಬೋಧಿನಿಲ್ಲುಮದಱಿಂ[6]ದಷ್ಟಾಘಸಂಬಂಧನ ।
ಕ್ಷತಿಯಂ ನೆಟ್ಟನೆಮಾಡಿ ಗೆಲ್ದು ಪಡೆವರ್ ಸಂಶುದ್ಧಿಯಿಂ ಸಿದ್ಧಿಯಂ ॥ ೬೪ ॥

— ಗದ್ಯಂ —

ಇದು ಜಿನಶಾಸನ ಪ್ರಭಾಸನ ಶೀಲೋದಿತ ವಿದಿತ

ಬಂಧುವರ್ಮ ನಿರ್ಮಿತಮಪ್ಪ

ಜೀವಸಂಬೋಧನಾ ಗ್ರಂಥಾವತಾರದೊಳ್

ಧರ್ಮಾನುಪ್ರೇಕ್ಷಾಭಿಧಾನಂ – ನಾಗದತ್ತಚರಿತಂ

ದ್ವಾದಶಾಧಿಕಾರಂ.

—ಜೀವಸಂಬೋಧನಾ ಗ್ರಂಥಂ ಸಂಪೂರ್ಣಂ—

ಮಂಗಳಮಹಾಶ್ರೀಶ್ರೀಶ್ರೀಶ್ರೀ.

ಕ, ಪ್ರತಿ

ಭವಾರ್ಣವೇ ಜಂತುಸಮೂಹಮೇನ–ಮಾಕರ್ಷಯಾಮಾಸ ಹಿ ಧರ್ಮಪೋತಾತ್ ॥
ಮಜ್ಜನ್ತಮುದ್ದಿಶ್ಯ ಏನಸೋಽಪಿ – ತಂ ವೀರನಾಥಂ ಪ್ರಣಮಾಮಿ ಭಕ್ತ್ಯಾ ॥

---

(1) ನಾಸುಚರಿತ್ರ (ಕ,ಚ) ತ್ರದೆ ಶುದ್ಧಚರಿತ್ರ (ಝು) (2) ಮನುವಂಶೋತ್ತಮ (ಪ್ರಾಸು ?) (ಚ) ನುತ ವಂತೋತ್ತಮ (ಕ) (3) ಜಿಯಂ (ಕ,ಚ) (4) ದಿರಭುಪಾ (ಚ) (5) ಧರ್ಮ (ಕ,ಚ) (6) ದಷ್ಟಾಂಗಸಂ(ಚ) ದುಃಪಾಪ (ಕ, ಜ)

ಪರಿಶಿಷ್ಟ ೧

[ನಾಗಕುಮಾರನ ಕಥೆ]

(ಅನವರತ.....ರಾಜಾ(ನ್ವ)ಲಯದೊಳ್—ಎಂಬ ಕಂದವಾದ ಬಳಿಕ)

ಸುಗಧಮೆಂಬುದು ದೇಶಂ. ಆ ದೇಶದೊಳಿಂದ್ರಪುರೋಪಮಂಬೆತ್ತು ತೊಳಗಿ ಬೆಳಗುವ ಕನಕಪುರವರದೊಳ್ ಮಂಡಳಿಕಶ್ರೀಯನಾಂತೆಸೆವ ಜಯಂಧರಮಹಾರಾಜಂಗಂ ಸುಶೀಲವತಿ ಯಪ್ಪ ಪೃಥ್ವೀಮಹಾದೇವಿಗಂ ಸುಸ್ವಪ್ನಪೂರ್ವಕಮಾಗಿ ಸುಲಗ್ನದೊಳ್ ಸುಲಕ್ಷಣೋಪಲಕ್ಷಿತ ಚರಮದೇಹಧಾರಿಯಾಗಿ ಪುಟ್ಟಿ ವಿಕ್ರಮಂಧರನೆಂಬ ನಾಮಂ ಬೆತ್ತನಂತರದೊಳ್ ಬಾಳಕೇಳೀ ವಿಳಾಸದೊಳ್ ತಮ್ಮುಪವನಮಧ್ಯದೊಳಿರ್ಪಕೃತ್ರಿಮಚೈತ್ಯಾಲಯಕ್ಕಂಬೆಗಾಲಿಂದೆ ಬಂದು ವಜ್ರಮಯಮಪ್ಪ ಪಡಿಗಳ್ ಮುಟ್ಟಿದಂದನಿತಱೊಳೆ ಜಯಜಯನಿನಾದಂ ಬೆರಸು ತೆಱೆಯಲ್ ಘನಾವರಣಂ ಪೋಗೆ ಬೆಳಗುವ ಭಾಸ್ಕರಬಿಂಬದಂತಮಿತಚಂದ್ರಾದಿತ್ಯಪ್ರಭಾನಿರಸನಂಗೆಯ್ವ ಪಾದನಖವಿರಾಜಮಾನಮಂ, ನಿತ್ಯನಿರುಪಮನಿರಾನಂದ ನಿರ್ವಿಕಾರನಿರ್ಮಲಮುಮಪ್ಪ ಜೈನೇಂದ್ರ ಮೂರ್ತಿಯಂ ಕಂಡು ಸಿಸುವಿನೊಡನಿರ್ಪ ದಾದಿಯರನ್ಯವ್ಯಾಪಾರಮಂ ಬಿಟ್ಟು ಸಾಷ್ಟಾಂಗ ವೆಱಗಿರ್ಪಿನಮಿತ್ತ ತತ್ಸಮಿಪವರ್ತಿಯಾಗಿರ್ಪ ವಿಷಕೂಪಮಂ ಸಾರೆವಂದು ಕೂಪದೊಳ್ ನಿರೀಕ್ಷಣಂಗೆಯ್ವ ತೋರ್ಪ ತನ್ನ ಪ್ರತಿಬಿಂಬಮಂ ಕಂಡೊಳಕ್ಕೆ ಬೀೞ್ವ ಸಿಸುವಂ ನಾಗರಾಜಂ ಕಂಡು ಪೆಡೆಯೊಳಾಂತನಿತ್ತಲ್ ಸಿಸುವಂ ಕಾಣದ ವಾರ್ತೆಯಂ ಕೇೞ್ದು ಪೃಥ್ವೀಮತಿ ಮಹಾಕ್ಲೇಶದಿಂ ಬಂದು ಕೂಪನಿರೀಕ್ಷಣಂಗೆಯ್ದಲ್ಲಿ ಸಿಸುವಂ ಕಂಡು ವಾತ್ಸಲ್ಯದಿಂ [1]ನೆಲೆಗೊಡದ ವಿಷಮಯಮಪ್ಪ ಭಾವಿಯಂ ಧುಮ್ಮಿಕ್ಕೆ ಜಿನಪೂಜಾಧುರಂಧರೆಯಾಗಿ ಸುಶೀಲೆಯಪ್ಪುದಱಿಂ ಜಾನುದಘ್ನಮಾಗೆ ಈ ವಾರ್ತೆಯಂ ಜಯಂಧರ ಮಹಾರಾಜಂ ಕೇೞ್ದು(ಳ್) ಪರಿಮಿತ ಪರಿಜನಂ ಬೆರಸು(ಗೂಡಿ) ಬಂದು ನಾಗರಾಜನಂ ಪ್ರಾರ್ಥಿಸಿ ಸಿಸುವಂ ಸ್ತ್ರೀಯಂ ಕೊಂಡು ಬಂದು ಜಿನಪೂಜಾಮಹೋತ್ಸ ವಂಗೆಯ್ದು ಪುನರ್ಜನ್ಮಸ್ಮಾರಂಗೆಯ್ದು ಮನೆಗೆ ಬಂದು ಕೃತಘ್ನತೆಯನುಱಿದು ಕೃತಜ್ಞತೆಯಂ ಕೆಯ್ಕೊಂಡು ನಾಗಕುಮಾರನೆಂದಭಿಧಾನಂಗೆಯ್ದು ಶಸ್ತ್ರಶಾಸ್ತ್ರಂಗಳೊಳ್ ಪ್ರವೀಣನಂ ಮಾಡೆಯಾ ಕುಮಾರನುಂ ಚರಮದೇಹಿಗಳಪ್ಪ ವ್ಯಾಲ ಮಹಾವ್ಯಾಲ ಅಚ್ಛೇದ್ಯ ಅಭೇದ್ಯರೆಂಬೀ ಸಕಲರುಂ ಬಂದು (ಸೇರಿ) ಕೂಡೆ ದಿಗ್ವಿಜಯಂಗೆಯ್ದುಮೆಣ್ಭತ್ತಿಸರ್ವರ್ ರಾಜಪುತ್ರಿಯರಂ ಮದುವೆಸಿಂದು ಯೆಣ್ಭತ್ತಿಸಿರಮುಕುಟಬದ್ಧರಂ ಬೆಸಕೆಯ್ಯುನ ಮಹಾಮಂಡಳಿಕಪದವಿಯನಾಂತು ಸುಖಸಂಕಥಾ ವಿನೋದದಿಂ ರಾಜ್ಯಭಾರಮನಾಂತು ನಿಜಪರಮಜಿನಜನಸುನೋಹರನುಂ, ಧಾರ್ಮಿಕಜನಂಗಳ್ಗೆ ಪರಮಭಾಂಧವನುಂ, ರಿಪುಮಹೀಪತಿ ಮಾನಗರ್ವಲತಾಲವಿತ್ರನುಂ ಮಿತ್ರಜನಸಂಘ ಸರೋರುಹ ಮಿತ್ರನುಂ, ಜಿನೇಂದ್ರ ಪಾದಪಯೋಜ ಪ್ರಣಾಮಾವೇಕ್ಷಣ ಪವಿತ್ರೀಕೃತನಿಜಗಾತ್ರನೇತ್ರನುಂ,-ಜೀ(ಜ)ನಶಾಸ್ತ್ರ ಪಾರಾವಾರಪಾರಂಗತನುಮಪ್ಪ ನಾಗಕುಮಾರನುಂ ಮಹಾಮಂಡಳಿಕಶ್ರೀಯಂ ಪಲಕಾಲಂಬರಮನುಭವಿಸುತ್ತಿರ್ದೊಂದುದಿವಸಂ ನಾನಾರತ್ನಖಚಿತಮಪ್ಪ ರತ್ನಸಾನುಸದೃಶಮಾಗಿ ವೊಪ್ಪುವ ನಿಜಪ್ರಾಸಾದೋಪರಿಮಪ್ರದೇಶದೊಳ್ ಅಷ್ಟವಿಧ ಮಹಿಷೀಜನಪುರಸ್ಸರಮಾದ ಯೆಣ್ಭತ್ತಿಸರ್ವರರಸಿಯರುಂ, ಅನೇಕ ಪರಿವಾರ ಸ್ತ್ರೀಯರುಂಬೆರಸು ಸಿಂಹಸನಾಸೀನನೊಡ್ಡೋ ಲಗಂಗೂಟ್ಟರ್ಪಿನಂ ನೋಡಿದರೆಲ್ಲರುಂ, ನಾಗೇಂದ್ರನುಂ, ನರೇಂದ್ರನುಂ ಸುರೇಂದ್ರನುಮಿನನೊಳ್

---

(1) ನೆಲೆಯನ್ನು ಕೊಡದಿರು ಎಂದರೆ ತಳಸಿಕ್ಕದಿರುವ (ತುಂಬಾ ಆಳವಾದ)

ಪಾಸಟ(ಯಿ)ಯಲ್ಲೆಂದು ಪೊಗಲಿಸಿ, ಇಂತು ಮಹಾಮಹಿಮೆವೆತ್ತಿರ್ದೆಡೆಯೊಳ್ ದಿಶಾನಲೋಕ್ಷನಂ ಗೆಯ್ಯುತ್ತಿರ್ದಾಗಳಂತರಿಕ್ಷದೊಳ್ ಮಾಡ(ಟ) ಕೂಟ ತರುಗುಲ್ಮ ಪ್ಲುಗಪಶುಪಕ್ಷಿ ಮನುಷಾಕಾರಂಗಳಂ(ಮಂ) ಕೊಂಡು ತೋರ್ಪ ಮೇಘಾಡಂಬರಮಂ ಕಂಡು ವಿಸ್ಮಯಂಬಟ್ಟು ನೋಡುತ್ತಿರ್ಪನ್ನೆಗಮದೃಶ್ಯಮಾಗಿ ಪೋಗೆ ಕಂಡು ಮನದೊಳಿಂತೆಂದಂ:—ತನುವುಂ ಕಳತ್ರಮುಂ (ಪುತ್ರರುಂ) ಬಂಧುಜನಂಗಳುಂ ಧನಮುಂ ವಿಭವಮುಂ ನೋಡಲ್ಕೆ* ಮಂಜು, ದರಿಯಮರಂ ಸುರಚಾಪಂ ನೀರಬೊಬ್ಬುಳಿಕೆ ಕಿಸುಸಂಜೆಯ ರಂಜನೆಯಂತೆ ಕಿಡಲರ್ಪುದಲ್ಲದೆ ಶಾಶ್ವತಮಲ್ತೆಂದುಂ ಮತ್ತಮಧ್ರುವಾದಿ ದ್ವಾದಶಾನುಪ್ರೇಕ್ಷಾಭಾವನೆಯಂಗೆಯ್ದು ತನ್ನ ಪಿರಿಯಮಗನಪ್ಪ ದೇವ ಕುಮಾರಂಗೆ ಪಟ್ಟಮಂ ಕಟ್ಟಿ ಪಲಂಬರರಸುಗಳ್ವೆರಸು ದೀಕ್ಷೆಯಂ ಕೆಯ್ಕೊಂಡು ಏಕವಿಹಾರಿಯಾಗಿ ಘಾತಿಕರ್ಮನಿರ್ಮೂಲನಂಗೆಯ್ಯಲೊಡನೆ ಕೇವಲ ಜ್ಞಾನೋದಯಮಾದಾಗಳದನರಿದು(ಇಂದ್ರಂ ಕುಬೇರಂಗೆ ನಿರವಿಸೆ) ಇಂದ್ರನಾಜ್ಞೆಯಿಂ ಕುಬೇರಂ ಬಂದು ಗಂಧಕುಟಿಯಂ ನಿರ್ಮಿಸಲಾ ಗಂಧಕುಟಿಯ ಮಧ್ಯದೊಳ್ ವಿರಾಜಿಸುತಿರ್ಪ ಸಿಂಹ ಪೀಠಸ್ಥಿತ ಕಮಲಕರ್ಣಿಕಾಂತರಮಂ ನಾಲ್ವೆರಲ್ ಮುಟ್ಟದೆ [1]ಕುಳ್ಳಿರ್ದೊಪ್ಪುವ ದೇವಾದಿದೇವನಂ ಬಂದಿಸಲೆಂದು ಚತುರ್ನಿಕಾಯಾ[2]ಮರರರ್ಕಳುಂ ಮನುಷ್ಯೋತ್ತಮರುಂ ಬಂದು ಜಯಜಯನಿನಾದದೊಡನೆ ಕೂಡಿ ಸಾಷ್ಟಾಂಗ ಪ್ರಣಾಮಂಗೆಯ್ದು ಅಷ್ಟವಿಧಾರ್ಚನೆಯಿಂದರ್ಚಿಸಿ ಪುನಃಪ್ರಣಾಮಂಮಾಡಿ ತಂತಮ್ಮ ಯಥಾಯೋಗ್ಯಸ್ಥಾನದೊಳ್ ಕುಳ್ಳಿರೆ ದೇವಾಧೀಶಂ ಬಂದು ಸಾಷ್ಟಾಂಗಪ್ರಣಾಮದಿಂ ಪೊಡೆವಟ್ಟು ಮುಕುಳಿತಕರಕಮಲನಾಗಿ ಎಲೆ ಸ್ವಾಮಿನಾ, ಪ್ರಾಣಿಗಳ ಸಹಜಪರಿಣಾಮಮಂ ಸಾಗಾರಾನಗಾರ ಧರ್ಮಮುಮಂ ನಿರವಿಸ ವೇಲ್ಕೆಂದು ಬಿನ್ನಪಂಗೆಯ್ಯೆ ಸಹಜಾರ್ದ್ರಹೃದಯನುಂ, ನಿರ್ವ್ಯಾಜ ಪರಪುರುಷಾರ್ಥನಿರ್ವಾಹಕನುಂ, ಉಪಮಾತೀತನುಮಪ್ಪ ಜಿನೇಂದ್ರನುಂ ಎಲೆಭವ್ಯನೆ, ನಿನ್ನ ಪ್ರಶ್ನತ್ರಯಂ[3]ಗಳ್ಗೆ ಮೊದಲ್ ಪೇೞ್ದ (ಕೇಳ್ದ) ಮನುಷ್ಯಪರಿಣಾಮಮೆಂತೆಂದೊಡೆ :—

ಶ್ಲೋಕ ॥ ಮೃತ್ಸಾರಿಣೀ ಮಹಿಷ ಹಂಸ ಶುಕ ಸ್ವಭಾವ—
ಮಾರ್ಜಾಲ(ರ)ಕಂಕ ಮಶ(ಸ)ಕಾಜ ಜಲೂಕಸಾಮ್ಯಾಃ ॥
ಸಚ್ಛಿದ್ರಕುಂಭ ಪಟು ಸರ್ಪ ಶಿಲೋಪಮಾ[4]ನಾ—
ಸ್ತೇ ಶ್ರಾವಕಾ ಭುವಿ ಚತುರ್ದಶಧಾ ಭವಂತಿ ॥ ೧ ॥‡

ವ॥ ಅದೆಂತೆಂದೊಡೆ—

ಚಂ॥ ಉದಕದ ಸಂಗದಿಂದೆ ಮೃದುವಪ್ಪುದು ಮಣ್ ಬಿಸಲಿಂಗೆ ಬೆಟ್ಟಿತ |
ಪ್ಪುದು ನರರೊಳ್ ಕೆಲಂಬರದರಿಂದದೆ ಧಾರ್ಮಿಕರೊಳ್ ಸಮಂತು ಕೂ ॥
ಡಿದೊಡತಿಧಾರ್ಮಿಕರ್ ಪಿರಿದುಪಾಪಿಗಳೊಳ್ ನೆಲಸಲ್ಕೆ ಪಾಪಸಂ |
ಪದರೆನಿಸಿರ್ಪರೀ ನೆಗಲ್ವ ದೋಷಮಿವರ್ಗಿನಿತುಂ ಸ್ವಭಾ[5]ವಜಂ ॥ ೨ ॥

---

(1) ಕುಳ್ತೊಪ್ಪುವ (ಕ) (2) ದೇವರ್ಕಳುಂ (3) ಗಳಿಗೆ (4) ನಾಂ (5) ವಿಕಂ

* ಇದು ಜೀವಸಂಬೋಧನೆಯೆ ಅಧ್ರುವಾನುಪ್ರೇಕ್ಷೆಯ ೨ ನೆಯ ಪದ್ಯದಲ್ಲಿ ಹೇಳಿರುವ ವಿಷಯವೇ ಆಗಿದೆ.

‡ ಈ ಪದ್ಯ ಮತ್ತು ಅರ್ಥ ಚಾವುಂಡರಾಯಪುರಾಣದಲ್ಲಿ ಬಂದಿದೆ.

ಉ॥ ಸಾರಿಣಿ ಧಾರಿವಟ್ಟಲಿವು ಸಾರಸುವಸ್ತುವನೆಯ್ದೆ ಬಿಟ್ಟು ನಿ ।
ಸ್ಸಾರಮನಾಂಪುವಾ ತೆಱದೆ ಮಾನವರೊಳ್ ಕೆಲಬರ್ ದಯಾನ್ವಿತಾ ॥
ಚಾರದ ಧರ್ಮಮಂ ಪಿಡಿಯದೀ ಪಶುಯಾಗದ ಪಾಪಧರ್ಮಮುಂ ।
ಸಾರಮಿದೆಂದು ತಾಳ್ದುವರವರ್ಗಳ ದೋಷಗುಣಂ ಸ್ವಭಾ[1]ವಜಂ ॥ ೩ ॥

ಮ.ಸ್ರ॥ ಕೊಳದೊಳ್ ನೀರುಣ್ಣದಡ್ಡಂಗೆಡೆದು ಕಲಕುತುಂ ಗಾತ್ರಮುಂ ಪೊಯ್ದು ಜೀವಂ ।
ಗಳನೊಂದಂ ನೀರುಣಲ್ ಪೊರ್ದಿಸದೆ ಮಲೆತು ಕೋಡಾಡಿಸುತ್ತಿರ್ಪ ಕೋಣಂ ॥
ಗಳವೋಲ್ ಮರ್ತ್ಯರ್ ಕೆಲರ್ ನಿರ್ಮಳ ಜಿನಮತದೊಳ್ ಪುಟ್ಟಿ ಮತ್ತಂ ಕುಮಾರ್ಗಂ ।
ಗಳ ಮಿಥ್ಯಾಶಾಸ್ತ್ರದಿಂ ಧಾರ್ಮಿಕರ ಮನವನೆಂತುಂ ಕಲಂಕುತ್ತುಮಿರ್ಪರ್ ॥ ೪ ॥

ಕಂ॥ ನೀರಂ ಪಾಲಂ ಬೆರಸಲ್ ।
ನೀರಂ ಸಿತಪಕ್ಷನುಱಿದು ಪಾಲಂ ಕುಡಿವಂ ॥
ತಾರಯ್ಯೆ ಕೆಲರ್ ನರರಾ ।
ಚಾರದ ಧರ್ಮಮನೆ ತಾಳ್ದ ಧರ್ಮಮನುಱುವರ್ ॥ ೫ ॥

ಮ.ಸ್ರ॥ ಗಿಳಿ ಯುಕ್ತಾಯು[2]ಕ್ತಮಂ ಮೇಣ್ ತಿಳಿಯಲಱುವುದೇ ಮುನ್ನ ಮೆಂತೋದಿತಂತೆ ।
ಗಳಪುತ್ತಿರ್ಕುಂ ಮನುಷ್ಯರ್ ಕೆಲಬರದಱುವೋಲ್ ನಾಡೆಯುಂ ಸರ್ವಧರ್ಮಂ ॥
ಗಳ ಸಾರಾಸಾರಮುಂ ಬಲ್ಲರ ಬಗೆಯಱಿದಾರಯ್ದು ಕೇಳ್ವನ್ನರಲ್ಲಂ ।
ತಿಳಿಯೊಳ್ ಮುಂ ಕೂರ್ತು ಕೆಯ್ಯೊಂಡುದಱಿಗೊಳೆ ಕಳೆಪರ್ ಕಾಲಮುಂ ದುರ್ವಿವೇಕರ್ ॥ ೬ ॥

ಮನೆಯೊಳ್ ಪಾಲುಂಡು ನಿಶ್ಚಿಂತದೆ ಬೆಳೆದು ಕರಂ ಸಾಧುವಾಗಿರ್ದು [3]ತಾವಿಂ ।
ದೆನಸುಂ ಬೆಕ್ಕತ್ತಲಿತ್ತಲ್ ಮಿಡುಕದೆ ಪಲವುಂ ಪ್ರಾಣಿಯಂ ಕಾಣುತುಂ ನೆ ॥
ಟ್ಟನೆ ನುಂಗುತ್ತಿರ್ಕುಮಂತೀ ನರರೊಳೆ ಕೆಲಬರ್ ಧರ್ಮಮುಂ ಕೇಳುತುಂ ಸ ।
ಜ್ಜನರೊಳ್ ಬಟ್ಟುಂ ಬಱಿಕ್ಕಂ ಬಿಡುವರೆ ಕೊಲೆಯಂ ಕ್ರೂರಮುಂ ಕಷ್ಟಚಿತ್ತರ್ ॥ ೭ ॥

ಮ॥ ತಲೆಯೊಳ್ ತೀವಿದ ಪೇನ ಸೀರ್ಮಲಮನೆಂತುಂ ಬಾರ್ಚಿ ತಾಂ ತಾಳ್ದಿಯಾ ।
ತಲೆಯಂ ನಿರ್ಮಲಮಪ್ಪಿನಂ [4]ಪಣಿಗೆ ಮಾಲ್ಕುಂ ಮತ್ತಮಾ ಮಾಲಿಕ್ಕೆಯಿಂ ॥
ಕೆಲಬರ್ ಮಾನವರನ್ಯರಂ ವ್ರತಸುಶೀಲಾಚಾರಮುಂ ಪೇಟ್ಟು ನಿ ।
ರ್ಮಲರಂ ಮಾಡುವರಾತ್ಮದೋಷದಱಿವಂ ಮಾಡಲ್ಕದೇಂ ಬಲ್ಲರೇ ॥ ೮ ॥

ಚಂ॥ ಎಱಿಗವು ಮಕ್ಷಿಕಂ ಕುಸುಮಧೂಪಜವಾದಿಸುಗಂಧವಸ್ತುವಿಂ ।
ಗೆಱಗುನವೋಲಮೇಧ್ಯದ ಸುಗಂಧದ ಕೆಟ್ಟ ಪಡುಂಕೆಯತ್ತಲಾ ॥
ತೆಱದೆ [5]ಸುಭವ್ಯರಂ ಋ(ರು)ಷಿಯರಂ ನೆಱಿ ಸಾರದೆ ಸಾರ್ವರಱ್ತಿ(ರ್ಥಿ)ಯಿಂ ।
ಕುಱುಬನ(ರ)ನಜ್ಞನ(ರ)ಂ ಖಲರನನ್ಯವಧೂರತರಂ ಕಲರ್ ನರರ್ ॥ ೯ ॥

---

(1) ವಿಕಂ (ಕ) (2) ಕ್ತಿಯಂ (ಕ) (3) ದಾವಿಂ (4) ಸವಿಗೆ (ಸಂಸ್ಕೃತ ಶ್ಲೋಕದಲ್ಲಿ ಕಂಕತಶಬ್ದಕ್ಕೆ ಕಂಕಶಬ್ದದಪ್ರಯೋಗವೇ ಇರುವುದು–ಕಂಕ = ಪಣಿಗೆ–ಬಾಚಣಿಗೆ) (5) ಸುಖಭವ್ಯರಂ (ಕ)

ಮ. ಸ್ರ|| ನಿಜದಿಂದಂ ಪಿಂಡುಗೂಡಿರ್ದೆಲೆತೃಣಗಣಮಂ ಮೇದು ಸತ್ಪಾನಮಂ ಪೀ |
ರ್ದಜಪೋತಂ ಲೀಲೆಯಿಂದಂ ನಲಿವವೊಲರಿಬರ್ ಮಾನವರ್ ಕೂರ್ಮೆಯಿಂದಂ ||
ಸುಜನವ್ರಾತಂಗಳಂ ಧಾರ್ಮಿಕರನಧಿಕರಂ ಕೂಡಿ ಸದ್ಧರ್ಮಮಂ ಕೇ |
ಳ್ದು ಜಸಂಬೆತ್ತಿರ್ದ ಧರ್ಮಾಮೃತದೊಳೆ ತಣಿವರ್ ಸಂತತಂ ಸ್ವೇಚ್ಛೆಯಿಂದಂ ||೧೦||

ಚಂ|| ಪಿಡಿಯದು ದೋಷಮಿಲ್ಲದತಿನಿರ್ಮಲಮಪ್ಪೆಡೆಯಂ ಜಲೂಕನೋ |
ಗಡಿಸದೆ ಬಾವು ತದ್ದುಃ ತುಱಿಯುಳ್ಳ ತ್ರಿದೋಷದ ತಾಣಮಂ ಕರಂ ||
ಪಿಡಿವುದು ಮರ್ತ್ಯರೊಳ್ ಕೆಲಬರಾತೆಱಿ[1]ದಿಂ ದಯೆ ದಾನಧರ್ಮಮಂ |
ಪಿಡಿಯದೆ ಸಂತತಂ ಪಿಡಿವರವ್ರತಮಂ ಪುಸಿಯಂ ವಿಕರ್ಮಮಂ ||೧೧||

ಕಂ|| [2]ಒಡೆನ ಕೊಡದೊ(ನೊ)ಳಗೆ ನೀರ್ ಪೊ |
ಯ್ದೊಡದೆಂತುಂ ನಿಲ್ಲದಂತೆ ನರರೊಳ್ ಕೆಲಬರ್ ||
ಪಡೆವಾತೇಂ ನಿಲ್ಪುವೆ ತಾ |
ಳ್ದೊಡಮೇಂ ವ್ರತಗುಣಸುಶೀಲ ಚಾರುಚರಿತ್ರಂ ||೧೨||

ಮ. ಸ್ರ|| ಪಸುಪಿಂಡಿಂ ಮುಂತೆ ನೀರುಳ್ಳೆಡೆಗೆ ಪರಿದು ನೀರುಂಡು ಬಂದೇಱಿಯೊಳ್ ನಿಂ |
ದು ಸಮಂ[3]ತೆಯ್ತರ್ಪ ಗೋವಂ ಕರೆದುದಕ(ಮು)ಮಂ ತೋಱುವಂತುತ್ತಮರ್ ಸಂ ||
ತಸದಿಂದಾಚಾರ್ಯರಿಂದಾಗಮಮನುನೊಲವಿನಿಂ ಕೇಳ್ದು ತಾಮೋದಿ(ಡಿ)ಯುಂ ಮಿ |
ತ್ರಸಮೂಹಕ್ಕೊಲ್ದು ಧರ್ಮಾಮೃತದೊಳೆ ತಣಿವಂ ಮಾಲ್ಪರಾನಂದದಿಂದಂ ||೧೩||

ಕಂ|| ಅನವರತಂ ಫಣಿ ಪಾಲಂ |
[4]ನೆಱಿ ಕುಡಿದುಂ ಬಿಡದು ವಿಷಮನಾ ತೆಱಿದೆ ಕೆಲರ್ ||
ಮನುಜರ್ ಭವ್ಯರೊಳಂ ಋಷಿ |
ಜನದೊಳ್ ಕಲ್ತೋದಿ ಕುಟಿಲವೃತ್ತಿಯನುಱಿಯರ್ ||೧೪||

ಪಲಕಾಲಂ ನೀರೊಳಗಿರೆ |
ಶಿಲೆ ಮೆಲ್ಲಿತ್ತಾಗ[5]ಲರಿದದಾ ತೆಱಿದೆ ನರರ್ ||
ಕೆಲಬರ್ ಸುದೃಷ್ಟಿಗಳೊಳುರೆ |
ಬಳೆದುಂ ಪಾಪಮನೆ ತೊಱಿಯರೊ[6]ಳ್ಪಂ ಮೆಱಿಯರ್ ||೧೫||

ಬಿತ್ತರಿಪುದಿಂತು ಮನುಜರ |
ಚಿತ್ತಂ ಪದಿನಾಲ್ಕುಭೇದಮದು ನಾಲ್ಕುತೆಱಿಂ ||
ಬೆತ್ತಿರ್ಪುದೆಂತೆನಲ್ ಕೇ |
ಳುತ್ತಮ ಮಧ್ಯಮಕನಿಷ್ಠಮಧಿಕಕನಿಷ್ಠಂ ||೧೬||

---

(1) ದಿಂದಮೆ (ಕ) (2) ವೊಡೆದ (ವಡೆದ) (3) ತೆಯಿತರ್ಪ (ಕ) (4) ಪ್ರಾಸುನಕಾರವಿರಬೇಕು–ಎರಡೂ ಪ್ರತಿಗಳಲ್ಲಿಯೂ ಒಂದೇ ಪಾಠವಿವೆ. ಫಣಿ ತಾಂ ಪಾಲನೆ ಕುಡಿದುಂ—ಎಂದು ತಿದ್ದಿಕೊಳ್ಳಬಹುದು. (5) ಲರಿಯದಾ (ಕ) (6) ಳ್ಪುಂ

ವ|| ಎಂಬೀ ಪದಿನಾಲ್ಕಱಿಂಗಾಡಿನ ಹಂಸೆಯ ಪಸುವಿನನ್ನ ರುತ್ತಮರ್, ಒಡೆದ ಕೊಡದೆ, ಶುಕದ, ಕಲ್ಲ, ಮಣ್ಣಂದದವರ್ ಮಧ್ಯಮರ್. ಕೋಣನ, ನೊಲ(ಣ)ವಿನ, ಸಾರಣಿಯನ್ನರ್ ಕನಿಷ್ಠರ್. ಉರಗನ, ಬೆಕ್ಕಿನ, ಹಣಿಗೆಯ, ಜಿಗುಟಿಯನ್ನರ್ ಅಧಿಕಕನಿಷ್ಠರೆಂದು ನಿರೂಪಿಸೆ ಸುರಸಮಿತಿಯೊಡನೆ ಸುರೇಂದ್ರಂ ಕೇಳ್ದಾನಂದಂಬೆತ್ತು ಮುಕುಳಿತಕರಕಮಲನಾಗಿ ಸ್ವಾಮಿಾ, ಸಾಗಾರಾನಗಾರಮೆಂಬೀ ಧರ್ಮದ್ವಯಮುಂ ನಿಮ್ಮಡಿ, ಬೆಸಸುವುದೆಂಬುದುಂ ನಿರೂಪಿಸಿದರದೆಂತೆನೆ—

ವ|| ಸಾಗಾರಧರ್ಮಮುಂ ದಾನಂ, ಪೂಜೆ, ಶೀಲಂ, ಉಪವಾಸಮೆಂದು ನಾಲ್ಕುತೆಱನಕ್ಕುಂ—ಮತ್ತಮಣುವ್ರತಮಯ್ದುತೆಱಂ—ಗುಣವ್ರತಂಮೂಱುವಿಧಂ. ಶಿಕ್ಷಾವ್ರತಂ ನಾಲ್ಕುತೆಱಂ—

ಉ|| ದೇವತೆಗೆಂದು ಮೇಣತಿಥಿಗೆಂದು *ಪಿತೃಗಳ ತುಷ್ಟಿಗೆಂದು ಮಂ |
ತ್ರಾವಳಿ ಯಂತ್ರತಂತ್ರ ರಸಸಿದ್ಧಿಗೆ ಬೇಳ್ವೆಗೆ ವಶ್ಯಕೆಂಮ ತಾ ||
ನೋವದಭೀತಿಯಿಂ ಮುಳಿಸಿನಿಂ ಪೆಱರೋದಿಸಿದೋಜೆಯಿಂದೆ ಜೀ |
ವಾವಳಿಯಂ ಕೊಲಲ್ ಬಯಸದಿರ್ಪುದಹಿಂಸೆಯೆನಿಪ್ಪಣುವ್ರತಂ ॥ ೧೭ ॥

ಕಂ|| ಮದದಿಂದುಕ್ಕೈವದಿಂ ಗ |
ರ್ವದಿನಳಿಪಿಂ ಭಯದಿನೇವದಿಂ ಮುಳಿಸಿಂ ಲೋ ||
ಭದಿನಿನಿತುಪುಸಿಯಮುನುಂ ನುಡಿ |
ಯದುವೆರಡನೆಯಣುವ್ರತಮೆಂಬಣುವ್ರತಮಕ್ಕುಂ ॥ ೧೮ ॥

ಬಟ್ಟೆಯೊಳೂರೊಳ್ ಮನೆಯೊಳ್ |
ಕೆಟ್ಟಿಡೆ ಬಯ್ತಿಟ್ಟೊಡನ್ಯರರ್ಥಮನಳಿಪಿಂ ||
ಮುಟ್ಟದೊಡಸ್ತೇಯಮುನುದೆ |
ನೆಟ್ಟನೆ ಮೂಱನೆಯಣುವ್ರತಂ ತಿಳಿವುದಿದಂ ॥ ೧೯ ॥

ಪರವನಿತೆಯೋಲ್ ಬರೆ ಪರಿ |
ಹರಿಸಿ ಕುಲಾಂಗನೆಯೊಳೇಕಪತ್ನೀವ್ರತಮುಂ ||
ಧರಿಯಿಪುದು ಶೌಚಗುಣಮಿದು |
ಪರಿಕಿಸೆ ನಾಲ್ಕನೆಯಣುವ್ರತಂ ತಾನೆನಿಕುಂ ॥ ೨೦ ॥

ಇನಿತು ಪಸುವಿನಿತು ಭಾಂಡಮು |
ಮಿನಿತಾಲಯಮಿನಿತು ಕುಪ್ಯಮಿನಿಬರ್ ತೊಱ್ತುರ್ ||
ಧನಮಿನಿತು ಶಯನಮಿನಿತಾ |
ಸನಮಿನಿತಿನಿತಖಿಳಧಾನ್ಯಮಿನಿತುಂ ಕ್ಷೇತ್ರಂ ॥ ೨೧ ॥

---

(1) ಸೆಂಬು (2) ನೀಂ (3) ದುರ್ಕೆವ (4) ಯನೃತ (5) ಯಗುಣ

*ಪಿತೃಗಳ– ಇಲ್ಲಿ "ತೃ" ಗುರುವಾಗಿರಬೇಕು. ಪಿತರ್ಕಳ ಎಂದು ಕವಿಯು ಭಾವಿಸಿರಬಹುದು.

ಕಂ|| ಎಂಬೀ ಪತ್ತಂ ಪವಣಿಸಿ|
ಕೊಂಬುದು ಪರಿಮಿತಪರಿಗ್ರಹಂ ಪೆಸರಿಂದಂ ||
ನೀಂ ಬಗೆದು ನೋಡು ಸಕಲಗು |
ಣಾಂಬುಧಿಯೈದನೆಯಣುವ್ರತಂ ತಾನೆನಿಕುಂ || ೨೨ ||

ವ|| ಮತ್ತಂ ಗುಣವ್ರತಮೆಂತೆಂದೊಡೆ—

ಕಂ|| ಪದೆಪಿಂದಮಿನಿತು ಗಾವುದ |
ಮಿದಱಿಂದಂ ಪೋಗೆನಾವದೆಸೆಗಂ ನಾನೆಂ ||
ಬುದು [1]ದಿಗ್ವಿರತಿಯುಮೆಂಬುದು |
ಮೊದಲ ಗುಣವ್ರತಮದಂ ವಿಚಾರಿಸುಗೆ ಬುಧಂ || ೨೩ ||

ದೇಸಂಗಳೊಳಗೆ ಪುಗೆನ್ನೀ |
ದೇಸಮನಾನೆಂದು ನಾಡೆ ಕೆಯ್ಕೊಳ್ವುದು ತಾಂ ||
[2]ದೇಸವಿರತಿಯೆಂದೆಂಬುದು |
ಭಾಸುರದೆರಡನೆಯ ಗುಣವ್ರತಂ ತಾನೆನಿಕುಂ || ೨೪ ||

ಚಂ|| ಬಲೆ ಬಡಿ ನೇಣ್ ವಿಷಂ ಸುರಿಗೆ ಸೂ(ನಿ)ಲಿಗೆ [3]ಕತ್ತಿಗೆ ಬಿಲ್ಲು ಕಿರ್ಚು ಸಂ |
ಕಲೆ ಯಸಿ ಗೋರೆ ಹಾರೆ ಕು(ಗು)ಬು(ಳು)ಗುದ್ದಲಿಗಳ್ ಮೊದಲಾಗಿ ಜೀವಸಂ ||
ಕುಲಮನೆ ಕೊ[4]ಲ್ವುದಂ ಪೆಱರ್ಗೆ ತಾನೊಸೆದೀಯೆನೆನಿಪ್ಪುದೇ ಧರಾ |
ತಲದೊಳನರ್ಥದಂ[5]ಡವಿರತಿವ್ರತಮಂತ್ಯದ ಸದ್ಗುಣವ್ರತಂ || ೨೫ ||

ವ|| ಇನ್ನು ಶಿಕ್ಷಾವ್ರತಮೆಂತೆಂದೊಡೆ—

ಮ. ಸ್ರ|| ಕ್ರಮದಿಂ ನಾಲ್ಕುಂ ನನುಸ್ಮಾರದೊಳತುಳಷಡಾವಶ್ಯದಿಂದುಂ ತ್ರಿಸಂಧ್ಯಾ |
ಸಮಯಂ ನಾನಾಸ್ತವಸ್ತೋತ್ರಮನತಿಮುದದಿಂ ಪೇಳ್ದು ಮಿಕ್ಕಾರ್ತಮಂ ರೌ ||
ದ್ರಮನೆಂತುಂ ಬಿಟ್ಟು ಭಾವಂ ಸ(ಶ)ಮಶುಭಯುಗದೊಳ್ ಮೂಡೆ(ಡಿ)ಸತ್ಯಾದಿಶೀಲೋ
ತ್ತಮಮೇ ಸಾಮಯ್ಕಮೆಂಬೀ ಪ್ರಥಮದೆಸೆನ ಶಿಕ್ಷಾವ್ರತಂ ತಾನೆನಿಕ್ಕುಂ || ೨೬ ||

ಕಂ|| ತಿಂಗಳ ನಾಲ್ಕುಂ ಪರ್ವದಿ |
ನಂಗಳೊಳಂ ಕ್ರಿಯೆ ಸಮನ್ವಿತಂ ಬಂದಿಸಿ ನೀ ||
ಸಂಗದುಪಾಸಂ ಪ್ರೋಸದೆ |
ಮೆಂಗುಮದೆರಡನೆಯ ಚಾರುಶಿಕ್ಷಾವ್ರತಮುಂ || ೨೭ ||

---

(1) ದಿಗ್ವ್ರತಿಯೆಂದೆಂಬುದು (ಕ) ದಿಙ್ನಿವೃತ್ತಿಯೆಂಬುದು (ಚ) (2) ದೇಶನಿವೃತ್ತಿಯೆನಿಪ್ಪುದು (ಚ) ದೇಶನಿರ್ವೃತಿಯೆನಿಪ್ಪುದು (ದೆಶಿ–ದೇಶಿ) (ಕ) (3) ಕತ್ತಿಯು (ಚ) (4) ಲ್ವುವಂ (ಚ) (5) ದಂಡದ ನಿವೃತ್ತಿಯದಂತ್ಯದ (ಚ)

ಕಂ|| ಗುಣಯುತಮುನಿಪರನೇಱುಂ |
ಗುಣದಿನಿದಿರ್ಗೊಂಡು ನಿಲಿಸಿದಿಂ ಬಱಿಕಂ ತಾ ||
ನುಣಲತಿಥಿಸಂವಿಭಾಗಮ |
ದೆಣಿಪೊಡೆ ಮೂಱನೆಯದಱಿಗೆ ಶಿಕ್ಷಾವ್ರತಮಂ(ಮುಂ) ||೨೮||

ಸಕಲಪರಿಗ್ರಹಮಂ ತೊಱೆ |
ದಕಲಂಕವ್ರತನುನಾಂತು ತನುವಂ ಬಿಡೆ [1]ಭಾ ||
ವುಕಸಲ್ಲೇಖನಮೆಂದಱಿ |
ದು ಕೊಳ್ಗೆ ನಾಲ್ಕನೆಯ ಲಸಿತಶಿಕ್ಷಾವ್ರತಮುಂ ||೨೯||

ವ|| ಎಂದು ಪೇಳಿಪಟ್ಟಣುವ್ರತ, ಗುಣವ್ರತ, ಶಿಕ್ಷಾವ್ರತಂಗಳೆಂಬ ಪನ್ನೆರಡುಂವ್ರತಂಗಳಂ ಹೋಸ[ದ]ವ್ರತಮಂ ನಿರವದ್ಯಮಾಗೆ ನಡೆಸಲೆಂತಪ್ಪರೆನೆ—

ಮ|| ವಿಳಸದ್ಜಾನಮನುನ್ನತಾಚರಣಮುಂ ಸಾಹಿತ್ಯಮುಂ ಸತ್ಯದ |
ಗ್ಗಳಮುಂ ಶೌಚಗುಣಂಗಳುಂ ವಿನಯಮುಂ ಪಾಂಡಿತ್ಯಮುಂ ಮಾನಮುಂ ||
ಕುಲಮುಂ ನಿರ್ಮಳಕೀರ್ತಿಯುಂ ಪರಹಿತವ್ಯಾಪಾರಮುಂ ಧರ್ಮದಿಂ |
ದೊಲವಿಂ ನೀಂ ತಿಳಿ ಧಾತ್ರಿಯಂ ಬೆಳಗುಗುಂ ಸಮ್ಯಕ್ತ್ವರತ್ನಾಕರಂ ||೩೦||

ವ|| ಮತ್ತಮಾ ಅನಗಾರಧರ್ಮಮೆಂತೆನೆ—

(ಪ್ರಾಕೃತಂ) ವದ ಸಮಿದಿ [ಗುತ್ತಿ] ವೋದಮ್ಮಣಪೆಹೊ ಪರಿಸಹಜಯೊ ಯ |
ಚೌರಿಂತಂ ಬಹು ಭೇಯೋ ಣಾದಂಬಾ ಭಾವಸಂವದ(ರ)ವಿಶೇಸಾ ? ||೩೧||

ಟೀಕು|| ೧. ವದ(ವ್ರತ)=ಅಣುವ್ರತ ಗುಣವ್ರತ ಶಿಕ್ಷಾವ್ರತ ಮೆಂಬಿವಂ ಭೇದಿಸಲ್ ಪನ್ನಿರ್ತೆಱನಪ್ಪ (ದೇಶ) ವ್ರತಮುಂ–ಷಡ್ಜೀವನಿಕಾಯಂಗಳ್ಗಾವದೆಸೆಯಿಂ ಪೀಡೆಯಾಗದೆಂಬನು [2]ಕಂಪಾರೂಪ ಹಿಂಸಾವಿರತಿಯುಂ, ಪರಪ್ರಾಣಿಗಳ್ಗೆ ಬಾಧಾಹೇತುವಪ್ಪ ಸತ್ಯವಚನಮಂ ಪರಿಹರಿಸಿ ಸಮಾಚಾರೋಕ್ತ ಕ್ರಮೋಕ್ತಿ ರೂಪಾನೃತವಿರತಿಯುಂ, ಗ್ರಾಮಾದಿಗಳೊಳ್ ನಿಕ್ಷಿಪ್ತ ಪತಿತ ವಿಸ್ಮರಣಾದಿಯಿಂ ಪೆಱರೀಯದೆ ದೊರೆಕೊಂಡ ವಸ್ತುವಿನ ಪರಿಹರಣರೂಪಾಸ್ತೇಯವಿರತಿಯುಂ, ದೇವಮಾನವತಿರ್ಯಕ್ ಸ್ತ್ರೀಯರುಮನಪರ್ಗಳ ಸಂಬಂಧಿಯಪ್ಪ ಚಿತ್ರ(ತ್ರಾ)ಕಾಷ್ಠಲೇಪ್ಯ (ಲೆಪ್ಪ) ಶಿಲಾಮಯಮಪ್ಪ ಪ್ರತಿಬಿಂಬಂಗಳುಮಂ ಕಂಡು ವಿಭಾವಕ್ಕೆ ಸಲ್ಲದಪರಲ್ಲಿ ತಾಯುಂತಂಗೆ ಮಕ್ಕಳುಮೆಂಬ ಭಾವನಾರೂಪಾಬ್ರಹ್ಮವಿರತಿಯುಂ, ಯಥಾ ಯೋಗ್ಯವಿವಕ್ಷಾವಶದಿಂದನೇಕತೆಱನಪ್ಪ ಬಾಹ್ಯಪರಿಗ್ರಹಮುಂ, ಮಿಥ್ಯಾತ್ವಾದಿ ವಿಕಲ್ಪದಿಂ ಬಹುವಿಧಮಪ್ಪಾಭ್ಯಂತರ ಪರಿಗ್ರಹಮುಮೆಂಬಿವಱ ನಿವೃತ್ತಿರೂಪಪರಿಗ್ರಹವಿರತಿಯುಂ, ಎಂದಿಂತಯ್ದು ತೆಱನಪ್ಪ ಮಹಾವ್ರತಮುಂ, ೨. ಸಮಿದಿ(ಸಮಿತಿ)=ಆತ್ಮಗುರುದೇವ ಕಾರ್ಯಕಾರಣಮಾಗಿ ಪ್ರಾಸುಕಮಪ್ಪ ಬಟ್ಟೆಯೊಳ್ ಪಗಲ್ನೊಗದ ಪ್ರಮಾಣದನಿತಂನೋಡಿ ದಯೆಯಿಂ ಪ್ರಾಣಿಗಳಂ ಪರಿಹರಿಸಿ ನಡೆವುದೆಂಬೀರ್ಯಾ

(1) ಭಾವಿಸೆಸಲ್ಲೆಖ (ಪ್ರಾಸದುಪ್ಪ) (2) ಕೃಪಾ (ಚ) ಬನಕೃಪಾ (ಕ)

ಸಮಿತಿಯುಂ, ಪರರ ಗುಣಮುಂ ಕೆಡಿಸುವ ಅಸೂಯೆ ಪಿಸುಣ್ ಮೊದಲಾಗೆ ಪೆಱಗ್ರುಪರೋ
ಧಮುಂ ಮಾಲ್ಪ (ಪರ್) ನುಡಿಯುನುಂ, ಸರ್ವಜ್ಞಪ್ರಣೀತಮುಪ್ಪಾಪ್ತಾಗಮಪದಾರ್ಥಂಗಳನೊಳ್ಳಿ
ತ್ತಾಗಿ ಪೇಱ್ವಲ್ಲಿಯಂತಲ್ಲದಿಂತೆಂಬ ಬಕ್ಕುಡಿಯುಮುಂ, ಪರಿಹರಿಸಿ ತನಗಂ ಪೆಱಗರ್ಗಂ ಹಿತಮಾಗಿ
ಯಳವಿಯೊಳ್ ಕೂಡಿದಾಗಮೋ[1]ಕ್ತಯತಿ ಭಾಷಿತಂಗಳನೆ ನುಡಿವುದೆಂಬ ಭಾಷಾಸಮಿತಿಯುಂ,
ನಾಲ್ವತ್ತಾಱು ದೋಷಂಗಳಂ (ಪರಿಹರಿಸಿ) ರಹರಹಪರಿಣಾಮದಿಂ ಯೋಗ್ಯದಾತಾರರಿಂ ವಿಧಿಪೂ
ರ್ವಕಮಾಗಿ ಕುಡಲ್ಪಟ್ಟ ಶುದ್ಧಾಹಾರಮುಂ ಸರಸವಿರಸವೆನ್ನದೆ ಹರ್ಷವಿಷಾದಮುಂ ಬಿಟ್ಟು ಸಮು
ರಸಭಾವದಿಂ[2]ದುಣ್ಬುದೆಂಬ ಏಷಣಾಸಮಿತಿಯುಂ, ಜ್ಞಾನಸಂಯಮಶೌಚೋಪಕರಣಂ ಮೊದ
ಲಾದ ವಸ್ತುವನವಱ್ಪೆಡೆಯುಮುಂ ಬೆಳಗಿನೊಳ್ ನೋಡಿ ಸೂಕ್ಷ್ಮಪ್ರಾಣಿಗಳ್ಗಂ ಪೀಡೆಯಾಗದಂ
ತಪ್ಪ ಮೃದುಪ್ರತಿಲೇಖದಿಂ ಪ್ರತಿಲೇಖಿಸಿ ಪ್ರಯತ್ನದಿಂ ಮಡಗುವುದು ಕೊಳ್ವುದೆಂಬಾದಾನನಿ
ಕ್ಷೇಪಣಾಸಮಿತಿಯುಂ, ಪರಗ್ರುಪರೋಧಮಿಲ್ಲದೇಕಾಂತದೊಳ್ಪ ಪ್ರಾಣಿಗಳಿಲ್ಲದ ತೆಱದ
ನೆಲದೊಳ್ ಕಾಯಮುಲಂಮೊದಲಾದುನಂ ಪಿಂಗಿಸುವುದೆಂಬ ವ್ಯುತ್ಸರ್ಗಸಮಿತಿಯುಂ ಎಂದಿಂ
ತಯ್ದು ತೆಱನಪ್ಪ ಸಮಿತಿಯುಂ, ೩. ಗುಂತಿ (ಗುತ್ತಿ) ಅಪ್ರಶಸ್ತದಲ್ಲಿಗೆ ಪರಿವ ಮನಮುಂ ನಿಯಮಿಸಿ
ಯವಂ ಕರ್ಮಕ್ಷಯಕ್ಕೆ ಕಾರಣಮುಪ್ಪರ್ಹದಾದಿ ಪರಮೇಷ್ಠಿಗಳ ಗುಣಭಾವನೆಯೊಳಂ, ನಿತ್ಯನಿರಂ
ಜನಚಿದಾನಂದೈಕ ರೂಪನಿಜಾತ್ಮ ಗುಣಭಾವನೆಯೊಳಂ, ನಿಲಿಸುವುದೆಂಬ ಮನೋಗುಪ್ತಿಯುಂ,
ವಿಕಥಾದ್ಯಪ್ರಶಸ್ತಕಥನಮುಂ ತೊಱೆಪ್ಪುದು ಮೌನ ಮುಸಂಗೊಳ್ವುದು ಎಂಬ ವಚನಗುಪ್ತಿಯುಂ,
ನಡೆವ ಕುಳ್ಪಿರ್ಪ ಪಟ್ಟರ್ಪೆಡೆಯೊಳಗೆ ಮೆಯ್ ಕೆಯ್ಕಾಲ್ಗಳಂ ತೂಗುವ ತೊನೆವ ಬೀಸುವ
[3]ಪರಿಯೆ ನೀಡುವುದು ಮೊದಲಾದ ಪರಿಸ್ಪಂದಾತ್ಮಕಮುಪ್ಪ ಶರೀರವ್ಯಾಪಾರಮಂ ಪರಿಹರಿಸು
ವುದೆಂಬ ಕಾಯಗುಪ್ತಿಯುಂ ಎಂದಿಂತು ಮೂಱುಂತೆಱನಪ್ಪ ಗುಪ್ತಿಯುಂ–ಳವೋಧಮ್ಮ (ಧರ್ಮಂ)
ಕ್ರೂರರುಮಜ್ಞಾನಿಗಳುಮಪ್ಪ ದುರ್ಜನರ ಬಯ್ಗಳುಂ ಪೊಯ್ಗಳುಂ ಮೊದಲಾದಾತ್ಮಪೀಡೆಯಂ–

ಸ್ವಧರ್ಮಪೀಡಾಮವಿಚಿಂತ್ಯ ಯೋಽಯಂ—ಮುತ್ಪಾದಶುದ್ಧ್ಯರ್ಥಮಿಹ ಪ್ರವೃತ್ತಃ ||
ನಚೇತ್ ಕ್ಷಮಾಮಸ್ಯಹಮತ್ರ ಕುರ್ಯಾತ್[ಮನಃ]ಕೃತಘ್ನೋವದ ಕೀದೃಶೋಽನ್ಯಾ
|| ೩೨ ||

ಎಂಬೀಪ್ರಕೃಷ್ಟಭಾವನೆಯಿಂ ಸೈರಿಸುವುದೆಂಬುತ್ತಮಕ್ಷಮೆಯುಂ, ವಿಜ್ಞಾನೈಶ್ವರ್ಯಜ್ಞಾನ
ಕುಲಬಲ ತಪೋರೂಪಜಾತಿಯೆಂದಿವಱೊಳಪ್ಪ ಮದಮುಂ ಪಿಂಗಿಸಿ ಸಹಜವೃತ್ತಿಯೀ ನಿರಹಂ
ಕಾರಮಾಗಿ ನೆಗಲ್ವುದೆಂಬುತ್ತಮಮಾರ್ದವಮುಂ. ಮನೋವಾಕ್ಕಾಯಂಗಳೊಳಪ್ಪ ಕುಟಿಲತೆಯಂ
ಪತ್ತುವಿಟ್ಟು "ಋಜುಹೃದಯಸ್ಯಧಿನಸನ್ತಿ ಗುಣಾಃ" ಎಂದು ಋಜುತ್ವದೊಳ್ ಕೂಡಿ ನೆಗಲ್ವುದೆಂ
ಬುತ್ತಮಾರ್ಜವಮುಂ, ತನಗೆ ಪ್ರಾಪ್ತಿಯಾದಾ ಶರೀರಂ ಮೊದಲಾದ ಬಾಹ್ಯವಸ್ತುಗಳೊಳ್ ಲಾಭ
ಮಿಲ್ಲಮೆಂಬುತ್ತಮಶೌಚಮುಂ, ರತ್ನತ್ರಯವಂತರಪ್ಪ ಗುಣಾಧಿಕರೊಳ್ ಸದ್ವಿನಯಯುಕ್ತ
ಸಂಯಮ ಸತ್ಯವಚನಂ ನುಡಿವುದೆಂಬುತ್ತಮಸತ್ಯಮುಂ, ಪೃಥಿವ್ಯಪ್ ತೇಜೋವಾಯುವನಸ್ಪತಿ
ತ್ರಸಕಾಯಂಗಳೆಂಬೀ ಷಡ್ಜೀವನಿಕಾಯಂಗಳೊಳಪ್ಪ ಬಾಧೆಯಂ ಮನೋವಾಕ್ಕಾಯದಿಂ ಮಾಡ
ದುದುಂ, ಮಾಡಿಸದುದುಂ, ಮಾಡುವರನೊಡಂಬಡದುದಂ, ಸ್ಪರ್ಶರಸನಘ್ರಾಣ ಚಕ್ಷುಶ್ರೋತ್ರಂ
ಗಳೆಂಬಯ್ದಿಂದ್ರಿಯಂಗಳಿಷ್ಟಾನಿಷ್ಟ ವಿಷಯಂಗಳೊಳ್ ರಾಗದ್ವೇಷಂಗಳಂ ಮಾಡದುದುಂ, ದೃಷ್ಟ
ಶ್ರುತಾನುಭೂತಂಗಳಪ್ಪ ಸ್ರಕ್ಚಂದನವನಿತಾದಿ ವಸ್ತುಗಳೊಳ್(ಮು)ನದುಂ ಪರಿಯಲೀಯದುದುಂ,

(1) ಕ್ರಿಯತಿಭಾಷಿಗಳನೆ (ಕ) (2) ದುಂಬು (ಕ) (3) ಪರಿಪಿ (ಚ)

ವ್ಯವಹಾರನಿಶ್ಚಯ ಮೋಕ್ಷಮಾರ್ಗದೊಳ್ ನಿಲಿಸುವುದುಮೆಂದಿಂತು ಪ್ರಾಣೇಂದ್ರಿಯಸಂಬಂಧದಿಂ ದಪ್ಪ ಪನ್ನೆರಡುಂತೆರದ ಸಂಯಮಮುಂ, ಅನಶನಾದಿದ್ವಾದಶವಿಧಮಪ್ಪ ನೆಗಲಿತ್ತಿಗಳೊಳಗವರವರ ಪೇಱುಕೆಯ ಕ್ರಮದಿಂ ಶಕ್ತಿಯನತಿಕ್ರಮಿಸದೆ ಪರಮೋತ್ಸಾದಿಂ ನೆಗಲ್ಪುದೆಂಬುತ್ತಮತಪಮುಂ, ಶರೀರಾದಿ ಬಾಹ್ಯಪರಿಗ್ರಹಂಗಳುಮುಂ, ರಾಗಾದಿಸಕಳ (ಆಂತರಪರಿಗ್ರಹಮುಮುಂ) ವಿಭಾವಂಗಳುಮಂ ನಿರವಶೇಷಂ ತೊಱೆವುದೆಂಬುತ್ತಮತ್ಯಾಗಮುಂ, (ಇಂತು) ತೊಱೆದಪರಿಗ್ರಹಂಗಳೊಳ್ ಮತ್ತೆ ಮನಮೆಳಸದನಾದ್ಯನಿಧನಮಪ್ಪ ನಿಜಶುದ್ಧಾತ್ಮ ಸ್ವರೂಪದೊಳ್ ಮನಮುಂ ನಿಲಿಸುವುದೆಂಬುತ್ತಮಾಕಿಂಚಿನ್ಯಮುಂ, ಪೆಱಗೆ ಪೇೞ್ದ ನಾಲ್ಕುಂತೆಱದ ಸ್ತ್ರೀಯರೊಳ್ ಮನೋವಚಕಾಯಂಗಳಿಂದೆ ಬ್ರಹ್ಮಮುಂ ಮಾಡದುದುಂ, ಮಾಡಿಸದುದುಂ, ಮಾಡುವರೊ(ಲೊ)ಳೊಡಂಬಡದುದುಮೆಂಬುತ್ತಮ ಬ್ರಹ್ಮಚರ್ಯಮುಂ ಎಂದಿಂತು ದಶಲಾಕ್ಷಣಿಕಮಪ್ಪ ಧರ್ಮನುಂ, ದ್ವಾದಶಾನುಪ್ರೇಕ್ಷಾಭಾವನೆಯುಂ, ದ್ವಾವಿಂಶತಿಪರೀಷಹಾನ್ವಯವಿಜಯಮುಂ, ಮೊದಲಾದನಗಾರ ಧರ್ಮಮುಮಂ ನಿರೂಪಿಸೆ ಕೇೞ್ದು, ತಿರ್ಯಙ್ಮನುಷ್ಯದೇವ ಸಮೂಹಮೆಲ್ಲಂ ನಲಿಯೆ ದೇವೇಂದ್ರಂ ನಲಿದು ನರ್ತಿಸಲೀಪ್ರಕಾರದಿಂ ಅಂಗನಂಗಕಳಿಂಗ ಕಾಶ್ಮೀರ ಪ್ರಭೃತಿ ಸಮಸ್ತದೇಶಂಗಳೊಳಿರ್ಪ ಭವ್ಯಸಮೂಹಮುಂ. ಸದ್ಧರ್ಮಾಮೃತ (ವರ್ಷ) ದಿಂ (ತಣಿಪಿ) ಸಂತೃಪ್ತಿಪಡಿಸುತ್ತುಂ ಪಲಕಾಲಂಬರಂ ವಿಹಾರಿಸಿ ಬಲಾಯುಷ್ಯಾತಿಕರ್ಮಂಗಳಂ [1]ನಿರ್ಮೂಲನಂಗೆಯ್ದನಂತಸುಖದೊಳ್ ಪ್ರಾಪ್ತರಾದರ್.

ಎಲೆ ಜೀವಗಳಿರಾ ! ಅಂತಪ್ಪ ಮಹಾನುಭಾವರಪ್ಪ ಚಕ್ರವರ್ತ್ಯಾದಿ ಮಹಾಮಂಡಳಿಕರುಂ ಪಿರಿದಪ್ಪ ವೈಭವಮಂ ಬಿಸುಟು ಸದ್ಧರ್ಮಮಂ ಶರಣ್ಪೊಕ್ಕರ್, ನೀಮುಂ ಸದ್ಧರ್ಮಮನಪ್ಪುಗೆಯ್ದೊಡನ್ನರಪ್ಪಿರದಱಿಂ ಧರ್ಮದೊಳ್ ಪರೀಕ್ಷಿಸಿ ಧರ್ಮಮಂ ನಂಬುವುದು ಅದೆಂತೆನೆ—

ಕಂ॥ ದೇವರ್ ಗುರು ಧರ್ಮಮಿದೆಂ ।
ದೋವದೆ ಪೆಸರಿಟ್ಟೊಡದನೆ ನಂಬದಿರೆಂದುಂ ॥
ದೇವರ್ ಗುರುಧರ್ಮಮುಮಂ ।
ಭಾವಿಸಿ ನಂಬುವುದು ನೀಂ ಪರೀಕ್ಷಿಸಿ ಬಲ್ಮಿಕಂ ॥ ॥ ೩೩ ॥

ಮ॥ ನಿರುತಂ ದೇವರೆನಿಪ್ಪುದೊಂದು ಪೆಸರಂ ತಾಳ್ದಿರ್ದೊಡಂ ದೇವರ ।
ಪ್ಪರೆ ನಿರ್ದೋಷಿ ಜಿನೇಂದ್ರನಲ್ಲದುಱಿದರ್ ಪಾಲೆಂಬ ವಿಖ್ಯಾತಿವೆ ॥
ತ್ತಿರೆ ಪಾಲಪ್ಪುದೆ ಯೆಕ್ಕೆ ಕಳ್ಳಿಗಳ ಪಾಲ್ ಗೋಕ್ಷೀರಮೆಂಬಂತೆ ದಲ್ ।
ವರರಾಜಾಖ್ಯೆಯದಾಗೆ ಕಕ್ಕೆಯಮರಂ ಭೂಪಾಲನಾದಪ್ಪುದೇ ॥ ॥ ೩೪ ॥

ವ॥ ಅದಱಿಂ ದೇವರಂ, ಶ್ರುತಮುಂ, ತಪಮುಂ, ಧರ್ಮಮಂ ಪರೀಕ್ಷಿಸುವುದದೆಂತೆನೆ :—

ಸಂ॥ ಯಥಾ ಚತುರ್ಭಿಃ ಕನಕಂ ಪರೀಕ್ಷ್ಯತೇ ।
ನಿಘರ್ಷಣ ಚ್ಛೇದನ ತಾಪ ತಾಡನೈಃ ॥
ತಥೈವ ಧರ್ಮಂ ವಿದುಷಾ ಪರೀಕ್ಷ್ಯತೇ ।
ಶ್ರುತೇನ ದೇವೇನ ತಪೋದಯಾಗುಣೈಃ ॥ ॥ ೩೫ ॥

(1) ನಿರ್ನಾಶನಗೆಯ್ದು

ಅರ್ಥ ॥ ಎಂತು ಸುವರ್ಣಮನೊರೆದುಂ, ಕಡಿದುಂ, ಕಾಸಿಯುಂ, ಪೊಯ್ದುಂ ನೋಡಿ ಪರೀಕ್ಷಾನಂತರ್ ಪರೀಕ್ಷಿಸಿಕೊಳ್ವರಂತೆ ದೇವರಂ, ಶ್ರುತಮುಂ, ತಪಮುಂ, ಧರ್ಮಮುಂ ಪರೀಕ್ಷಿಸಿ (ಕೊಳ್ವುದು)–ನಿರ್ದೋಷಿಯೆ ದೇವಂ, ಅಲ್ತೆಂತೆನೆ :—

[1]ಮ.ಸ್ರ॥ ಜರೆ ಖೇದಂ ಮೃತ್ಯು ಮೋಹಂ ಕ್ಷುಧೆ ತೃಷೆ ಜನನಂ ವಿಸ್ಮಯಂ ಚಿಂತೆ ರೋಗಂ ।
ಹರುಷಂ ಸ್ವೇದಂ ವಿಷಾದಂ ರತಿ ಮುಳಿಸು ಮದಂ ಭೀತಿ ನಿದ್ರಾದಿ ದೋಷೋ ॥
ತ್ಕರದಿಂದಂ ಪಿಂಗಿದಂ ಶಾಶ್ವತಗುಣನಿಳಯಂ ಸರ್ವಲೋಕೈಕವಂದ್ಯಂ ।
ನಿರವದ್ಯಂ ನಿತ್ಯರೂಪಂ ನಿರುಪಮಮಹಿಮಂ ನಿರ್ಮಲಂ ನಿಷ್ಕಳಂಕಂ ॥ ೩೬ ॥

ವ॥ ಇಂತು ಸಕಳದೋಷದಿಂ ಪಿಂಗಿರ್ದನಪ್ಪುದಱಿಂ ನಿರ್ದೋಷಿ ಪರಮಾತ್ಮನುಂ ಭವನಾಮರವ್ಯಂತರಜ್ಯೋತಿಷ್ಕಕಲ್ಪವಾಸಿಗಳೆಂಬ ಶತೇಂದ್ರಕೃತಪೂಜೆಗರ್ಹನಪ್ಪುದಱಿಂದ ಅರ್ಹನುಂ, ಮೂಱುಂಲೋಕದ ವಸ್ತುಸ್ವರೂಪನುಂ ಕರತಲಾಮಲಕಮಾಗಿ ಕಾಣ್ಬ ಕೇವಲ ಜ್ಞಾನಮೆಂಬ ತೃತೀಯಲೋಚನಮನುಳ್ಳನಾಗಿಯುಂ ತ್ರಿನೇತ್ರನುಂ, ಕರ್ಮಂಗಳಂ ನಿರ್ಮೂಳನಂಗೆಯ್ವನಪ್ಪುದಱಿಂ ಜಿನನುಂ, ಸ್ಮರವಿಕಾರವಿಧ್ವಂಸಿಯಪ್ಪುದಱಿಂ ಸ್ಮರವಿಜೇಯನುಂ, ಜಾತಿಜರಾಮರಣಮೆಂಬ ತ್ರಿಪುರಮಂ ಕೆಡಿಸಿದುದಱಿಂ ತ್ರಿಪುರಹರನುಂ, ಸಹಸ್ರದಳ ಕಮಲೋಪರಿಸ್ಥಿತನಪ್ಪುದಱಿಂ ಕಮಲಾಸನನುಂ, ಧರ್ಮತೀರ್ಥಕರ್ತಾರನಪ್ಪುದಱಿಂ ತೀರ್ಥಂಕರ ಪರಮದೇವನುಂ, ಸಕಳವಸ್ತುಪದಾರ್ಥಂಗಳನೊರ್ಮೊದಲಱಿವುದಱಿಂ ಸರ್ವಜ್ಞನುಮೆಂಬೀ ಪಲವನ್ನರ್ಥನಾಮಂಗಳಿಂ ವಿರಾಜಿಸುತಿರ್ಪನಂತುಮಲ್ಲದೆಯುಂ—

ಮ.ಸ್ರ॥ ನಿರವದ್ಯಂ ನಿಷ್ಕಲಂಕಂ ನಿರುಪಮಮಹಿಮಂ ನಿರ್ಮಲಂ ನಿರ್ವಿಕಲ್ಪಂ ।
ನಿರಪೇಕ್ಷಂ ನಿಷ್ಪ್ರಪಂಚಂ ನಿಜಗುಣನಿಲಯಂ ನಿಶ್ಚಲಂ ನಿತ್ಯರೂಪಂ ॥
ನಿರಘಂ ನಿರ್ಮತ್ಸರಂ ನಿರ್ಜರಪತಿನು(ನ)ತ ಪಾದದ್ವಯಂ ನಿರ್ವಿವಾದಂ ।
[2]ನಿರುಜಂ ನಿರ್ನಿಕ್ತಯುಕ್ತಂ ನಿರವಧಿವಿಭವಂ ನಿರ್ಭಯಂ ವೀತರಾಗಂ ॥ ೩೭ ॥

ವ॥ ಇಂತು ಸಕಲದೋಷದಿಂ ಪಿಂಗಿದ ಪರಂಜ್ಯೋತಿಸ್ವರೂಪನಪ್ಪ ವೀತರಾಗನೇ ದೇವನೆಂಬುದಱಿಂದಾದೇವನೇ ಆಪ್ತಂ ಎಂದು ನಂಬುವುದು. ಮಿಕ್ಕಿನ ನಿರ್ದಯರಂ, ನಿರ್ಗುಣರಂ, ನಿರ್ಭಾಗ್ಯರಂ, ನಿರ್ದೋಷರಂ, (ನಿಷ್ಕೃಪರಂ) ದೇವರೆಂದು ನಂಬದೆ ಜಿನರಂ ದೇವರೆಂದು ನಂಬುವುದೇ ಸಮ್ಯಕ್ತ್ವಂ—

ಕಂ॥ ಅಱಿವಂದದಿಂದೆ ದೇವರ ।
ತೆಱನಂ ನಾಂ ಪೇಳ್ದಿ ನಿನ್ನು ಶ್ರುತಮೆಂಬುದನೀ ॥
ತೆಱನೆಂದು ಪೇಳ್ದಿನಾನೆ ।
ನ್ನಱಿವಂದದೆ ಕೇಳಮೆಂದು ಪೇಟಲ್ ತೆಗುಳ್ದಂ ॥ ೩೮ ॥

---

(1) ಈ ಪದ್ಯದ ಅರ್ಥವುಳ್ಳ ಸ್ತಂಸ್ಕೃತಶ್ಲೋಕವು ಪುಟ 185 ರಲ್ಲಿ ಉದಾಹರಿಸಿದೆ. (2) ಅರ್ಥ ನೇಮಿ ಪುರಾಣದಲ್ಲೂ ನಿರುಜ ಎಂದು ಪ್ರಾಸಸ್ಥಳದಲ್ಲಿ ಪ್ರಯೋಗವು ಕಂಡುಬರುವುದು, ಸಂಸ್ಕೃತ ವ್ಯಾಕರಣ ನಿಯಮದಂತೆ " ನೀರುಜ" ಎಂದಿರಬೇಕು.

ವ|| ಆದೆಂತೆನೆ :–ಮುಂ ಪೇಳ್ದಖಿಲದೋಷರಹಿತವೀತರಾಗಪ್ರಣೀತಮುಂ, ಇಂದ್ರಾದಿಗಳ್ಗ ಲಂಘ್ಯಮಾದುದುಂ, ಪ್ರತ್ಯಕ್ಷಾನುಮಾನವಿರೋಧಾದಿದೋಷದೂರಮುಂ. ತತ್ತ್ವೋಪದೇಶ ಕರಣ ಸಮರ್ಥವುಂ, ಸಕಲವಿನೇಯಜನಹಿತಮುಂ. ಕುಮಾರ್ಗನಿರಾಕರಣಧುರಂಧರಮುಂ, ಶಾಸ್ತ್ರಮೆಂಬುದು.

ತಪೋಲಕ್ಷಣಮೆಂತೆನೆ :—ವಿಷಯಾಭಿಲಾಷಮುಂ ಮುಟ್ಟದುದುಂ, ಕೃಷ್ಯಾದಿ ವ್ಯಾಪಾರದ ಸೋಂಕಿಲ್ಲದುದುಂ, ಬಾಹ್ಯಾಭ್ಯಂತರ ಪರಿಗ್ರಹ ಸ್ಪರ್ಶಮಿಲ್ಲದುದುಂ, ಜ್ಞಾನಧ್ಯಾನ ಸಮನ್ವಿತ ಮುಮಾದುದೇ ತಪಮೆಂಬುದು. ಆದೆಂತೆನೆ :—

ಕಂ|| ಪೆಣ್ಣಿಂಗಂ ಪೊನ್ನಿಂಗಂ |
ಮಣ್ಣಿಂಗಂ ಕಾಂಕ್ಷೆಯಿಂದಮೆಱಗದೆ ಲೋಕಂ ||
ಬಣ್ಣಿಸೆ ಚಂಚಲನಾಗದೆ |
ತಿಣ್ಣಂ ನಡೆವವನೆ ತಾಂ ತಪೋಧನನಕ್ಕುಂ ॥ ೩೯ ॥

ಶಾ|| ಪಾಲೊಳ್ ಮೊಕ್ಕಳವಾಗಿ ಪೊಯ್ಯೆ ಜಲಮುಂ ಬೆಳ್ಪಕ್ಕುಮಂತಲ್ಲದಾ |
ಪಾಲುಂತುಂ ರುಚಿಯಾಗದಂತೆ ಕೆಲಬರ್ ಮಿಥ್ಯಾರ್ಥದುಃಖಿಂಗಳೊಳ್ ||
ಕಾಲೂಱುರ್ದ ತಪಂಗಳೊಳ್ ನೆಗಟಿಪ್ಪೊಡಂ ದುಷ್ಕರ್ಮರೆಂತಾದೊಡಂ |
ಭೂಲೋಕನ್ನೆರನುಪ್ಪ ಸತ್ತಪದೊಳಂ ಪೊಂದಿರ್ದರಂ ಪೋಲ್ವರೇ ॥ ೪೦ ॥

ವ|| ಧರ್ಮಸ್ವರೂಪಮುಂ ಪೇಳಲ್ಪಿನದೆಂತೆನೆ :— ಸಮ್ಯಗ್ದರ್ಶನ ಜ್ಞಾನಚಾರಿತ್ರದೊಳ್ ಕೂಡಿ ಹಿಂಸಾನೃತಸ್ತೇಯಾ ಬ್ರಹ್ಮಪರಿಗ್ರಹ ನಿವೃತ್ತಿಯಂಮಾಡಿ ದಾನಪೂಜಾಶೀಲೋಪವಾಸಮೆಂಬಿವ ಱೊಳ್ ಕೂಡಿದುದೆ ಸದ್ಧರ್ಮ[1]ಮೆನಿಕುಂ.

ಮ.ಸ್ರ|| ವ್ರತಮುಂ ಕೆಯ್ಯೊಂಡು ಮೂಢತ್ರಯಮನುಱದು ನಾನಾಗುಣಾನ್ವೀತಶೋಭಾ |
ನ್ವಿತಮಪ್ಪಾಚಾರದಿಂದಂ ನಡೆದು ವಿಮಲ ರತ್ನತ್ರಯಾನೀಕಮಂ ಸ ||
ನ್ನುತಪೂಗಲ್ ಪೆತ್ತು [2]ದೇವಾಧಿಪಪದವಿಗಳೊಳ್ ಬರ್ದ್ದು ಕೈವಲ್ಯಲಕ್ಷ್ಮೀ |
ಪತಿಯಾದರ್ ಜೈನಮುಂ ನಂಬಿದರೆನಲಿದು ಬೆಟ್ಟಿಚ್ಚಗೋಲ್ತಪ್ಪಿತುಂಟೇ ॥ ೪೧ ॥

ವ|| ಜಿನಧರ್ಮಮೆಂಬ ನೀರಿಂ ಕರ್ಮಮೆಂಬ ಕಿಚ್ಚಂ ನಂದಿಸದೆ, ಜಿನಾಗಮಮೆಂಬ ಗ್ರಹವಾದಿಯಿಂ ದುಷ್ಕರ್ಮಮೆಂಬ ಗ್ರಹಮನೆಲ್ಬಟ್ಟದೆ, ವ್ರತಮೆಂಬ ಪಱುಗೋಲಿಂದಶುಭಮೆಂಬ ತೊಱೆಯಿಂ ಪಾಯದೆ, ಜಿನಪಕ್ಷಪಾತಮೆಂಬ ಸಿಡಿಲಿಂ ಪುಣ್ಯವಿರೋಧಿಯಾಗಿರ್ಪ ಮರನನುರಿಪದೆ, ಜಿನಭಾವನೆಯೆಂಬ ಬಡಬಾಗ್ನಿಯಿಂ ವಿಷಯಸಾಗರಮಂ ಪೀರದೆ, ಜಿನಾಭಿಷೇಕಮೆಂಬ ಕೂರಲಗಿನಿಂ ಕರ್ಮಪೈರಿಯೆಂಬೊಡ್ಡಂ ತಡಿಯದೆ, ಜಿನಕಥಾಪ್ರೀತಿಯೆಂಬ ಸಿಂಹದಿಂ ದೋಷಮೆಂಬ ಗಜಮುಂ ಸೀಱದೆ, ಜಿನಧರ್ಮಪ್ರಿಯಮೆಂಬ ವಜ್ರದಿಂ ಮಾಯೆಯೆಂಬ ಬೆಟ್ಟಮನೊಡೆಯದೆ, ಜಿನಪೂಜಾನಂದಮೆಂಬ ದಾವಾಳನಿಂ ಮಾನಮೆಂಬಡವಿಯಂ ಕಡಿಯದೆ, ಜಿನರೂಪದರ್ಶನ ಹರ್ಷಮೆಂಬ ಬಿಸಿಲಿಂ ದೋಷಮೆಂಬ ಶೀತಮುಂ ಕೆಡಿಸದೆ, ಜಿನಲಕ್ಷಣ ನಿರೀಕ್ಷಣಮೆಂಬ

(1) ಮೆಂಬುದಕ್ಕುಂ (ಳ) (2) ನು(ಮು)ಱಯದೆ

ಚಂದ್ರನಿಂದಂತರಾಯಮೆಂಬ ತಾವರೆಯಂ ಮುಗಿಸದೆ. ಜಿನಭಕ್ತಿಯೆಂಬ ಸೊಡರಿಂ ದರ್ಶನಾವರಣಮೆಂಬ ಕಲ್ತಲೆಯಂ ಪಿಂಗಿಸದೆ, ಜಿನತತ್ವವಿಚಾರಮೆಂಬಱಸಿಂ ಜ್ಞಾನಾವರಣಮೆಂಬಾಟವಿಕರ ನೆರವಿಯನೋಡಿಸದೆ, ಜಿನಪಾದಸ್ನೇಹಮೆಂಬ ದಂಡಿಂ ವೇದನೀಯಮೆಂಬ ಗಡಿಯನಾಯಕರನೋಡಿಸದೆ,ಜಿನಚರಣಾವಲಂಬಮೆಂಬಕೋಂಟೆಯಿಂ ಮಿಥ್ಯಾತ್ವಮೆಂಬ ಸೂಱೆಗಾರನಂ ಕಾದಿ ಗೆಲ್ಲದೆ, ಜಿನಸ್ತವನ ರುಚಿಯೆಂಬ ಮೇಘಗರ್ಜನೆಯಿಂ ನರಕಗತಿಯೆಂಬ ಹಂಸೆಯನೋಡಿಸದೆ ಜಿನತತ್ವಕಾಂಕ್ಷೆಯೆಂಬ ಬಾಣದಿಂ ತಿರಕಗತಿಯೆಂಬ ಕಾಗೆಯನೋಡಿಸದೆ, ಜಿನಾರಾಧನೆಯೆಂಬ ಹಿಮದಿಂ ಮನುಷ್ಯಗತಿಯೆಂಬ ಬಾಳಸಹಕಾರನುಂ ಕೆಡಿಸದೆ, ಜಿನರನೆರವಿಯೆಂಬ ಬಾಣದಿಂ ಮನುಷ್ಯಗತಿಯೆಂಬ ನಿಗಳಮಂ ಭೇದಿಸದೆ, ನೆರೆಮನೆಯವರಂ ಪಾವಂ ಪಿಡಿಯಿಮೆಂಬಂತೆ, ನೆರೆಗೆಯ್ಯವರಂ ಬಿತ್ತಿಕೊಡಿಮೆಂಬಂತೆ, ಸವತಿಯ ಮಗನಂ ಬೇಡಿಕೊಂಬಂತೆ, ಬಟ್ಟಿವೋಪರಂ ಪುಲಿಯಂ ಇಱಿಯಿಮೆಂಬಂತೆ, ತಿರಿಯಬಂದವರಂ ಕೂಲನಡಿ(ಯೆ)ಮೆಂಬಂತೆ ಬಿರ್ದುಬಂದವಳಂ ಪೆಂಡಿತಿಯಾಗೆಂಬಂತೆ. ಲೋಗ(ಕ)ರಂ ಮನೆಯಂ ಕಾಯ್ದಿರಿಮೆಂಬಂತೆ ನಿರ್ಬುದ್ಧಿಯಿಂ ಪೆಱವನೆನಗೆಂದಿರ್ದೊಡಂ ಶಾಶ್ವತಸುಖಂ ದೊರೆಕೊಳ್ಳದು, ಮುನ್ನಂ ತನ್ನ ಮಾಡಿದ ಕರ್ಮದುದಯದಿಂದೆಯ್ದಿದ ಸಾವುಮಂ ನೋವುಮಂ ಪೆಱರಂ ಪರ್ಚಿ ಕೊಳಿಮೆಂದೊಡೆ ಪರ್ಚಿಕೊಳ್ವರೆ? ಸದ್ಧರ್ಮಮಂ ಪೊರ್ದಿ ಸುಖದಿನಿರ್ಪೊಡಂ ಕುಧರ್ಮಮಂ ಪೊರ್ದಿ ದುಃಖಂಬಡುವೊಡಂ ತಾನೆಯಲ್ಲದೆ ಪೆಱರೊರ್ವರುಂ ಸಹಾಯಮಾಗರ್—

ಹರಿಣೇ॥ ರುಜೆಗಳೊದವಿಂ ದುಃಖವ್ರಾತಂಗಳಿಂ ಪೆಱರೊತ್ತಿನಿಂ ।
ಪ್ರಜೆಯ ಭಯದಿಂ ಪೊಂಗಿಂ ಶೀತೋಷ್ಣದಿಂ ನೆಲಪಾಯಿನಿಂ ॥
ಕುಜನನೆರವಿಂ ಸ್ತ್ರೀಯಿಂದತ್ಯಂತ ಮಿತ್ರರಗಲ್ಕೆಯಿಂ ।
ವೃಜಿನದೊದವಿಂ ದುಃಖಂ ಸಾರ್ಗುಂ ಮನುಷ್ಯರನೆಲ್ಲಿಯುಂ ॥ ೪೨ ॥

ಅರಿ[ಯ]ಭಯದಿಂ ಧಾತ್ರೀನಾಥರ್ಕಳೊಂದತಿಬಾಧೆಯಿಂ ।
ಸುರತದಳಿಪಿಂ ಮುನ್ನಂಕೊಂಡುಂಡ ಸಾಲದ ಚಿಂತೆಯಿಂ ॥
ಬರನ ತೆಱವಿಂ ನಂಟರ್ ಪುತ್ರರ ಸಹಾಯಕರ ನೋವಿನಿಂ? ।
ದುರಿತದೊದವಿಂ ದುಃಖಂ ಸಾರ್ಗುಂ ಮನುಷ್ಯರೆನೆಲ್ಲಿಯುಂ ॥ ೪೩ ॥

ಕಂ॥ ದುರಿತಂ ಕೆಡದನ್ನೆವರಂ ।
ಪರಮಜಿನಾಗಮಮನಱಿಯದನ್ನೆವರಂ ನಿ ॥
ಷ್ಕರಮಪ್ಪ ದುಃಖಚಯಮಂ ।
ಮರಣಮುಮೂಹ ಭವದೊಳಂ ಪಿಂಗುಗುಮೇ ॥ ೪೪ ॥

ಸಂ॥ ಸಂಸ್ಥಾನಂ ಯದನಿತ್ಯತಾऽಶರಣತಾ ಸಂಸಾರ ಏಕಾಕಿತಾऽ ।
ನ್ಯತ್ವಂ ಚಾಶುಚಿತಾಸ್ರ(ಶ್ರ)ವಂ ಸುನಯತಃ ಸ್ಯಾತ್ ಸಂವರೋನಿರ್ಜರಃ ॥
ಲೋಕೋ ಬೋಧ್ಯತಿದುರ್ಲಭತ್ವಮಪರೋ [1]ಧರ್ಮಸ್ತದಿತ್ಯನ್ವಿತೋ ॥
ಭೇದೈಸ್ತೈಃ ವಿಚಯೋऽಸ್ಯ ಚಿಂತನಮನುಪ್ರೇಕ್ಷಾಃ ಸ್ಮೃತಾ ದ್ವಾದಶ ॥ ೪೫ ॥

---

(1) ಧರ್ಮಸ್ತರಿತ್ಯಂಜಿತಂ (ಚ)

ಟೀಕು|| ಯತ್ ಆವುದೊಂದು, [ಸಂಸ್ಥಾನಂ] ಸಂಸ್ಥಾನಮೆಂಬುದು, ಅನಿತ್ಯತಾ–ಅನಿತ್ಯತೆಯುಂ, ಅಶರಣತಾ–ಅಶರಣತ್ವಮುಂ, ಸಂಸಾರ–ಸಂಸಾರಮುಂ, ಏಕಾಕಿತಾ–ಏಕಾಕಿತ್ವಮುಂ, ಅನ್ಯತ್ವಂ–ಅನ್ಯತ್ವವುಂ, ಅಶುಚಿತಾ–ಅಶುಚಿತ್ವಮುಂ, ಆಸ್ರವ–ಆಸ್ರವಮುಂ, ಸಂವರ–ಸಂವರಮುಂ, ನಿರ್ಜರಾ–ನಿರ್ಜರೆಯುಂ, ಲೋಕ–ಲೋಕಮುಂ, ಬೋಧ್ಯತಿದುರ್ಲಭತ್ವಂ–ಬೋಧ್ಯತಿದುರ್ಲಭತ್ವಮುಂ, ಅಪರಃ–ಉತ್ತಮಮಪ್ಪ (ನವಿದ್ಯತೇ + ಪರೋಯಸ್ಮಾತ್ ಸ–ಎಂದುನಞ್ ಬಹುವ್ರೀಹಿ) ಧರ್ಮಃ–ಧರ್ಮಮೆಂಬುದು. ಇತಿ–ಇಂತು, ತತ್–ಅದು, ಸುನಯತಃ–ಒಳ್ಳಿಹನ್ಯೆಗಮದತ್ತಣಿಂ, ಭೇದೈಃ–ಭೇದಂಗಳಿಂದಂ, ಅನ್ವಿತಂ–ಕೂಡಿದುದು, ಸ್ಯಾತ್–ಆಕ್ಕುಂ, ವಿಚಯಃ–ವಿಚಯಮೆಂಬುದು, ಅಸ್ಯ–ಇದಱ, ಚಿಂತನಂ–ಚಿಂತೆ (ಧ್ಯಾನಂ) ದ್ವಾದಶ–ಪನ್ನಿರಡು, ಅನುಪ್ರೇಕ್ಷಾ–ಅನುಪ್ರೇಕ್ಷೆಗಳೆಂದು, ಸ್ಮೃತಾಃ–ಪೇೞಲ್ಪಟ್ಟುವು—

ದುಃಖಗ್ರಾಹಸಮಾಕೀರ್ಣೇ ಸಂಸಾರೇ ಕ್ಷಾರಸಾಗರೇ ||
ಧರ್ಮಪೋತಂ ಪರಂ ಪ್ರಾಹುಃ ಕರಣಾರ್ಥಂ ಮನೀಷಿಣಾಂ ||೪೬||

ತಾ|| ಎಲೆ ಜೀವನೆ, ಸಹಜ ಶಾರೀರಮಾನಸಾಗಂತುಕ ದುಃಖಂಗಳೆಂಬ ನೆಗೞ್ವಂಡಿನಿಂದಿಡಿಕಿಱಿದಿರ್ದ ಸಂಸಾರಮೆಂಬ ಕ್ಷಾರವಾರಿಧಿಯಂ ದಾಂಟುವಾಸನ್ನಭವ್ಯ ಜನಂ[1]ಗಳ್ಗಿಲ್ಲಂ ಅಧ್ರುವಮಶರಣಂ ಸಂಸಾರೈಕತ್ವಾನ್ಯತ್ವಾ ಶುಚಿತಾಸ್ರವಸಂವರ ನಿರ್ಜರ ಲೋಕ ಬೋಧಿದುರ್ಲಭ ಧರ್ಮಮೆ ಪ್ರಧಾನಮಪ್ಪ ತರಣೋಪಾಯಮಾದ ಪಡಗೆಂದು ಕರಸುಱಿದಾರ್ತು ನೆಗೞ್ವರ್ ಕರ್ಮಂಗಳೆಂಬ ನೆಗೞ್ವಂಡಂ ನಿರ್ಮೂಲಂಗೆಯ್ದು ಸಂಸಾರಸಮುದ್ರಮಂ ದಾಂಟಿ ತದುತ್ತರ ಪಟ[ಲ] ಸಮೀಪವರ್ತಿಯಾದ ನಿತ್ಯನಿರ್ಮಳ [2]ನಿರುಪಮಾನಂದ ನಿಜಾವಾಸಮಾದ ಕೈವಲ್ಯದೊಳ್ ಕೂಡಿ ಸುಖಮಿರ್ಪರ್—

ಇಷ್ಟಾದ ಬಳಿಕ ಹಿಂದಣ ಆಶ್ವಾಸಾಂತದಲ್ಲಿರುವ ಉಪಸಂಹಾರದ ಈ ಮೂರುಪದ್ಯಗಳೂ ಇಲ್ಲಿವೆ, ಬಳಿಕ ಆಶ್ವಾಸಾಂತ್ಯ ಗದ್ಯವಿದೆ—

(1) ಚಂ|| ಪರಮಸುಖಂ

(2) ಮ|| ಘನವಂಶೋತ್ತಮ....

(3) ಭವಾರ್ಣವೇ ಜಂತು—

(ಅ–ಸ ಪ್ರತಿಗಳಲ್ಲಿ ಈ ನಾಗಕುಮಾರನ ಕಥೆಯಿರುವುದು)

(1) ಗಳ್ಗೆ (ಕ) (2) ನಿಜಾರಪಾನಂದ (ಚ)

ಪರಿಶಿಷ್ಟ ೨

ಪದ್ಯಗಳ ಅಕಾರಾದ್ಯನುಕ್ರಮಣಿಕೆ

ಪದ್ಯಗಳ ಆದಿ	ಪು.ಸಂ.–ಪ.ಸಂ.	ಪದ್ಯಗಳ ಆದಿ	ಪು.ಸಂ.–ಪ.ಸಂ.
ಅ		ಅರಸರನುಗಳೆಂ	55–34
ಅಡಗಿನ ತೋಲ	129–20	ಅರಸರ್ ಪಾಲಿಂಗೆ	103–23
ಅಡಿಗಡಿ ಗಾಯು	13–23	ಅರಸಿಯರುಂ ಪರಿಜನ	23–41 (40)
ಅಡಿಯೊಳ್ ದುಷ್ಟರ	32–10	ಅರಸೇಬಂಡಮೊ	161–26
ಅಡಿವೇತ್ರಾಸನ	94–1	ಅರಿದಿಲ್ಲಬ್ಯದರಿಲ್ಲ	36–21
ಅಣಿಮಾವ್ಯೈಶ್ವರ್ಯ	36–20	ಅಲಘುತರನಸ್ತು	87–28
ಅಂತಂದಿನದೆವಸಂ	41–31	ಅಲ್ಲಿಗೆ ಮುನ್ನ	38–23
ಅಂತಕನೆಂಬಠಕ್ಕಂ	30–4	ಅವರ ಕುಲಕ್ಕೆ	177–29
ಅಂತಪ್ಪ ಧನಾಢ್ಯಂ	111–43	ಅವರಿವರನ್ನರಿನ್ನ	8–7
ಅಂತಪ್ಪಾಕೆಗೆ	106–32	ಅವುಲಬ್ಧಿ ಚತುಷ್ಟಯ.	3–8
ಅಂತಪ್ಪೈಶ್ವರ್ಯ	62–48 (49)	ಅವ್ಯಾಬಾಧ	139–28
ಅಂತಾಗಳ್ ಭುವನಂ	112–44	ಅಷ್ಟೋಪವಾಸ	232–52
ಅಂತಿಂತೆನ್ನದೆ	168–6	ಅಱಿಗುಂಕಾಣ್ಗು	188–10
ಅಂತೆಯ್ದಿದ ದುಃಖಂ	60–44	ಅಱಿತಮುಂಬಯಣಂ	122–68
ಅತಿಶಯದಾನಮುಂ	231–50	ಅಱಿತದೊಳೊಂದಿ	100–14
ಅತಿಶಯವಿದೇಹ	132–27	ಅಱಿದುಂ ಕಂಡುಂ	70–17
ಅತಿಶಯಶೀಲವಂತೆ	229–43	ಅಱಿದೊಡಮೇಂ	210–59
ಅತ್ತದುರಶ್ವದ	61–45	ಅಱಿಯಮೆಯಾಯ್ತು	85–22
ಅತ್ತೆಯುಮಾಸೊಸೆ	121–67	ಅಱಿಯದನನಂತ	168 7
ಅಂದುಗೆಯಗ್ಗರ	118–60	ಅಱಿಯಱಿಯೆನೋಡೆ	7–4
ಅದಱಿಂತಪಮಂ	194–25	ಅಱಿವಂತಾಳ್ದಿ ಪರಿ	190–16
ಅನವರತಭೋಗ	234–62	ಅಱಿವಂತಾಳ್ದಿರವುಂ	167–2
ಅನುಪಮಕಾವ್ಯ	2–6	ಅಱಿವಂಪೊರ್ದಿದ	124–2
ಅನುಪಮಕುಬೇರ	88–30	ಅಱಿವಿಂ ತ್ರಿಭುವನದ	187–5
ಅನುಪೆಮಮತರ್ಕ್ಯ	226–32	ಅಱಿವಿನಗರ್ವದಿಂ	158–16
ಅನುಭವಿಸಸುಖ	221–21	ಅಱಿವಿಲ್ಲದೆ ತಕ್ಕೆಡೆ	2–7
ಅನುಪಮವಿಮಾನ	182–44	ಅಱಿವುದುಃಖದೊಳ್	22–40 (39)
ಅನ್ಯಮತಂಗಳೇವು	221–20	ಅಱಿವುದುಪೊರ್ದಿ	123–1
ಅ(ಆ)ಬ್ರಹ್ಮಂದಶವಿಧ	138–7	ಅಱಿವುಳ್ಳಂರುಜೆ	190–14
ಅಮಿತದ್ವೀಪ	96–3	ಅಳವಲ್ಲದೊಗೆದ	23–42 (41)
ಅರಸಂಬಾಮುನಿ	226–34	ಅಳುರ್ದೊಗೆವುರಿ	181–39

ಪದ್ಯಗಳ ಆದಿ	ಪು.ಸಂ.–ಪ.ಸಂ.
ಅಲುನುಡಿಗೇಳ	127–12
ಅಲುವಿಗೆ ಬಿತ್ತಾಗಿ	134–32
ಆ	
ಆಂಕಾಲ್ವಿಡಿ	117–57
ಆಗದುದಣಮಾಗದು	171–15
ಆಗಳಱೈ ಸುಧರ್ಮ	119–64
ಆಗಳು ಮೋದು	160–24
ಆದಂತಕ್ಕೆನಗ	171–14
ಆನಾಡಾವೊಲಾ	54–31
ಆನೆತ್ತಲ್ ಮಾಱಿತ್ತ	197–31
ಆನೊರ್ವನೆಲ್ಲ	46–11
ಆಪಾವುಪೋಗದೆ	179–35
ಆಪಿರಿಯಬಾವಿ	55–33
ಆಪೊಲಲೊಳ್ವಣಿಗ್ಗನೆ	198–33
ಆಂಪೋಗಿನುಡಿದೆ	116–55
ಆಮಹನೀಯಕಲ್ಪ	215–6
ಆಮುನಿಯನೋಡೆ	179–34
ಆಯಂಗೆಟ್ಟುಪತಿ	228–38
ಆಯುಂಸೊಗಯಿಪ	48–15
ಆಯುವ್ಯಷ್ಟಿತಿ	70–16
ಆಯುಮಾಯವೊಡಲ್	7–5
ಆರುಮನೆನ್ನ ನಾಂ	162–28
ಆರ್ಕಾವೊಡುಯ್ಯುದೇಂ	228–40
ಆವೆಡೆಯೊಳಾವ	187–7
ಆವೊಂಗೆಪುಣ್ಯ	174–24
ಆಱುಂದ್ರವ್ಯದ	186–2
ಇ	
ಇಂತನುಪಮ	4–9
ಇಂತಪ್ಪನೆಗಟ್ಟಿ	109–38
ಇಂತಪ್ಪುದುಮೆಯ್	135–33
ಇಂತೀತಿರ್ಯಗುಪ	115–52
ಇಂತುವರಾಂಗನೆಂಬ	63–49
ಇತ್ತಲ್‌ಕಮಳೆಯ	88–31
ಇಂದ್ರತ್ವಂ ಬಲದೇವ	218–12
ಇಂದ್ರನಿಲ್ಲದಸಗ್ಗ	114–49
ಇದುಪೊಲ್ಲದಿದೊಳ್ಳಿತು	11–16
ಇದು ಭೋಜ್ಯಮಭೋಜ್ಯ	170–11
ಇದುವೊಳ್ಳಿತು	108–37
ಇನಿತುಕಸವರ	149–32
ಇನಿದೆಂಬಯ್ ವಿಷಯ	172–17
ಇನ್ನಿರಲಾಗದು	25–47 (46)
ಇನ್ನೆಗಂ ಕೂರ್ಮೆಯಿಂ	233–59
ಇಂಬಳಿವಂದು	69–14
ಇಭಪತಿಯನೇಱಿ	105–31
ಇರುಳೊಟ್ಟಿಕೊಂಡು	149–31
ಇಲ್ಲದೊಡೆ ಬಡವ	14–26
ಇವುದೋಷಂ	47–14
ಇಱಿ ಇಱಿನ್ಮೃಗ	150–33
ಈ	
ಈಗಡಿನ ಸುಖಂ	223–25
ಈಗಳೆಗೃಹಕ್ಕೆ	133–29
ಈತನಗರ್ಭದಿಂ	195–27
ಈತನೆ ಕಾದಿ	59–42
ಈತೆಱದ ಕಲ್ಪಿಯಂ	165–33
ಈತೆಱದಿಂದಮಿತೆಱ	186–4
ಈನೆವದಿಂ ಕೊಲಲ್	206–50
ಈ ಮುಳಿಸುತಿಳಿವ	117–57
ಉ	
ಉಡುಗುತೆ ಬೆಳಗಂ	125–5
ಉಡೆಯೊಳ್ ತಗುಳ್ಚಿ	117–59
ಉತ್ತಮಗುಣನಿಂತಿ	112–45
ಉತ್ತಮಪಸ್ತು	52–29
ಉತ್ತುಂಗವೃಷಭ	105–30
ಊ	
ಊನಮಿಲ್ಲದ ನಿಮ್ಮ	232–57
ಎ	
ಎಡೆವಿಡದಿನ್ನೆಗಂ	71–20
ಎಂತುಂ ಕೆಡುವುದು	12–17
ಎಂತುಮೆಱೆದುಯ್ದಪಂ	229–42
ಎಂತುಂಸೈರಿಸಲಾಗೆ	182–45

ಪದ್ಯಗಳ ಆದಿ	ಪು.ಸಂ.–ಪ.ಸಂ.	ಪದ್ಯಗಳ ಆದಿ	ಪು.ಸಂ.–ಪ.ಸಂ.
ಎತ್ತಣ ನಂಟರಾವ	72–24	ಎಲ್ಲರು ಮಾಟಪರ್	15–31
ಎತ್ತಲುಂ ಜಯಜಯ	234–61	ಎಲ್ಲಾ ಕಾಲಮುಮೆಮ್ಮವ	200–38
ಎತ್ತಾನುಂ ಯೋಗಿ	207–52	ಎಲ್ಲೆಡೆಯೊಳ್ ಚತುರ್ಗತಿ	78–2
ಎಂದಿಂಗಮೆಮಗೆ	7–6	ಏ	
ಎಂದಿಂತುನಾರಕರ್	151–34	ಏಕಱವನುಱದೆ	85–21
ಎಂದಿರ್ದುಂ ನಿನಗಲ್ಲ	67–8	ಏಗೆಯ್ದೊಡಮೆಂತುಂ	126–11
ಎಂದೊಡನೊಡನ	121–66	ಏನೀಬೆಸನದಮೋಹಂ	222–23
ಎನಗಾನೆಪಗೆ	44–3	ಏನುಮನೊಲ್ಲೆ	167–4
ಎನಗಿದುವಾನು	71–21	ಏನೋಪೇಱುಮಿದೀ	178–32
ಎನಗೆನಗೆಂದು	45–8	ಏಂಪೇಱುಮಱಿಯಿರೆ	232–56
ಎನಗೆ ಪೊಡೆವಟ್ಟು	40–29	ಓ	
ಎನಗೆಮ್ಮ ಸೆಟ್ಟ	226–33	ಒಕ್ಕಱವೆಲ್ಲನುಂ	137-4
ಎನಗೊದವಿರ್ದ	200–39	ಒಡನಡಿಯಿಂದಾ	180-39
ಎನಿತಂವಸ್ತುಗಳಂ	83–15	ಒದವೆಂಪುರಾಕೃತ	120-17
ಎನಿತಾನುಂಕಾಲಂ	216–9	ಒಡಮೆಯುಮೊಡಲುಂ	30-3
ಎನಿತಾನುಂ ಕೋಟಿ	231–47	ಒಡಮೆಯೊಳೆಂತು	13-25
ಎನಿತಾನುಂತೆಱದಿಂ	97–7	ಒಡಲನೆ ಪುಚ್ಚಿ	126-8
ಎನಿತಾನುಂನೋಂಪಿ	232–55	ಒಡಲನೆ ಪೊರೆವಂ	103-24
ಎನಿತೆನಿತುಳವದ	67–9	ಒಡಲ ಪರಿಗ್ರಹ	188-9
ಎನಿತೆನಿತಗ್ಗಳನೆಗಲ್ದು	220–16	ಒಡ ಲೊಡಲೋಳಿ	48-16
ಎನಿತೊಳವು ಕಾವು	33–11	ಒಡವೆಯನುಂಟು	9-11
ಎನ್ನಂ ಪತಿಕಂಡ	116–54	ಒಡೆಯಂಗಪ್ಪುದುಕೇಳ	216-8
ಎನ್ನಯ್ದು ಮಿಂದ್ರಿಯಂ	48–17	ಒಡೆಯಂ ತಣಿಯದೆ	83-17
ಎನ್ನವರೆಂದು	68–12	ಒಂದುಮುಂ ಕಡೆಗಣಿಯಿಸ	233-58
ಎನ್ನಾಣ್ಮನಲ್ಲದಂ	227–35	ಒಂದೆಡೆಯೊಳ್ ಮರು	86-27
ಎನ್ನಿಂ ಬೇಱುಪ್ಪುದ	72–23	ಒಂದು ಭವದೊಳಗಿಂತು	92-37
ಎನ್ನುಂಡುಪ್ಪಿನೊಳಾದ	163–30	ಒಂದಿಂದ್ರಿಯದೊಳಗೆ	80-7
ಎನ್ನೆವರಂ ಬಿಸುಡು	192–19	ಒಂದು ಪಣವಿನ ಮೊದಲ್ಗೆ	205-48
ಎನ್ನೊಳ್ಪುದು	44–5	ಒಂದುಮುಂಕಡೆಗಣಿಸ	233–58
ಎಂಬುದು ಋಷಿವಾಕ್ಯ	133–30	ಒಂದೆಕಳತ್ರಂ	46–9
ಎಮ್ಮಣ್ಣನಱಿದುಮನೆ	211–63	ಒದವಿದಮೋಹದಿಂದ	157–14
ಎರಡುಂ ತೆಱದ	166–1	ಒರ್ವನೆನರಕಂ	43–1
ಎರಡುಂ ಮಾಱುಕ್ಕಿಯ	214–2	ಒರ್ವನೆಮುನ್ನ	44–4
ಎಲೆ ಎಲೆ ಜೀವರಾಶಿ	169–8	ಓ	
ಎಲೆಬಗೆಯಿಲ್ಲದೆನ್ನೊಡನೆ	176–28	ಓಡಿಸಲಾರ್ಪನೇ	160–22

ಪದ್ಯಗಳ ಆದಿ	ಪೃ.ಸಂ.–ಪ.ಸಂ.
ಓಡುವೊಡಮಣ್ಮೆ	45–7
ಓಡೆಪಿಡಿದೆನ್ನ	178–31
ಕ	
ಕಟ್ಟತೊಡಂಕೆ	97–6
ಕಟ್ಟಿದುರಿತಂಗಳಿಂ	71-19
ಕಂಡಿರೆವಣಿಜೋತ್ತಮ	114-47
ಕಂಡಿರೆಗಾಳಿಯುಂ	114-48
ಕಡುಗಾಳಿಯ	181-42
ಕಡುಗಿರ್ಚಂನದಿಪ	51-24
ಕಡುಗೆಳೆಯನೊಂದು	85-23
ಕಡುದುಃಖಮೆಂಬ	81-11
ಕಡುಮುಳಿದು ನೋಡಿ	66-5
ಕಡುಮೋಹಮೊತ್ತಿ	155-9
ಕಡುವಿಸಿಲಾದೊಡೆ	22-42
ಕಡುವೇಟದಪೆಂಡಿರೊ	217-11
ಕನಕದಿಂ ರತ್ನದಿಂ	231-49
ಕಂಪುಳ್ಳದಱಿಂ	142-17
ಕರಮಗ್ಗಳ	100-13
ಕರಮಸಿಯನಾದ	32-9
ಕರಮೆರ್ದೆಯೊಳ್	172-18
ಕರಿಯವು ಪಿರಿಯವು	180-38
ಕರಿವೃಷಸಿಂಹ	17-33
ಕಲ್ಪಕುಜಸಮಿತಿ	99-11
ಕಸವರಮೆತ್ತ	76-31
ಕಱಿಯೆಬಸ	26-49 (48)
ಕಾಡೆಲ್ದು ಕೂಡೆ	56-33
ಕಾವುವೆಮರ್ದು	42-33
ಕಾಳನುಮತ್ಯುಗ್ರ	58-40
ಕಿಡಲೆಂದಿರ್ಪುದು	70-18
ಕಿಡುವಕಸವರ	214-3
ಕಿಡುವುದುತಾನುಂ	125-7
ಕೆಂಡಂಗಳನುಗುಳುತ್ತುಂ	182-43
ಕಿರ್ಚಂಪೊರ್ದಿದ	127-13
ಕೆಱಿದಾನುಂಕಱಿಯಿಂ	101-16
ಕುಡಲಾರ್ಪೊಡೊಡೆಯ	158-17
ಕುಡಿಯಲ್ ನೀರ್ಗಗುಳುತ್ತು	222-22
ಕುತ್ತಂ ಗುಣಮುಳ್ಳವ	189-13
ಕುದಿಯಿಸುವಿಂದ್ರಿಯ	81-10
ಕುರುಡರ ಕಣ್ಣಿಂದೆ	141-13
ಕುಲಮುಂ ರೂಪಮು	217-10
ಕುಲವಧುವಶೀಯೆ	56-35
ಕುಲವೆಣ್ಗೊರ್ವನೆ	228-41
ಕೂರದರುಮ	68-11
ಕೆಯ್ವಾರಂ ನಿನಗಲ್ಲ	68-10
ಕೆಲರ್ ಶಾಂತಿಯಂ	40,41-30
ಕೇಡಿನೊಳಪ್ಪುದು	102-20
ಕೊಂದೆತ್ತವುಗುವೆ	59-41
ಕೊರಲೊಳಗೆ ಕಾಲ	65-7
ಕೊಲೆನವಭೇದ	136-2
ಕೊಲ್ಲದಸತ್ಯಮುಂ	153-2
ಕೊಲ್ಲದ ಕಳ್ಳದಿರ್ಪ	203-44
ಕ್ರಮದೊಳ್ಪಿಂಗೆ	102-19
ಕ್ಷಮೆಯಿಂಕ್ರೋಧ	154-6
ಖ	
ಖಳಕರ್ಮಾಷ್ಟ	2-2
ಗ	
ಗತಿಗಳ್ನಾಲ್ಕುನ	77-1
ಗತಿಮಗುಟ್ಟು	51-25
ಗರ್ವಮಡಂಗಿ	44-2
ಗಿಡುಗಡಿದುಲ್ತು	49-18
ಗುಣದೊಳ್ಪಿರಿಯೊಳ್	145-23
ಗುಱಿನೆಱೆವಿನೆಗಂ	11-18
ಚ	
ಚತುರಿಕೆ ಹೇಮ	107-34
ಚಾರಿತ್ರಮುಮೊಳ್ತಪ	175-26
ಚಾರಿತ್ರಾನ್ವಿತರಾಗಿ	165-34
ಜ	
ಜಗದೊಳ್ ಚೋದ್ಯಂ	142-15
ಜಗದೊಳ್ ವಿಸ್ಮಯ	17-34
ಜಯವಿಬುಧಪತಿ	183-46

ಪದ್ಯಗಳ ಆದಿ	ಪು.ಸಂ.–ಪ.ಸಂ.
ಜಳವಿಹಗಂಗಳ	50-32
ಜೀವನೆ ನೀನಿದಂ	5-1
ಜೋನಿನಗಾದತಾಯ್	90-34
ಜೋನೀಂಮಗನೇ	90-33
ಜ್ಞಾನಾದಿತ್ರಿಕರತ್ನ	186-3
ತ	
ತಡಿಯೆಡೆಯೊಳ್	164-31
ತಡೆಯದೆ ಜಗತ್ತ್ರಯಂ	190-15
ತಡೆಯದೆ ತಳ್ತೊಂದೊಂದ	178-33
ತಡೆಯಲೆಡೆ	27-50 (49)
ತಂದೆ ಮಗಂಪುಟ್ಟಿದ	106-33
ತಂದೆಮಗನಂ ಮಗಂ	69-15
ತಂದೆ ಮೊದಲಾದ	201-40
ತಂದೆವಿರುಂ ತಾಯುಂ	231-46
ತನಗತ್ಯಂತಸುಖಂ	69-13
ತನುಕಿಸುಗುಳ	131-25
ತನುತನಗಿಲ್ಲ	32-8
ತನುಧನವನಿತಾ	136-1
ತನು ನಿಲ್ಲದು	210 } 60 211 }
ತನುಬಳಮುಂ	26-48 (47)
ತನುಮಳಧಾರಿ	210-58
ತನುವಿನಪುಟ್ಟ	128-16
ತನುವಿನೊಳಾದ	50-22
ತನ್ನಂ ತನ್ನಿಂದಳ	193-21
ತನ್ನನೆಗಱ್ದರ್ದಸುತೆ	207-51
ತರತರದೆನೆಗೆವ	181-41
ತಲೆಗಿರಿಱ್ದುಟ್ಟು	89-32
ತಱಸಂದೇಕವಿಹಾರಿ	47-12
ತಿನಲಾಡಂ ಪಿಡಿದೊರ್ವ	11-19
ತಿರಿದೀಸಂಸೃತಿ	11-77
ತೀವಿದ ಮೋಹಮೆಂಬ	80-8
ತುಂಬಿದ ಬೊಡ್ಡಣ	199-34
ತುರಗ ಮೆಲಿದುಯ್ವ	62-47 (48)
ತುರಗ ಸಮೂಹ	53-30

ಪದ್ಯಗಳ ಆದಿ	ಪು.ಸಂ.–ಪ.ಸಂ.
ತೆಂಕಣಿನಾಪುರಕ್ಕೆ	87-29
ತೆರೆದ ಮೊಗಂ ಬಾಗಿದ	208-53
ತೊಟ್ಟನೆ ಪೋದ	126-10
ತೊಟ್ಟನೆ ರಾಗಂ	57-38
ತೊಱೆದು ಪರಿಗ್ರಹಮುಂ	168-5
ತೊಱೆದು ಪರಿಗ್ರಹಮೆ	101-17
ತೊಱೆ ಬರ್ಪಂದು	65-2
ದ	
ದಯೆ ತಳ್ತಿರೆ ಸಲೆ	164-32
ದರಿಯಮರನಂತೆ	6-2
ದರುಸನ ಸುದ್ದಿ	156-12
ದಾನಂಗೆಯ್ಯೆ ಸುಪಾತ್ರ	223-26
ದುರಿತಂನೀರ್	80-6
ದುರಿತಂಭಯದಿಂ	159-19
ದೆವಸದ ಕುಂದೆ	12-21
ದೆವಸಮಿಲ್ಲದೆಯುಂ	204-46
ದೆಸಗಳನುಟ್ಟು	35-16
ದೋಸಂಗಳ	130-23
ಧ	
ಧನಪಾಳಂಗಾದೇವಂ	203-45
ಧನಮಿನಿತುಂಟವುಂ	203 45
ಧನಮುಂ ಕಳತ್ರ	64-1
ಧನಮೊಂದಿಂದ್ರಿಯ	46-10
ಧನ್ಯಂಗೆ ಕುಸುಮ ಶರ	204-47
ಧರಣಿಜಯಮೆಂಬ	148-30
ಧರೆಗೆಲ್ಲಂ ಚೋದ್ಯ	231-48
ಧರೆಯಂವಾರಿಧಿ	74-28
ಧರೆಯೊಳ್ ಪೆಱರ	75-29
ಧರ್ಮಮನಾದಿಯೆ	213-1
ಧರ್ಮಮನೆ ಕಿಡಿಸಿ	215-5
ಧಾತುಮಲಾದಿ	128-18
ಧೀರಾನಮೋಸ್ತು	116-53
ಧೈರ್ಯಂಸರ್ವ	2-3
ನ	
ನಚ್ಚುವರತ್ನದಿಂ	99-10

ಪದ್ಯಗಳ ಆದಿ	ಪು.ಸಂ.–ಪ.ಸಂ.
ನಂಟರ್ ದ್ರವ್ಯದಿ	72-22
ನಡೆವಸುಡಿವುಣ್ಬ	153-3
ನಮ್ಮ ಮನೆಗೊಸಗೆ	38-24
ನರಕದೊಳುಂಟೆ ದಿವ್ಯ	93-39(11)
ನರನರರುರ್ವಿಯೊಳ್	146-24
ನಲ್ಲವೊಸುಕುಮಾರಾ	115-51
ನಾನಾಪ್ರಕಾರಮಪ್ಪಿನಿ	189-11
ನಾಮುಂಮಾನಸರೆಂ	202-41
ನಾರಕನಪ್ಪುದೊಂದೆಡೆ	86-24
ನಾಲ್ಕುಂ ಕಷಾಯದಿಂದೀ	143-19
ನಿಚ್ಚಲಿನ ನಿದ್ದೆ	12-22
ನಿನ್ನ ಕೇಡಿಂಗಲಿಲ್ದೆನ್ನ	233-60
ನಿನ್ನದು ನೇಗಿಲೆಲ್ತು	200-37
ನಿನ್ನುಲ್ತ್ರಸಾಲೊಳಗೆ	200-36
ನಿನ್ನೊಡವುಟ್ಟಿದ	82-12
ನಿಂಬಗ್ರಾಮದ	162-32
ನಿಮ್ಮಡಿಯೆಲ್ತಱಿ	110-41
ನಿಮ್ಮಿರ್ವರುಮುಳ್ಕೊಡೆ	39-28
ನಿರತಿಶಯಮಪ್ಪ	216-7
ನಿಲ್ಲದುಮನೆಂತುಂ	8–8
ನಿಱಸಲ್ವೇಱ್ಪುದು	33-12
ನುಡಿನೀರಾನನ	66-4
ನುತವೈಶ್ಯೋತ್ತಮ	235-64
ನೆಟ್ಟನೆ ಜೀವಮುಂತದು	187-6
ನೆಟ್ಟನೆ ಸರ್ವಭಕ್ಷಿ	104-25
ನೆನೆದೀಸಂಪತ್ತಿ	175-25
ನೆರ(ರೆ)ಪುವಳಿಪು	79-5
ನೆರೆಪಲ್ವೇಱ್ತುಮೆ	191-18
ನೆರೆಪುದೊಪ್ಪೆ ಪುಣ್ಯ	219-14
ನೆರೆವೆಂಪೆಂಡಿರೊಳೆಂಬ	140-10
ನೆಲವಾಸಿಂ ನೆಲದತ್ತ	101-18
ನೆಲಸಿರ್ದುಕ್ಕೆನಮೆಂಬ	147-27
ನೆಲೆವಾಱೀವಧನಂ	173-21
ನೆಱನಂದುಷ್ಕೃತ	82-14
ನೆಱಿಯದಕಳೆಯಿಂ	31-7

ಪದ್ಯಗಳ ಆದಿ	ಪು.ಸಂ.–ಪ.ಸಂ.
ನೆಱಿಯೆಗುಣಂಗಳ್	156-11
ನೋಡಗೃಹಸ್ಥರಂ	34-14
ನೋಡವಿಧಾತ್ರನ	91-36
ನೋನಮಾಡದಿರಾರ್ಗ	10-15
ನ್ಯಾಯದೆಪಡೆ	13-24
ಪ	
ಪಟ್ಟಂಗಟ್ಟಿದನೆಂಗು	10-13
ಪಡುವಣವಾರ್ಧಿಯಲ್ಲಿ	194-24
ಪಡೆರ್ ಸುಖಮಂ	218-13
ಪತ್ತಿಪಸ್ಪೆಪು	73-26
ಪತ್ತಿರ್ದನಂತಭವ	81-9
ಪತ್ತಿರ್ದಿಗಡನುಳ್ಳ	214-4
ಪರವರ ಪುಗನತಿ	196-28
ಪರದಿನ ದಾನಧರ್ಮ	209-56
ಪರಮ ಚಾಂದ್ರಾಯಣಂ	232-54
ಪರಮತವತ್ತಪೊಕ್ಕಱುವ	220-18
ಪರಮ ತಪೋಧನರೊರ್ವರ್	202-43
ಪರಮತಪೋನಿಯೋಗ	99-12
ಪರಮಸುಖಮಲಕ್ಷಯದಿ	235-63
ಪರಮಾಣುಕೆಱಿದು	100-15
ಪರಹಿತಪೆ	35-17
ಪರಿಣಾಮದ ಪೊಲ್ಲಮೆ	152-1
ಪಲಕಾಲಮಾಗರಂ	196-23
ಪಲವನ್ನೋಂಪಿಯಂ	231-57
ಪಲವುಕಾಲಂ	39-26
ಪಲವಂ ಜನ್ಮಮೆ	79-4
ಪಲವೋದಂನೆಱಿ	35-18
ಪಱಿಪುಮನುಳ್ಳಮಳ	52-27
ಪಱಿಯಂಬರಿಸದೆ	154-5
ಪಱಿಯುಮೊದಲ್	8-9
ಪಿಡಿದೊತ್ತಿಪೊಡೆಯೆ	199-35
ಪಿರಿದಪ್ಪ ಧರ್ಮದಿಂ	98-9
ಪಿರಿದಾಪತ್ತಿನೊಳ	14-27
ಪುಟ್ಟದೊಡೆ ಸಾವು-	22-38
ಪುಟ್ಟುಂ ಸ್ಥಿತಿಯುಂ ಕೇಡುಂ	221-19

ಪದ್ಯಗಳ ಆದಿ	ಪು.ಸಂ.–ಪ.ಸಂ.	ಪದ್ಯಗಳ ಆದಿ	ಪು.ಸಂ.–ಪ.ಸಂ.
ಪುಟ್ಟುವುದು ಸೇದೆ	50-23	ಬಲ್ಲಂ ವಿದ್ಯೆಗಳೆಲ್ಲ	30-2
ಪುರವಿಂಗಂ ಪ್ರಭು	61-44 (45)	ಬಲ್ಲಿತು ಕರ್ಮಮೇವೆ	169-10
ಪುಸಿ ನಾಲ್ಕುಮಾಟ್ಕಿ	138-5	ಬಲ್ಲಿದ ರಪ್ಪವರ್	31-6
ಪೂರಿಸುವುದೊರ್ಮೆ	209-57	ಬಸನಕ್ಕಲಿತ್ತಿಗ	139-8
ಪೂವಿನೊಳಾದಕ್ಕೆಯ	111-42	ಒಸನಿಗಳಪ್ಪ	141-14
ಪೆಂಪಿನಗುರ್ವಪ್ಪುದ	75-30	ಬಸಿರೊಳಗಿರ್ದು	131-26
ಪೆರ್ಚುವುದುಪುಳ್ಳಿ	84-19	ಬಿಡದತಿಭಕ್ತಿ	21-38
ಪೆಱದೇಂದುಪ್ಪರಿ	151-35	ಬಿಡದಾರಱುವುಂ	14-28
(ಪ)ಪೆಱರೀಯೆ ಬರ್ಪ	50-21	ಬಿಡದಾಸೆಯೆಂಬ	156-13
ಪೇಸುವುದಪ್ಪು	51-26	ಬಿಡದೆಲ್ಲಂದದಿ	138-6
ಪೊನ್ನೆಲ್ಲಮನೊರ್ಬುಳಿ	105-29	ಬಿಡಿಸಿ ಪರಿಗ್ರಹದ್ವಿ	143-18
ಪೊರೆದನಿತ	127-15	ಬಿತ್ತಿಂ ಬೇರುಂ	15-30
ಪೊಲಗಾಪಿನವರ್	58-39	ಬಿಸುಟೀ ಸಂಸೃತಿ	102-21
ಪೊಲೆ ಮಾತ್ರದೆ	137-3	ಬಿಸುಟುಂ ತಾಯೆನಗೆ	142-16
ಪೊಲ್ಲದು ಮೆಯ್	14-29	ಬಿಸುಟು ಪರಿಗ್ರಹ	49-20
ಪೊಲ್ಲಮಗಳೆಯ್ದೆ	34-13	ಬೆಜ್ಜುಂವಂದೆಯ	36-19
ಪೊಲ್ಲಮಿದೊಳ್ಳಿತೆಂಬೆರಡ	192-20	ಬೆಲೆಯಿಲ್ಲೆಂಬನಿತು	197-30
ಪೊಲ್ಲಮೆಯೆಲ್ಲಮೊಂದು	124-4	ಬೆಸನಂ ಕೆಯ್ಕೊಂಡ	19-36
ಪೊಲ್ಲರ ಸಮಿಪ	34-15	ಬೆಸಸಿರದೆನ್ನನೆಂದು	145-22
ಪೊಱಮಡುವವುಗುವ	49-19	ಬೆಳಗುಂಬೆಂಕೆಯು	173-19
ಪೋಗಲೆ ವೇಱ್ಪುದು	117-58	ಬೇಗಂ ಮನುಷ್ಯ	160-9
ಪೋದ ಭವಂಗಳೊ	112-50	ಬೇಡರಿನೋಡು	148-29
ಪೋದುದು ಸಿನ್ನಿಂ	65-3	ಬೇಡಿದನಬಿಣ್ಪು	157-15
ಪ್ರಾಣದ ಪೋಗಿನೊಳಾದ	130-24	**ಭ**	
ಪ್ರಿಯದೊಳ್ ಕೂಡಿದ	84-20	ಭರದೆ ತಗುಳ್ದರೌದ್ರ	95-2
ಬ		ಭವ ಜಳರಾಶಿಯಂ	155-10
ಬಗೆ ಗಡ ಗರ್ಭದೊಳ್	135-34	ಭಾನುಪುರಮೆಂಬ	176-27
ಬಗೆಗೆಟ್ಟಾತ್ಮನನೊಪ್ಪಿಸಿ	158-18	ಭೋಗಪುರಮೆಂಬ	146-26
ಬಗೆಯೆಂಬುದೊಂದು	147-28	ಭ್ರಾಂತೇಂ ಸುಖಿಗಂ	219-15
ಬಗೆಯೊಳಗೆ ಪುಟ್ಟ	224-29	**ಮ**	
ಬಡತನಮುಳ್ಳವರ್	83-16	ಮಗನಂ ಕೊಟ್ಟೇ	38-25
ಬಡತನ ದೊಂದು	172-16	ಮಗನಕ್ಕುಮೊಂಮಭವ	80-25
ಬಡವಂ ನಿಧಾನಮಂ	211-61	ಮಗನುಂಪೆರ್ಗಡೆ	134-31
ಬನಮೇಱುಂವನ	73-27	ಮಚ್ಚಿಂರಾಗದ್ವೇಷಂ	170-13
ಬರ್ದು(ಲ್ದು)ವುದುಂ	124-3	ಮಡುವಿನೊಳಲ್ದವಂ	211-62

ಪದ್ಯಗಳ ಆದಿ	ಪು.ಸಂ.–ಪ.ಸಂ.
ಮತಿಕಂಭಂ ಘನ	159-21
ಮತಿಗಿಡದೇಕ	73-25
ಮತಿಬೇರ್ನೈಗಮ	188-8
ಮದಕರಿಯಪ್ಪು	86-26
ಮದ್ಯಾಂಗತೂರ್ಯಾಂಗ(ಸಂ)	97-೨
ಮನದೊಳ್ ಭಾಷೆಯೊಳಂ	153-4
ಮನದೊಳಗೊಪ್ಪಿಕಾಮ	144-20
ಮನದೊಳ್ ನೀಲ	96-4
ಮನದೊಳೊಗೆದ	79-3
ಮನಸಿಜನೆಂಬ	84-78
ಮನೆಯೊಳಿರುಳ್	103-22
ಮನೆಸೆಱೆಸನೆ	82-13
ಮರಣಂಸಾರ್ಚಿದ	41-32
ಮರಣಕ್ರಂಜದೆ	228-39
ಮರದಿಂಪಣ್	10-14
ಮಲ್ಲಿಗೆಯೇ ಮಾಮರ	113-46
ಮಳವಿಧ್ವಂಸನಕಾಯ	184-48
ಮಱೆದತ್ಯುಗ್ರತಪಂ	174-23
ಮಱೆಯೊಳ್ ಗುಣ	146-25
ಮಾನಿಸಲೋಕಂ	104-26
ಮಾನಿತಗುಣ	185–1
ಮಾನಿತಭವ್ಯ	2-4
ಮಾರಿಪೆಱತಲ್ತು	198-32
ಮಿಕ್ಕಭಿಮಾನ	154-7
ಮಿಡಿಯಂ ಮಾಡಿ	222-24
ಮುತ್ತನಿವಂಕೂಸಿವ	9–12
ಮು(ಮ್ಮು)ಂದಿರ್ದಾಯುವ	12–20
ಮುಂದೆ ಪೊಲಲ್ಗೆ	62-46(47)
ಮುನಿಸೊಸಗೆಯೆ	144-21
ಮುನ್ನಿನ ಜನ್ಮ	45-6
ಮುನ್ನಿನ ಭವದೊಳ್	90-35
ಮುನ್ನಿನಸಾವನೆಯ್ದಿ	57-37
ಮುನ್ನೆಂದುಂಭಾವಿಸ	191-17
ಮುನ್ನೆ ಶುಚಿಯಪ್ಪು	129-21
ಮುಳಿಯದೆ ಕಾಲ	66-6
ಮುಳಿಸಂಮಾಱ್ಪುದು	189-12
ಮುಳಿಸುಕಡುಲೋಭ	167–3
ಮುಳಿಸೊಸಗೆ	47–13
ಮೂಳೆಯಕಂಭ	130–22
ಮೆಯ್ಯಿಂಬಂಬಗೆದೇಕೆ	127–14
ಮೆಯ್ಯೊಳೊಡಗೂಡಿ	129-19
ಮೊಲೆಯಂಪೊಂಗೊಡ	125–6
ಮೋಹಮನೆಯ್ದಿ	28–51(50)
ಮೋಹಮನೊಕ್ಕು	159–20
ಮೋಕ್ಷದಬಟ್ಟೆ	2–5
ಯ	
ಯಂತ್ರಂಗಳುಮಮಿತ	31-5
ರ	
ರಕ್ಕಸನಮಾಡ	205-49
ರಂಗವಲಿಯಿಕ್ಕೆ	196-29
ರಾಗದ್ವೇಷಂಗಳ	173-20
ರಾಜಕುಮಾರಕೇಳ್	208-55
ರೂಪಿನ ಚೆಲ್ವಂಮಱಿಸು	118-61
ರೋರುಗನರಪತಿ	227-35
ಲ	
ಲಕ್ಕವಲಯಿಗೆ	105–28
ವ	
ವರಕಾಲಲಬ್ಧಿ	174-22
ವರಧರ್ಮಮೆಂಬ	223-27
ವರಧರ್ಮಾನ್ವಿತ	224-28
ವರವೀತ ಶೋಕೆಯೆಂಬುದು	230-44
ವರಸಿಂಧುನಗರ	225-30
ವಸುಧಾಭೂಷಣ	37–22
ವಿಕಟಾಂಗೋಗ್ರ	108-36
ವಿಜಯೆಸುನಂದೆ	107-35
ವಿಷಯಿಗಳ ವಿಷಯ	140-11
ವಿಳಸದ್ಜ್ಞಾನದಿ	155-8
ವ್ಯಸನೀಕೇಳ್	139-9
ವ್ರತನಿಯಮಸ್ಥ	170-12

ಪದ್ಯಗಳ ಆದಿ	ಪು.ಸಂ.–ಪ.ಸಂ.
ಶ	
ಶತಂಬ್ರಾಹ್ಮಣ (ಸಂ)	226-31
ಶೀತದಿನುಷ್ಣದಿ	96-5
ಶೀಲದ ಫಲಮೇಂ	227-37
ಶ್ರಾವಕನಕ್ಕೆ	52-22
ಶ್ರೀಗೆಣೆಯಿಲ್ಲ	18-35
ಶ್ರೀನಾರೀಯುತ	195-26
ಶ್ರೀನಾರೀರಮಣೀ	1-1
ಶ್ರೀಮದತಿಶಯ	16-1
ಶ್ರೀಯುಮಘವಶದೆ	29-1
ಶ್ರೀವಿಲಸಜ್ಜನ	105-27
ಸ	
ಸಂತತಲವಣಾಂಬುಧಿ	20-37
ಸಂಸಾರಮೆಂಬ	161-25
ಸಮಸಮನಾಗೆ	98-8
ಸರಸಿಜಮುಖಿ	177-30
ಸರ್ವಾನುಕೂಲಮಂ	232-53
ಸಾರಂಸಂಸಾರಕ್ಕಾ	9-10
ಸಾರಮಣಮಿಲ್ಲ	92-38
ಸಾವೆಪಿತೃಪುಟ್ಟಿ	126-9
ಸಿಡಿಲುಂ ಮಿಂಚುಂ	181-40
ಸುತನಂಕೊಟ್ಟೊಡೆ	39-27
ಸುರಧನುವೆಂತುಟಂತೆ	6 - 3
ಸುರಪತಿಯಾನುಂ	208-54
ಸುರರಾನುಮಸುರ	60-43
ಸುರರೀತೆಱದಿಂ	183-47
ಸುರಲೋಕಭೋಗ	160-23
ಸೇಸೆಯನಿಕ್ಕಿ	110-40
ಸ್ಥಾವರದಿಂತ್ರಸ	193-22
ಸ್ಥಿರತರಮಾಗಿ	110-39
ಸ್ನೇಹಂಕಳತ್ರದಿಂ	161-27
ಸ್ನೇಹಾಭ್ಯಂಗ	140-12
ಹ	
ಹಾ ! ಎನ್ನನೇಕೆ ಕೊಲ್ವೆ	180-36
ಹಾ ! ಎನ್ನನೇಕೆ ತೊಱೆ	180-37
ಹಾ ! ಎನ್ನೊಪ್ಪುವ	119-63
ಹಾ ! ನಯನಮನೋಹರ	24-46 (45)
ಹಾ ! ನವನಿಧಿಗಧಿ	23-44 (43)
ಹಾ ! ವಿಖ್ಯಾತನರೇಂದ್ರ	24-45 (44)
ಹಾ ! ವಿಳಸದಿಭ್ಯ	119 } 65 121 }
ಹಾ ! ಸಕಳಚಕ್ರ	23-43 (42)
ಹಾ ! ಸುಕುಮಾರಾ	119-62

....ಪರಿಶಿಷ್ಟದಲ್ಲಿ....

ಪದ್ಯಗಳ ಆದಿ	ಪು.ಸಂ.–ಪ.ಸಂ.
ಅ	
ಅನವರತಂಘಣಿ	239-14
ಅರಿಭಯದಿಂದಾತ್ರೀ	247-43
ಅಱುವಂದದಿಂದೆ	245-38
ಇ	
ಇನಿತುಪಸುವಿನಿತು	240-21
ಉ	
ಉದಕದ ಸಂಗದಿಂದೆ	237-2
ಎ	
ಎಂಬೀಪತ್ತುಂ	241-22
ಎಱಗವುಮಕ್ಷಿಕಂ	238-9
ಒ	
ಒಡೆದಕೊಡನೊಳಗೆ	239-12
ಕ	
ಕೊಳದೊಳ್ ನೀರುಣ್ಣದಡ್ಡಂ	238-4
ಕ್ರಮದಿಂ ನಾಲ್ಕುಂ	241-26
ಗ	
ಗಿಳಿಯುಕ್ತಾ ಯುಕ್ತ	238-6
ಗುಣಯುತಮುನಿಪರ	242-28
ಜ	
ಜರೆ ಖೇದಂ ಮೃತ್ಯು	245-36
ತ	
ತಲೆಯೊಳ್ ತೀವಿದ	238-8
ತಿಂಗಳನಾಲ್ಕುಂಪರ್ವದಿ	241-27
ದ	
ದುಃಖಗ್ರಾಹಸಮಾಕೀರ್ಣೇ(ಸಂ)	248-46
ದುರಿತಂಕಿಡದನ್ನೆವರಂ	247-44
ದೇವತೆಗೆಂದು ಮೇಣತಿಥಿ	240-17
ದೇಸರ್‌ಗುರುಧರ್ಮ	244-33
ದೇಸಂಗಳೊಳಗೆ	241-24
ನ	
ನಿಜದಿಂದಂ ಪಿಂಡುಗೂಡಿ	239-10
ನಿರವದ್ಯಂ ನಿಷ್ಕಲಂಕಂ	245-37
ನಿರುತಂ ದೇವರೆನಿಪ್ಪುದೊಂದು	244-34
ನೀರಂಪಾಲಂ ಬೆರಸಲ್	238-5
ಪ	
ಪದೆಪಿಂದ ಮಿನಿತು	241-23
ಪರವನಿತೆಯೊಲ್ದುಬರೆ	240-20
ಪಲಕಾಲಂ ನೀರೊಳಗಿರೆ	239-15
ಪಸುಪಿಂಡಿಂಮುಂತೆ	239-13
ಪಾಲೊಳ್‌ಮೊಕ್ಕಳಮಾಗಿ	246-40
ಪಿಡಿಯದು ದೋಷಮಿಲ್ಲ	239-11
ಪೆಣ್ಣಿಂಗಂ ಪೊನ್ನಿಂಗಂ	246-39
ಬ	
ಬಟ್ಟೆಯೊಳೂರೊಳ್ಮನೆ	240-19
ಬಲೆಬಡಿನೇಣ್ ವಿಷಂ	241-25
ಬಿತ್ತರಿವುದಿಂತು	239-16
ಮ	
ಮದದಿಂದುಕ್ಕೆನದಿಂ	240-18
ಮನೆಯೊಳ್ ಪಾಲುಂಡು	238-7
ಮೃತ್ಪಾರಿಣೀ (ಸಂ)	237-1
ಯ	
ಯಥಾ ಚತುರ್ಭಿಃ	244-35
ರ	
ರುಜೆಗಳೊದವಿಂ	247-42
ವ	
ವದಸಮಿದಿ ಪೋದಮ್ಮ (ಪ್ರಾಕೃತ)	242-31
ವಿಳಸದ್ಧ್ಯಾನಮಸುನ್ನತ	242-30
ವ್ರತಮಂ ಕೆಯ್ಕೊಂಡು	246-41
ಸ	
ಸಕಲಪರಿಗ್ರಹಮಂ	242-29
ಸಾರಿಣಿ ಧಾರೆವಟ್ಟಲವು	238-3
ಸ್ವಧರ್ಮಪೀಡಾಮವಿಚಿಂತ್ಯ(ಸಂ)	243-32
ಸಂಸ್ಥಾನಂಯದನಿತ್ಯ	247-45

ಪರಿಶಿಷ್ಟ ೩

ಕಂದವೃತ್ತ ಮೊದಲಾದುವುಗಳ ಹೆಸರು ಮತ್ತು ಸಂಖ್ಯೆ ಇವುಗಳನ್ನು ತೋರಿಸುವ ಪಟ್ಟಿಕೆ—

	ವೃತ್ತಗಳ ಹೆಸರುಗಳು	ಅಧಿಕಾರ ಸಂಖ್ಯೆ												
		೧	೩	೩	೪	೫	೬	೭	೮	೯	೧೦	೧೧	೧೩	ಒಟ್ಟು ಸಂಖ್ಯೆ
1	ಶಾರ್ದೂಲ ವಿಕ್ರೀಡಿತಂ	4	1	1	4	....	3	2	1	2	1	2	4	25
2	ಉತ್ಪಲಮಾಲೆ	7	5	9	4	6	4	5	3	5	3	10	2	63
3	ಮತ್ತೇಭ ವಿಕ್ರೀಡಿತಂ	4	4	5	4	4	8	4	5	5	6	7	9	65
4	ಚಂಪಕಮಾಲೆ	10	2	6	3	7	6	5	6	4	4	5	6	64
5	ಮಲ್ಲಿಕಾಮಾಲೆ	1	....	....	....	....	1	....	....	....	....	....	....	2
6	ಪಿರಿಯಕ್ಕರಂ	1	....	....	....	....	....	....	....	....	....	....	....	1
7	ತರಳಂ	....	....	....	....	....	....	....	....	....	....	1	....	1
8	ಕಂದಂಗಳ್	31	20	28	15	21	45	17	19	17	33	37	27	310
9	ರಗಳೆಗಳ್	1	1	1	1	1	1	1	1	1	1	1	1	12
10	ತ್ರಿಪದಿಗಳ್	....	....	....	....	....	....	....	....	....	....	....	14	14
11	ಸಂ. ವೃತ್ತಂಗಳ್	....	....	....	....	....	1×	....	....	....	....	....	1	1
	ಒಟ್ಟು ವೃತ್ತಗಳು	59	33	50	31	39	68	34	35	34	48	63	64	558

ಪರಿಶಿಷ್ಟ ೪

[ತಮಿಳನೊಡನೆ ಹೋಲಿಕೆ]

(ತಮಿಳಿನ ಒಂದೆರಡು ಗದ್ಯಪದ್ಯಗಳ ಮತ್ತು ಮುಂಡಕೌಶಿಕನ ಕಥೆಯ ಪರಿವರ್ತನವನ್ನು ಇಲ್ಲಿ ಹೋಲಿಕೆಗಾಗಿ ಕೊಟ್ಟಿದೆ. ತಮಿಳಿನ ವಾಕ್ಯಶೈಲಿಯನ್ನೂ ಶಬ್ದಗಳನ್ನೂ ಅನುಸರಿಸಿ ಕನ್ನಡ ವಿಭಕ್ತಿಗಳನ್ನು ಮಾತ್ರ ಸೇರಿಸಿದೆ)

ಅಶರಣಮೆಂಬ ಅನುಪ್ರೇಕ್ಷೆಯಲ್ಲಿ ನಾಲ್ಕನೆ ಪದ್ಯಕ್ಕೆ ಸೇರಿದ ಗದ್ಯ — [ತಮಿಳ್]

(ಕನ್ನಡವಾಕ್ಯ—ಪು. 30 – 4 ಪ.—ನೋಡುವುದು)

(ತ) ನಡುಕ್ಕಾನನತ್ತುಳ್ಳೆ ಎತ್ತನಿಟ್ಟು, ಮಯಕ್ಕಮೇ ಶೆಯ್ಯು ಮುರುನ್ತು ಮೇಲ್ ಕೊಂಡಾಲುಂ, ಸಂಸಾರತ್ತಿ ನಡುವೆ ಮೋಹಂ ತೊಡರ್ನ್ದಾಲುಂ ಕಾಪ್ಪುಂ ಶರಣುಂ ಅರುಕನಡಿಯಲ್ಲದು ಪಿಱಿತಾನತುಂಡೋ? ಅನ್ರಿಯುಂ—

(ಕ.ಅನು) ನಡುಕಾನನದಲ್ಲಿ.....ಇಟ್ಟು ಮೈಮರವೆಯನ್ನು ಗೆಯ್ಯುವ ಮದ್ದು ಮೇಲೆ ಕೊಂಡರೂ, ಸಂಸಾರದ ನಡುವೆ ಮೋಹವು ತೊಡರ್ದರೂ ಕಾಪೂ, ಶರಣೂ (ಇಲ್ಲಿಯವರೆಗೂ ಕನ್ನಡದ ಅನುಕರಣದಂತಿದೆ – ಮುಂದೆ ಎರಡರಲ್ಲೂ ವಿಷಯ ಭಿನ್ನವಾಗಿದೆ) ಅರುಹಂತನ ಅಡಿಗಳಲ್ಲದೆ ಬೇರಾವುದಾದರುಂಟೋ? ಅಲ್ಲದೆಯುಂ—

(ತ) ಮುಂತಿರಮು ಮಾಣ್ಡ ಮಣಿಕಳು ಮಾಮರುನ್ತುಂ |
ತಂತಿರಮುಂ ತಾಂ ಕಾಕ್ಕುಂ ತನ್ಮೈಯವೋ – ವೆತೀಕ್ಕು
ಪ್ಪುಪಯಿರೈ ಚ್ಚುಟುಪೋಮ್ ಪುದುವೇಲಿ ಪೋಲ್ಕಾವಲ್
ತುನ್ಪಮದು ಕಾಕ್ಕುಮೋ ಶೊಲ್ಲು (91)

ಪಶು ಪ್ಪುಕಾವಲುಕ್ಕು ಕಾಕ್ಕುಂ ತನ್ಮೈಯವಾಕೆಯ ವೇಲಿ ಎರಿಮುಕತ್ತು ನಿಲ್ಲಾವಾಱು ಪೋಲ ವೇದನೀಯಕರ್ಮಂಗಳುಕ್ಕು ಪ್ರತೀಕಾರಂಶೆಯ್ಯುಂ ಮಂತ್ರಂಗಳುಂ ತಂತ್ರಂಗಳುಂ ಯಮರಾಜನೈಕಾಕ್ಕವಲ್ಲವೋ? ಕಾಕ್ಕುಮೆನ್ನುಂ ಆಶೈಯಿನಾಱ್(ಲ್) ಶೆಯ್ಯಪ್ಪಟ್ಟ ಉಪಾಯಂಗಳುಂ ಅಪಾಯಗಳಾನಮೈ ಕಾಣಲಾಕಾತೋ? – ಜೀವನೇ—

ಅನ್ರಿಯುಂ (ಅದೂ ಇಲ್ಲದೆ)

(ಕನ್ನಡ.ಅ) ಮಂತ್ರವೂ (ವಿಷಹರಗರುಡಪಚ್ಚೆಮೊದಲಾದ) ಮಣಿಗಳೂ, ಮಾಮರ್ದೂ–
ತಂತ್ರವೂ ತಾವು ಕಾಯುವ (ರಕ್ಷಿಸುವ) ಸ್ವಭಾವವುಳ್ಳವುಗಳೇನು?–ಬೇವ ಬೆಂಕಿಗೆ
ಹಸುರಾದ ಪೈರನ್ನು ಸುತ್ತಿ ಹಾಕಿರುವ ಹೊಸ ಬೇಲಿಯ ಕಾವಲು
ಈ (ಬೆಂಕಿಯ) ಬಾಧೆಯನ್ನು ತಡೆದು ರಕ್ಷಿಸಬಲ್ಲುದೋ ಹೇಳು ||

ಹಸು ಹುಗದಿರುವಂತೆ ಕಾಯುವ ಸ್ವಭಾವ (ಸಾಮರ್ಥ್ಯ) ವುಳ್ಳ ಬೇಲಿಯು ಉರಿಯ ಮುಕದಲ್ಲಿ ನಿಲ್ಲಲಾರದಂತೆ ವೇದನೀಯಕರ್ಮಬಾಧೆಗೆ ಪ್ರತೀಕಾರ ಗೆಯ್ಯುವ [ಎಂದರೆ ರೋಗ ಬಾಧೆಗಳ ನಿವಾರಣೆಗೆ ಮಾಡುವ] ಮಂತ್ರ ತಂತ್ರಗಳು ಯಮರಾಜನಿಂದ ಕಾಯಬಲ್ಲುವೇ? ಕಾಯುವುವೆಂಬ ಆಸೆಯಿಂದ ಗೆಯ್ಯಲ್ಪಟ್ಟ ಉಪಾಯಗಳು ಅಪಾಯಗಳಾಗಿ ಆದುವನ್ನು ಕಾಣಲಾಗದೋ?—

ಈ ಪದ್ಯದಲ್ಲಿ ಉತ್ತರಾರ್ಧದ ಬೇಲಿಯ ದೃಷ್ಟಾಂತ ಗದ್ಯದಲ್ಲಿ ಬಂದಿರುವುದರಿಂದ ಕನ್ನಡ ಕವಿಯು ಪೂರ್ವಾರ್ಧದ ವಿಷಯವನ್ನು ಮಾತ್ರ ಒಂದು ಕಂದದಲ್ಲಿ ಅಡಗಿಸಿ ಉತ್ತರಾರ್ಧವನ್ನು ಗದ್ಯದಲ್ಲಿ ಕೊಟ್ಟಿರುವನು ತಮಿಳಿನಲ್ಲಿ ಪುನರುಕ್ತವಾಗುವುದು — [ಪದ್ಯದ ಭಾಗವನ್ನು ಮತ್ತೆ ಗದ್ಯದಲ್ಲಿ ಹೇಳಿದಂತಾಗಿದೆ]

ಈ ಭಾಗದಲ್ಲಿ ಕನ್ನಡಕ್ಕೂ ತಮಿಳಿಗೂ ಎಷ್ಟು ಹೋಲಿಕೆಯಿದೆ ಎಂಬುದನ್ನು ವಾಚಕರೇ ತಿಳಿದುಕೊಳ್ಳಬಹುದು. ಗದ್ಯದಲ್ಲಿ ವಾಕ್ಯವೂ ಶಬ್ದಗಳೂ ಕೂಡ ಒಂದೇ ಆಗಿವೆ–ಬೇಲಿ–ಅಪಾಯ ಉಪಾಯ–ಇತ್ಯಾದಿ ಶಬ್ದಗಳೂ ಒಂದಾಗಿವೆ.

(ಮುಂಡಕೌಶಿಕನ ಕಥಾಭಾಗವನ್ನು ತಮಿಳಿನಲ್ಲಿ ಹೇಳಿರುವುದನ್ನು ಕನ್ನಡದಲ್ಲಿ ಅನುವಾದ ಮಾಡಿ ಕೊಟ್ಟಿದೆ, ತಮಿಳಿನ ವಾಕ್ಯವನ್ನು ಹೆಚ್ಚಾಗುವುದೆಂದು ಕೊಟ್ಟಿಲ್ಲ—)

ಮುಂಡಕೌಶಿಕ (ತಮಿಳ್ ವಾಕ್ಯವನ್ನೂ, ಶಬ್ದಗಳನ್ನೂ ವಿಶೇಷವಾಗಿ ಅನುವಾದಮಾಡಿದೆ)

ದ್ವೀಪದ ಒಳಗಡೆ ಏಳುನಾಡು ದಕ್ಷಿಣ ಭರತಭೂಮಿ ವಸುಧಾಪುರನಗರವು. ಪ್ರಸಿದ್ಧನಾದ ಸಂಪದ್ಯುಕ್ತ ವೇದಪತಿಯೆಂದು ಬೆಳಗುವ ಮುಂಡಕೌಶಿಕನೆಂಬ ಪೆಸರಿನ ಪಂಡಿತನುಂಟು(ಗ) ಜಂಬೂ ದ್ವೀಪದಲ್ಲಿ ಭರತಕ್ಷೇತ್ರದಲ್ಲಿ ಧರ್ಮಖಂಡದೊಳಗೆ ವಸುಧಾರೆಯೆಂಬ ನಗರದಲ್ಲಿ ವೇದಪಾರಗನಾದ ಬ್ರಾಹ್ಮಣನು ಮುಂಡಕೌಶಿಕನೆಂಬುವನು. ಅವನ ಬ್ರಾಹ್ಮಣಿ ಮನೋರಮೆಯೆಂಬುವಳು. ಇವರು ಗಳಿಗೆ ಧನಧಾನ್ಯದಾಸೀದಾಸಗೋಮಹಿಷ್ಯಾದಿಗಳಿಂದಲೂ ಬನ್ಧುವರ್ಗಗಳಿಂದಲೂ ಸಮೃದ್ಧರಾಗಿ ಇಷ್ಟವಿಷಯಕಾಮಭೋಗಗಳನ್ನು ಅನುಭವಿಸಿಕೊಂಡು ಸಲುತ್ತಿದ್ದ ಕಾಲದಲ್ಲಿ ಮಕ್ಕಳಿಲ್ಲದುದರಿಂದ ಮನಃಖೇದವಾಗಿ ಯಾವುದು ಹೇಳಿ ಯಾವುದು ಗೆಯ್ದರು.

ಈ ನಮ್ಮ ಜನ್ಮವು ಹೀಗೆಯೇ ಕಳೆದುಹೋಗುವುದೋ ಇನ್ನು ಸುಖವಾಗಿ ಸಂದಬಲಿಕ್ ನಮಗೆ ತಾನುಂಟೋ? ಬಂದ ವಿಧಿಯಬಗೆಯಿಂದ ಪುತ್ರನು ಹುಟ್ಟುವ ಬೇಳ್ವೆಗೆ ಗತಿಬಗೆಯುಂಟೊ.

ಪುತ್ರರಿಲ್ಲದುದರಿಂದ ಮನಃಖೇದವಾಗಿ ನಮಗೀಜನ್ಮವು ಬರಿದಾಗಿಯೇ ಕಳೆಯುವುದೋ? ಸಂತತಿಯಿಲ್ಲದಿರುವುದರಿಂದ ಪಿತೃಕಾರ್ಯವನ್ನು ಗೆಯ್ಯುವರಿಲ್ಲ. ಆದರಿಂದ ಪುತ್ರಮುಖವನ್ನು ನೋಡಬಿಟ್ಟರೆ ಗತಿಯಿಲ್ಲವೆಂದು ದೇವತೆಗಳಿಗೆ (ಪ್ರಾರ್ಥಿಸಿ) ವರವನ್ನು ಪಡೆದಾದರೂ ಪುತ್ರಸಂಪತ್ತುಂಟಾಗಬೇಕು, ಎಂದು ಆ ನಗರದ ಹೊರಗೆ ಗೃಹಾವಾಸಿನಿ (1. ಬೆಟ್ಟದಲ್ಲಿರುವ ದೇವತೆಯಾದುದರಿಂದ ಕನ್ನಡದಲ್ಲಿ ಗಿರಿವಾಸಿನಿ ಎಂದಿದೆ. ಇಲ್ಲಿಯೂ ಗೃಹಶಬ್ದಕ್ಕೆ ಬದಲಾಗಿ ಗುಹಾವಾಸಿನಿ ಎಂದಿರಬಹುದು) ಎಂಬ ದೇವತೆಯನ್ನು ಪ್ರಾರ್ಥಿಸಿ ವರವನ್ನು ಪಡೆಮ ಪುತ್ರನನ್ನು ಪೆತ್ತು ಪುತ್ರಮುಖವನ್ನು ಕಂಡು ಸಂತೋಷದಿಂದ ಮಗನನ್ನು ಬಳೆಯಿಸಿ ವೇದಶಾಸ್ತ್ರಗಳನ್ನ ಭ್ಯಾಸಮಾಡಿಸಿ ಷೋಡಶವರ್ಷವುನೆಯಿದಿಪಿಂತೆ ವಿವಾಹಗೆಯ್ಯಲು ಮಗಳವಿಚಾರವಾಗಿ ಮಾತಾಡಿ ಹೆಣ್ಣನ್ನು ಒಡಂಬಡಿಸಿ ಬಂಧುಗಳೆಲ್ಲರನ್ನೂ ಬರಮಾಡಿ "ನಾಳೆ ಮುಹೂರ್ತವು" ಎಂದಿರುವಾಗ ಯಾವುದು ನೆಗಟ್ಟಿದೋ ಎಂದರೆ—

ಆ ನಗರದಲ್ಲಿ ಮುಂದೊಂದುದಿನ ವಾದದಲ್ಲಿ ಸೋತು ಆಗ ಅವನನ್ನು
ತಳ್ಳಿ ಆ ನಗರವನ್ನು ತೊರೆದಗಲಿಸಿದ ಪಿಂತೆ
ಆ ನಗರದವರಮೇಲೆ ದ್ವೇಷ (ಕೋಪ) ದಿಂದ ಕಾಲಕಳೆದು ಸತ್ತು
ಮತ್ತೊಂದು (ದೋಷದುಷ್ಟ) ಜನ್ಮದಲ್ಲಿ (ರಾಕ್ಷಸನಾಗಿ) ಹುಟ್ಟಿದನು

ಆ ನಗರದಲ್ಲಿ ಮುಂದೊಂದು ನಾಳೊಳ್ ಒಬ್ಬ ಪರಿವ್ರಾಜಕನು(ಯತಿ)ವಾದಿಗಳಿಗೆ ಪತ್ರಾವ ಲಂಬನಮಾಡೆ ಅವನೊಡನೆ ಅಜಿತನೆಂಬ ರಾಜನು ಜೈನವಾದವನ್ನು ಮಾಡಿ ಜಯಿಸಿದುದನ್ನು ಕಂಡು ನಗರದವರೆಲ್ಲರೂ ಇಳಿದಾಗಿ ತೊರೆಯಲು (ತೊರೆಯಿಸಲು) ಅವರುಗಳ ಮೇಲೆ ಮಡಗಿದ (ವೈತ್ತ) ರೌದ್ರಧ್ಯಾನದಿಂದ ಸತ್ತು ರಾಕ್ಷಸನಾಗಿ ಹುಟ್ಟಿ ಬಹುದೂರ ವಿಹಾರ ವೋಗಿಬರುತ್ತಿದ್ದವನು, ವಸುಧಾರೆಯೆಂಬ ಆ ನಗರದವರನ್ನು ಕಂಡು ಮುನ್ನಗೆಯ್ದ ಅಪರಾಧಸ್ಮರಣೆಯಾಗಿ ರೌದ್ರಪರಿಣಾಮ ಉದಯಗೆಯ್ಯಲು ಆ ನಗರದವರೆಲ್ಲರನ್ನೂ ಕೋಪದಿಂದಕೊಲ್ಲಬರಲು, ಆನಗರದವರು ರಾಕ್ಷಸನನ್ನು ನಮಸ್ಕರಿಸಿ ಕ್ಷಮೆಗೊಂಡು ಪ್ರಾರ್ಥಿಸಲು ಅವನೂ ಅವರಿಗೆ ಹೇಳುವನು— "ಎಲ್ಲರನ್ನೂ ಒಂದೇಸಲ ಕೊಲ್ಲಬೇಕೆಂದು ಬಂದೆನು; ನಿಮಗಾಗಿ ಕ್ಷಮಿಸಿರುತ್ತೇನೆ; ದಿವಸದಿವಸವೂ (ಪ್ರತಿದಿನವೂ) ಒಬ್ಬನನ್ನು ನೀವು ಕೊಲ್ಲಲು ತರಬೇಕು" ಎಂದು ಹೇಳಲು ನಗರದವರು ನಮಸ್ಕರಿಸಿ "ವರುಷಕ್ಕೊಬ್ಬನನ್ನು ಕೊಡುವೆವು ತೆಗೆದುಕೊ (ಕೊಳ್)" ಎಂದು ಪ್ರಾರ್ಥಿಸಲು ರಾಕ್ಷಸನೂ ಒಡಂಬಟ್ಟು ಅಂದು ಮೊದಲಾಗಿ ವರುಷಕೊಬ್ಬನನ್ನು ತಾವೇ ಕೊಟ್ಟು ಸಲ್ಲುತ್ತಿದ್ದಕಾಲದೊಳಗೆ ಮಂಡಕೌಶಿಕನೆಂಬ ಬ್ರಾಹ್ಮಣನಿಗೆ (ಮುಱ್ಪಿ) ಸರದಿ ಬರಲು ಅವನ ಮನೆಗೇ ಬಂದ: ಬಾರಿಯನು (ಬಾರಿಕ ಎಂದು ಕನ್ನಡದಲ್ಲಿದೆ) "ನಿಮಗೆ ಈ ವರುಷ ಸರದಿ (ಮುಱ್ಪಿ) ಬಂದಿದೆ" ಎಂದು ಒರೆದಳವಿಯಲ್ಲಿ ದುಃಖಿತರಾಗಿ ಹೇಗೆ ಹಲುಬಿದರೋ ಎಂದರೆ—

ಮನೆವಾಱಿತ್ತಿಯು ನಿನ್ನನ್ನು ಕೊಟ್ಟರೆ ಮತ್ತೆನಗೆ ಸಲ್ಲದು
ತನಯನನ್ನು ಕೊಟ್ಟರೆ ಧರಿಸಲಾರೆನು ನಿನ್ನಿಲ್ಲ
ಬಱ ನಿಲ್ಲಲು ನಿನ್ನ ಮಗನನ್ನು ನೀನು (ವಧುವಿನೊಡನೆ) ಮದುವೆಗೆಯ್ಯಲು
ಅವಕಾಶವಿತ್ತು ಇನ್ನು ನಾನು ಹೋಗುವೆನು—

ಕಾಲವು ಪಲವು ಹೋದಪಿಂತೆ ಪುತ್ರಮುಖವನ್ನು ಕಾಣದಿದ್ದರೆ ಗತಿಯೂ ಮತಿಯೂ ಇಲ್ಲವೆಂದು ವರವನ್ನು ಪಡೆದು ಪೆತ್ತ ಒಂದು ಮಗನನ್ನು ಕೊಟ್ಟರೆ ಹೇಗೆ ಬಾಳುವುದು ? ಎಂದು ಪಿಂತೆಯೂ ಬ್ರಾಹ್ಮಣಿ ಯಾವುದು ಹೇಳಿದಳೆಂದರೆ—

ಪತಿಯನ್ನು (ಆಳರ್)ಕೊಟ್ಟರೆ ಬಾಳಿಲ್ಲ ಆದು ಅಲ್ಲದೆ
ಮಗನನ್ನು ಕೊಟ್ಟರೆ ದೊಡ್ಡ ನಿಂದೆಯಾಗುವುದು
ನನ್ನದು ಹೆಣ್ಣು ಹುಟ್ಟು ಅಜ್ಞಾನದ ಮುದ್ದೆ ನಾನು ಹೋಗುವೆನು
ಹೆಣ್ಣಿನ ಬಾಳು ಏತಕ್ಕೋ !

ಇಬ್ಬರನ್ನೂ ಅಗಲಿರಲಾರೆನು ; ಒಬ್ಬರನ್ನು ಕೊಟ್ಟು ಅಪವಾದವನ್ನು ಹೊತ್ತಿರುವುದು ಯೋಗ್ಯವಲ್ಲ, ನಾನೇ ಹೋಗುವೆನು ಎಂದು ಬ್ರಾಹ್ಮಣಿಯೊರೆಯಲು ಮಗನು ಯಾವುದು ಹೇಳಿದನೆಂದರೆ—

ನೀವಿಬ್ಬರೂ ಅಗಲದಿದ್ದರೆ ಉತ್ತಮನಾದ
ಮತ್ತೊಬ್ಬ ಮಗನನ್ನು ಪಿಂತೆ ಹೆರಬಹುದು – ಒದಗಿರುವ
ಪೀಡೆಯನ್ನು ನೀಗಲು ನಾನು ಹೋಗುವೆನು ಬಾಧೆಯುಹೋಗಿ
ಆಯಾಸವನ್ನು ನೀಗಿ ಬಾಳಿರಿ ಅಱಿದು—

ಎಂದು ಈ ರೀತಿ ಪುತ್ರನು ಒರೆಯಲು ಕೇಳಿ ಮಹಾಚಿಂತಾಕ್ರಾಂತರಾಗಿ ತಮ್ಮೊಳಗೆಣಿಸಿ ದೈವವನ್ನು ಪ್ರಾರ್ಥಿಸಿ ಪಡೆದೆವಾದುದರಿಂದ ಆ ದೈವವು ತಾನೇ ಕಾಯುವುದು ಎಂದು ಮಗನನ್ನು ತೆಗೆದುಕೊಂಡುಹೋಗಿ ದೈವಸ್ಥಾನವನ್ನೆಯ್ದಿ ನಮಸ್ಕರಿಸಿ "ನೀನು ಕೊಟ್ಟ ಪುತ್ರನನ್ನು ನಾಳೆ ರಾಕ್ಷಸನು ವಧೆಗೆಯ್ಯಲು ಬರುವನು ನಮ್ಮಿಂದ ಕಾಯಲು ಶಕ್ಯವಿಲ್ಲ ; ನೀನೇ ರಕ್ಷಿಸಿಕೊಳ್" ಎಂದು ಅವಳ ಪಕ್ಕದಲ್ಲಿ ಬಿಟ್ಟು ಬಂದು, ಬ್ರಾಹ್ಮಣನು ಬಂಧುಗಳೆಲ್ಲರನ್ನೂ ಕರೆದು ಅವರ್ಗಳಱಿವಂತೆ ಸೊಲ್ಲಿಸಿ ನಾನು ಪಡೆದು ಪೊರುಳೆಲ್ಲವೂ ಇದಕ್ಕಾಗಿಯಲ್ಲವೇ ಎಂದು ನೆನೆದು ನನಗೆ ಸಹಾಯವಾಗುವರೆಲ್ಲರೂ ಉಪದ್ರವನಾಶವೂ, ಆಯುರ್ವರ್ಧನವೂ ಆಗಲು ಹೋಮವನ್ನು ಗೆಯ್ಯಬೇಕು ಎಂದು ಗುಣವಂತರನ್ನೂ ವಿದ್ಯಾವಂತರನ್ನೂ ಕೂಡಿಸುತ್ತಿರುವಳವಿನಲ್ಲಿ ಭಟಾರಿಯೂ (ಬಲಹರಿ = ಬಳಾರಿ ಬಟಾರಿ, ಎಂದರೆ ದುರ್ಗಾದೇವಿ) ಯಾವಬಗೆಯಾದಳೋ ಎಂದರೆ—

ನನ್ನನ್ನೆರೆಯಲು (ಎರೆ = ಇರ) ನಾನಿತ್ತ ಪುತ್ರನನ್ನು ಮತ್ತೊರ್ವನು
ಕರ್ಮರಾಕ್ಷಸನು ಬೇಡಿದನಾದರೆ— ಮೊನೆಯಲ್ಲಿ
ಕೊಲ್ಲುವ ಶೂಲದಿಂದ ಸೇರಿ ಅವನನ್ನು ಜಯಿಸುವವಳಾಗಿ
ರೂಪವನ್ನರಿಯಲು ಹೋಗಲು

ದೇವತೆಯು ತನ್ನ ಮನೋಬಲದಿಂದ ಉಬ್ಬಿ(ಪೊಂಗಿ)ಯೆಟ್ಟು ಮಲೆಯ ಅಡಿವಾರದಲ್ಲಿ ಪಿರಿಯದಾದಒಂದುಗುಹೆಯೊಳಗೆ ಅವನನ್ನು ಹುಗಿಸಿಟ್ಟು ಬಿಲದ ಬಾಯನ್ನು ಪಿರಿಯ ಶಿಲೆಯಿಟ್ಟು ಅಡಸಿ ರಾಕ್ಷಸನೊಡನೆ ಯುದ್ಧಗೆಯ್ಯಲು ಹೋದಳು. ಈ ಕಡೆ ಬ್ರಾಹ್ಮಣನೂ ಹಲವರನ್ನು ಕೂಡಿಸಿಕೊಂಡು ಬಂದು ಮಗನಿಟ್ಟ ಬಿಲದ ಸೊಱಿಗೆ ಸುತ್ತಲೂ ಇದ್ದು ಹೋಮವನ್ನು ತೊಡಗಿ ಆಯುರ್ವರ್ಧನವಾಗಿಯೂ ಶಾಂತ್ಯರ್ಥವಾಗಿಯೂ, ವಿಘ್ನವಿನಾಶವಾಗಿಯೂ, ಯಮನಿಯಮ ಪ್ರಾಣಾಯಾಮ ವಿಧಿಮಾರ್ಗದಿಂದ ಮಂತ್ರಜಪ, ನವಗ್ರಹಶಾಂತಿಯನ್ನೂ ಮಾಡಿಯಿದ್ದನು, ಇದ್ದಪೊಲ್ತು ಏನಾಯಿತೋ ! ಎಂದರೆ—

ಆ ದಿವಸ ಆ ಬಗೆಯಲ್ಲಿ ತಾವುತಾವು ಅಱಿತಬಗೆಯಲ್ಲಿ
ಸುತ್ತಲೂ ನೆಱೆದಿದ್ದು ಬಾಧೆಯಗಲುವ ರೀತಿಯಿಂದ
ಆಯುಸ್ಸು ಶಾಂತವು ಅವು ಹೆಚ್ಚುವಂತೆ ಎಣಿಸಿ
ಹೋಗುವಂತೆ ಗೆಯ್ದರು ಇಲ್ಲಿ

ಈ ರೀತಿಯಲ್ಲಿ ಆಯುರ್ವರ್ಧನವೂ ವಿಘ್ನವಿನಾಶವೂ ಆಗಿರುವ ಹೋಮಕ್ರಿಯೆಯನ್ನು ಗೆಯ್ದಿದ್ದರು. ಈ ಕಡೆ ದೇವತೆಯು ವಿಗುರ್ವಣಮಾಯಾ ಬಲದೊಡನೆ ರಾಕ್ಷಸನೊಡನೆ ಯುದ್ಧಂಗೆಯ್ದು ಒಂದು ಹಗಲೆಲ್ಲೆಯಲ್ಲಿ ಜಯಗೊಳ್ಳಲು ರಾಕ್ಷಸನೂ ಪ್ರಸನ್ನನಾಗಿ ನಿನಗಾಗಿ ಇಂದು ತೊಡಗಿ ಕೊಲೆಯನ್ನು ತಪ್ಪಿದೆನು ಎಂದು ಹೋಗಲು ಮಱುದಿವಸ ಮಹಾಘೋರದೊಡನೆ ಭಟಾರಿಯು ಬ್ರಾಹ್ಮಣಸಮೂಹವನ್ನೆಯ್ದಿ ಗುಹೆಯನ್ನೆಯ್ದಿದ್ದು "ನಿನ್ನ ಮಗನನ್ನು ಕಂಡುಕೊಳ್ಳಿ" ಎನ್ನಲು ಬ್ರಾಹ್ಮಣನೂ ಮಿಹಾಸಂತೋಷದೊಡನೆ ಗುಹೆಯೊಳಗೆ ಹುಗುವಳವಿನಲ್ಲಿ ಏನು ನೆಗಳ್ದುದೊ ಎನ್ನಲು—

ಮಲೆಯ ಗುಹೆಯೊಳಗೆ ಬಾಳುತ್ತಿದ್ದೊಂದುಮಾನಾಗವು ಮತ್ತೆ ಆ
ಬಿಲದೆಡೆಯಲ್ಲಿ ಸೇರಿದ್ದವನನ್ನು ಕಂಡು — ತಲೆಯನ್ನು ನೀಡಿ
ಬಾಯಿಂದ ನುಂಗಿಯೇ ಬಾಲ ಆಡಿಸುತ್ತಾ ಸುಯ್ಯುತ್ತಾ
ಬೆಂಕಿಯಂತೆ ಕಣ್ಣು ಬಿಟ್ಟತು ಸಂದು—

ಗುಹೆಯೊಳಗೆ ಬಾಳುತ್ತಿದ್ದ ಬಂದು ಮಹಾನಾಗನು ಕ್ಷುಧೆಯಿಂದ ಆಹಾರವನ್ನು ಹುಡುಕಿ ಕೊಂಡು ಬರುತ್ತಿದ್ದುದು ಇವನನ್ನು ಕಂಡು ನುಂಗಿ ಸುಯ್ಯು ಬಾಲವನ್ನಾಡಿಸುತ್ತಾ ಕೆಡೆದಿರುವುದನ್ನು ಕಂಡು ಬ್ರಾಹ್ಮಣನು ಭಯಪಟ್ಟು ಹೊರಗೆ ಬಂದು "ದೈವವೇ, ಹುಲಿಗಂಜಿ ಹುತ್ತೇರಲು ಆದರಲ್ಲಿ ಕೆಡೆದಿದ್ದ ಪಾವುಕಡಿದು ಮರಣಿಸಿದನು ಎನ್ನುವ ಕಥೆಯಾಯಿತು, ರಾಕ್ಷಸನಿಗಂಜಿ ನಿನಗಭ ಯವನ್ನು ಪೊಕ್ಕು ಕಾವಲೊಡನಿದ್ದ ಎನ್ನ ಮಗನನ್ನು ಪೆರ್ವಾವು ನುಂಗಿತು" ಎಂದು ಬಾಯ್ವಿಟ್ಟ ಲರಲು ದೇವತೆಯೂ 'ನಿಯತಿಃಕೇನಲಂಘ್ಯತೆ' ಆಪಮೃತ್ಯುವನ್ನು ಯಾರಿಗೂ ತಪ್ಪಾಗಿ ಆಗಿಸ ಬಹುದಲ್ಲದೆ ಕಾಲಮೃತ್ಯುವನ್ನು ತೀರಿಸಲು ಬಾರದು ಎಂದು ಹೋಯಿತು—(೨೫)

ಮತ್ತು (ಅನ್ಯಯುಂ)

ಮರಣವು ತಾನು ಬಂದಕಾಲದಲ್ಲಿ ಮತ್ತೊಂದು ಬಾಳುವ
ಶರಣವುತಾನುಂಟೋ ಹೇಳು – ಬಲವಾದ
ಕರ್ಮವನ್ನು ಕೆಡಿಸುವ ವೀರನಡಿಯಲ್ಲದೆ ಮತ್ತೊಂದು
ನೆನೆವು ಶರಣವುಂಟೋ ನಿನಗೆ – (ಅನ್ಯಯುಂ)

ಮರವೇಱು ಕೆಯ್ವಿಟ್ಟರೆ ನೆಲವೇ ಶರಣಾಗುವೋಲ್ ಮನುಷ್ಯಗತಿಯಲ್ಲಿ ಹುಟ್ಟಿದವರಿಗೆ ಧರ್ಮವೇ ಶರಣವಲ್ಲದೆ ಪೆಱತುಂಟೋ? ಮರ್ದುಗಳೂ, ಮಂತ್ರಗಳೂ ಉಗ್ರದೇವತೆಗಳೂ, ಕಾಯಬಲ್ಲುವೇ? ಕಾಲನುಬಂದಡರಿದಹೊತ್ತು – ಅಲ್ಲದೆಯುಂ—

ಉದ್ದವಾದ ಮಲೆಯು ಶರಣೋ..... ?
ಉಕ್ಕುವ ಅಲೆಗಳ ವೇಲೆಯುಳ್ಳ ಸಮುದ್ರ ತಾನು ಶರಣೋ–ಉದ್ದವಾದ
ಬಲವಾದ ಕಾಡುಶರಣವಾಗುವುದೋ ಅಪೇಕ್ಷಿಸುವ ಬಿಲವು ಶರಣೋ ?
ನೀಡಿದ ಶರಣು ಸೊಲ್ಲಿಸು ನಿನಗೆ—

ಯಾವುದೊಂದರಿಂದಲೂ, ಯಾರೊಬ್ಬರಿಂದಲೂ ಶರಣವೂ (ಕಾಪ್ಪು)! ಱರಣವೂ? ಇಲ್ಲ ದಿರುವುದನ್ನಱಿದು ಮೆಯ್ ಮಱೆಯದಿರ್ಪುದು ಕಾಣ(ಕಣ್ಣಾ)ಜೀವನೇ—

— ಗದ್ಯ —

ಸಕಲ ವಿಮಲ ಕೇವಲ ಜ್ಞಾನ ಭಗವದರ್ಹತ್ಪರಮೇಶ್ವರ್ಯಮುಖೋದ್ಗತಮಾದ
ದ್ವಾದಶಾನುಪ್ರೇಕ್ಷಣೆಯಲ್ಲಿ ಶ್ರೇಣಿಕಮಹಾರಾಜನು ಕೇಳಲು ಗಣಧರ
ಸ್ವಾಮಿಗಳು ದಯೆಗೆಯ್ದ ಎರಡನೆಯದು
ಅಶರಣವೆಂಬ ಅಧಿಕಾರಂ
ಸಮಾಪ್ತಂ....

ಪರಿಶಿಷ್ಟ ೫

ಕೆಲವು ವಿಶೇಷ ಪದಗಳ ಅಕಾರಾದ್ಯನುಕ್ರಮಣಿಕೆಯನ್ನನುಸರಿಸಿ ಅರ್ಥವನ್ನು ಕೊಟ್ಟಿದೆ—

ಶಬ್ದ	ಪು. ಪ.		ಅರ್ಥ
	ಅ		
ಅಂಕಕಾರ	50–20 ವ	—	ಯುದ್ಧಶೂರ
ಅಗು(ವು) ಬಿಲ್	110-39	—	ಒಂದು ಅಕ್ಕಿಕಾಳಿನ ಅನ್ನ
ಅಂಗಡಿ	222–22 19–29	—	ತಳಭಾಗ ಮತ್ತು ಮಾರುವ ಸ್ಥಳ
ಅಗ್ಗಳಿಕೆ(ಕ್ಕೆ)	224–28 ವ	—	ಹೆಚ್ಚಿಗೆ (ಮಹತ್ವ)
	197–30 -	—	ಶ್ರೇಷ್ಠ
ಅಜ್ಜಪಜ್ಜರ್ ಆರ್ಯಪ್ರಾರ್ಯರ್(ಸಂ)	149 32 ವ	—	ತಾತಮುತ್ತಾತಂದಿರು
ಅಟ್ಟು	94–1 ವ	—	ನರಕಲೋಕದಲ್ಲಿರುವ ಸ್ಥಳ
ಅಟ್ಟುಂಬರಿ	221–19	—	ಆಡಂಬರ, ನಂಬಿಸು ?
ಅಡಂಗೊತ್ತು	190–14	—	ಅಡಗಿಹೋಗುವಂತೆ ಅಮುಕು
ಅಂದುಗೆ	118–60	—	ಕಾಲುಬಳೆ
ಅಂಧಪಾಷಾಣ	3–7 ವ	—	ಕುರುಡುಗಲ್ಲು [ಲೋಹಾಂಶವಿಲ್ಲದ ಕಾಡುಗಲ್ಲು]
ಅನಿವ	195–27 ವ	—	ಒತ್ತಾಯ(ನಿರ್ಬಂಧ)ಬಲಾತ್ಕಾರ
ಅರೆಗರಿ	220–18	—	ಅರ್ಧಬೆಂದಿರುವ
ಅಸಿಯ[ದು]	32–9	—	ಕೃಶ (ಬಡವ)
ಅಸುಂಗೊಳ್	49-18	—	ಭಯಪಡು (ಅಪಾಯ ಶಂಕೆ)
ಅಳುರ್ಕೆ	141–27 ವ	—	ಆವರಿಸಿಕೊಳ್ಳುವಿಕೆ
ಅಳ್ವು (ಲ್ವು)	82–14	—	ಆವರಿಸು
ಅಱುನೀರ್	81–10	—	ಒಣಗುವನೀರು
ಅಱುನೀರ್	81–10	—	ಒಣಗುವನೀರು
ಅಱ್ಯಾಡು	27-48 ವ	—	ಸಂಪೂರ್ಣವಾಗಿನಾಶವಾಗು
ಅಱ್ಕಿಸು	104-25 ವ	—	ಜೀರ್ಣಿಸು
ಅಱ್ತಿಗಂ	51–26	—	ಪ್ರೀತಿಸುನವ
	ಆ		
ಆಟಿಸು	64–1	—	ಅಪೇಕ್ಷಿಸು
[1]ಆಗಳಂತೆ	89–31 ವ	—	ಸದ್ಯದಲ್ಲೇ

(1) ತತ್ಕ್ಷಣ, ಏಕಪದ ಸದ್ಯಃ, ಸಪದಿ = ಆಗಳಂತೆ (ಅಭಿಧಾನರತ್ನಮಾಲೆ ಸಾ–ಕಾಂ 124–67)

ಶಬ್ದ	ಪು. ಪ.		ಅರ್ಥ
ಆದೇಶ	144–21 ವ	—	ಮುಂದಾಗುವುದನ್ನು ತಿಳಿಸುವುದು
ಆದೇಶಪುರುಷ	204–46ವ	—	ಮುಂದೆ ಇಲ್ಲಿಗೆ ಬರುವನೆಂದು ಜೋಯಿಸನು ತಿಳಿಸಿದ್ದ ಮಹಾಪುರುಷ
ಆಪತ್ತುವಡು	149-31 ವ	—	ಕಷ್ಟಪಡು (ತೊಂದರೆಪಡು)
ಆಯ	228–38	—	ಏಳ್ಗೆ(ಅಭಿವೃದ್ಧಿ) (ವಿಶಾಲ)
ಆರಯ್ಕೆ	156–11 ವ	—	ಮೇಲ್ವಿಚಾರಣೆ (ಪೋಷಣೆ ಮತ್ತು ವಿಚಾರಮಾಡುವಿಕೆ)
ಆರವೆ (ಆರಾಮ ಸಂ.)	222–23	—	ತೋಟ(ಉದ್ಯಾನವನ, ತೋಪು)
ಆರ್ಮ	27–49	—	ಆಶ್ರಯ (ಆಧಾರ)
ಆಸುರ	229–43	—	ಭಯಂಕರ (ರೌದ್ರ)
ಆಱಿಡಿ(ಗೊಳ್)	2–5	—	ದಾರಿಯಲ್ಲಿ ಅಡ್ಡಬಂದು ಸುಲಿಗೆಮಾಡುವ ಕಳ್ಳ [ದಾರಿಗಳ್ಳ] – ದುಂಬಿ
	ಇ		
ಇಡುಕು	19-24	—	ವಿರಳ
ಇಟ್ಟಳ	104–25	—	ಇಕ್ಕಟ್ಟಾದ [ದಟ್ಟವಾದ]
ಇರ್ದಲ್	220–18	—	ಅರ್ಧ ಬೆಂದಿರುವ ಸೌದೆ
ಇಂಬು	69–14	—	[ಅವಕಾಶ] ಉತ್ತಮಸ್ಥಿತಿ
ಇಬ್ಬ	105-31	—	ವರ್ತಕವಿಶೇಷ
ಇಱಮುಱಿ	6–3ವ	—	(ಅನುಕರಣಶಬ್ದ) ತಿರಿಚಿಮುರಿಚಿ ಮುರಿಯುವಿಕೆ
ಇಱಯುಂಬೊಟ್ಟು	.....	—	ಸಾಯಂಕಾಲ
	ಉ		
ಉಕ್ಕೆವ	146–25 175-7ವ 138–6	—	ಮೋಸ [ಮಱೆಮಾಚುವುದು] ಉಕ್ಕೆವಮೆಂದು ಪಳಾಳಮೆಂದುಶಕ್ಕುಶ.ದ.
ಉಡಿಯಿಸು	59-41 ವ	—	ಹುಣ್ಣಿಗೆ ಮದ್ದು ಮಾಡು
ಉತ್ಸರ್ಗ	153-3	—	ಮಲಮೂತ್ರಗಳನ್ನು ಬಿಡುವಿಕೆ
ಉದ್ಧತಿಕ್ಕೆ	145–23	—	ದುರಹಂಕಾರ [ನಮ್ರರಾಗದಿರುವಿಕೆ]
[1]ಉರುಗುರಂ	133-2ಶ	—	ಅಮೇಧ್ಯ [ಮಲ]
ಉರುಳಿ	224-4	—	ಉಂಡೆ [ಮುದ್ದೆ]
ಉರ್ಕಾಳು	58-40	—	ಶೂರ
ಉರ್ವಿನ	11-19	—	ಹೆಚ್ಚಿಗೆ

(1) ಈ ಶಬ್ದಕ್ಕೆ ಊರಗೂಧಂ ಎಂದು ಪಾಠಾಂತರವುಂಟು. ಅದಕ್ಕೂ ಇದೇ ಅರ್ಥ. ತಮಿಳಿನಲ್ಲಿ ಉರ ಎಂದು ಗೊಬ್ಬರ (ಪ್ರಾಣಿಗಳ ಮಲಮೊದಲಾದುವ) ಕ್ಕೆ ಹೆಸರಂದೆ. [ಉರುಗುವ + ಉರ]

ಶಬ್ದ	ಪು. ಪ.		ಅರ್ಥ
ಉಯ್	128-16	—	ಭತ್ತದ ತವುಡು
ಉಳ್ಳಾಳು	58–40	—	ದಂಡಿನಲ್ಲಿರುವ ಶೂರ
ಉಱು	206–50 80–7	—	ಊರ್ಜಿತವಾಗು [ಬಲವಾಗು]
ಉಱಿ	84-18	—	ತಂಗುವ ಸ್ಥಳ
	ಊ		
ಊಱು	82–14	—	ಚುಚ್ಚು [ವ್ಯಾಪಿಸು]
	ಎ		
ಎಕ್ಕವಡಂ	137-4	—	ಪಾದರಕ್ಷೆ [ಎಕ್ಕಡ]
[1]ಎಕ್ಕೆ	196-22 ವ	—	ಮಂಚದ ಚೌಕಟ್ಟು
ಎಗ್ಗು	13-23	—	ದಡ್ಡ
ಎಡಱು	201-40 119-15 ವ 220–17 45-5 ವ		ಬಡತನ, ಹಣದ ನಾಶ, ಅಡ್ಡಿ
ಎಡೆ	229-42 ವ	—	ಅವಕಾಶ [ಸ್ಥಲ, ನಡುವೆ]
	ಏ		
ಏತಂ	152-14 ವ	—	ಭಾವಿಯ ಮಗ್ಗುಲಲ್ಲಿ ಕವಲಗೊಂಬನ್ನು ನೆಟ್ಟು ಅದರಮೇಲೆ ದೊಡ್ಡ ಗಣೆಯನ್ನು ಆಡುವಂತೆ ಜೋಡಿಸಿ ಒಂದು ತುದಿಗೆ ತೊಟ್ಟಯನ್ನು ಸೇರಿಸಿ ಅದರಿಂದ ನೀರೆತ್ತಿಸುವರು. ನೀರೆತ್ತುವ ಸಾಧನ
ಏವ	110–38 177–29 ವ		[ಹೇವ] ಜುಗುಪ್ಸೆ ಅವಮಾನ
ಏಟಿಗ [ಏಡಕ-ಸಂ]	105–29	—	ವರ್ತಕವಿಶೇಷ
ಏಟಿದಂ	2–6 7–5	—	ತಿರಸ್ಕಾರಪಡೆದವ
ಏಟಿದಿಕೆ	135–84	—	ತಿರಸ್ಕಾರ
	ಐ		
ಐಕಿಲ್	148–30	—	ಮಂಜು [ಹಿಮ]
	ಒ		
ಒಟ್ಟಯ್ಸು	154–6	—	ಅಡಗಿಸು

(1) ಹರಿಶ್ಚಂದ್ರ ಕಾವ್ಯದಲ್ಲಿ ವೀರಬಾಹುವಿನ ಮಂಚವನ್ನು ವರ್ಣಿಸುವಾಗ ಹಲವೆಲುವಿನೆಕ್ಕೆಗಳ – ಎಂಬ ಪ್ರಯೋಗವಿದೆ. ಎಕ್ಕೆ–ಏಕ ಎಂಬುದರ ತದ್ಭವ, ಎಕ್ಕೆಕ್ಕೆ ಒಂದೊಂದಾಗಿ ಎಂಬ ಅರ್ಥವನ್ನು ಆಧಾರವಾಗಿಟ್ಟು ಕೊಂಡು ಏಕ್ಕೆ ಶಬ್ದಕ್ಕೂ ಗುಂಪು ಎಂದು ಅರ್ಥಹೇಳುವರು. ಇಲ್ಲಿರುವ ಪ್ರಯೋಗವನ್ನು ಬಿಟ್ಟರೆ ಏಕ್ಕೆ ಶಬ್ದಕ್ಕೆ ಮಂಚದ ಚೌಕಟ್ಟು ಎಂಬರ್ಥವು ಎಲ್ಲಿಯೂ ದೊರಕದು.

ಶಬ್ದ	ಪು. ಪ.		ಅರ್ಥ
ಒರ್ಬುಳಿ	91–36 105–29	—	ಒಟ್ಟಾಗಿ
ಒಸಗೆ	73–26	—	ಮಂಗಳ – ಶುಭ – ಸಂತೋಷ
ಒಳ್ಳಾಳು	58–40	—	ಶೂರ
		ಓ	
ಓಗಡಿಸು	223–25	—	ಜಾರಿಕೊಳ್ಳು [ತೊಲಗು]
ಓವರಿ	103–22 ವ	—	ಕೋಣೆ[ಕಿರುಮನೆ]
		ಕ	
ಕಟ್ಟಪಟ್ಟ	48–15 ವ	—	ಬಂದಿಸಲ್ಪಟ್ಟ [ಕರ್ಮಣಿ ಪ್ರಯೋಗ ಗಮನಿಸತಕ್ಕುದು]
ಕಟ್ಟಱುಂಪೆ	180–38	—	ದೊಡ್ಡ ಇರುವೆ (ಕಟ್ಟೆರುವೆ)
ಕಡಿತಲೆ	153–2 ವ	—	ಕತ್ತಿ
ಕಣ್ಬಡು	202–41	—	ಬಯಸು, ಆಸೆಪಡು [ಕಣ್ಣಿಡು]
ಕಣ್‌ಬಾವು	202–42 ವ	—	ಬಯಸು
ಕಡಂಗು	71–20	—	ಉತ್ಸಾಹಗೊಳ್ಳು
ಕಪ್ಪಡ	192–34 ವ	—	ಚಿಂದಿಬಟ್ಟೆ
ಕಮ್ಮನೆನಾರ್	147–26 ವ	—	ಸುವಾಸನೆಯನ್ನು ಬೀರು
ಕರ್ಬೊನ್	81–11 ವ	—	ಕಬ್ಬಿಣ
ಕಲಸಂಗೂಲಿ	199–35 ವ	—	ಮೊಸರು ಅನ್ನ [ದಾರಿಯ ಒತ್ತಿ ಅನ್ನ]
ಕಲ್ನೆಲೆ	162–29 ವ 144–21	—	ಕಲ್ಲಿನ ಮೇಲೆ ನಿಂತು ತಪಸ್ಸುಮಾಡುವಿಕೆ
ಕಸವರಂ	8 – 9 ವ	—	ದ್ರವ್ಯ – [ಹಣ]
ಕಱುಕುಚಿಗ	202–42 ವ 202–43 ವ	—	ಕರುಗಳನ್ನು ಕಾಯುವ ಆಳು [ವತ್ಸಪಾಲಕ – 203 - 44]
ಕಱಿ	194–24	—	ನೊಗದ ರಂಧ್ರದಲ್ಲಿ ಜೋಡಿಸುವ ಮರದ ಗೂಟ [ತಮಿಳ್ ಶಬ್ದ]
ಕಾರುಕ	86-24	—	ಬಡಗಿ ಅಕ್ಕಸಾಲೆ ಮೊದಲಾದವರು
ಕಾಸೆ	89–32	—	ಕಾಷಾಯಬಟ್ಟೆ
ಕಾಟ್ಪುರ			(ಕಾಡ+ಪೂರ)–ಕಾಡಿನಲ್ಲಿ ಹರಿವ ತೊರೆ
ಕಿತ್ತಡಿ	163–29 ವ	—	ಯತಿ–[ವ್ರತವನ್ನು ಹಿಡಿದಿರುವವ]
ಕಿತ್ತಯ್ಯ	91–35 ವ	—	ಚಿಕ್ಕ ಸನ್ಯಾಸಿ
ಕಿಂಪಾಕ ಫಲ	139–9	—	ವಿಷದಂತೆ ತಿಂದವನನ್ನು ಕೊಲ್ಲುವ ಹಣ್ಣು
[1]ಕಿರಿ [ತಲೆ-ಗಿರಿ]	89–32	—	ತಲೆಗೂಡಲನ್ನು ತೆಗೆದು

(1) ತಲೆಯಂ ಕಿರಿಯಿಸಿ ದೆವಸಮು। ನಲಸದೆ ಬೆಸಗೊಳ್ವಸಂತುಗಾವಿಲನಕ್ಕುಂ (ಕವಿರಾಜ 3 – 114)

ಶಬ್ದ	ಪು. ಸ.		ಅರ್ಥ
ಕಿಸುಗಳ	48-15 ವ 76-31	—	ಹೇಸಿಗೆ - [ಅಲ್ಪ ಮನುಷ್ಯ]
ಕಿಸುಗುಳನಾರು	147-26 ವ	—	ದುರ್ಗಂಧವನ್ನು ಬೀರುವ
ಕೀಲ್	153-4 ವ	—	ಬಾಗಿಲಿಗೆ ಹಾಕುವ ಅಗಣಿ [ಮೊಳೆ-ಗೂಟ]
ಕೀಳು	202-42 ವ	—	ಒತ್ತಾಯಮಾಡು
ಕೀಳುಲ್	201-40 ವ	—	ಕೆಳಗಡೆ [ಹಿಂದುಗಡೆ] ಮನೆ
ಕುಡುಗೋಲ್	180-31	—	ಅರ್ಧಚಂದ್ರನಂತೆ ವಕ್ರವಾಗಿರುವ ಪದಾರ್ಥಗಳನ್ನು ಕುಯ್ಯುವ ಕತ್ತಿ [ಕೊಂಕಾದ + ಕೋಲ್]
ಕೂಂಟಣಿ(ಕುಟ್ಟಣೀ-ಸಂ)	147-27	—	ಸೂಲಕಿಯರ ಹತ್ತಿರ ಒತ್ತೆಯನ್ನು ತೆಗೆವ ಹೆಣ್ಣಾಳು
ಕುದಿಲು	49-18 ವ	—	ನೆಲದಲ್ಲಿ ಧಾನ್ಯಗಳನ್ನು ತುಂಬಿಡಲು ಮಾಡಿರುವ ಹಳ್ಳ
ಕುಲಿ	161-25 156-13 ವ	—	ಹುತ್ತ - [ಹಳ್ಳವಾಗು]
ಕೂರ್ಗತ್ತಿಗೆ	182-43	—	ಹರಿತವಾದ ಕತ್ತಿ
ಕೆಯ್ವಾ[ಕೈ]ವಾರ-	68-10	—	ಸ್ತೋತ್ರ
ಕೆಯ್ಗಟ್ಟ	109-38 ವ	—	ಕೈಗೆ ಸವರಿಕೊಳ್ಳುವ ಸುವಾಸನೆವಸ್ತು
ಕೂಚಿಪತ್ರ	197-30	—	ವಿಷಯವನ್ನು ಬರೆದಿಟ್ಟಿರುವ ಪತ್ರ
ಕೆಱಂಕು	87-28	—	ಮೈನವೆ
ಕೆಲ್ಲಯ್ಯು	174-23	—	ಹೆದರಿಕೆಯಿಂದ ನೋಡುವ ನೋಟ
ಕೈಪೆ	172-17	—	ಕಹಿ ಉಪ್ಪು ಕಾರ ಮೊದಲಾದ ಆರು ರಸಗಳಲ್ಲಿ ಒಂದು ರಸ
ಕೊಲುಕ್ಕಿಸಲು	81-10	—	ದಟ್ಟವಾದ ಕೆಸರು
ಕೋಳ	196-29 ವ	—	ಮರದಿಂದ ಮಾಡಿದ ಒಂದು ಉಪಕರಣ [ಪೂರ್ವ ಕಾಲದಲ್ಲಿ ಬಂದಿಕಾರನಿಗೆ ಕೈಗೆ ತೊಡಿಸುತ್ತಿದ್ದ ಉಪಕರಣ]—
ಕೋಣೆ [ಕೋಣ - ತ್ಸ]	146-24	—	ಮೂಲೆಯಲ್ಲಿರುವಮನೆಯಭಾಗ [ಕಿರುಮನೆ]
ಕೋಳ್[ಲ್]	54-31 ವ 79-3 32-8 ವ	—	ಬೇಟೆಯಾಡಿ ಕೊಲ್ಲುವ ಪ್ರಾಣಿ—ಹೊಡೆತ
ಕೋಳ್ಪಡು	159-21	—	ದೋಚಲ್ಪಡು [ಕರ್ಮಣಿ ಪ್ರಯೋಗ] ಗಮನಾರ್ಹ
ಕ್ರಮ [ಕ್ರಮದವರ್]	122-67 ವ	—	ಹಕ್ಕುದಾರರು (ಜ್ಞಾತಿಗಳು) [ಪಾಲುಗಾರರು]
ಗಗ್ಗರ	118-60	—	ಕಾಲುಬಳೆ

ಶಬ್ದ	ಪು. ಪ.		ಅರ್ಥ
ಗಂಟೆ	31–5 ವ	—	ಹಸು [ಸ್ವೀಚ್ಛೆ ತಿರುಗುವ ಹಸು] [ಪೋಲೀಹಸು]
ಗಸಟು	218–12 ವ	—	ದ್ರವವಸ್ತು[ತುಪ್ಪ ಮೊದಲಾದುವು]ವನ್ನು ಶೋಧಿಸಿದರೆ ತಳದಲ್ಲಿ ನಿಲ್ಲುವ ಕೊಳೆ–[ಕಶಂಡು — ತಮಿ — ಗಸ್ಟು —ವ್ಯಾವ]
ಗಲತಿ	130–22	—	ಬಿದಿರ ಬಂಬು
ಗಾವಿಲಿಕೆ ಗಾವಿಲ	125–7 ವ	—	ವಿದ್ಯಾಹೀನತೆ [ಪಾಮರ] [ಹಳ್ಳಿಗಾಡಿನವ]
ಗಾವುಂಡಂ	201–39	—	ನೆಲವನ್ನುತ್ತು ಜೀವಿಸುವ ಜಾತಿಯವ
ಗಾವುಂಡಿ	,,	—	ಗಾವುಂಡನ ಹೆಂಡತಿ
ಗುಡಿಸಿಲ್	201–40 ವ	—	ಎಲೆವನೆ [ಕುಡಿಶಿಯ್-ತಮಿಳು]
ಗುಣ್ಪು	163–30 ವ	—	ನೀರಿನ ಆಳ
ಗುರ್ದು	7–5	—	ಗುದ್ದುವಿಕೆ - [ಕೈಮುಷ್ಟಿಯಿಂದ ಹೊಡೆಯುವುದು]
ಗೂಬುಮಾಱಾಳಿ	157–15 ವ	–	[ಒಂದು ವಸ್ತುವನ್ನು ಕೊಟ್ಟು ಮತ್ತೊಂದನ್ನು ಕೊಳ್ಳುವವರು, ವಸ್ತುವಿನಿಮಯಗಾರರು]
ಗೊಜ್ಜಗೊಜ್ಜರು	163–30 ವ	—	[ಅಜ್ಜಪಜ್ಜರ ಜತೆಯಲ್ಲಿ ಅರ್ಥಪೋಷಕ್ಕೆ ಬಂದಿರುವ ನಿರರ್ಥಕ ಶಬ್ದ] ?
ಗೊಂದೆ	81–10	—	ಹಸು ಅಥವಾ ಎತ್ತು
ಗೊಡ್ಡ ಗೊಡ್ಡಾಟ	91–36 199–35ವ	—	ಪುಂಡುತನ – [ದೌಷ್ಟ್ಯ]
ಗೊರವಬ್ಬೆ	89–32	—	ಸನ್ಯಾಸಿನಿ
ಗೋಸಣೆ	9–11	—	[ಘೋಷಣ-ತ್ಸ] ಸಾರಿ ಹೇಳುವಿಕೆ
ಗೌತ	105–30	–	ವರ್ತಕವಿಶೇಷ
ಘಟಾಯಿಸು [ಘಟಸು-ತ್ಸ]	194–2+	—	ಸೇರಿಸು
		ಚ	
ಚಮ್ಮಾವುಗೆ	108-37 ವ	—	ಎಕ್ಕಡ
		ಜ	
ಜಲ್ಲಮಲ	50-22	—	ಮೈಕೊಳೆ
ಜಾಮಿಸಿ	121-66 ವ	—	ಶವವನ್ನು ದಹಿಸಿ–[ಶವಸಂಸ್ಕಾರ ಮಾಡಿ]
[1] ಜೂಂಟರ್	7-5 68-10	—	ಮೋಸಗಾರರು

(1) ಆದಿ ಪುರಾಣದಲ್ಲಿ ಜಟಮಟಕರ್ಕಳ್ (ಮೊಂಡಪಕೀರಿ–ವ್ಯಾವ)

ಶಬ್ದ	ಪು. ಪ.		ಅರ್ಥ
ಜೋಕುವರ ?	8-7	—	[ಯುವಕುಮಾರ - ಯುವರಾಜ— ಇರಬಹುದೇ ?]
		ರ಼ು	
ರ಼ುಲ್ಲಲು [ಳ]	94-1	—	ಜಲಡೆ [ಒಂದರಿ]
		ಠ	
ಠಕ್ಕ	30-4	—	ಮೋಸಗಾರ
		ಡ	
ಡಾವರಿಗ [ಡಾಮರ-ತ್ಸ]	158-16	—	ರಾಜನುಮಾಡುವ ಪ್ರಜೆಗಳ ಆಸ್ತಿಯ ಸೂರೆಗೆ ಡಾಮರವೆಂದು ಹೆಸರು ಆ ದ ನ್ನು ಮಾಡುವವ — ಸೂಱೆಗಾರ,
ಡಾಮರ	73-25ವ	—	ರಾಜನಸೂಱೆ
ಡಾಳೆಯರ್	27-35 ವ	—	ಮೋಸಗಾತಿಯರು [ಚತುರೆಯರು]
ಡೊಂಬಿಸು	69-14	—	ಮೋಸಮಾಡು
ಡೊಣೆ	144-21		-ಬೆಟ್ಟದಮೇಲೆ ತಾನಾಗಿ ನಿಂತಿರುವಭಾವಿನೀರು
		ತ	
[1]ತಕ್ಕೂರ್ಮೆ	127-14	—	ಉಚಿತವಾದ ಪ್ರೀತಿ ? [ಕೃತಜ್ಞತೆ]
ತ(ಟ)ಗರು(ಱು)	196-28ವ	—	ಗಂಡುಗುಱು
ತಗುಳ್ಪು	73-26	—	ಸೇರಿಕೊಳ್ಳುವುದು
ತಗೆಪು	.....	—	ಸಾಲದ (ಋಣದ) ನಿರ್ಬಂಧ
ತಲೆನೀರ್	195-26 ವ		-ಋತುವಾದವರು ನಾಲ್ಕನೆದಿನಮಾಡುವಸ್ನಾನ
ತವಿಲ್	222-24	—	[ತವುಕ್ಷಯೇ ಧಾತು-ಭಾವನಾಮ] ಸ್ನಾನ
ತ [ತೆ] ಱಂಬು	50-22 113-46 ವ	—	ನೊರಜು ಕಲ್ಲಿನ ನೆಲ
ತಿಣ್ಣಂ [ತೀಕ್ಷ್ಣ-ತ್ಸ]	195-27 ವ 140-12	—	ದಟ್ಟವಾದ, ಪ್ರಬಲವಾದ
ತುಡುಗುಣಿ	141-14 ವ	—	ತುಡುಗನ್ನು ಉಣ್ಣುವುದು-ಕದ್ದುತಿನ್ನುವವ
ತುಯ್ಯಲ್	202-42	—	ಪಾಯಸ
ತೂಂಬು	163-30 ವ	—	ಕೆಱೆ ಮೊದಲಾದ ನಿಂತ ನೀರಿನ ಜಲಾಶಯಗಳಲ್ಲಿ ನೀರನ್ನು ಹೊರಗೆ ಗದ್ದೆಗಳಲ್ಲಿ ಹಾಯಿಸಲುಮಾಡಿರುವ ರಂಧ್ರದಕಾಲಿವೆ

(1) ಕೂರ್ಮೆ, ಕೂರ್‌ಸ್ನೇಹೇ ಎಂಬ ಧಾತುವಿನ ಭಾವನಾಮ, ಸ್ನೇಹವೆಂದೂ ಪ್ರೀತಿಯೆಂದೂ ಅರ್ಥ— ತಕ್ಕೂರ್ಮೆಯುಂ ಕೂರ್ಮೆಯುಂ ಎಂದು ಒಟ್ಟಿಗೆ ಪ್ರಯೋಗವಿದೆ.

ಶಬ್ದ	ಪು. ಪ.		ಅರ್ಥ
ತೆ [ನಿಪಾತ]	104-25	—	ಛೀ! ಎಂಬಧಿಕ್ಕಾರಸೂಚಕ
ತೆಪ್ಪ	148-30ವ	—	ನದಿಯನ್ನು ದಾಟುವುದಕ್ಕೆ ಉಪಯೋಗಿಸುವ ಸಾಧನ.
ತೆರಳಿ (ತೆರಳಿಯಪುಲು)	140-10 ವ	—	ರೇಷ್ಮೆದಾರ ಮಾಡುವ ಹುಳು
ತೆಳ್ಪು	264-32 ವ	—	ಕೊಳೆಯು ಹೋಗಿ ತಿಳಿಯಾಗಿರುವಿಕೆ [ಶಾಂತಿ]
ತೊಂಗಲು	212-63 ವ	—	ಹೂವಿನ ಅಥವಾ ಚಿಗುರಿನ ಗೊಂಚಲು
ತೌಡು [ತವುಡು]	225-3C ವ	—	ಭತ್ತದ ಸಣ್ಣ ಹೊಟ್ಟು
ತೊಡಱು	27–49	—	ಸುತ್ತಿ ಬಿಗಿಯುವಿಕೆ
		ದ	
[1]ದಂಡು	208-53	—	ಕೋಲು
ದರಿ	6-2	—	ನೀರಿನ ಕೊಲ್ಲಿ [ನದಿಯ ಆಚೀಈಚೆ ಹಳ್ಳ ಬಿದ್ದಿರುವ ಕೊರಕಲು]
ದಸಿ	150–33	—	ಚುಚ್ಚುವ ಚಿಕ್ಕದಾದ ಆಯುಧ
ದಾರವಂದ	153–4	—	[ದ್ವಾರಬಂಧ-ತ್ಸ] ಬಾಗಿಲಚೌಕಟ್ಟು
ದೂಸಱು	8-7	—	ಕಾರಣ [ನಿಮಿತ್ತ]
ದೇಸಿಗ	86–24	—	ತಿರಿಪೆಯನ
ದೇಹಾರ	88–31 ವ	—	ದೇವಸ್ಥಾನ
		ನ	
ನಣ್ಪು	68–12	—	ನಂಟತನ [ಸ್ನೇಹ]
ನಾಣಿಲಿ	82–12	—	ನಾಚಿಗೆಯೆ ಇಲ್ಲದವ
ನಿಬುದ್ಧ	210–58	—	ಬುದ್ಧಿಯಿಲ್ಲದವ
ನೀಱುಲು	121–66 ವ	—	ಸತ್ತವರಿಗಾಗಿ ಮಾಡುವ ಸ್ನಾನ [ಸಂ – ಅಪಸ್ನಾನ – ಎಂದು]
ನೀಡಱಿದು	10–14 118–61 ವ	—	ಹೊತ್ತು [ಕಾಲ]
ನೆಲವಲ್ಕಿ	120–14	—	ನೆಲದಲ್ಲಿ ಹಾಸಿರುವ ಹಾಸುಗೆ [ಮಂಚ ಮೊದಲಾದ ಎತ್ತರ ಸ್ಥಳದಲ್ಲಿಲ್ಲದಿರುವುದು ಎಂದು ಭಾವ]
ನೇಱಿ	82–12	—	ಮರ್ಮಸ್ಥಳ

(1) ಶಬ್ದಾನುಶಾಸನವೆಂಬ (16 ನೆಯ ಶತಮಾನದ) ಕನ್ನಡ ವ್ಯಾಕರಣದಲ್ಲಿ–ಉದ್ಯೂಪದ್ಯ–ಎಂಬ ತದ್ಭವ ಸೂತ್ರದ ವ್ಯಾಖ್ಯಾನದಲ್ಲಿ ತಥಾದಂಡಬಿರುದ ಶಬ್ದಯೋರಪಿ (ಉತ್–ಉಕಾರಾಂತವಾಗುವಿಕೆ) ದೃಶ್ಯತೇ ಎಂದು ಹೇಳಿ – ದಂಡು ಸೊರೆಭೂತಿ ರುದ್ರಾಕ್ಷಂ – ಎಂಬ ಪಾರ್ಶ್ವನಾಥಪುರಾಣದ ಕಂಡವನ್ನು ಪಹರಿಸಿರುವರು, ಇದು ಮತ್ತೊಂದು ಉದಾಹರಣವಾಗಿರುವುದು—

ಶಬ್ದ	ಪು. ಪ.		ಅರ್ಥ
ನೊಚ್ಚಿಕು	.....	—	ಹಗುರ
ನೊಲವು [ಗಳ್]	180–39	—	ನೊಣ [ನೊಲವು ಎಂಬ ವುಕಾರಾಂತ ರೂಪವು ಗಮನಾರ್ಹ]
		ಪ	
ಪಂಚಶಯ್ಯೆ	120–14 99–9 ವ [ಅಂಡಜ]	—	ಹೆತ್ತಿ, ಉಣ್ಣೆ ಮೊದಲಾದ ಐದು ಬಗೆ ಮೆತ್ತನೆಯ ವಸ್ತುಗಳಿಂದ ಮಾಡಿದ ಹಾಸುಗೆ [ಸುಪ್ಪತ್ತಿಗೆ]
ಪಚ್ಚವಡ	132–78 ವ	—	ಸ್ನಾನದ ನೀರು ಹೋಗುವ ಬಚ್ಚಲು
ಪಚ್ಚಿಕೊಳ್	45–6	—	ಹಂಚಿಕೊಳ್ಳು [ಪಾಲುಮಾಡಿಕೊಳ್ಳು]
ಪಟ್ಟೀಸ	112–44 ವ	—	ಬಟ್ಟೆಗಳನ್ನಿಟ್ಟಿರುವ ಪೆಟ್ಟಿಗೆ
ಪಡಿ	153–4 ವ	—	ಬಾಗಿಲ ಕದ
ಪಡುಕೆ	132–74	—	ಕೆಟ್ಟನಾತ [ದುರ್ವಾಸನೆ]
ಪಡೆವಾತು	116–55	—	ಜನವಾರ್ತೆ
ನಾರ್ಪ	56–36 ವ	—	ಒಳ್ಳೆಯ ವಾಸನೆಗುಡುವ
ಪಣಿದ	117–50 ವ	—	ಹೋರಾಟ
ಪತಿವ್ರತಿಕ್ಕೆ	222–38	—	ಗರತಿತನ [ಇಲ್ಲಿ ಭಾವಾರ್ಥದಲ್ಲಿ ಸಂಸ್ಕೃತ ಶಬ್ದದಮೇಲೆ ಇಕ್ಕೆ ತದ್ಧಿತಪ್ರತ್ಯಯ ಬಂದಿರುವುದು ಗಮನಾರ್ಹ]
ಪದುಳ [ಪದುಳಿಗಂ]	177–29 ವ 175–25 ವ	—	ಕ್ಷೇಮ–ಕ್ಷೇಮದಿಂದಿರುವವ
ಪರದು	104–26 ವ	—	ವ್ಯಾಪಾರ
[1]ಪಯ	218–12 ವ	—	ಕರುಹಾಕಿ ಸ್ವಲ್ಪಕಾಲಮಾತ್ರ ಈಗಿರುವ ಹಸು [ಸಂ–ಧೇನುಃನವಸೂತಿಕಾ]
ಪರಲ್	120-14	—	ಸಣ್ಣ ಸಣ್ಣ ಕಲ್ಲುಗಳು [ರತ್ನವೆಂದೂ ಅರ್ಥ]
ಪರಿವಿಡಿಗೊಳ್		—	ಓದು [ಹೇಳಿದುದನ್ನು ಹೇಳು]
ಪರು(ನ)ಣೆ ?		—	ಕಾದಿ ?
ಪರ್ಯಷ್ಟಿ	112-44 ವ	—	ಸನ್ಯಸನ ಪ್ರತ್ಯಾಖ್ಯಾನ
ಪಸ	6-3 ವ 73-25 ವ	—	ಬಱಗಾಲ [ದುರ್ಭಿಕ್ಷ]

(1) ಈ ಶಬ್ದವು ಹಳಗನ್ನಡದಲ್ಲಿ ಕ್ರಮೇಣ ಕರುಹಾಕಿರುವ (ಮರಿಹಾಕಿರುವ) ಪಶುಮೃಗಗಳೆಲ್ಲಕ್ಕೂ ವಾಚಕವಾಗಿರುವ ಪ್ರಯೋಗಗಳು ಕಾವ್ಯಗಳಲ್ಲಿ ಉಂಟು ಪಯವುಲಿಗಳ್ (ಕಾವ್ಯಾವಲೋಕ) ಪಯಗರಡಿಗಳ್ (ಲೀಲಾವತಿ) ಇದರಂತೆ ತಮಿಳಿನಲ್ಲಿಯೂ ವಯಪ್ಪುಲಿ ಪ್ರಯೋಗವಿದೆ. ಅದನ್ನು ಅವರು ವಯಶಬ್ದಕ್ಕೆ ಬಲಶಾಲಿ ಎಂಬರ್ಥದಲ್ಲಿ ನ್ಯೆವಹರಿಸುವರು– ಆಡರೆ ಮರಿಹಾಕಿದ ಹುಲಿ ಎಂದು ಹೇಳುವುದು ನ್ಯಾಯವೆಂದು ತೋರುವುದು. ತಮಿಳಿನಲ್ಲಿ ಪಯಶಬ್ದಕ್ಕೆ ಹೆತ್ತ ಎಂಬರ್ಥವುಂಟು – ದಶರರ್ಥ ಪಯನ್ರ ಕಾಳೆ (ದಶರಥನು ಹೆತ್ತ ಗೂಳಿಯಂತಿರುವ ಮಗ) ಎಂಬ ಪ್ರಯೋಗವಿದೆ—

ಶಬ್ದ	ಪು. ಪ.		ಅರ್ಥ
ಪಸು (ಪಿ)	150-33(2)	—	ವಿಭಾಗಿಸು (ಪಸಿ=ಕರ್ತರಿಸು)
ಪಱಿಪಟ್ಟು	218-12 ವ	—	ಮುದಿಯಾಗಿ ಕೆಳಗೆ ಬಿದ್ದುಹೋಗು [ಉದಿರು]
ಪಱುಗೋಲ್	91-36 ವ	—	ಚರ್ಮದಿಂದ ಮಾಡಿರುವ ನೀರನ್ನು ದಾಟುವ ಉಪಕರಣ
ಪಱಿ	145-23 ವ	—	ತಮ್ಮಟೆ (ಹೊಲೆಯರಿಗೆ ನಿಯತವಾದ ವಾದ್ಯ)
ಪಱಿ	8-9	—	ನಿಂದೆ (ಕೆಟ್ಟ ಹೆಸರು) ಬಯ್ಗುಳ
ಪಾಂಗು	110-40	—	ರೀತಿ
ಪಾಲು + ಗೆಡು	22-39 208-55 223-27 13-23	—	ಕ್ರಮ [ಹಕ್ಕುಬಾಧ್ಯತೆ] ಮಾಡಲೇಬೇಕಾದ ಕಾರ್ಯಕರ್ತವ್ಯ, ಸಂಪ್ರದಾಯ, ಧರ್ಮ
[ಪೆ]ಪಿಲ್ಲಿಸಿ	38-23	—	ಹಿಂಸಿಸಿ ?
ಪುಟ್ಟ	94-1 ವ	—	ಜೇನುಗೂಡು
ಪುಟ್ಟಗೆ	112-44 ವ 148-30	— —	ಹೂವನ್ನು ತರುವ ಬಿದಿರ ಬುಟ್ಟಿ ಬಟ್ಟಿ [ವಸ್ತ್ರ]
ಪುಡಿಕೆ	226-33	—	ಭರಣಿ
ಪುದುವಾಲು	91-36 ವ 194-25	—	ಸಂಸಾರಮಾಡಿಕೊಂಡು ಬಾಳು [ಗಂಡನೊಂದಿಗೆ ಜೀವನ ನಡೆಸುತ್ತಿರು] ಒಟ್ಟಿಗೆ ಸೇರಿ ಜೀವಿಸುವುದು
ಪುಯ್ಯಲ್	20-37 ವ	—	ದುಃಖದಿಂದ ವಿಕಾರಧ್ವನಿಯಲ್ಲಿ ಕೂಗು
	60-44	—	
ಪುಷ್ಪವಾಸ [ಅಕ್ಕಿ]	107-35 ವ	—	ಹೂವಿನ ವಾಸನೆಕಟ್ಟಿದ [ಅಕ್ಕಿ]
ಪುಳ್ಳಿ	148-30 ವ	—	ಮರದಿಂದ ಉದಿರಿದ ಒಣಗಿದ ಕಡ್ಡಿ
ಪೆರ್ವೆತ್ತಿಕ	172-17	—	ದೊಡ್ಡದಾದ ಪಿತ್ತವ್ಯಾಧಿ [ಪಿರಿದಾದ ಪೈತ್ತಿಕ]
ಪೆಱಉಱಿ	220-17 ವ	—	ಬೇಱೊಂದುಕಡೆ
ಪೆಱಿ	31-7	—	ಒಂದೆರಡು ಕಳೆಯುಳ್ಳ ಚಂದ್ರ
ಪೆಪ್ಪು [ಹೊಸ,ಕ-ಹೆಪ್ಪು]	218-12 ವ	—	ಹಾಲಿಗೆ ಅದು ಗಟ್ಟಿಯಾಗಿ ಮೊಸರಾಗಲು ಸೇರಿಸುವ ಸ್ವಲ್ಪ ಮಜ್ಜಿಗೆ
ಪೊಂಕ	117-56	—	ಗರ್ವ [ಶೌರ್ಯ]
ಪೊಡವ್ದು [ಗಿಡಿಸು]	27-49	—	ಶಕ್ತಿಯನ್ನು ಕುಂದಿಸು [ಅಡಗಿಸು]
ಪೊಚ್ಚಂ	170-13	—	ಹೊಸದು
ಪೊಟ್ಟು	26-46	—	ಭತ್ತ ಮೊದಲಾದ ಧಾನ್ಯಗಳಮೇಲಿರುವ ತೆಳುವಾದ ಪೊರೆ
ಪೊರೆ	98-9	—	ಪಕ್ಕ [ಪದರ]
ಪೊಲಂಬು	79-4 ವ	—	ದಾರಿ

ಶಬ್ದ	ಪು. ಪ.		ಅರ್ಥ
ಪೊಲಗೆಟ್ಟು(ಪೊಲಬಂ + ಕೆಟ್ಟು)	177-30ವ	—	ದಾರಿಗಾಣದೆ [ಮುಂದುಗಾಣದೆ]
ಪೋಬಲ್	162-29 ವ	—	ಮಂದ ಪೊಟ್ಟರೆ
		ಬ	
ಬಟ್ಟು(ಸಂ–ವೃತ್ತ)	81-11 ವ	—	[ವರ್ತುಳ] ಗುಂಡು
ಬಂಡಂ	.....	—	ಪದಾರ್ಥ
ಬಮ್ಮೈತಿ [ಸಂ–ಬ್ರಹ್ಮಹತಿ]	180-37 ವ	—	ಬ್ರಾಹ್ಮಣನನ್ನು ಕೊಂದ ಪಾಪ
ಬಯ್ಗಿರುಳ್	57-38	—	ಪ್ರಾತಸ್ಸಂಜೆ
ಬರ್ಚು	84-19	—	ಬೆಂಕಿ ಆರಿಸು
ಬವಣಿಗೆ	75-30	—	ಸುತ್ತುವುದು
ಬಱಿಯೆಲ್	130-22	—	ಪಕ್ಕದಮೂಳೆ (ಎಲುಬು)
ಬಾಗು	110–41 ವ	—	ಬೇಯಿಸು (ಬಗ್ಗು)
ಬಾಣಸಿಗ	25–46 ವ	—	ಅಡುಗೆಯವ(ಮಹಾಸನ ಸಂ–ಅಡುಗೆಮನೆ]
ಬಾರಿ ಬಾರಿಕ	38-23 ವ	—	ಸರದಿ ಸರದಿಯನ್ನು ಎಚ್ಚರಿಸುವವ
ಬಾವು [ದೆವಸ]	232–52 56-36	—	ಬಲಿಕೊಡುವ ದಿವಸ–ವ್ರತದ ಪಾರಣೆದಿನ
ಬಾಲ್ತಿ	169-10 ವ	—	ಜೀವನ (ಪ್ರಯೋಜನ)
ಬಿಗು(ಗಿ)ವು	174-22	—	ಬಂಧನ (ಗಟ್ಟಿಯಾಗಿರುವಿಕೆ)
ಬಿಗುಱು	228-41	—	ಹೆದರು
ಬಿಗುಱು	38–24	—	ಅಳು
ಬಿಟ್ಟ (ವಿಷ್ಟಿ ಸಂ)	.....	—	ಕೂಲಿಯಿಲ್ಲದೆ ದಾಕ್ಷಿಣ್ಯಕ್ಕೆ ಕೆಲಸಮಾಡುವವ
ಬಿಣ್ಪು	157-15	–	ಕಾಠಿನ್ಯ[ಗಟ್ಟಿಯಾಗಿರುವಿಕೆ,ಭಾರವಾಗಿರುವಿಕೆ]
ಬಿರ್ದಿನ	199-34 ವ	–	ಔತಣಕ್ಕೆ ಬಂದವ [ಅಭ್ಯಾಗತ]
ಬೆಂಕೆ	25-45 100-4	—	(ಬೇ ಧಾತುವಿನ ಕೃದಂತ) ಉಷ್ಣ–ತಾಪ
ಬೆಟ್ಟದಂ	219-14	—	ಕಠಿನ [ಕ್ರೂರ]
ಬೆಜ್ಜು	36-19	—	[ಭೇಷಜ-ಸಂ] ಔಷಧ, ರೋಗ ಚಿಕಿತ್ಸೆ
ಬೆಬ್ಬರ [ಬೆಸೆ]	145-23 ವ	—	(ಅನುಕರಣ ಶಬ್ದ–) ಸೇರಿಸಿಕೊಳ್ಳುವುದು ಹೆಮ್ಮೆಪಡುವುದು
ಬೆಬ್ಬಳ	144–20	—	[ಅನುಕರಣ ಶಬ್ದ] ದಿಗ್ಭ್ರಾಂತನಾಗುವಿಕೆ
ಬೆಮ್ಮರ [ಬೆನ್ನ + ಮರ]	130–22	—	ಮನೆಯ ಮೇಲ್ಛಾವಣಿಗೆ ನಡುವೆ ಹಾಕುವ ದೊಡ್ಡ ಮರದ ತುಂಡು (ತೊಲೆ – ಸರ)
ಬೆಸ	200-37	—	ಕೆಲಸ [ಕಾರ್ಯ]

ಶಬ್ದ	ಪು. ಪ.		ಅರ್ಥ
	23–39 ವ	—	ಒಡೆಯನ ಅಪ್ಪಣೆ
ಬೆಸೆದಿರು	7-6	—	ಹೆಮ್ಮೆಯಿಂದಿರು [ಒಣಹೆಮ್ಮೆಯಿಂದಿರು]
[1]ಬೆಳ್ಗಂಡರ್	102-21 ವ	—	ಅಂಜುಪುರುಕರು
ಬೆಳ್ಮಗಂ	84-18	—	ಜಿಂಕೆ ಮೊದಲಾದ ಸಾಧುಮೃಗ
[2]ಬೆಳ್ಳವಾಸ	162-29 ವ	—	ನೀರಿನ ಪ್ರವಾಹದಲ್ಲಿದ್ದುಕೊಂಡು ತಪಸ್ಸು ಮಾಡುವುದು[ಬೆಳ್ಳದಲ್ಲಿ + ವಾಸ-ಅರಿಸಮಾ]
ಬೆಲ್ಮುಲು	82–14	—	ಭಯಪಡು
ಬೇಹು	58-39 ವ	—	ಗೂಢಚಾರ
ಬೈಕಂಗುಳಿ ಭಿಕ್ಷಾ ॥ ಬೈಕಂ	48-15 ವ	—	ಬೈಕವನ್ನು ಮಾಡುವಸ್ವಭಾವದವ-ತಿರಿಜೆಯವ
ಬೊಡ್ಡಣಭಾವಿ	198-33 ವ	—	ಒಕ್ಕರಣೆ ಭಾವಿ - ಎಂದರೆ ತುಂಬಾ ಆಳವಾಗಿ ನೀರು ಹರಿಯುವ ತೂಬುಳ್ಳ ಸೇದುವ ಭಾವಿ
ಬೋದಂ ಭೌತ-ಸಂ=ಭೌತಿಕ	171-64	—	ಶೈವ ಸನ್ಯಾಸಿ- [ಜಂಗಮಯ್ಯ]
ಬೋನ	109-38 ವ	—	ಅನ್ನ
ಬೀಯ[ಬಿಯ][ವ್ಯಯ-ಸಂ]	195-27 ವ	—	ಖರ್ಚು [ಪದಾರ್ಥಗಳನ್ನು ಪಯೋಗಿಸಿ ಮುಗಿಸು]
		ಭ	
ಭಂಡ[ಬಂಡ]	158-18 ವ	—	ವ್ಯಾಪಾರಕ್ಕಾಗಿ ಮೊದಲು ಹಾಕುವ ಹಣ ಬಂಡವಾಳ - ಇದಕ್ಕೆ ಈ ಗ್ರಂಥದಲ್ಲಿ ಮೊದಲ್ ಎಂದೂ ಪ್ರಯೋಗವಿದೆ—
[3]ಭೈತ್ರಂ[ವಹಿತ್ರ-ಸಂ]	49-18	—	ಹಡಗು [ತೆಪ್ಪ]
		ಮ	
ಮಂದಸು (ಸ)	134-31	—	ಮರದ ಪೆಟ್ಟಿಗೆ
ಮದಿಲ್	133-29 ವ	—	ಗೋಡೆ
ಮದ್ದುಗ[ಗು]ಣಿಕೆ	125-6 ವ	—	ಉಮ್ಮತ್ತದ ಗಿಡ
ಮನಮಿಕ್ಕು	175-26 ವ	—	[ಮನಮಂ + ಇಕ್ಕು] ಎಂದರೆ ಉತ್ಸಾಹ ಹೀನನಾಗು ಎಂದು ತಾತ್ಪರ್ಯ

(1) ಬೆಳ್ ಶಬ್ದಕ್ಕೆ ಶೂನ್ಯ ಎಂದರ್ಥ, ಇದು ಬೇರೆ ಶಬ್ದದೊಡನೆ ಸಮಾಸವಾಗಿ ಇಲ್ಲ ಎಂಬ ತಾತ್ಪರ್ಯವನ್ನು ಕೊಡುವುದು — ಬೆಳ್ವಯಲ್ – ಮರ ಮೊದಲಾದುವೊಂದೂ ಇಲ್ಲದ ಮೈದಾನ.

(2) ತಮಿಳಿನಲ್ಲಿ ವಳ್ಳಂ ಎಂದರೆ ನದಿಯ ನೀರಿನ ಪ್ರವಾಹವೆಂದು ಅರ್ಥ, ಆ ಶಬ್ದವೇ ಕನ್ನಡದಲ್ಲಿ ಬೆಳ್ಳ ಎಂದು ಮಾರ್ಪಟ್ಟಿದೆ. ಬೆಳ್ಳಂಗೆಡೆ ಪ್ರವಾಹರೂಪದಲ್ಲಿ ಹರಿದುಹೋಗು, ಬೆಳ್ಳವಾಸ, ಈ ಎರಡು ಶಬ್ದಗಳಲ್ಲೇ ಕನ್ನಡದಲ್ಲಿ ಹೆಚ್ಚು ಪ್ರಯೋಗವಿದೆ—

(3) ವಹಿತ್ರ ಎಂಬ ಶಬ್ದದ ವಹಿ ಎಂಬೆರಡು ಅಕ್ಷರಗಳು ತದ್ಭವವಾದಾಗ ಭೈ ಎಂಬ ಮಹಾಪ್ರಾಣಾಕ್ಷರವಾಗುವುದೆಂದು ಶಬ್ದಮಣಿದರ್ಪಣಕಾರನು (ತದ್ಭವ ಪ್ರಕರಣದಲ್ಲಿ – ಉದಾಹರಿಸಿರುವರು)

ಶಬ್ದ	ಪು. ಸ.		ಅರ್ಥ
ಮರಮೊದಲ್	162-29 ವ	—	ಮರದ ಬುಡದಲ್ಲಿದ್ದು ಮಾಡುವ ತಪಸ್ಸು
ಮಹೋದ್ಯ	230-45	—	ತುಂಬಾ ಪ್ರಯತ್ನ ಶಾಲಿ [ಮಹಾಶಯ]
ಮಱುಕಣಿಸು	72-24	—	ಮತ್ತೆ [ಒದಗು] ಕಾಣಿಸಿಕೊಳ್ಳು
ಮಱುವಾಟ್	56-35	—	ವ್ಯಭಿಚಾರ
ಮಾಗೆ[ಗಿ] [ಮಾಘ-ಸಂ.]	13-25 ವ	—	ಚಳಿಗಾಲ
ಮಾಣಿಕಚಟ್ಟ	220-18 ವ	—	ರತ್ನಪರೀಕ್ಷಕ [ರತ್ನಗಳ ಬೆಲೆಯನ್ನು ಕಂಡುಹಿಡಿಯುವ]
ಮಾಯ್ದ	10-13	—	ಕೆಟ್ಟ[ನೀಚ]ಹಾಳಾದ [ಸಂ-ಹತಕ ಉ-ಕೃತಾಂತಹತಕ]
ಮ್ಣಾಂಟೆ	134-31 ವ	—	ಮಣ್ಣು ಹೆಂಟೆ [ಬಂದೂಕದ ಗುಂಡು]
ಮುಯ್ವು	109-38 ವ	—	ಭುಜದ ತುದಿ [ಹೆಗಲು]
ಮುರುಡು	61-45 ವ	—	ಬಿದಿರಹಿಂಡಲು
ಮುಸುಱು	143-18 180-38	—	ಮುತ್ತಿಕೊಳ್ಳು [ಮುಚ್ಚಿಕೊಳ್ಳು]
[1]ಮೆಲ್ಪಡು	7-1 ವ	—	ಭ್ರಾಂತಿಪಡು
ಮೇಗೆಯ್	148-30 ವ	—	ಮೇಲುಗಡೆ ಚಾಚಿರುವ ಕೆಯ್
ಮೊಡೆನಾತ	134-32	—	ಒಂದು ಬಗೆಯ ಹೊಲಸುವಾಸನೆ [ಕೇವಿನವಾಸನೆ, ವಿಸ್ರಗಂಧಿ-ಸಂ]
ಮೇಲು	199-34	—	ಉಳುವ ನೇಗಿಲಿನ ಮೇಲುಗಡೆಯ ಹಿಡಿ [ನೇಗಲನ್ನ ಮುಕಲು ಹಿಡಿಯುವ ಭಾಗ]
ಮೊದಲ್	205-48	—	ಬಂಡವಾಳ [ಮೂಲಧನ] ಮರಮೊದಲ್ ಎಂಬಲ್ಲಿ ಮರದ ಬುಡ ಎಂದರ್ಥ
		ಲ	
ಲಾವುಕ	155-32[2]	—	ವಿಟಪುರುಷ
ಲೆಪ್ಪ	25-45 ವ	—	[ಲೇಪ್ಯ-ಸಂ] ಮಣ್ಣು ಬಟ್ಟೆ ಮತ್ತು ಗಂಜಿ ಮೊದಲಾದುವುಗಳಿಂದ ಮಾಡುವ ಬೊಂಬೆ
		ವ	
ವಾಸಿ	164-31	—	ಪ್ರಸಿದ್ಧ
ವಿಗುರ್ವಿಸು	163-30 ವ	—	ವಿಕಾರಹೊಂದು, ಮಾರ್ಪಾಡನ್ನು ಪಡೆವುದು [ಇಚ್ಛೆಗೆ ಬಂದ ಆಕಾರವನ್ನು ತಾಳುವ ಸಾಮರ್ಥ್ಯ]
ವೆಗ್ಗಳ	226-33	—	ಶ್ರೇಷ್ಠ [ಮೇಲಾದವ]
ವೆಜ್ಜ	155-10	—	ರಂಧ್ರ [ತೂತು]

(1) ಈ ಶಬ್ದವು ಈ ಗ್ರಂಥದಲ್ಲಿ ಹಲವುಕಡೆ ಬಂದಿದೆ.

ಶಬ್ದ	ಪು. ಪ.		ಅರ್ಥ
ವೇತ್ರಾಸನ	91-1	—	ಕುರ್ಚಿ [ಬೆತ್ತದ ಆಸನ]
[1]ವೇಳೆ	211-61	—	ಒಡೆಯನಲ್ಲಿ ಅವನಿಗಾಗಿ ತನ್ನ ಪ್ರಾಣವನ್ನು ಕೊಡುವುದಾಗಿ ಪ್ರತಿಜ್ಞೆಮಾಡಿ ಸೇರಿ ಆಳಾಗಿ ಸೇವಿಸುವಿಕೆ
+ಗೊಳ್	160-24 ವ 12-21	—	ವೇಳೆಯನಿಯಮದ ಸೇವೆಯನ್ನು ಸ್ವೀಕರಿಸು
ಹೇಳೆವಡಿಚ	10-3 ವ	—	ಊಳಿಗದವ
		ಶ	
ಶಲ್ಯ	129-20	—	ಮೂಳೆ
ಶೌಚ	22-39	—	ಪರಸ್ತ್ರೀಯನ್ನ ಪೇಕ್ಷಿಸದ ಬ್ರಹ್ಮಚರ್ಯವ್ರತ
		ಸ	
ಸಂಬಳ	122-68 217-11 ವ	—	ದಾರಿಗರು ಕೈಯಲ್ಲಿ ಕೊಂಡೊಯ್ವ ಬುತ್ತಿಯ ಅನ್ನ
ಸಕಲೀಕರಣ	150-20 ವ 40-20 ವ	—	ಮಂತ್ರಶಾಸ್ತ್ರದ ಒಂದು ಕಾರ್ಯ ?
ಸಣ್ಣಿಗೆ	154-33	—	ಪದಾರ್ಥವನ್ನು ಸಣ್ಣಗೆಮಾಡುವ ಉಪಕರಣ
ಸಾವನಿಗ	205-48 ವ	—	ಚಿತ್ರಗಳನ್ನು ಬರೆದು ಮಾರುವವ ?
ಸಂತ	168-6 229-43	—	[ಸಾಂತ್ವ-ಸಂ] ಸಮಾಧಾನ
ಸಜ್ಜಾಯಿಗ	10ಽ-36 ವ	—	ರತ್ನಗಂಬಳಿ ಮಾಡುವವ
ಸಂತ್ರಾಸಕ	31-5	—	ಭಯವನ್ನುಂಟುಮಾಡುವವ [ಸಂತ್ರಾಸ
	51-26	—	ಮೆನೆಭಯಂ ಎಂದು ಒಂದುಓಲೆ ಪ್ರತಿಯಲ್ಲಿ ಬರೆದಿದೆ]
ಸನ್ನಣಂ (ಸನ್ನಾಹ-ಸಂ.)	165-33 ವ	—	ಕವಚ
ಸಬ್ಬವ	227-35 ವ	—	[ವಿನೋದ] ನಕಲಿಮಾಡುವವ-ನಗಿಸುವವ
ಸಮಕಟ್ಟು	227-35 ವ	—	(ಸಿದ್ಧನಾಗು) ಸನ್ನಾಹವಾಗು
ಸವಣ್ತೆ	91-36	—	ಜೈನಸನ್ಯಾಸಿನಿ
ಸವಿದೆ [ಕಂತೆ]	196-28 ವ	—	[ಸಮಿತ್ ಸಂ] ಕಟ್ಟಿಗೆ
ಸಂವೇಗ	171-15	—	ದೃಢಸಂಕಲ್ಪ
ಸಾವಱಿ	82-14	—	ಹೆಣದ ಮುಂದೆ ಬಾರಿಸುವ ವಾದ್ಯ
ಸಿದ್ಧಾಯ	155-9 ವ	—	ರಾಜನಿಗೆ ಸಲ್ಲಿಸಬೇಕಾಗಿರುವ ಭೂಮಿಯ ತೆಱಿಗೆ (ಶಾಸನಗಳಲ್ಲಿ ಈ ಶಬ್ದವುಹೆಚ್ಚಾಗಿ ಬರುವುದು]

(1) ಈ ಶಬ್ದಕ್ಕೆ ಒಡೆಯನು ಹೇಗಿರುವನೋ ಹಾಗೆಯೇ ತಾನೂ ಇರುವೆನು ಎಂಬ ನಿಯಮದಿಂದಿರುವ ಊಳಿಗತನ ಎಂದು ಅರ್ಥ ಆದಿ-ಪಂ-ಪು ಮಲ್ಲಿಗೆಗೆ ನಲ್ಲರ ಮೆಲ್ಲೆರ್ದೆ ವೇಳೆಗೊಂಡುಮೋ (ಆ 11-ಪ 110)

ಶಬ್ದ	ಪು. ಪ.		ಅರ್ಥ
ಸುಂಕ	158-18 ವ	—	ಮಾರುವ ಪದಾರ್ಥಗಳಿಗಾಗಿ ಸರಕಾರಕ್ಕೆ ಕೊಡಬೇಕಾದ ತೆರುಗೆ [ಶುಲ್ಕ-ಸಂ]
ಸುದ್ದಗೆ	162-29 ವ	—	ವರ್ಣಮಾಲೆ [1ಶುದ್ಧಕಸಂ] [64ಅಕ್ಷರ-ಮತಾಂತರಗಳು 51.52 ಅಕ್ಷರಗಳು]
ಸುರುಳಿ	92-37	—	ಕೆಟ್ಟಹೆಂಗಸು
ಸುವ್ವು	120-10	—	ಪೊದರು ಮುಖಾಂತರ50.51 ಸಂ
ಸೂರುಳ್	178-31 ವ	—	ಪ್ರತಿಜ್ಞೆ [ಶಪಥ]
ಸೆಜ್ಜೆ	89.32 ವ	—	ಸನ್ಯಾಸಿಯ ಉಪಕರಣ[ಕಂತೆ-ಕೌದಿ]
ಸೆರಗು	164-32 ವ	—	ಒತ್ತಾಸೆ
ಸೈವು	73-26 200-38 8-2 ವ	—	ಪುಣ್ಯ
ಸೋಂಬ	104-26 ವ	—	ಸೋಮಾರಿ
ಸೋವತ	55-34 ವ	—	ಬಲಿಕೊಡುವುದು [ಪ್ರಾಣವನ್ನು ಬಿಡಿಸುವುದು-ಆಹಾರ]
		ಉ	
ಉಂಡೆ	141-14	—	ವಿಧವೆ [ಸೂಳೆ]
ಉಕ್ಕೋಡಾಡು	144-21 ವ	—	ವಿಕಾರವಾದ ಅಂಗದಿಂದ ನಗಿಸು
ಉಂಜೆ	44-21	—	ಹೊಲೆಯರ ವಾದ್ಯ

(1) ಸಿದ್ಧಾಹಿಶುದ್ಧಕಾಃ (ಶ.ಶಾಸನ – ಸೂ–೧)

ಶುದ್ಧಿ ಪತ್ರಿಕೆ

ಪು. ಪ	ಅಶುದ್ಧ		ಶುದ್ಧ
12 — 20	ಮುಂದಿರ್ದಾ	—	ಮುಂದಿರ್ದಾ
22 — 38 ವ	ಒಳರ್	—	ಒಳರ್.
,, — 40	40	—	39 ಹೀಗೆ
[ಪದ್ಯಸಂಖ್ಯೆ]	ಕೊನೆಯವರೆಗೂ ಪದ್ಯಸಂಖ್ಯೆ ಹೆಚ್ಚುವುದು		
28 — 51 [ಪ.ಸಂ]	51	—	50 [ಪದ್ಯಸಂಖ್ಯೆ]
30 — 3	ವೊಡಲುಂ	—	ಮೊಡಲುಂ
35 — 1	ಝುಲ್ಲರಿ	—	ಝುಲ್ಲಲಿ
50 — 21 ವ	ಕ್ಟೆಪೆ	—	ಕೈಪೆ
61 — 44 [ಪ.ಸಂ]	44	—	45 ಹೀಗೆಯೇ ಪದ್ಯಸಂಖ್ಯೆ ಹೆಚ್ಚುವುದು
63 — 49 [ಪ.ಸಂ]	49	—	50
81 — 9 ವ	ಕೆಟ್ಟಯಿ	—	ಕೆಟ್ಟೆಯಿ
85 — 21	ಅಱಸುಖ	—	ಅಱಸೊಗ
93 — 11 [ಪ.ಸಂ]	11	—	39
108 — 37 ವ	ಮಾರ್ಕೊಂಡು	—	ಮಾಱುಗೊಂಡು
126 — 15	ತಿಂಬೆಬದು	—	ತಿಂಬೊಂದು
155 — 8	ಜ್ಜಳ	—	ಜ್ಜವಳ
,, — 9	ಪರಿಣಾಮ	—	ಪರಿಮಾಣ
156 — 12	ದರುಶನಸುದ್ಧಿ	—	ದರುಸನಸುದ್ದಿ
170 — 13	ತಗುಲಿತ್ತೊ	—	ತಗುಳ್ತೊ
201 — 40 ವ	ಬಸಿರಂ	—	ಬಸಿಱಿಂ
223 — 26 ವ	ಕ್ಯುಱಿ	—	ಕ್ಯಾಱಿ
	ಪುಣ	—	ಪುಣ್ಯ
226 — 32 ವ	ನುಪ್ಪ	—	ನಪ್ಪ